ಶನಿವಾರ, ಮೇ 13, 2023 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

Dayananda Sagar University Bengaluru

DAYANANDA SAGAR UNIVERSITY • ESTD. 2014 • BANGALORE • INDIA

6 DECADES LEGACY IN EDUCATION & HEALTHCARE

DSU live the dream

A Place to Grow, Excel, Invent & Innovate!



DSU, Main Campus



DSU, City Innovation Campus

ICARE RATINGS KSURF — Teaching Excellence ★★★★★ Research Excellence ★★★★★

EDUCATIONAL EXCELLENCE AWARDS & CONFERENCE — Leading & Most Trusted Management College of the Year 2021

THE WEEK — BEST EMERGING B-SCHOOLS : ALL INDIA Dayananda Sagar University-2021

TIMES BUSINESS AWARDS — BEST EMERGING UNIVERSITY 2021

CAREERS360 — AAA Ranking 2021

ET The Economic Times 2023 — Excellence in Academic Facilities & Learning Resources

IIRF -2022 NATIONAL RANK-10 TOP 100 PRIVATE UNIVERSITY (OVERALL) — STATE RANK 4 SOUTH ZONE RANK 4

THE DSU ADVANTAGE

- A young institution with a 6 decade Legacy!
- Most preferred University based at Bangalore
- Company & in-House Internships
- New age job role based Specializations
- Innovation labs setup in campus by top companies
  NVIDIA, Bosch, Autodesk, VMWare, IBM, GE
- Start-up Opportunities

ADMISSIONS OPEN 2023

Programmes Offered at DSU, Main Campus

SCHOOL OF HEALTH SCIENCES

B.Sc
- Medical Laboratory Technology
- Medical Imaging and Radiology Technology
- Anesthesia & Operation Theatre Technology (OTT)
- Emergency & Trauma Care Technology
- Renal Dialysis Technology
- Audiology & Speech Language Pathology
- Optometry

*A 4 Year Program with 1 year Internship

MPH (Masters in Public Health)

COLLEGE OF PHARMACEUTICAL SCIENCES

B.Pharm. Pharm.D.

M.Pharm.
- Pharmaceutics
- Pharmacology

COLLEGE OF NURSING SCIENCES

B.Sc Nursing PB B.Sc Nursing

M.Sc.Nursing

COLLEGE OF PHYSIOTHERAPY

BPT | MPT

SCHOOL OF ENGINEERING

B.Tech.
- Computer Science & Engineering (CSE)
- CSE (AI & ML)
- CSE (Data Science)
- CSE (Cybersecurity)
- Robotics & AI
- Aerospace Engineering
- Computer Science & Technology (Spz. Cloud Technology & DevOps)
- Electronics & Communication Engineering (Automotive Electronics I Electronics in Agricultural Evolution of Telecommunications I IOT & Wireless Sensor Network I Microcontrollers and Microprocessor Based Design)
- Mechanical Engineering (3D- Printing I Hybrid & Electric Vehicles I Robotics)

M.Tech.
- Computer Science & Engineering
- Design Engineering
- Embedded Systems

Programmes Offered at DSU, City Campus

SCHOOL OF ARTS, DESIGN & HUMANITIES

B.Design
- Product Design
- Animation
- UX Design
- Digital Film Making
- Gaming Design

BA - (JMC)
- Journalism & Mass Communication

COMPUTING PROGRAMME

BCA
- Web & Mobile App Development
- Cloud Computing & Network
- Big Data & Business Analytics

MCA
- Full Stack Development and Cloud Computing
- Data Analytics and Data Science

SCHOOL OF BASIC & APPLIED SCIENCES

B.Sc *Choose any 1 major & 2 minors
- Biotechnology
- Chemistry
- Biochemistry
- Microbiology
- Genetics

M.Sc
- Biotechnology
- Biochemistry
- Microbiology
- Human Genetics

SCHOOL OF COMMERCE & MANAGEMENT STUDIES

MBA
- Business Analytics
- Artificial Intelligence
- Supply Chain Management
- Marketing Management
- Financial Management
- Human Resource Management
- Entrepreneurship
- IT & System Management

BBA
- Regular
- Digital Marketing
- Retail Operations (with Apprenticeship)
- BFSI

B.Com
- ACCA
- CMA
- CA Foundation
- General
- SCM

SCHOOL OF LAW

- B.A. LL.B (Hons.)
- B.B.A. LL.B (Hons.)
- LL.B

(BCI Approved)

EMPOWERING OUR STUDENTS TO BECOME NEXT GENERATION ENTREPRENEURS

DERBI FOUNDATION ...Fueling Dreams

100+	1000+	125+	25+
EXPERTS ENGAGED	APPLICATIONS	JOBS CREATED	PARTNERS

AIC-DSU Innovation Foundation — INNOVATION LABS SET UP IN THE CAMPUS WITH ASSISTANCE FRO

IBM · AUTODESK · vmware · DASSAULT SYSTEMES · GE Healthcare · NVIDIA · BOSTON Servers | Storage | Solutions · ANALOG DEVICES · ETAS BOSCH · rexroth A Bosch Company

HIGHEST SALARY ₹27 Lakhs / PA

INTERNATIONAL PLACEMENTS TO 60 PLUS STUDENTS

AVERAGE SALARY ₹5 Lakhs / PA

SCAN TO KNOW MORE

DSAT

Dayananda Sagar Scholarship Admission Test

Your Gateway To Success

REGISTER NOW

www.dsu.edu.in

Email: dsat@dsu.edu.in

*Mode: Home-Based Proctored Test

Admissions Helpline Nos:

080 4646 1800 · +91 636 688 5507

DSU Main Campus : Devarakaggalahalli, Harohalli, Kanakapura Road, Bengaluru – 562 112

DSU City Innovation Campus : Kudlu Gate, Srinivasa Nagar, Hal Layout, Singasandra, Hosur Road, Bengaluru - 560 068

ಶನಿವಾರ, ಮೇ 13, 2023 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಂಭ್ರಮ
ಸಿಬಿಎಸ್‌ಇ 12ನೇ ತರಗತಿ ಫಲಿತಾಂಶದ ಬಳಿಕ ದೆಹಲಿಯಲ್ಲಿ ವಿದ್ಯಾರ್ಥಿನಿಯರ ಸಂಭ್ರಮ



ಸಂಕ್ಷಿಪ್ತ ಸುದ್ದಿ

ಸುಳ್ಳು ಸುದ್ದಿ ಹಬ್ಬಿಸಿದ್ದವ ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆ ಚುನಾವಣೆಯ ಮತದಾನ ದಿನದಂದು ವಿ.ವಿ ಪ್ಯಾಟ್ ಹಾಗೂ ಮತಯಂತ್ರದ ಬಗ್ಗೆ ಸುಳ್ಳು ಸುದ್ದಿ ಹಬ್ಬಿಸಿದ್ದ ಆರೋಪಿ ಸೈಯದ್ ಇಮ್ದಾದ್ ಉಲ್ಲಾ ಎಂಬುವವರ ವಿರುದ್ಧ ಆಡುಗೋಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಸೆಕ್ಟರಲ್ ಮ್ಯಾಜಿಸ್ಟ್ರೇಟ್ ಮಂಜು ತೇಜ್ ಟಿ.ಆರ್. ಅವರು ದೂರು ನೀಡಿದ್ದರು. ಸೈಯದ್ ವಿರುದ್ಧ ಪ್ರಕರಣ ದಾಖಲಿಸಿಕೊಂಡು ವಶಕ್ಕೆ ಪಡೆಯಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಚಿನ್ನಯ್ಯಪಾಳ್ಯದ ಕಾರ್ಪೊರೇಷನ್ ನರ್ಸರಿ ಶಾಲೆಯಲ್ಲಿ ಮತ ಚಲಾಯಿಸಿದ್ದ ಆರೋಪಿ, ‘ನಾನು ಮತ ಹಾಕಿದ ನಂತರ, ವಿ.ವಿ. ಪ್ಯಾಟ್‌ನಲ್ಲಿ ಬೇರೆ ಪಕ್ಷದ ಚಿಹ್ನೆ ತೋರಿಸುತ್ತಿದೆ. ವಿ.ವಿ ಪ್ಯಾಟ್ ಹಾಗೂ ಮತಯಂತ್ರ ಸರಿ ಇಲ್ಲ’ ಎಂದು ಸುದ್ದಿ ಹಬ್ಬಿಸಿದ್ದ. ಇದರಿಂದಾಗಿ ಗೊಂದಲ ಸೃಷ್ಟಿಯಾಗಿ, ಮತದಾನ ಒಂದು ಗಂಟೆ ಸ್ಥಗಿತಗೊಂಡಿತ್ತು.’

‘ವಿಷಯವನ್ನು ಗಂಭೀರವಾಗಿ ಪರಿಗಣಿಸಿದ್ದ ಅಧಿಕಾರಿಗಳು, ಮತಗಟ್ಟೆಯಲ್ಲಿ ಅಳವಡಿಸಿದ್ದ ಸಿ.ಸಿ ಟಿ.ವಿ ಕ್ಯಾಮೆರಾ ದೃಶ್ಯಾವಳಿಗಳನ್ನು ಪರಿಶೀಲಿಸಿದ್ದರು. ಆರೋಪಿ ಹೇಳಿಕೆ ಸುಳ್ಳು ಎಂಬುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ. ಪುರಾವೆಗಳ ಸಮೇತ ಅಧಿಕಾರಿಗಳು ದೂರು ನೀಡಿದ್ದರು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸಿಸೋಡಿಯಾ ನ್ಯಾಯಾಂಗ ಬಂಧನ ಅವಧಿ ವಿಸ್ತರಣೆ



ಮನೀಶ್ ಸಿಸೋಡಿಯಾ

ನವದೆಹಲಿ (ಪಿಟಿಐ): ಅಬಕಾರಿ ನೀತಿ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿರುವ ಎಎಪಿ ನಾಯಕ ಮನೀಷ್ ಸಿಸೋಡಿಯಾ ಅವರ ನ್ಯಾಯಾಂಗ ಬಂಧನದ ಅವಧಿಯನ್ನು ಜೂನ್ 2ರ ವರೆಗೆ ವಿಸ್ತರಿಸಿ ದೆಹಲಿಯ ನ್ಯಾಯಾಲಯ ಶುಕ್ರವಾರ ಆದೇಶ ಹೊರಡಿಸಿದೆ.

ಸಿಸೋಡಿಯಾ ಅವರಿಗೆ ಈಗಾಗಲೇ ವಿಧಿಸಿದ್ದ ನ್ಯಾಯಾಂಗ ಬಂಧನದ ಅವಧಿ ಕೊನೆಗೊಂಡ ಕಾರಣ ಅವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿತ್ತು. ಈ ವೇಳೆ, ವಿಶೇಷ ನ್ಯಾಯಾಧೀಶ ಎಂ.ಕೆ. ನಾಗ್ಪಾಲ್ ಅವರು ಸಿಸೋಡಿಯಾ ಅವರ ನ್ಯಾಯಾಂಗ ಬಂಧನದ ಅವಧಿಯನ್ನು ವಿಸ್ತರಿಸಿದ್ದಾರೆ.

ಸ್ಪರ್ಧಾತ್ಮಕ ಪರೀಕ್ಷೆಗೆ ತರಬೇತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃಷಿಕ್ ಸರ್ವೋದಯ ಫೌಂಡೇಷನ್ ಸಂಸ್ಥೆಯು ಐಎಎಸ್, ಕೆಎಎಸ್ ಹಾಗೂ ಬ್ಯಾಂಕಿಂಗ್ ಪರೀಕ್ಷೆಗೆ ಆನ್‌ಲೈನ್ ಮತ್ತು ಭೌತಿಕ (ಆಫ್‌ಲೈನ್) ತರಬೇತಿಗೆ ಅರ್ಜಿ ಆಹ್ವಾನಿಸಿದೆ.

ಅಭ್ಯರ್ಥಿಗಳು ಇದೇ 31ರೊಳಗೆ ಸಂಸ್ಥೆಯ ವೆಬ್‌ಸೈಟ್ www.ksfkarnataka.com ಮೂಲಕ ಅರ್ಜಿಗಳನ್ನು ಪಡೆದು, ಭರ್ತಿ ಮಾಡಿದ ಅರ್ಜಿಗಳನ್ನು ನಂ.15, 2ನೇ ಮಹಡಿ, ಹಳೇ ವಿಮಾನ ನಿಲ್ದಾಣ ರಸ್ತೆ, ಕೋಡಿಹಳ್ಳಿ, ಬೆಂಗಳೂರು–08 ಈ ವಿಳಾಸಕ್ಕೆ ಕಳುಹಿಸುವಂತೆ ಪ್ರಕಟಣೆ ಕೋರಿದೆ.

ಸಂಪರ್ಕಕ್ಕೆ: 080 25202299 ಅಥವಾ 76250 00990

ರಾಜಧಾನಿಯ 28 ಕ್ಷೇತ್ರಗಳ ಫಲಿತಾಂಶ ಇಂದು ಪ್ರಕಟ • ನಾಲ್ಕು ಕಡೆ ಮತ ಎಣಿಕೆ ಕೇಂದ್ರ ಸ್ಥಾಪನೆ

ಯಾರಿಗೆ ವಿಜಯ; ಗರಿಗೆದರಿದ ಕುತೂಹಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ 28 ವಿಧಾನ ಸಭಾ ಕ್ಷೇತ್ರಗಳ ಮತ ಎಣಿಕೆ ಕಾರ್ಯ ಶನಿವಾರ ಬೆಳಿಗ್ಗೆ 8ಕ್ಕೆ ನಾಲ್ಕು ಕೇಂದ್ರಗಳಲ್ಲಿ ಆರಂಭವಾಗಲಿದೆ. ಯಾರಿಗೆ ವಿಜಯಮಾಲೆ ಎಂಬ ಕುತೂಹಲ ಗರಿಗೆದರಿದೆ.

ಎಲೆಕ್ಟ್ರಾನಿಕ್ ಮತಯಂತ್ರಗಳು ಭದ್ರತಾ ಕೊಠಡಿ ಸೇರಿದ್ದು, ಅರೆ ಮಿಲಿಟರಿ ಪಡೆಯ ಕಣ್ಗಾವಲಿನಲ್ಲಿ ಇರಿಸಲಾಗಿದೆ ಎಂದು ಚುನಾವಣಾಧಿಕಾರಿ ತುಷಾರ್ ಗಿರಿನಾಥ್ ತಿಳಿಸಿದರು.

28 ಕ್ಷೇತ್ರಗಳಿಗೆ ನಾಲ್ಕು ಎಣಿಕೆ ಕೇಂದ್ರಗಳನ್ನು ತೆರೆಯಲಾಗಿದೆ. ಒಟ್ಟು 450 ಟೇಬಲ್‌ಗಳನ್ನು ಅಳವಡಿಸಲಾಗಿದ್ದು, ಅಂಚೆ ಮತದಾನ ಎಣಿಕೆಗಾಗಿಯೇ ಪ್ರತಿ ಕ್ಷೇತ್ರಕ್ಕೆ ಮೂರು ಟೇಬಲ್‌ಗಳನ್ನು ಪ್ರತ್ಯೇಕವಾಗಿ ನೀಡಲಾಗಿದೆ. 20 ಸಾವಿರಕ್ಕೂ ಹೆಚ್ಚು ಮಂದಿ ಅಂಚೆ ಮತದಾನ ಮಾಡಿದ್ದು, ಇವುಗಳ ಎಣಿಕೆಯೇ ಪ್ರತ್ಯೇಕವಾಗಿ ನಡೆಯಲಿದೆ. ಎಲ್ಲಾ ಟೇಬಲ್‌ಗಳ ಬಳಿಯೂ ವೆಬ್ ಕ್ಯಾಮೆರಾ ಅಳವಡಿಸಲಾಗಿದೆ ಎಂದು ವಿವರಿಸಿದರು.

ಮತ ಎಣಿಕೆ ಸಿಬ್ಬಂದಿ ಮತ್ತು ಅಭ್ಯರ್ಥಿಗಳ ಏಜೆಂಟರ ನಡುವೆ ಕಬ್ಬಿಣದ ಮೆಷ್ ಇರಲಿದೆ. ಮತ ಎಣಿಕೆಗೆ ತೊಂದರೆ ಆಗುವುದಿಲ್ಲ. ಮೂರು ಹಂತದಲ್ಲಿ ಭದ್ರತೆ ಇರಲಿದೆ. ಅಹಿತಕರ ಘಟನೆಗಳಿಗೆ ಅವಕಾಶ ಇರುವುದಿಲ್ಲ. ನಾಲ್ಕೂ ಕಡೆ ಮಾಧ್ಯಮ ಕೇಂದ್ರ ತೆರೆಯಲಾಗಿದೆ ಎಂದು ವಿವರಿಸಿದರು.



ಬಿಎಂಎಸ್ ಮಹಿಳಾ ಕಾಲೇಜಿನ ಎಣಿಕಾ ಕೇಂದ್ರದಲ್ಲಿ ಪೊಲೀಸರು ಎಲ್‌ಸಿಡಿ ಬ್ಯಾಗ್ ತಪಾಸಣೆ ನಡೆಸಿದರು –ಪ್ರಜಾವಾಣಿ ಚಿತ್ರ

ಯಾವ ಕ್ಷೇತ್ರ? ಎಲ್ಲಿ ಮತ ಎಣಿಕೆ?

- **ಬಸವನಗುಡಿ ಬಿಎಂಎಸ್ ಮಹಿಳಾ ಕಾಲೇಜು:** ರಾಜರಾಜೇಶ್ವರಿನಗರ, ಶಿವಾಜಿನಗರ, ಶಾಂತಿನಗರ, ಗಾಂಧಿನಗರ, ರಾಜಾಜಿನಗರ, ಚಾಮರಾಜಪೇಟೆ, ಚಿಕ್ಕಪೇಟೆ ಕ್ಷೇತ್ರ.
- **ಜಯನಗರ 4ನೇ ‘ಎ’ ಬ್ಲಾಕ್‌ನ ಎಸ್.ಎಸ್. ಎಂ.ಆರ್.ವಿ. ಪಿಯು ಕಾಲೇಜು:** ಗೋವಿಂದರಾಜನಗರ, ವಿಜಯನಗರ, ಬಸವನಗುಡಿ, ಪದ್ಮನಾಭನಗರ, ಬಿ.ಟಿ.ಎಂ ಲೇಔಟ್, ಜಯನಗರ, ಬೊಮ್ಮನಹಳ್ಳಿ ಕ್ಷೇತ್ರ.
- **ವಸಂತನಗರದ ಮೌಂಟ್ ಕಾರ್ಮೆಲ್ ಕಾಲೇಜು:** ಕೆಆರ್ ಪುರಂ, ಮಹಾಲಕ್ಷ್ಮಿ ಲೇಔಟ್, ಮಲ್ಲೇಶ್ವರ, ಹೆಬ್ಬಾಳ, ಪುಲಿಕೇಶಿನಗರ, ಸರ್ವಜ್ಞ ನಗರ, ಸಿ.ವಿ. ರಾಮನ್‌ನಗರ ಕ್ಷೇತ್ರ.
- **ವಿಠಲ ಮಲ್ಯ ರಸ್ತೆಯಲ್ಲಿನ ಸೇಂಟ್ ಜೋಸೆಫ್ ಇಂಡಿಯನ್ ಹೈಸ್ಕೂಲ್:** ಯಲಹಂಕ, ಬ್ಯಾಟರಾಯನಪುರ, ಯಶವಂತಪುರ, ದಾಸರಹಳ್ಳಿ, ಮಹದೇವಪುರ, ಬೆಂಗಳೂರು ದಕ್ಷಿಣ, ಆನೇಕಲ್ ಕ್ಷೇತ್ರ.

ಏಜೆನ್ಸಿ ಮಳಿಗೆ ಮೇಲೆ ಐ.ಟಿ ದಾಳಿ

ದೇವದುರ್ಗ(ರಾಯಚೂರು ಜಿಲ್ಲೆ): ದೇವದುರ್ಗದ ಮಾರುತೇಶ್ವರ ಟ್ರೇಡಿಂಗ್ ಏಜೆನ್ಸಿ ಮಾಲೀಕ ಸಿದ್ದಲಿಂಗಪ್ಪ ಅವರ ಮಳಿಗೆ ಮೇಲೆ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಶುಕ್ರವಾರ ಸಂಜೆ ದಾಳಿ ಮಾಡಿದ್ದು, ಪರಿಶೀಲನೆ ನಡೆಸಿದ್ದಾರೆ.

ಸಿದ್ದಲಿಂಗಪ್ಪ ಅವರು ದೇವದುರ್ಗ ತಾಲ್ಲೂಕಿನ 23 ಗ್ರಾಮ ಪಂಚಾಯಿತಿಗಳಿಗೆ ಅಗತ್ಯ ಸಲಕರಣೆ ಪೂರೈಸಿದ ಏಕೈಕ ಏಜೆನ್ಸಿಯ ಮಾಲೀಕರು ಆಗಿದ್ದಾರೆ. ಏಜೆನ್ಸಿ ಹೆಸರಿನಲ್ಲಿ ಭಾರಿ ಮೊತ್ತದ ವಹಿವಾಟು ಆಗಿದ್ದು, ಸಾಕಷ್ಟು ದೂರುಗಳು ಬಂದಿವೆ. ಎಲ್ಲಾ ದಾಖಲೆಪತ್ರಗಳನ್ನು ಪರಿಶೀಲಿಸಿ, ಮುಂದಿನ ಕ್ರಮ ಕೈಗೊಳ್ಳಲಾಗುವುದು’ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಶಾಸಕ ಕೆ.ಶಿವನಗೌಡ ನಾಯಕ ಅವರ ಕಾರು ಚಾಲಕರಾಗಿದ್ದ ಸಿದ್ದಲಿಂಗಪ್ಪ ನಾಲ್ಕು ವರ್ಷಗಳ ಹಿಂದೆ ಏಜೆನ್ಸಿ ಆರಂಭಿಸಿದ್ದಾರೆ.

ಕಂಟ್ರೋಲ್ ಯೂನಿಟ್ ಒಡೆದ ವ್ಯಕ್ತಿ ವಶಕ್ಕೆ!

ಮೈಸೂರು: ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಹೂಟಗಳ್ಳಿ ಸರ್ಕಾರಿ ಪ್ರೌಢಶಾಲೆ ಮತಗಟ್ಟೆಗೆ ಮತ ಚಲಾಯಿಸಲು ಬಂದಿದ್ದ ವ್ಯಕ್ತಿ ಇವಿಎಂ–ಕಂಟ್ರೋಲ್ ಯೂನಿಟ್ ಒಡೆದು ಹಾಕಿರುವ ವಿಡಿಯೊ ಜಾಲತಾಣದಲ್ಲಿ ಶುಕ್ರವಾರ ಹರಿದಾಡಿತು.

ಮತದಾನದ ದಿನ ಸಂಜೆ 4.15ರ ಸುಮಾರಿಗೆ ಮತ ಚಲಾಯಿಸಲು ಬಂದಿದ್ದ ಹೂಟಗಳ್ಳಿಯ ಶಿವಮೂರ್ತಿ, ಗುರುತಿನ ಚೀಟಿಯನ್ನು ಸಿಬ್ಬಂದಿಗೆ ಕೊಟ್ಟ ಕೂಡಲೇ ವಿದ್ಯುನ್ಮಾನ ಮತ ಯಂತ್ರದ ಕಂಟ್ರೋಲ್ ಯೂನಿಟ್ ಅನ್ನು ಏಕಾಏಕಿ ಎರಡು ಬಾರಿ ನೆಲಕ್ಕೆ ಎತ್ತಿಹಾಕಿದ್ದರು. ಮತಗಟ್ಟೆ ಅಧಿಕಾರಿ ಎಂ.ಜಿ. ಕುಮಾರ ನೀಡಿದ ದೂರಿನ ಮೇಲೆ ವಿಜಯನಗರ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದು, ಆರೋಪಿಯನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

‘ಮತಗಟ್ಟೆಯಲ್ಲಿ 912 ಮತದಾರರಿದ್ದು, ಆ ವೇಳೆಗೆ 553 ಮಂದಿ ಮತ ಚಲಾಯಿಸಿದ್ದರು. ಹೊಸ ಕಂಟ್ರೋಲ್ ಯೂನಿಟ್ ಅಳವಡಿಸಿ ಮತದಾನ ಪ್ರಕ್ರಿಯೆ ಪೂರ್ಣಗೊಳಿಸಲಾಯಿತು’ ಎಂದು ಚುನಾವಣಾಧಿಕಾರಿ ತಿಳಿಸಿದರು.

‘ಆರೋಪಿ ಖಿನ್ನತೆಯಿಂದ ಬಳಲುತ್ತಿದ್ದು, ಈ ಹಿಂದೆಯೂ ಸಾರ್ವಜನಿಕರೊಂದಿಗೆ ಅನುಚಿತವಾಗಿ ವರ್ತಿಸಿದ್ದರು. ಬುದ್ಧಿ ಹೇಳಿದ್ದೆವು’ ಎಂದು ಪೊಲೀಸರು ತಿಳಿಸಿದರು.

‘ಆ ಮತಗಟ್ಟೆಯಲ್ಲಿ ಬೇರೆ ಯಂತ್ರಗಳನ್ನು ಬಳಸಿ ಮತದಾನ ನಡೆಸಲಾಗಿದೆ. ಮೊದಲಿನ ಕಂಟ್ರೋಲ್ ಯೂನಿಟ್ ಹಾಳಾದ್ದರಿಂದ ಅಲ್ಲಿವರೆಗೆ ಆಗಿದ್ದ ಮತಗಳ ಲೆಕ್ಕಕ್ಕಾಗಿ ವಿವಿಪ್ಯಾಟ್‌ನಲ್ಲಿರುವ ಸ್ಲಿಪ್‌ಗಳನ್ನು ಎಣಿಕೆ ಮಾಡಲು ಚುನಾವಣಾ ಆಯೋಗದ ಒಪ್ಪಿಗೆ ಪಡೆಯಲಾಗಿದೆ’ ಎಂದು ಜಿಲ್ಲಾ ಚುನಾವಣಾಧಿಕಾರಿ ಡಾ.ಕೆ.ವಿ.ರಾಜೇಂದ್ರ ತಿಳಿಸಿದರು.

ಭದ್ರತೆಗೆ 10 ಡಿಸಿಪಿಗಳ ಉಸ್ತುವಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಐದು ಕೇಂದ್ರಗಳಲ್ಲಿ ಶನಿವಾರ ವಿಧಾನಸಭೆ ಚುನಾವಣೆಯ ಮತ ಎಣಿಕೆ ಕಾರ್ಯ ನಡೆಯಲಿದ್ದು, ಅಹಿತಕರ ಘಟನೆಗಳು ನಡೆಯದಂತೆ ಭದ್ರತೆಯ ಉಸ್ತುವಾರಿಗೆ 10 ಡಿಸಿಪಿಗಳನ್ನು ನೇಮಿಸಲಾಗಿದೆ.

‘ವಸಂತನಗರದ ಮೌಂಟ್ ಕಾರ್ಮೆಲ್ ಕಾಲೇಜು, ವಿಠಲ್ ಮಲ್ಯ ರಸ್ತೆಯ ಸೇಂಟ್ ಜೋಸೆಫ್ ಇಂಡಿಯನ್ ಹೈಸ್ಕೂಲ್, ಬಸವನಗುಡಿಯ ಬಿಎಂಎಸ್ ಮಹಿಳಾ ಕಾಲೇಜು, ತಿಲಕ್‌ನಗರದ ಎಸ್‌ಎಸ್‌ಎಂಆರ್‌ವಿ ಕಾಲೇಜು ಹಾಗೂ ದೇವನಹಳ್ಳಿಯ ಆಕಾಶ್ ಇಂಟರ್ ನ್ಯಾಷನಲ್ ಸ್ಕೂಲ್‌ನಲ್ಲಿ ಮತ ಎಣಿಕೆ ನಡೆಯಲಿದೆ. ತಲಾ ಒಂದೊಂದು ಕೇಂದ್ರಕ್ಕೆ ಇಬ್ಬರು ಡಿಸಿಪಿಗಳನ್ನು ಭದ್ರತೆ ಉಸ್ತುವಾರಿಯನ್ನಾಗಿ ನೇಮಿಸಲಾಗಿದೆ’ ಎಂದು ಪೊಲೀಸ್ ಕಮಿಷನರ್ ಪ್ರತಾಪ್ ರೆಡ್ಡಿ ಅವರು ತಿಳಿಸಿದ್ದಾರೆ.

‘ಮತ ಎಣಿಕೆ ಕೇಂದ್ರ ಹಾಗೂ ಅದರ ಸುತ್ತಲಿನ 200 ಮೀಟರ್ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ. ಮೆರವಣಿಗೆ, ರ‍್ಯಾಲಿ, ಗುಂಪು ಸೇರುವುದಕ್ಕೆ ಅವಕಾಶವಿಲ್ಲ. ನಿಯಮ ಉಲ್ಲಂಘಿಸಿದರೆ ಕಾನೂನು ಕ್ರಮ ಜರುಗಿಸಲಾಗುವುದು’ ಎಂದು ಹೇಳಿದ್ದಾರೆ.

‘15 ಎಸಿಪಿಗಳು, 38 ಇನ್‌ಸ್ಪೆಕ್ಟರ್‌ಗಳು, 250 ಪಿಎಸ್‌ಐ, ಕೆಎಸ್‌ಆರ್‌ಪಿ ತುಕಡಿ ಸೇರಿದಂತೆ 1,500ಕ್ಕೂ ಹೆಚ್ಚು ಸಿಬ್ಬಂದಿಯನ್ನು ಭದ್ರತೆಗೆ ನಿಯೋಜಿಸಲಾಗಿದೆ. ಕೇಂದ್ರ ಮೀಸಲು ಪೊಲೀಸ್ ಪಡೆಯ 36 ತುಕಡಿಯನ್ನು ಭದ್ರತೆಗೆ ಬಳಸಿಕೊಳ್ಳಲಾಗುತ್ತಿದೆ’ ಎಂದು ಹೇಳಿದ್ದಾರೆ.

ಮದ್ಯ ಮಾರಾಟ ಬಂದ್

‘ಮೇ 13ರಂದು ಬೆಳಿಗ್ಗೆ 6 ಗಂಟೆಯಿಂದ ತಡರಾತ್ರಿ 12 ಗಂಟೆಯವರೆಗೆ ಮದ್ಯ ಮಾರಾಟ ನಿಷೇಧಿಸಲಾಗಿದೆ. ಬಾರ್, ಮದ್ಯದಂಗಡಿ ಎಲ್ಲವೂ ಬಂದ್ ಮಾಡಬೇಕು. ನಿಯಮ ಉಲ್ಲಂಘಿಸಿದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು’ ಎಂದು ಪ್ರತಾಪ್ ರೆಡ್ಡಿ ಆದೇಶ ಹೊರಡಿಸಿದ್ದಾರೆ.

ಆದೇಶ ಹೊರಬೀಳುತ್ತಿದ್ದಂತೆ ನಗರದ ಬಾರ್ ಹಾಗೂ ಮದ್ಯದಂಗಡಿ ಮುಂದೆ ಶುಕ್ರವಾರ ಸರದಿಯಲ್ಲಿ ನಿಂತು ಮದ್ಯ ಖರೀದಿಸುತ್ತಿದ್ದ ದೃಶ್ಯಗಳು ಕಂಡುಬಂದವು.

ವಾಹನಗಳ ಸಂಚಾರ, ನಿಲುಗಡೆ ನಿರ್ಬಂಧ

ಮತ ಎಣಿಕೆ ನಡೆಯುವ ಕೇಂದ್ರ ಬಳಿಯ ರಸ್ತೆಗಳಲ್ಲಿ ಬೆಳಿಗ್ಗೆ 6 ಗಂಟೆಯಿಂದ ಸಾರ್ವಜನಿಕರ ವಾಹನಗಳ ಸಂಚಾರ ಹಾಗೂ ನಿಲುಗಡೆ ನಿರ್ಬಂಧಿಸಲಾಗಿದೆ. ಪರ್ಯಾಯ ಮಾರ್ಗಗಳಲ್ಲಿ ಸಂಚರಿಸುವಂತೆ ಪೊಲೀಸರು ಕೋರಿದ್ದಾರೆ. ಕೆಲವೆಡೆ ವಾಹನಗಳ ನಿಲುಗಡೆಗೆ ವ್ಯವಸ್ಥೆ ಮಾಡಿದ್ದಾರೆ.

ಎಲ್ಲೆಲ್ಲಿ ಸಂಚಾರ ನಿರ್ಬಂಧ:

- ವಿಠಲ್ ಮಲ್ಯ ರಸ್ತೆಗೆ ಹೊಂದಿಕೊಂಡಂತೆ ಸಿದ್ದಲಿಂಗಯ್ಯ ವೃತ್ತದಿಂದ ಆರ್.ಎಂ.ಆರ್ ಕಡೆಗೆ ಹಾಗೂ ಕಸ್ತೂರ್ ಬಾ ರಸ್ತೆ
- ಅರಮನೆ ರಸ್ತೆಯ ಕಲ್ಪನಾ ಜಂಕ್ಷನ್‌ನಿಂದ ವಸಂತನಗರ ಕೆಳಸೇತುವೆವರೆಗೆ ಹಾಗೂ ವಸಂತನಗರ ರೈಲ್ವೆ ಕೆಳ ಸೇತುವೆಯಿಂದ ಮೌಂಟ್ ಕಾರ್ಮೆಲ್ ಕಾಲೇಜು
- ಎಸ್.ಎಸ್.ಎಂ.ಆರ್.ವಿ ಕಾಲೇಜು ಬಳಿಯ 36ನೇ ಅಡ್ಡರಸ್ತೆ, 22ನೇ ಮುಖ್ಯರಸ್ತೆ, 26ನೇ ಮುಖ್ಯರಸ್ತೆ ಹಾಗೂ 28ನೇ ಮುಖ್ಯರಸ್ತೆ
- ಬಸವನಗುಡಿಯ ಹಯವದನ ವೃತ್ತದಿಂದ ಕಾಮತ್ ಹೋಟೆಲ್ ಜಂಕ್ಷನ್ ಹಾಗೂ ದೊಡ್ಡ ಬಸವಣ್ಣ ದೇವಸ್ಥಾನ ರಸ್ತೆ
- ದೇವನಹಳ್ಳಿಯ ರಾಷ್ಟ್ರೀಯ ಹೆದ್ದಾರಿಯಿಂದ ಬಸ್ ನಿಲ್ದಾಣವರೆಗಿನ ರಸ್ತೆ ಹಾಗೂ ಗಿರಿಯಮ್ಮ ವೃತ್ತದಿಂದ ಬೈಚಾಪುರ ಗ್ರಾಮ

ತೋಟ, ಜಮೀನು, ಕುರಿ, ಹಣ ಪಣಕ್ಕೆ

ದಾವಣಗೆರೆ: ಅಭ್ಯರ್ಥಿಗಳ ಪರ ಬೆಟ್ಟಿಂಗ್ ಭರಾಟೆ • ಬಹಿರಂಗ ಪಂಥಾಹ್ವಾನ

ಪ್ರಜಾವಾಣಿ ವಾರ್ತೆ

ಹೊನ್ನಾಳಿ: ವಿಧಾನಸಭೆ ಚುನಾವಣೆ ಫಲಿತಾಂಶ ಪ್ರಕಟವಾಗಲು ಕೆಲವೇ ಗಂಟೆಗಳು ಬಾಕಿ ಇರುವಾಗ ಜಿಲ್ಲೆಯಲ್ಲಿ ಅಭ್ಯರ್ಥಿಗಳ ಪರ ಬೆಟ್ಟಿಂಗ್ ಭರಾಟೆ ಜೋರಾಗಿದೆ.

ಹೊನ್ನಾಳಿ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಡಿ.ಜಿ. ಶಾಂತನಗೌಡ ಅವರ ಪರ ಭರ್ಜರಿ ಬೆಟ್ಟಿಂಗ್‌ಗೆ ಬಹಿರಂಗ ಆಹ್ವಾನ ನೀಡಲಾಗಿದೆ.

ಈ ಕುರಿತು ಸವಾಲು ಹಾಕುತ್ತಿರುವ ವ್ಯಕ್ತಿಯ ವಿಡಿಯೊ ತುಣುಕನ್ನು ಶುಕ್ರವಾರ ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಡಲಾಗಿದೆ. ತಾಲ್ಲೂಕಿನ ಚಿಕ್ಕಗೋಣಿಗೆರೆ ಹೆಬ್ಬಾರ್ ನಾಗಣ್ಣ ಅವರು, ‘ಕಾಂಗ್ರೆಸ್‌ನ ಡಿ.ಜಿ. ಶಾಂತನಗೌಡ ಅವರು ಗೆಲ್ಲುತ್ತಾರೆ. ಅವರ ಪರವಾಗಿ 2 ಎಕರೆ ಜಮೀನು ಪಣಕ್ಕಿಡಲು ಸಿದ್ಧನಿದ್ದೇನೆ. ಬಿಜೆಪಿಯವರು ದಮ್ಮಿದ್ದರೆ ಬರಲಿ’ ಎಂದು ಗ್ರಾಮದ ಬೀದಿ ಬೀದಿಗಳಲ್ಲಿ ಹಲಗೆ ಬಾರಿಸುತ್ತ ಸಾಗಿದ್ದಾರೆ.



ಹೊನ್ನಾಳಿ ತಾಲ್ಲೂಕಿನ ಚಿಕ್ಕಗೋಣಿಗೆರೆ ನಾಗಣ್ಣ ಎಂಬುವವರು ಕಾಂಗ್ರೆಸ್ ಅಭ್ಯರ್ಥಿ ಪರ ಎರಡು ಎಕರೆ ಜಮೀನು ಬೆಟ್ ಕಟ್ಟುವುದಾಗಿ ಗ್ರಾಮದ ಬೀದಿಗಳಲ್ಲಿ ಡಂಗುರ ಸಾರಿದರು.

ಇದಕ್ಕೆ ಬಿಜೆಪಿ ಕಡೆಯಿಂದ ಯಾವುದೇ ಪ್ರತಿಕ್ರಿಯೆ ಬಂದಿಲ್ಲ ಎನ್ನಲಾಗಿದೆ.

ನ್ಯಾಮತಿ ಟೌನ್ ಕಾಂಗ್ರೆಸ್ ಅಧ್ಯಕ್ಷ ಲೋಕೇಶ್ ಅವರು 1 ಎಕರೆ ಜಮೀನು ಪಣಕ್ಕಿಡುವುದಾಗಿ ತಮ್ಮ ಫೋಟೊ ಸಹಿತ ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟಿದ್ದಾರೆ. ಗೋಣಿಗೆರೆಯ ಬೀರಪ್ಪಾರ ಸಿದ್ಧಾರೂಢ ಅವರು ತಮ್ಮ ಎರಡು ಕುರಿಗಳನ್ನು ಜೂಜು ಕಟ್ಟುವುದಾಗಿ ಹೇಳಿದ್ದಾರೆ. ಇವುಗಳಿಗೂ ಯಾವುದೇ ಪ್ರತಿಕ್ರಿಯೆ ಬಂದಿಲ್ಲ ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ರಾಜಕಾರಣಿಯೊಬ್ಬರು ತಿಳಿಸಿದರು.

ಅಡಿಕೆ ತೋಟ ಪಣಕ್ಕೆ: ತಾಲ್ಲೂಕಿನ ನೇರಲಗುಂಡಿಯ ಹನುಮಂತಪ್ಪ ಬಸಪ್ಪ ಅವರು ಕಾಂಗ್ರೆಸ್‌ನ ಡಿ.ಜಿ.ಶಾಂತನಗೌಡ ಅವರು ಗೆದ್ದೇ ಗೆಲ್ಲುತ್ತಾರೆ ಎಂದು ತಮ್ಮ ಎರಡು ಎಕರೆ ಅಡಿಕೆ ತೋಟವನ್ನು ಪಣಕ್ಕಿಡುವುದಾಗಿ ಸಾಮಾಜಿಕ ಜಾಲತಾಣದಲ್ಲಿ ಹೇಳಿಕೆ ನೀಡಿದ್ದಾರೆ. ಇದಕ್ಕೆ ಬಿಜೆಪಿ ಅಭ್ಯರ್ಥಿ ಎಂ.ಪಿ. ರೇಣುಕಾಚಾರ್ಯ ಅವರ ಪರವಾಗಿ ಶಿವಾನಂದಯ್ಯ ಅವರು ಎರಡು ಎಕರೆ ಅಡಿಕೆ ತೋಟವನ್ನು ಪಣಕ್ಕಿಟ್ಟಿದ್ದಾರೆ ಎಂದೂ ತಿಳಿದುಬಂದಿದೆ.

ಶಾಂತನಗೌಡ ಅವರು ಗೆಲ್ಲುತ್ತಾರೆ ಎಂದು ತಾಲ್ಲೂಕಿನ ಬಹುತೇಕ ಕಡೆಗಳಲ್ಲಿ ಸಾವಿರದಿಂದ ಲಕ್ಷದವರೆಗೂ ಬೆಟ್ಟಿಂಗ್ ನಡೆದಿದೆ ಎಂಬ ಮಾತುಗಳು ಕೇಳಿಬರುತ್ತಿವೆ.

ಚನ್ನಗಿರಿ ಕ್ಷೇತ್ರದ ಪಾಂಡೊಮಟ್ಟಿ, ಹೊದಿಗೆರೆ ಹಾಗೂ ಬೊಪ್ಪೇನಹಳ್ಳಿ ಭಾಗಗಳಲ್ಲಿ ಬಾಜಿ ಶುರುವಾಗಿದೆ. ಇಲ್ಲಿ ₹ 1 ಲಕ್ಷದಿಂದ ₹ 5 ಲಕ್ಷದವರೆಗೂ ಪಣಕ್ಕಿಟ್ಟಿದ್ದಾರೆ ಎಂಬ ಮಾತುಗಳು ಕೇಳಿಬರುತ್ತಿವೆ.

ಚನ್ನಗಿರಿ ಕಾಂಗ್ರೆಸ್ ಅಭ್ಯರ್ಥಿ ಶಿವಗಂಗಾ ಬಸವರಾಜ್ ಗೆಲ್ಲುತ್ತಾರೆ ಎಂದು ಕಾಂಗ್ರೆಸ್ ಮುಖಂಡರು ಸೆಲ್ಫಿ ವಿಡಿಯೊ ಮಾಡಿ ಆಹ್ವಾನ ನೀಡಿದ್ದಾರೆ. ಕಾಂಗ್ರೆಸ್ ಗೆಲ್ಲುವುದು ಖಚಿತ. ಬೇಕಿದ್ದವರು ಜೂಜು ಕಟ್ಟಬಹುದು ಎಂದು ಈ ಬಹಿರಂಗ ಸವಾಲ್ ಮೂಲಕ ಆಹ್ವಾನ ನೀಡಲಾಗಿದೆ.

ವರಿಷ್ಠರ ತಾಳ್ಮೆ ಪರೀಕ್ಷೆಗೆ ಇಳಿದ ಪೈಲಟ್

ನವದೆಹಲಿ: ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ವಿರುದ್ಧ ಬಂಡಾಯವೆದ್ದಿರುವ ಕಾಂಗ್ರೆಸ್ ನಾಯಕ ಸಚಿನ್ ಪೈಲಟ್ ವಿರುದ್ಧ ಪಕ್ಷದ ನಾಯಕತ್ವವು ನಿರ್ಣಾಯಕ ಕ್ರಮ ತೆಗೆದುಕೊಳ್ಳುವ ಸಾಧ್ಯತೆಗಳು ಕಾಣಿಸುತ್ತಿವೆ.

ಪಕ್ಷದ ನಾಯಕತ್ವವು ಪೈಲಟ್ ವಿಷಯವನ್ನು ಗಂಭೀರವಾಗಿ ತೆಗೆದುಕೊಂಡಿದೆ. ಈ ಬಾರಿ ಕಠಿಣ ಕ್ರಮ ತೆಗೆದುಕೊಳ್ಳುವ ಸಲುವಾಗಿ ಕರ್ನಾಟಕದ ವಿಧಾನಸಭೆ ಚುನಾವಣೆಯ ಫಲಿತಾಂಶ ಬರುವುದನ್ನು ಕಾಯುತ್ತಿದೆ ಎಂದು ಮೂಲಗಳು ಹೇಳಿವೆ.

‘ಪೈಲಟ್ ಏಪ್ರಿಲ್‌ನಲ್ಲಿ ನಾಯಕತ್ವದ ವಿರುದ್ಧ ಕಠಿಣ ಹೇಳಿಕೆ ನೀಡಿ, ದಿನದ ಮಟ್ಟಿಗೆ ಉಪವಾಸ ಸತ್ಯಾಗ್ರಹ ನಡೆಸಿದ್ದರೂ ಅವರ ಮೇಲೆ ಕ್ರಮ ತೆಗೆದುಕೊಂಡಿರಲಿಲ್ಲ. ಆದರೆ, ಈ ಬಾರಿ ಅಂತಹ ಮೃದುತ್ವ ತೋರಿಸುವ ಸಾಧ್ಯತೆ ಇಲ್ಲ’ ಎಂದು ಮೂಲಗಳು ತಿಳಿಸಿವೆ.

‘ತೃತೀಯ ರಂಗದ ಜೊತೆಗೆ ಮೈತ್ರಿ ಇಲ್ಲ’

ಭುವನೇಶ್ವರ (ಪಿಟಿಐ): ಲೋಕಸಭೆಗೆ 2024ರಲ್ಲಿ ನಡೆಯಲಿರುವ ಚುನಾವಣೆಯಲ್ಲಿ ಒಡಿಶಾದ ಆಡಳಿತಾರೂಢ ಬಿಜು ಜನತಾದಳವು (ಬಿಜೆಡಿ) ಕಾಂಗ್ರೆಸ್, ಬಿಜೆಪಿ ಜೊತೆ ಅಷ್ಟೇ ಅಲ್ಲದೆ ತೃತೀಯ ರಂಗದ ಜೊತೆಗೂ ಮೈತ್ರಿ ಮಾಡಿಕೊಳ್ಳುವುದಿಲ್ಲ ಎಂದು ಪಕ್ಷದ ಹಿರಿಯ ಮುಖಂಡರೊಬ್ಬರು ತಿಳಿಸಿದ್ದಾರೆ.

‘ಮುಂದಿನ ಲೋಕಸಭಾ ಚುನಾವಣೆಯಲ್ಲಿ ಪಕ್ಷವು ಏಕಾಂಗಿಯಾಗಿ ಸ್ಪರ್ಧಿಸಲಿದೆ ಎಂಬುದನ್ನು ಒಡಿಶಾ ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಅವರು ಸ್ಪಷ್ಟಪಡಿಸಿದ್ದಾರೆ’ ಎಂದೂ ಹೇಳಿದ್ದಾರೆ.

‘ರಾಜ್ಯದ ಹಿತಾಸಕ್ತಿಯು ಪಕ್ಷಕ್ಕೆ ಮುಖ್ಯ. ಒಡಿಶಾದ ಅಭಿವೃದ್ಧಿಯು ನಮ್ಮ ಧ್ಯೇಯ’ ಎಂದಿದ್ದಾರೆ.

₹ 21,000 ಕೋಟಿ ತೆರಿಗೆ ಮೊತ್ತ ಪಾವತಿ ಪ್ರಕರಣ

ಗೇಮ್ಸ್‌ಕ್ರಾಫ್ಟ್: ಜಿಎಸ್‌ಟಿ ನೋಟಿಸ್ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೇಮ್ಸ್‌ಕ್ರಾಫ್ಟ್ ಟೆಕ್ನಾಲಜೀಸ್ ಕಂಪನಿ (ಕಾನೂನು ಬದ್ಧವಾಗಿ ಆಡಿಸಲಾಗುವ ಕೌಶಲಯುಕ್ತ ಆನ್‌ಲೈನ್ ಆಟಗಳು) ಪರವಾಗಿ ಕೋರ್ಟ್ ತಡೆಯಾಜ್ಞೆ ಇದ್ದರೂ ₹ 21,000 ಕೋಟಿ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಪಾವತಿಸುವಂತೆ ಜಿಎಸ್‌ಟಿ ಮಹಾನಿರ್ದೇಶನಾಲಯ (ಡಿಜಿಜಿಐ) ಜಾರಿಗೊಳಿಸಿದ್ದ ಷೋಕಾಸ್ ನೋಟಿಸ್ ಅನ್ನು ಹೈಕೋರ್ಟ್ ವಜಾಗೊಳಿಸಿದೆ.

ಈ ಕುರಿತಂತೆ ಗೇಮ್ಸ್‌ಕ್ರಾಫ್ಟ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಕಂಪನಿ ಸಂಸ್ಥಾಪಕರಾದ ಪೃಥ್ವಿ ರಾಜ್‌ಸಿಂಗ್, ವಿಕಾಸ್ ತನೇಜಾ ಮತ್ತು ಸಂಸ್ಥೆಯ ಮುಖ್ಯ ಹಣಕಾಸು ಅಧಿಕಾರಿ ರಮೇಶ್ ಬಾಬು ಪ್ರತ್ಯೇಕವಾಗಿ ಸಲ್ಲಿಸಿದ್ದ ಆರು ಅರ್ಜಿಗಳ ವಿಚಾರಣೆ ನಡೆಸಿ, ಕಾಯ್ದಿರಿಸಿದ್ದ ಆದೇಶವನ್ನು ನ್ಯಾಯಮೂರ್ತಿ ಎಸ್. ಆರ್. ಕೃಷ್ಣಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ಪ್ರಕಟಿಸಿತು.

ಮುಖ್ಯಾಂಶಗಳು

- ಐದು ವರ್ಷಗಳ ತೆರಿಗೆ ಬಾಕಿ
- 2022ರ ಸೆ. 8ರಂದು ಡಿಜಿಜಿಐ ನೋಟಿಸ್
- ಹೈಕೋರ್ಟ್‌ನಲ್ಲಿ ಪ್ರಶ್ನಿಸಿದ್ದ ಕಂಪನಿ

‘ಈ ಹಿಂದೆ ಸಲ್ಲಿಸಿದ್ದ ಎರಡು ಅರ್ಜಿಗಳು ಮಾನ್ಯತೆ ಕಳೆದುಕೊಂಡಿರುವುದರಿಂದ ಅವುಗಳನ್ನು ವಿಲೇವಾರಿ ಮಾಡಲಾಗಿದ್ದು, ಉಳಿದ ನಾಲ್ಕು ಮನವಿಗಳನ್ನು ಪುರಸ್ಕರಿಸಲಾಗಿದೆ. ಅಂತೆಯೇ, ಕಂಪನಿಗೆ ಡಿಜಿಜಿಐ ನೀಡಿದ್ದ ಷೋಕಾಸ್ ನೋಟಿಸ್ ಅನ್ನು ವಜಾಗೊಳಿಸಲಾಗಿದೆ‘ ಎಂದು ನ್ಯಾಯಪೀಠ ತನ್ನ ಕ್ಲುಪ್ತ ಆದೇಶ ಪ್ರಕಟಿಸಿದೆ.

‘ಗೇಮ್ಸ್‌ಕ್ರಾಫ್ಟ್ ಕಂಪನಿಯು, 2018ರಿಂದ ಐದು ವರ್ಷಗಳವರೆಗಿನ ₹ 21,000 ಕೋಟಿ ತೆರಿಗೆ ಮೊತ್ತವನ್ನು ಪಾವತಿಸಬೇಕು’ ಎಂದು ನಿರ್ದೇಶಿಸಿ ಜಿಎಸ್‌ಟಿ ಪ್ರಾಧಿಕಾರವು 2022ರ ಸೆ. 8ರಂದು ನೋಟಿಸ್ ಜಾರಿಗೊಳಿಸಿತ್ತು. ಕಂಪನಿ ಇದನ್ನು ಹೈಕೋರ್ಟ್‌ನಲ್ಲಿ ಪ್ರಶ್ನಿಸಿತ್ತು. ಅರ್ಜಿ ವಿಚಾರಣೆ ನಡೆಸಿದ್ದ ಹೈಕೋರ್ಟ್, ಈ ನೋಟಿಸ್‌ಗೆ ಸೆ. 23ರಂದು ತಡೆ ನೀಡಿತ್ತು.

ಏತನ್ಮಧ್ಯೆ, ಪುನಃ ಷೋಕಾಸ್ ನೀಡಿದ್ದನ್ನು ಪ್ರಶ್ನಿಸಿದ ಕಂಪನಿ, ‘ಹೈಕೋರ್ಟ್ ನೀಡಿದ್ದ ತಡೆ ಆದೇಶದ ಹೊರತಾಗಿಯೂ ಡಿಜಿಜಿಐ ಮತ್ತೆ ಷೋಕಾಸ್ ನೋಟಿಸ್ ಜಾರಿಗೊಳಿಸಿದೆ. ಆದರೆ, ಆನ್‌ಲೈನ್ ಗೇಮ್‌ಗಳಿಗೆ ತೆರಿಗೆ ವಿಧಿಸುವ ವಿಚಾರಕ್ಕೆ ಸಂಬಂಧಿಸಿದ ವಿಷಯ ಕಳೆದ ಮೂರು ವರ್ಷಗಳಿಂದ ನನೆಗುದಿಯಲ್ಲಿ ಇದೆ. ಜಿಎಸ್‌ಟಿ ಮಂಡಳಿಯ ಸಭೆಯಲ್ಲಿ ಈ ವಿಷಯದ ಪರಿಗಣನೆಗೆ ಬಾಕಿ ಇದೆ. ಆದರೂ, ಡಿಜಿಜಿಐ ಕಾನೂನುಬಾಹಿರವಾಗಿ ಕಂಪನಿಗೆ ಶೇ 28ರಷ್ಟು ತೆರಿಗೆ ವಿಧಿಸಿದೆ’ ಎಂದು ಆಕ್ಷೇಪಿಸಿ ಮತ್ತೊಂದು ರಿಟ್ ಅರ್ಜಿ ಸಲ್ಲಿಸಿತ್ತು.

ಜಿಎಸ್‌ಟಿ ಪ್ರಾಧಿಕಾರವು ಗೇಮ್ಸ್ ಕ್ರಾಫ್ಟ್ ಕಚೇರಿಯ ಮೇಲೆ 2021ರ ನವೆಂಬರ್‌ನಲ್ಲಿ ದಾಳಿ ನಡೆಸಿ ಕಂಪನಿಯ ಬ್ಯಾಂಕ್ ಖಾತೆಗಳನ್ನು ಜಪ್ತಿ ಮಾಡಿತ್ತು.

‘ವಕೀಲಿಕೆ ನೋಂದಣಿ: ₹600 ಮೀರುವಂತಿಲ್ಲ’

ನವದೆಹಲಿ (ಪಿಟಿಐ): ವಕೀಲರಾಗಿ ವೃತ್ತಿ ಆರಂಭಿಸಲು ಕಾನೂನು ಪದವೀಧರರಿಗೆ ₹600ಕ್ಕಿಂತ ಹೆಚ್ಚಿನ ನೋಂದಣಿ ಶುಲ್ಕ ವಿಧಿಸುವಂತಿಲ್ಲ ಎಂದು ಎಲ್ಲ ರಾಜ್ಯಗಳ ವಕೀಲರ ಪರಿಷತ್‌ಗಳಿಗೆ (ಸ್ಟೇಟ್ ಬಾರ್ ಕೌನ್ಸಿಲ್) ಸುಪ್ರೀಂ ಕೋರ್ಟ್ ಶುಕ್ರವಾರ ಸೂಚಿಸಿದೆ.

ಕಡಿಮೆ ಆದಾಯ ಹೊಂದಿರುವ ಕಾನೂನು ಪದವೀಧರರಿಗೆ ಇದು ದೊಡ್ಡ ನಿರಾಳತೆ ನೀಡಿದೆ.

ಮುಖ್ಯನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಮತ್ತು ನ್ಯಾಯಮೂರ್ತಿ ಪಿ.ಎಸ್. ನರಸಿಂಹ ಅವರಿದ್ದ ಪೀಠವು, ಈ ಸಂಬಂಧ ಎಲ್ಲ ರಾಜ್ಯಗಳ ಬಾರ್ ಕೌನ್ಸಿಲ್‌ಗಳಿಗೆ ನೋಟಿಸ್ ಜಾರಿ ಮಾಡಿದ್ದು, ಕಾನೂನು ಪದವೀಧರರ ನೋಂದಣಿಗೆ ಎಷ್ಟು ಶುಲ್ಕ ವಿಧಿಸಲಾಗುತ್ತದೆ, ಅವರಿಂದ ಒಂದು ವರ್ಷದಲ್ಲಿ ಎಷ್ಟು ಹಣ ಸಂಗ್ರಹಿಸಲಾಗುತ್ತದೆ? ಎನ್ನುವುದನ್ನು ತಿಳಿಸಲು ಸೂಚಿಸಿದ್ದಾರೆ.

ವಕೀಲರ ಕಾಯ್ದೆ ಪ್ರಕಾರ, ಶಿಫಾರಸು ಮಾಡಲಾದ ನಿಯಮಗಳಡಿ ನೋಂದಣಿ ಶುಲ್ಕವನ್ನು ₹600 ನಿಗದಿಪಡಿಸಲಾಗಿದೆ. ಇದಕ್ಕಿಂತ ಹೆಚ್ಚಿನ ಮೊತ್ತವನ್ನು ಬಾರ್ ಕೌನ್ಸಿಲ್ ವಿಧಿಸುವಂತಿಲ್ಲ ಎಂದು ಪೀಠ ಹೇಳಿತು.

ಭಾರತೀಯ ವಕೀಲರ ಪರಿಷತ್ ಪರ ಹಾಜರಿದ್ದ ಹಿರಿಯ ವಕೀಲ ಮೆನನ್ ಕುಮಾರ್ ಮಿಶ್ರಾ ಅವರು ₹600 ಶುಲ್ಕ ವಿಧಿಸಿರುವುದು 1993ರಲ್ಲಿ ಮತ್ತು ಆಗಿನಿಂದ ಈವರೆಗೆ ಎಲ್ಲದರ ಬೆಲೆಗಳು ಏರಿಕೆಯಾಗಿವೆ ಎಂದು ವಾದಿಸಿದರು. ಬಿಸಿಐ ಅಧ್ಯಕ್ಷರೂ ಆಗಿರುವ ಮಿಶ್ರಾ ಅವರ ವಾದವನ್ನು ಪೀಠ ಒಪ್ಪಲಿಲ್ಲ.

ಅನಗತ್ಯ, ದುಬಾರಿ ಶುಲ್ಕಗಳು ಬಡತನದ ಹಿನ್ನೆಲೆಯಿಂದ ಬರುವವರ ಹಿತಾಸಕ್ತಿಯನ್ನು ಬಲಿತೆಗೆದುಕೊಳ್ಳುವ ಸಾಧ್ಯತೆ ಇದೆ ಎಂದು ಹೇಳಿದೆ.

‘ಇದು ಮಹತ್ವದ ವಿಚಾರ. ಇಷ್ಟೊಂದು ದುಬಾರಿ ಶುಲ್ಕವು ವಕೀಲರ ಕಾಯ್ದೆ 1961ರ ಸೆಕ್ಷನ್ 24ರ ಉಲ್ಲಂಘನೆಯಾಗಿದೆ. ಈ ಬಗ್ಗೆ ನಾವು ನೋಟಿಸ್ ನೀಡುತ್ತೇವೆ’ ಎಂದು ಪೀಠ ಹೇಳಿತು.



ನಗರದ ಗಂಗಮ್ಮ ವೃತ್ತದಲ್ಲಿ ಬ್ಯಾಂಕ್ ಆಫ್ ಬರೋಡಾದ ಪ್ರಥಮ ಡಿಜಿಟಲ್ ಬ್ಯಾಂಕಿಂಗ್ ಯೂನಿಟ್ (ಡಿಬಿಯು) ಅನ್ನು ಬ್ಯಾಂಕ್‌ನ ಕಾರ್ಯನಿರ್ವಾಹಕ ನಿರ್ದೇಶಕ ಅಜಯ್ ಕೆ. ಖುರಾನಾ ಉದ್ಘಾಟಿಸಿದರು. ಉಪ ವಲಯ ಮುಖ್ಯಸ್ಥ ವಿವೇಕ್ ಕುಮಾರ್ ಚೌಧರಿ, ಕಪಿಲೇಶ್ ಆರ್. ಇದ್ದರು.

26 ರೈಲು ನಿಲ್ದಾಣದಲ್ಲಿ ‘ಒಂದು ನಿಲ್ದಾಣ ಒಂದು ಉತ್ಪನ್ನ’

ನವದೆಹಲಿ: ಸ್ಥಳೀಯ/ದೇಸಿ ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸಿ ಕರಕುಶಲಕರ್ಮಿಗಳಿಗೆ ಉತ್ತೇಜನ ನೀಡುವ ದೃಷ್ಟಿಯಿಂದ ರೈಲ್ವೆ ಇಲಾಖೆಯು ಕರ್ನಾಟಕ 26 ರೈಲು ನಿಲ್ದಾಣಗಳಲ್ಲಿ ‘ಒಂದು ನಿಲ್ದಾಣ–ಒಂದು ಉತ್ಪನ್ನ’ ಯೋಜನೆ ಆರಂಭಿಸಿದೆ. 21 ರಾಜ್ಯಗಳು ಹಾಗೂ ಮೂರು ಕೇಂದ್ರಾಡಳಿತ ಪ್ರದೇಶಗಳ 728 ನಿಲ್ದಾಣಗಳಲ್ಲಿ ಈ ಯೋಜನೆ ಆರಂಭವಾಗಿದೆ.

ಈ ಯೋಜನೆಯಡಿ ರೈಲ್ವೆ ನಿಲ್ದಾಣಗಳಲ್ಲಿ ಮಳಿಗೆಗಳನ್ನು ತೆರೆಯಲಾಗುತ್ತದೆ. ಸ್ಥಳೀಯ ಉತ್ಪನ್ನಗಳ ಮಾರಾಟ ಹಾಗೂ ಪ್ರದರ್ಶನ ಮಾಡಲಾಗುತ್ತದೆ. ಆಯಾ ಪ್ರದೇಶದ ನಿರ್ದಿಷ್ಟ ಉತ್ಪನ್ನಗಳ ಮಾರಾಟಕ್ಕೆ ಉತ್ತೇಜನ ನೀಡಲಾಗುತ್ತದೆ. ಸ್ಥಳೀಯ ಬುಡಕಟ್ಟು ಸಮುದಾಯದವರು ಮಾಡಿದ ಕಲಾಕೃತಿಗಳು, ಸ್ಥಳೀಯ ನೇಕಾರರ ಕೈಮಗ್ಗಗಳು, ಕರಕುಶಲ ವಸ್ತುಗಳು, ಮಸಾಲೆ ಚಹಾ, ಕಾಫಿ, ಸಂಸ್ಕರಿತ ಆಹಾರ ಪದಾರ್ಥಗಳು/ಉತ್ಪನ್ನಗಳನ್ನು ಮಾರಾಟ ಮಾಡಲಾಗುತ್ತದೆ ಎಂದು ರೈಲ್ವೆ ಇಲಾಖೆ ತಿಳಿಸಿದೆ.

ಯಾವ ನಿಲ್ದಾಣಗಳು?: ಬಳ್ಳಾರಿ ಜಂಕ್ಷನ್, ಬೆಂಗಳೂರು ಕಂಟೋನ್ಮೆಂಟ್, ಬಂಗಾರಪೇಟೆ, ಬೆಳಗಾವಿ, ಬೀದರ್, ಗದಗ, ಹುಬ್ಬಳ್ಳಿ, ಕೆಂಗೇರಿ, ಕೆ.ಆರ್. ಪುರ, ಕೆಎಸ್‌ಆರ್ ಬೆಂಗಳೂರು, ಮಂಡ್ಯ, ಮಂಗಳೂರು ಸೆಂಟ್ರಲ್, ರಾಯಚೂರು, ತುಮಕೂರು, ವಿಜಯಪುರ, ಯಾದಗಿರಿ, ಯಲಹಂಕ, ಯಶವಂತಪುರ, ಅರಸೀಕೆರೆ, ದಾವಣಗೆರೆ, ಹಾವೇರಿ, ಮೈಸೂರು, ಪಾಂಡವಪುರ, ಶಿವಮೊಗ್ಗ, ಸುಬ್ರಹ್ಮಣ್ಯ ರಸ್ತೆ, ತಿಪಟೂರು. ಈ ನಿಲ್ದಾಣಗಳ ಮಳಿಗೆಗಳಲ್ಲಿ ಚನ್ನಪಟ್ಟಣದ ಆಟಿಕೆಗಳು, ಗಿರಣಿ ಎಣ್ಣೆಗಳು (ಕಡಲೆ ಎಣ್ಣೆ, ಬೇವಿನ ಎಣ್ಣೆ), ತೆಂಗಿನಕಾಯಿ ಸಿಹಿತಿಂಡಿಗಳು, ತೆಂಗಿನಕಾಯಿ ವಸ್ತುಗಳು ಹಾಗೂ ತೆಂಗಿನ ಉದ್ಯಮದ ವಸ್ತುಗಳನ್ನು ಮಾರಾಟ ಮಾಡಲಾಗುತ್ತದೆ ಎಂದು ಇಲಾಖೆ ತಿಳಿಸಿದೆ.

ನಿಯಮ ಉಲ್ಲಂಘಿಸಿ ಕಾಮಗಾರಿ, ಸಸಿ ನೆಡಲು ಸ್ಥಳದ ಅಭಾವ

‘ಹಸಿರು’ ಮಾಯ: ಬಿಡಿಎ ಕಾಳಜಿ ದೂರ

• ಆದಿತ್ಯ ಕೆ.ಎ.

ಬೆಂಗಳೂರು: ವರ್ಷದಿಂದ ವರ್ಷಕ್ಕೆ ನಗರದಲ್ಲಿ ಹಸಿರುಮಯ ವಾತಾವರಣ ಕುಗ್ಗುತ್ತಿದೆ. ಇದರ ನಡುವೆಯೇ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ಹೊಸ ಬಡಾವಣೆಗಳಲ್ಲಿ ಹಸಿರೀಕರಣಕ್ಕೆ ಆದ್ಯತೆ ನೀಡದೇ ಕಾಮಗಾರಿ ನಡೆಸುತ್ತಿರುವುದು ನಿವೇಶನ ಖರೀದಿದಾರರು, ಸ್ಥಳೀಯ ನಿವಾಸಿಗಳ ಆತಂಕ ಹೆಚ್ಚಿಸುವಂತೆ ಮಾಡಿದೆ.

4,040 ಎಕರೆ ವಿಸ್ತೀರ್ಣದಲ್ಲಿ ಕೆಂಪೇಗೌಡ ಬಡಾವಣೆ ತಲೆಯುತ್ತಿದೆ. ಮೊದಲ ಹಂತದಲ್ಲಿ 2,685 ಎಕರೆಯಷ್ಟು ಜಮೀನು ಸ್ವಾಧೀನ ಪಡಿಸಿಕೊಂಡು ಕೆಂಪೇಗೌಡ ಬಡಾವಣೆ ನಿರ್ಮಿಸಲಾಗುತ್ತಿದೆ. ಇದು ಕೃಷಿ ಜಮೀನಾಗಿದ್ದರಿಂದ ಈ ಪ್ರದೇಶದಲ್ಲಿ ಅಡಿಕೆ, ತೆಂಗು, ಮಾವು ಸೇರಿದಂತೆ ವಿವಿಧ ಬಗೆಯ ಮರಗಳು ನಳನಳಿಸುತ್ತಿದ್ದವು. ಜಮೀನು ಸಮತಟ್ಟು, ಚರಂಡಿ ನಿರ್ಮಾಣ, ನಿವೇಶನ ಮಾರ್ಪಾಡು, ರಸ್ತೆ, ಮೋರಿ ನಿರ್ಮಾಣಕ್ಕೆ 2018ರಲ್ಲಿಯೇ ಅಂದಾಜು 2 ಲಕ್ಷದಷ್ಟು ಮರಗಳನ್ನು ಕಡಿಯಲಾಗಿತ್ತು. ಅದನ್ನು ಸರಿದೂಗಿಸಲು ‘ಹಸಿರೀಕರಣ ಯೋಜನೆ’ ರೂಪಿಸಬೇಕಿತ್ತು. ಆದರೆ, ಬಡಾವಣೆಯಲ್ಲಿ ಹಸಿರು ಬೆಳೆಸುವ ಕಾಳಜಿಯನ್ನು ಬಿಡಿಎ ತೋರುತ್ತಿಲ್ಲ.

ಸ್ಥಳೀಯ ನಿವಾಸಿಗಳ ಹೋರಾಟದಿಂದ ರಾಜಕಾಲುವೆಯ ಬಫರ್ ವಲಯದಲ್ಲಿ ಅಂದಾಜು 25 ಸಾವಿರದಷ್ಟು ಸಸಿಗಳನ್ನು ನೆಡಲಾಗಿದೆ. ಅವುಗಳ ನಿರ್ವಹಣೆಯೂ ಈಗ ನಡೆಯುತ್ತಿಲ್ಲ. ಅದನ್ನು ಹೊರತುಪಡಿಸಿ ಉಳಿದೆಡೆ ‘ಹಸಿರು ಮಾಯ’ವಾಗಿದೆ.



ಕೆಂಪೇಗೌಡ ಬಡಾವಣೆಯಲ್ಲಿ ನಡೆದಿರುವ ರಸ್ತೆ ಕಾಮಗಾರಿ

ಪರಿಸರ ಇಲಾಖೆ ನಿಯಮ ಉಲ್ಲಂಘನೆ

ಒಟ್ಟು 607 ಎಕರೆ ಪ್ರದೇಶದಲ್ಲಿ ಉದ್ಯಾನ ನಿರ್ಮಿಸಲಾಗುವುದು ಎಂದು ಬಿಡಿಎ ಅಧಿಕಾರಿಗಳು ಪರಿಸರ ಇಲಾಖೆಯಿಂದ ಅನುಮತಿ ಪಡೆದುಕೊಂಡಿದ್ದರು. ಇಲಾಖೆ ಸೂಚನೆಯಂತೆ ಉದ್ಯಾನ ಹಾಗೂ ನಾಗರಿಕರ ಸೌಕರ್ಯಕ್ಕೆ ಸ್ಥಳ (387 ಎಕರೆ)ವನ್ನು ಮೀಸಲಿಡಬೇಕಿತ್ತು. 2,685 ಎಕರೆ ಪ್ರದೇಶದ 10 ಬ್ಲಾಕ್‌ಗಳಲ್ಲಿ ಎಲ್ಲಿಯೂ ವಿಶಾಲವಾದ ಸ್ಥಳವನ್ನೇ ಬಿಟ್ಟಿಲ್ಲ. ಉದ್ಯಾನಕ್ಕೆ ಮೀಸಲಿಟ್ಟ ಜಾಗವನ್ನೂ ವಸತಿ ನಿವೇಶನಕ್ಕೆ ಬಳಸಿಕೊಳ್ಳಲಾಗಿದೆ.

ಎಲ್ಲ ಖಾಸಗಿ ಲೇಔಟ್‌ನಲ್ಲೂ ಹಸಿರೀಕರಣಕ್ಕೆ ಆದ್ಯತೆ ನೀಡಿ ಯೋಜನೆ ರೂಪಿಸುತ್ತಾರೆ. ಆದರೆ, ಕೆಂಪೇಗೌಡ ಬಡಾವಣೆಯಲ್ಲಿ ಪರಿಸರ ಇಲಾಖೆ ವಿಧಿಸಿದ್ದ ನಿಯಮಗಳನ್ನು ಬಿಡಿಎ ಅಧಿಕಾರಿಗಳು ಹಾಗೂ ನಿವೇಶನ ಅಭಿವೃದ್ಧಿಪಡಿಸುತ್ತಿರುವ ಗುತ್ತಿಗೆದಾರರು ಗಾಳಿಗೆ ತೂರಿದ್ದಾರೆ. ನಕ್ಷೆಯಲ್ಲಿ ಉದ್ಯಾನಕ್ಕೆ ಮೀಸಲಿಟ್ಟ ಜಾಗಕ್ಕೂ, ಉದ್ಯಾನಕ್ಕೆ ನಿಗದಿ ಪಡಿಸಿರುವ ಸ್ಥಳಕ್ಕೆ ಸಾಕಷ್ಟು ವ್ಯತ್ಯಾಸ ಇದೆ ಎಂದು ನಿವೇಶನ ಖರೀದಿದಾರರು ಹೇಳುತ್ತಾರೆ.

ಬಿಡಿಎ ನಿರ್ಮಿಸಿರುವ ಬಡಾವಣೆಗಳಲ್ಲಿ ಕಡಿಮೆ ಮರಗಳನ್ನು ಹೊಂದಿರುವ ಅಪಖ್ಯಾತಿಗೂ ಈ ಬಡಾವಣೆ ಒಳಗಾಗುವ ಸಾಧ್ಯತೆಯಿದೆ.

ಚರಂಡಿ, ರಸ್ತೆ ಪಕ್ಕದಲ್ಲಿ ಸಸಿಗಳನ್ನು ನೆಡಲು ಅವಕಾಶ ಇಲ್ಲದಂತೆ ರಸ್ತೆ ಅಭಿವೃದ್ಧಿಪಡಿಸಲಾಗುತ್ತಿದೆ. ಇದಕ್ಕೆ ನಿವೇಶನದಾರರು ಆಕ್ರೋಶ ಹೊರಹಾಕಿದ್ದಾರೆ.

ಶಿವರಾಮ ಕಾರಂತ್ ಬಡಾವಣೆ, ವಿಶ್ವೇಶ್ವರಯ್ಯ ಸೇರಿದಂತೆ ಹೊಸ ಬಡಾವಣೆಗಳಲ್ಲಿ ನಿವೇಶನದಾರರಿಗೆ ಸಸಿಗಳನ್ನು ನೆಡಲು ಸ್ಥಳಾವಕಾಶ ನೀಡಲಾಗಿದೆ. ಆದರೆ, ಕೆಂಪೇಗೌಡ ಬಡಾವಣೆಯಲ್ಲಿ ಸ್ಥಳವನ್ನೇ ಬಿಡದೆ ಕಾಮಗಾರಿ ನಡೆಸಲಾಗುತ್ತಿದೆ. ಇದರಿಂದ ಬಡಾವಣೆ ನಿವಾಸಿಗಳಿಗೆ ಭವಿಷ್ಯದಲ್ಲಿ ತೊಂದರೆ ಎದುರಾಗಲಿದೆ ಎಂದು ಕೆಂಪೇಗೌಡ ಬಡಾವಣೆಯ ಓಪನ್ ಫೋರಂ ವಕ್ತಾರ ಸೂರ್ಯಕಿರಣ್ ‘ಪ್ರಜಾವಾಣಿ’ ಆತಂಕ ವ್ಯಕ್ತಪಡಿಸುತ್ತಾರೆ.

ಉದ್ಯಾನವೂ ಮಾಯ:

ಮೂಲಸೌಕರ್ಯದಿಂದ ತತ್ತರಿಸುವ ಕೆಂಪೇಗೌಡ ಬಡಾವಣೆಯಲ್ಲಿ ನಿವೇಶನದಾರರು ಮನೆ ನಿರ್ಮಿಸಲು ಹೆಚ್ಚಿನ ಆಸಕ್ತಿ ತೋರುತ್ತಿಲ್ಲ. ಇದುವರೆಗೂ ಅಂದಾಜು 150 ಮನೆಗಳನ್ನಷ್ಟೇ ಕಟ್ಟಲಾಗಿದೆ. 30, 40 ಹಾಗೂ 50 ಅಡಿ ಅಗಲದ ರಸ್ತೆಯಲ್ಲಿ ಯುಟಿಲಿಟಿ ಚಾನಲ್, ಬೀದಿ ದೀಪಗಳ ಅಳವಡಿಕೆ, ವಿದ್ಯುತ್ ಪರಿವರ್ತಕ ಹಾಗೂ ಚೇಂಬರ್ ಬಾಕ್ಸ್‌ಗಳಿರುವುದರಿಂದ ಸಸಿ ನೆಡಲು ಅವಕಾಶ ಇಲ್ಲವಾಗಿದೆ. 60 ಅಡಿ ರಸ್ತೆಯ ಎರಡೂ ಬದಿಯ ಯುಟಿಲಿಟಿ ಚಾನಲ್‌ಗಳಿವೆ. ಅಲ್ಲಿಯೂ ಹಸಿರೀಕರಣಕ್ಕೆ ಅವಕಾಶ ಸಿಗುವುದಿಲ್ಲ. 20X30, 30X40 ಅಡಿ ವಿಸ್ತೀರ್ಣದ ನಿವೇಶನದಾರರಿಗೆ ಒಂದು ಸಸಿ ನೆಡುವುದಕ್ಕೆ ಸ್ಥಳದ ಅಭಾವವಿದೆ ಎಂದು ನಿವೇಶನದಾರರು ಹೇಳುತ್ತಾರೆ.

ಬಡಾವಣೆಯಲ್ಲಿ 9 ಬ್ಲಾಕ್‌ಗಳಿವೆ. ಅಲ್ಲಿಯೂ ವಿಶಾಲವಾದ ಉದ್ಯಾನ ನಿರ್ಮಿಸಿಲ್ಲ. ಭವಿಷ್ಯದಲ್ಲಿ ಮರಗಳನ್ನು ಬೆಳೆಸಲು ಆಗದಂತೆ ಅವೈಜ್ಞಾನಿಕವಾಗಿ ಕಾಮಗಾರಿ ನಡೆಸಲಾಗಿದೆ ಎಂದು ನಿವಾಸಿಗಳು ಹೇಳಿದರು.



ಬೇರೆ ಬಡಾವಣೆಗಳಿಗಿಂತ ಕೆಂಪೇಗೌಡ ಬಡಾವಣೆಯಲ್ಲಿ 2ರಿಂದ 3 ಡಿಗ್ರಿಯಷ್ಟು ತಾಪಮಾನ ಏರಿಕೆಯಿದೆ. ಅಂತರ್ಜಲ ಮಟ್ಟವೂ ಕುಸಿಯುತ್ತಿದೆ.

ಸೂರ್ಯಕಿರಣ್, ವಕ್ತಾರ, ಕೆಂಪೇಗೌಡ ಬಡಾವಣೆ ಓಪನ್ ಫೋರಂ

ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
62,027 ▲	18,315 ▲	₹62,950 (ಬೆಂಗಳೂರು) ▼	₹74,500 (ಬೆಂಗಳೂರು) ▼	82.18 ▼

ಪ್ರತಿ ಯೂನಿಟ್‌ಗೆ ಸರಾಸರಿ 70 ಪೈಸೆ ಹೆಚ್ಚಳ: ಏಪ್ರಿಲ್ 1ರಿಂದ ಪೂರ್ವಾನ್ವಯ

ಫಲಿತಾಂಶಕ್ಕೆ ಮುನ್ನ 'ಶಾಕ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತದಾನ ಮುಗಿಯುವ ವರೆಗೆ ಮೌನವಾಗಿದ್ದ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಕೆಇಆರ್‌ಸಿ), ರಾಜ್ಯದ ಭವಿಷ್ಯ ನಿರ್ಧರಿಸುವ ಮತ ಎಣಿಕೆಯ ಹಿಂದಿನ ದಿನವೇ ವಿದ್ಯುತ್ ಬಳಕೆಗೆ ವಿಧಿಸುವ ದರವನ್ನು ಭಾರಿ ಪ್ರಮಾಣದಲ್ಲಿ ಹೆಚ್ಚಿಸಲು ಒಪ್ಪಿಗೆ ಸೂಚಿಸಿದೆ. ಏಪ್ರಿಲ್ 1ರಿಂದಲೇ ಹೊಸ ದರ ಪೂರ್ವಾನ್ವಯವಾಗಲಿದೆ.

ನಾಡಿನ ಜನರೆಲ್ಲ ಫಲಿತಾಂಶದ ಮೇಲೆ ಲಕ್ಷ್ಯ ಇಡುವ ಹೊತ್ತಿನಲ್ಲಿಯೇ ಕೆಇಆರ್‌ಸಿ ದರ ಏರಿಕೆಗೆ ಒಪ್ಪಿಗೆ ಸೂಚಿಸಿದೆ. ಸಾಮಾನ್ಯವಾಗಿ ಏಪ್ರಿಲ್ 1ರಿಂದ ಅನ್ವಯವಾಗುವಂತೆ ದರ ಹೆಚ್ಚಳವಾಗುತ್ತದೆ. ಚುನಾವಣೆ ಇದ್ದುದರಿಂದ ಕೆಇಆರ್‌ಸಿ ಈ ಪ್ರಕ್ರಿಯೆಯನ್ನು ಮುಂದೂಡಿತ್ತು. ಸರ್ಕಾರದ ಅವಧಿ ಮುಗಿದು, ಹೊಸ ಸರ್ಕಾರ ರಚನೆಯಾಗುವ ಸಂಕ್ರಮಣ ಕಾಲದಲ್ಲಿ ದರ ಏರಿಕೆ ಬಿಸಿ ಜನರನ್ನು ತಟ್ಟಲಿದೆ.

ಆದಾಯ ಕೊರತೆ ಎದುರಿಸುತ್ತಿರುವ ಎಸ್ಕಾಂಗಳ ಬೇಡಿಕೆಗೆ ಭಾಗಶಃ ಒಪ್ಪಿಗೆ ನೀಡಿರುವ ಕೆಇಆರ್‌ಸಿ, ಪ್ರತಿ ಯೂನಿಟ್‌ಗೆ ಸರಾಸರಿ 70 ಪೈಸೆ ವಿದ್ಯುತ್ ದರ ಹೆಚ್ಚಿಸಲು ಒಪ್ಪಿಗೆ ನೀಡಿದೆ. ಪ್ರತಿ ಯೂನಿಟ್‌ಗೆ ₹1.39 ಹೆಚ್ಚಿಸುವಂತೆ (ಶೇ 16.83) ಎಸ್ಕಾಂಗಳು ಬೇಡಿಕೆ ಸಲ್ಲಿಸಿದ್ದವು. ಏಪ್ರಿಲ್‌ನಿಂದಲೇ ಗ್ರಾಹಕರ ಬಿಲ್‌ಗಳಲ್ಲಿ ಶೇ 8.31ರಷ್ಟು ಹೆಚ್ಚಳವಾಗಲಿದೆ.

ಕಳೆದ ವರ್ಷ ಏಪ್ರಿಲ್‌ನಲ್ಲಿ ಪ್ರತಿ ಯೂನಿಟ್‌ಗೆ ಸರಾಸರಿ 35 ಪೈಸೆಯಷ್ಟು (ಶೇ 4.33) ವಿದ್ಯುತ್ ದರ ಹೆಚ್ಚಿಸಲಾಗಿತ್ತು. ನಂತರ, ಅಕ್ಟೋಬರ್ 1ರಂದು ಇಂಧನ ಹೊಂದಾಣಿಕೆ ಶುಲ್ಕವನ್ನು (ಎಫ್‌ಎಸಿ) ಪರಿಷ್ಕರಿಸಲಾಗಿತ್ತು. ಇದರಿಂದ, ವಿವಿಧ ಎಸ್ಕಾಂಗಳು ಪ್ರತಿ ಯೂನಿಟ್‌ಗೆ 24 ಪೈಸೆಯಿಂದ 43 ಪೈಸೆಯವರೆಗೆ ದರ ಹೆಚ್ಚಿಸಿದ್ದವು. ಬಳಿಕ, ಡಿಸೆಂಬರ್‌ನಲ್ಲಿ ಬೆಸ್ಕಾಂ ಹಾಗೂ ಮೆಸ್ಕಾಂ ವ್ಯಾಪ್ತಿಯಲ್ಲಿ ಮಾತ್ರ ವಿದ್ಯುತ್ ಹೊಂದಾಣಿಕೆ ವೆಚ್ಚ ಕಡಿತಗೊಳಿಸಲಾಗಿತ್ತು.

ಆದಾಯ ಕೊರತೆ ನೀಗಿಸುವ ಯತ್ನ: 2023-24ನೇ ಸಾಲಿಗೆ ಒಟ್ಟು ₹62,133 ಕೋಟಿಗಳ ವಾರ್ಷಿಕ ಆದಾಯ ದೊರೆಯುವ ಪ್ರಸ್ತಾವವನ್ನು ಎಸ್ಕಾಂಗಳು ಕೆಇಆರ್‌ಸಿಗೆ ಸಲ್ಲಿಸಿದ್ದವು. ಈ ಮೊತ್ತದಲ್ಲಿ ₹8,951 ಕೋಟಿ ಆದಾಯ ಕೊರತೆಯೂ ಸೇರಿತ್ತು.

8ನೇ ಪುಟ ನೋಡಿ

ಹೊಸ ದರ: ಏನೇನು ನಿರ್ಧಾರ

- ಎಲೆಕ್ಟ್ರಿಕ್ ವಾಹನಗಳ ಬಳಕೆಯನ್ನು ಉತ್ತೇಜಿಸಲು ಚಾರ್ಜಿಂಗ್ ಸ್ಟೇಷನ್‌ಗಳಲ್ಲಿನ ವಿದ್ಯುತ್ ಬಳಕೆ ಶುಲ್ಕವನ್ನು ಪ್ರತಿ ಯೂನಿಟ್‌ಗೆ ₹4.50ಕ್ಕೆ ಇಳಿಸಲಾಗಿದೆ. ಇದುವರೆಗೆ ಪ್ರತಿ ಯೂನಿಟ್‌ಗೆ ₹5 ಪಡೆಯಲಾಗುತ್ತಿತ್ತು.
- ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಿಗೆ ಪ್ರತಿ ಯೂನಿಟ್‌ಗೆ ನೀಡುತ್ತಿರುವ 50 ಪೈಸೆ ರಿಯಾಯಿತಿಯನ್ನು ಇನ್ನೂ ಒಂದು ವರ್ಷ ಮುಂದುವರಿಸಲು ನಿರ್ಧರಿಸಲಾಗಿದೆ.
- ರಿಯಾಯಿತಿ ಇಂಧನ ದರ ಯೋಜನೆ (ಡಿಇಆರ್‌ಎಸ್) ಅಡಿಯಲ್ಲಿ ಪ್ರತಿ ಯೂನಿಟ್‌ಗೆ ನಿಗದಿಪಡಿಸಲಾಗಿದ್ದ ₹6 ವಿದ್ಯುತ್ ಬಳಕೆ ಶುಲ್ಕವನ್ನು ₹5ಕ್ಕೆ ಇಳಿಕೆ ಮಾಡಲಾಗಿದೆ. ಎಚ್‌.ಟಿ. ಗ್ರಾಹಕರಿಗೆ ಅನ್ವಯವಾಗುತ್ತಿದ್ದ ಈ ಯೋಜನೆಯನ್ನು ಈಗ 50 ಕಿಲೋ ವಾಟ್ ಮತ್ತು ಅದಕ್ಕಿಂತ ಹೆಚ್ಚು ಲೋಡ್ ಮಂಜೂರಾತಿ ಹೊಂದಿರುವ ಎಲ್‌.ಟಿ. ಕೈಗಾರಿಕೆ ಮತ್ತು ವಾಣಿಜ್ಯ ಸ್ಥಾವರಗಳಿಗೂ ವಿಸ್ತರಿಸಲಾಗಿದೆ.
- ಗೋಶಾಲೆಗಳಿಗೆ ಗೃಹ ಬಳಕೆ ದರವನ್ನು ನಿಗದಿಪಡಿಸಿರುವುದನ್ನು ವಿಸ್ತರಿಸಲಾಗಿದೆ.

ಕೃಷಿ ಪಂಪ್‌ಸೆಟ್‌ಗೂ ಬೇಕು 'ಆಧಾರ್'



ನೀರಾವರಿ ಪಂಪ್‌ಸೆಟ್‌ಗಳ ಆರ್‌ಆರ್ ಸಂಖ್ಯೆಗಳನ್ನು ಗ್ರಾಹಕರ ಆಧಾರ್ ಸಂಖ್ಯೆಯೊಂದಿಗೆ ಆರು ತಿಂಗಳ ಒಳಗಾಗಿ ಲಿಂಕ್ ಮಾಡಬೇಕು ಎಂದು ಕೆಇಆರ್‌ಸಿ ಎಲ್ಲ ಎಸ್ಕಾಂಗಳಿಗೆ ನಿರ್ದೇಶನ ನೀಡಿದೆ.

'ಆಧಾರ್' ಸಂಖ್ಯೆ ಲಿಂಕ್ ಮಾಡದಿದ್ದರೆ ಸರ್ಕಾರವು ಸಹಾಯಧನವನ್ನು ಬಿಡುಗಡೆ ಮಾಡತಕ್ಕದ್ದಲ್ಲ ಎಂದು ಸೂಚಿಸಿದೆ.

ಇಂದು ಮಧ್ಯಾಹ್ನ ಸಿಗಲಿದೆ ಚಿತ್ರಣ ● ಅಧಿಕಾರಕ್ಕಾಗಿ 3 ಪಕ್ಷಗಳ ಕಾರ್ಯತಂತ್ರ

ಮತ ರಹಸ್ಯ: ಯಾರಿಗೆ ಭವಿಷ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೂರು ಪಕ್ಷಗಳ ನಡುವಿನ ಭಾರಿ ಹಣಾಹಣಿ, ಅಬ್ಬರದ ಪ್ರಚಾರ, ಪ್ರತಿಷ್ಠೆಯನ್ನೇ ಪಣವಾಗಿಟ್ಟು ನಡೆದ ವಿಧಾನಸಭೆ ಚುನಾವಣೆಯಲ್ಲಿ ರಾಜ್ಯದ 3.67 ಕೋಟಿ ಮತದಾರರು ನೀಡಿರುವ ಜನಾದೇಶ ಶನಿವಾರ ಬಹಿರಂಗವಾಗಲಿದೆ.

ಲೋಕಸಭೆ ಚುನಾವಣೆಗೆ ಒಂದು ವರ್ಷ ಇರುವಾಗ ನಡೆದಿರುವ ಈ ಚುನಾವಣೆಯ ಫಲಿತಾಂಶ ರಾಜ್ಯ ಮಾತ್ರವಲ್ಲ, ದೇಶದ ರಾಜಕೀಯ ದಿಕ್ಕನ್ನು ನಿರ್ಧರಿಸಲಿದೆ. ಈ ಕಾರಣಕ್ಕೆ, ಫಲಿತಾಂಶದ ಮೇಲೆ ದೇಶದ ಕಣ್ಣೇ ನೆಟ್ಟಿದೆ.

ವಿಧಾನಸಭೆಯ 224 ಕ್ಷೇತ್ರಗಳ ಪ್ರತಿನಿಧಿಗಳ ಆಯ್ಕೆಗೆ ಬುಧವಾರ (ಏಪ್ರಿಲ್ 10) ಮತದಾನ ನಡೆದಿತ್ತು. 5.07 ಕೋಟಿ ಮತದಾರರಲ್ಲಿ 3.67 ಕೋಟಿ ಮಂದಿ ಮತಚಲಾಯಿಸಿದ್ದರು. 2,615 ಅಭ್ಯರ್ಥಿಗಳು ಕಣದಲ್ಲಿದ್ದು, ಜನರ ವಿಶ್ವಾಸಗೆದ್ದು ಯಾರು ವಿಧಾನಸಭೆ ಪ್ರವೇಶಿಸಲಿದ್ದಾರೆ ಎಂಬುದು ಹೊರಬೀಳಲಿದೆ.

ಕಾಂಗ್ರೆಸ್ ಪಕ್ಷವು ಅತ್ಯಧಿಕ ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿ ಅಧಿಕಾರದ ಗದ್ದುಗೆಯ ಸಮೀಪಕ್ಕೆ ಬರಲಿದೆ ಎಂದು ಹೆಚ್ಚಿನ ಮತದಾನೋತ್ತರ ಸಮೀಕ್ಷೆಗಳು ಹೇಳಿವೆ. ಆದರೆ, ನಿಚ್ಚಳ ಬಹುಮತದ ಸಾಧ್ಯತೆಯನ್ನು ಹೆಚ್ಚಿನ ಸಮೀಕ್ಷೆಗಳ ಫಲಿತಾಂಶಗಳು ಅಲ್ಲಗಳೆದಿವೆ. ಹೀಗಾಗಿ 2018ರ ಚುನಾವಣೆಯಂತೆ ಮತ್ತೆ ಅತಂತ್ರ ಸ್ಥಿತಿ ನಿರ್ಮಾಣವಾಗಬಹುದೇ ಎಂಬ ಚರ್ಚೆಯೂ ರಾಜ್ಯದಲ್ಲಿ ಬಿರುಸಾಗಿದೆ.

ಕಾಂಗ್ರೆಸ್ ನಾಯಕರು ಸ್ಪಷ್ಟ ಬಹುಮತದ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಬಿಜೆಪಿ ಕೂಡ ಅಧಿಕಾರದಲ್ಲಿ ಮುಂದುವರಿಯುವುದಾಗಿ ಹೇಳುತ್ತಿದೆ. ಅತಂತ್ರ ಸ್ಥಿತಿ ನಿರ್ಮಾಣವಾಗಲಿದೆ ಎಂದು ಹೇಳಿರುವ ಜೆಡಿಎಸ್ ನಾಯಕ ಎಚ್‌.ಡಿ. ಕುಮಾರಸ್ವಾಮಿ, ಎರಡೂ ಪಕ್ಷಗಳಿಗೆ ಮೈತ್ರಿಯ ಮುಕ್ತ ಆಹ್ವಾನ ನೀಡಿದ್ದಾರೆ. ಬಿಜೆಪಿಗೆ ದಕ್ಷಿಣ ಭಾರತದಲ್ಲಿ ಅಧಿಕಾರದ ಹೆಬ್ಬಾಗಿಲು ಎಂದೇ ಪರಿಗಣಿತವಾಗಿರುವ ಕರ್ನಾಟಕ ವಿಧಾನಸಭೆಯ ಚುನಾವಣೆಯ ಫಲಿತಾಂಶ ಏನಾಗಲಿದೆ ಎಂಬುದು ದೇಶದಾದ್ಯಂತ ಚರ್ಚೆಯ ಪ್ರಮುಖ ವಿಷಯವಾಗಿದೆ.

ಮತ ಎಣಿಕೆಗೂ ಮುನ್ನವೇ ಮೂರೂ ಪ್ರಮುಖ ಪಕ್ಷಗಳನ್ನು ಪಕ್ಷಾಂತರದ ಭೀತಿ ಆವರಿಸಿಕೊಂಡಿದೆ.

8ನೇ ಪುಟ ನೋಡಿ

ಮತ ಎಣಿಕೆ ಆರಂಭ ಬೆಳಿಗ್ಗೆ 8 ರಿಂದ

- 36 ಎಣಿಕೆ ಕೇಂದ್ರಗಳು
- 306 ಎಣಿಕೆ ಕೊಠಡಿಗಳು
- 4,256 ಎಣಿಕೆ ಮೇಜುಗಳು
- 13,796 ಮತ ಎಣಿಕೆ ಸಿಬ್ಬಂದಿ

ಚುನಾವಣೆ ಫಲಿತಾಂಶದ ಕ್ಷಣ ಕ್ಷಣದ ಮಾಹಿತಿ, ವಿಶ್ಲೇಷಣೆ, ತಾಜಾ ಸುದ್ದಿ, ವಿಶೇಷ ಸುದ್ದಿಗಳಿಗಾಗಿ www.Prajavani.net ನೋಡುತ್ತಾ ಇರಿ

ಸಿಬಿಎಸ್‌ಇ ಬೆಂಗಳೂರಿಗೆ ಎರಡನೇ ಸ್ಥಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿಯ (ಸಿಬಿಎಸ್‌ಇ) 10 ಮತ್ತು 12ನೇ ತರಗತಿಯ ಫಲಿತಾಂಶ ಶುಕ್ರವಾರ ಪ್ರಕಟವಾಗಿದ್ದು, ತಿರುವನಂತಪುರ ಮತ್ತು ಬೆಂಗಳೂರು ವಿಭಾಗಗಳು ಕ್ರಮವಾಗಿ ಒಂದು ಮತ್ತು ಎರಡನೇ ಸ್ಥಾನ ಪಡೆದಿವೆ.

10ನೇ ತರಗತಿಯ ಶೇ 93.12ರಷ್ಟು ಹಾಗೂ 12ನೇ ತರಗತಿಯ ಶೇ 87.33 ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಬೆಂಗಳೂರು ವಿಭಾಗಗಳಲ್ಲಿ 10ನೇ ತರಗತಿಯ ಶೇ 99.18 ಹಾಗೂ 12ನೇ ತರಗತಿಯ ಶೇ 98.64 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ. 10ನೇ ತರಗತಿಯ ರಾಜ್ಯವಾರು ಸಾಧನೆಯನ್ನು ನೋಡಿದಾಗ ಕರ್ನಾಟಕ ಆರನೇ ಸ್ಥಾನವನ್ನು ಪಡೆದುಕೊಂಡಿದೆ. ಈ ಪರೀಕ್ಷೆಗೆ ಹಾಜರಾದ 74,842 ವಿದ್ಯಾರ್ಥಿಗಳಲ್ಲಿ 74,230 ಮಂದಿ ಪಾಸಾಗಿದ್ದಾರೆ.

12ನೇ ತರಗತಿಯಲ್ಲಿ ರಾಜ್ಯ ಮೂರನೇ ಸ್ಥಾನ ಪಡೆದಿದೆ. ಪರೀಕ್ಷೆ ಬರೆದ 19,468 ವಿದ್ಯಾರ್ಥಿಗಳಲ್ಲಿ 19,203 ಮಂದಿ ಉತ್ತೀರ್ಣರಾಗಿದ್ದಾರೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ



ನಗರದಲ್ಲಿ ಇಂದು

ಉಪನ್ಯಾಸ: 'ಭೂಮಿಗೆ ನಾವೇ ಗೆದ್ದಲು!', ಉಪನ್ಯಾಸಕರು: ನಾಗೇಶ ಹೆಗಡೆ, ಛಾಯಾಚಿತ್ರ ಪ್ರದರ್ಶನ: ನಾಗೇಂದ್ರ ಮುತ್ತಮುರಡು, ಅತಿಥಿ: ಗಣಪತಿ ಎಸ್. ಹೆಗಡೆ, ಆಯೋಜನೆ ಹಾಗೂ ಸ್ಥಳ: ಬೆಳ್ಳಿ ಭವನ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಲೆಕ್ಕಾಧಿಕಾರಿಗಳ ಸಂಘ, ಆನಂದರಾವ್ ವೃತ್ತ, ಬೆಳಿಗ್ಗೆ 9.30

ಭರತನಾಟ್ಯ ರಂಗಪ್ರವೇಶ: ಅನನ್ಯಾ ಸುಬ್ರಮಣ್ಯನ್, ಮುಖ್ಯ ಅತಿಥಿಗಳು: ಎಂ. ಸೂರ್ಯ ಪ್ರಸಾದ್, ಪೂರ್ಣಾ ಸುರೇಶ್, ಆಯೋಜನೆ: ಕಾವ್ಯಶ್ರೀ ಆರ್ಟ್ ಫೌಂಡೇಶನ್, ಸ್ಥಳ: ಶಿವರಾತ್ರೀಶ್ವರ ಸೆಂಟರ್, ಜೆಎಸ್ಎಸ್ ಎಜುಕೇಷನಲ್ ಕಾಂಪ್ಲೆಕ್ಸ್, ಜಯನಗರ 8ನೇ ಹಂತ, ಸಂಜೆ 5

ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ ಕಳುಹಿಸಿ... **nagaradalli_indu@prajavani.co.in**

ಆ್ಯಪ್ ಮೂಲಕ 2 ತಿಂಗಳಲ್ಲಿ 123 ಪ್ರಕರಣ • ತಂಬಾಕು ಉತ್ಪನ್ನಗಳಿಗೆ ಕಡಿವಾಣ ಹಾಕಲು ಕ್ರಮ

ಧೂಮಪಾನ: ಜನರಿಂದಲೇ ದೂರು

• ವರುಣ ಹೆಗಡೆ

ಬೆಂಗಳೂರು: ಸಾರ್ವಜನಿಕ ಸ್ಥಳಗಳಲ್ಲಿ ತಂಬಾಕು ಉತ್ಪನ್ನಗಳನ್ನು ಮಾರಾಟ ಮಾಡುತ್ತಿರುವವರು ಮತ್ತು ಸೇವಿಸುತ್ತಿರುವವರ ವಿರುದ್ಧ ಜನರೇ ದೂರು ದಾಖಲಿಸುತ್ತಿದ್ದು, ಎರಡು ತಿಂಗಳಲ್ಲಿ 123 ಪ್ರಕರಣ ದಾಖಲಾಗಿದೆ.

ತಂಬಾಕು ಉತ್ಪನ್ನಗಳ ಮಾರಾಟ ಮತ್ತು ಸೇವನೆ ತಡೆಗೆ ಆರೋಗ್ಯ ಇಲಾಖೆಯ ರಾಜ್ಯ ತಂಬಾಕು ನಿಯಂತ್ರಣ ಘಟಕ 'ಟೊಬ್ಯಾಕೊ ಮಾನಿಟರಿಂಗ್' ಮೊಬೈಲ್ ಆ್ಯಪ್ ಅಭಿವೃದ್ಧಿಪಡಿಸಿದೆ. ಈ ಆ್ಯಪ್ ಅನ್ನು ಕಳೆದ ಫೆಬ್ರುವರಿಯಲ್ಲಿ ಲೋಕಾರ್ಪಣೆ ಮಾಡಲಾಗಿತ್ತು. ಸಾರ್ವಜನಿಕರು ತಮ್ಮ ಮೊಬೈಲ್ ಮೂಲಕ ಛಾಯಾಚಿತ್ರ ತೆಗೆದು, ಅಪ್ಲೋಡ್ ಮಾಡುವ ಅವಕಾಶ ಇದರಲ್ಲಿ ಇದೆ. ಈ ಛಾಯಾಚಿತ್ರದ ಆಧಾರದಲ್ಲಿ ರಾಜ್ಯ ತಂಬಾಕು ನಿಯಂತ್ರಣ ಘಟಕ ಪ್ರಕರಣ ದಾಖಲಿಸಿಕೊಳ್ಳುತ್ತಿದೆ.

ದೂರಿನ ಆಧಾರದಲ್ಲಿ ಜಿಲ್ಲಾ ತಂಬಾಕು ನಿಯಂತ್ರಣ ತಂಡ ಸ್ಥಳಕ್ಕೆ ಭೇಟಿ ನೀಡಿ, ಕೋಟ್ಪಾ ಕಾಯಿದೆ ಅನುಸಾರ ಕ್ರಮ ಕೈಗೊಳ್ಳುತ್ತಿದೆ. ದಾಖಲಾದ ಪ್ರಕರಣಗಳಲ್ಲಿ ಹೆಚ್ಚಿನವು ಬೆಂಗಳೂರಿನಿಂದಲೇ ವರದಿಯಾಗಿವೆ. ಈ ಕಾರ್ಯಕ್ಕೆ ವೈದ್ಯಾಧಿಕಾರಿ, ಪೊಲೀಸ್ ಅಧಿಕಾರಿ ಸೇರಿ 7 ಸದಸ್ಯರ ತಂಡ ರಚಿಸಲಾಗಿದೆ.

ದೂರು ದಾಖಲು ಸುಲಭ

ಗೂಗಲ್ ಪ್ಲೇ ಸ್ಟೋರ್‌ನಲ್ಲಿ 'ಟೊಬ್ಯಾಕೊ ಮಾನಿಟರಿಂಗ್' ಆ್ಯಪ್ ಲಭ್ಯವಿದೆ. ಈ ಆ್ಯಪ್ ಮೂಲಕ ಸುಲಭವಾಗಿ ದೂರು ದಾಖಲಿಸುವ ಅವಕಾಶ ನೀಡಲಾಗಿದೆ. ನಿಗದಿತ ಸ್ಥಳದಿಂದ ಸೆಲ್ಫಿ ಕೂಡ ಅಪ್ಲೋಡ್ ಮಾಡಬಹುದಾಗಿದೆ. ದಾಖಲಾದ ಪ್ರಕರಣ ಯಾವ ಹಂತದಲ್ಲಿದೆ ಎಂಬ ಮಾಹಿತಿಯೂ ದೊರೆಯುತ್ತದೆ. ನಿಗದಿತ ಸ್ಥಳದ ಫೋಟೊದೊಂದಿಗೆ ದೂರು ದಾಖಲಿಸಿದ ಬಳಿಕ ಆ್ಯಪ್‌ನಲ್ಲಿ ದೂರಿಗೆ ಸಂಬಂಧಿಸಿದ ಕೆಲವೊಂದು ಪೂರಕ ಮಾಹಿತಿ ಸಲ್ಲಿಸುವ ಅವಕಾಶವಿದೆ. ದೂರು ನೀಡಿದವರ ಮಾಹಿತಿಯನ್ನು ತಂಬಾಕು ನಿಯಂತ್ರಣ ತಂಡ ಗೌಪ್ಯವಾಗಿ ಇಡಲಿದೆ.



ಆ್ಯಪ್ ಜಿಪಿಎಸ್ ತಂತ್ರಜ್ಞಾನ ಆಧರಿಸಿದೆ. ಹೀಗಾಗಿ, ಛಾಯಾಚಿತ್ರ ತೆಗೆದ ಸ್ಥಳ ಸ್ವಯಂ ಚಾಲಿತವಾಗಿ ದಾಖಲಾಗುತ್ತಿದೆ. ಕೋಟ್ಪಾ ಕಾಯ್ದೆ ಉಲ್ಲಂಘಿಸಿ, ತಂಬಾಕು ಉತ್ಪನ್ನಗಳನ್ನು ಮಾರಾಟ ಮಾಡುತ್ತಿರುವ ಪ್ರತಿ ವ್ಯಕ್ತಿಗೆ ₹ 200ರಂತೆ ದಂಡ ವಿಧಿಸಲಾಗುತ್ತಿದೆ. ಧೂಮಪಾನ ಹಾಗೂ ತಂಬಾಕು ಉತ್ಪನ್ನಗಳನ್ನು ಸೇವಿಸುತ್ತಿರುವವರಿಗೂ ಇಷ್ಟೇ ಮೊತ್ತದ ದಂಡ ಹಾಕಲಾಗುತ್ತಿದೆ.

ಸೇವನೆ ಹೆಚ್ಚಳ: ತಂಬಾಕು ಉತ್ಪನ್ನಗಳ ಬಳಕೆಯು ಕ್ಯಾನ್ಸರ್ ಸೇರಿ ವಿವಿಧ ಅನಾರೋಗ್ಯ ಸಮಸ್ಯೆಗಳಿಗೆ ಕಾರಣವಾಗುತ್ತಿದೆ. ಆರೋಗ್ಯ ಇಲಾಖೆ ಮಾಹಿತಿ ಪ್ರಕಾರ ರಾಜ್ಯದ 7 ಕೋಟಿ ಜನರಲ್ಲಿ 3 ಕೋಟಿ ಮಂದಿ ತಂಬಾಕು ಉತ್ಪನ್ನಗಳನ್ನು ಸೇವಿಸುತ್ತಿದ್ದಾರೆ. ಈ ಉತ್ಪನ್ನಗಳನ್ನು ಬಳಸುತ್ತಿರುವ ಶೇ 22.8ರಷ್ಟು ವಯಸ್ಕರಲ್ಲಿ ಶೇ 8.8ರಷ್ಟು ಮಂದಿ ಧೂಮಪಾನಿಗಳಾಗಿದ್ದಾರೆ. ಶೇ 16.3ರಷ್ಟು ಮಂದಿ ಧೂಮಪಾನರಹಿತ ತಂಬಾಕು ಉತ್ಪನ್ನಗಳನ್ನು ಬಳಸುತ್ತಿದ್ದಾರೆ. ತಂಬಾಕು ಉತ್ಪನ್ನ ಬಳಸುವ ಯುವಜನರಲ್ಲಿ ಹೆಚ್ಚಿನವರು 15 ವರ್ಷದವರಾಗಿದ್ದಾರೆ.

'ತಂಬಾಕು ಉತ್ಪನ್ನಗಳ ಸೇವನೆಯಿಂದ ಕ್ಯಾನ್ಸರ್ ಸೇರಿ ವಿವಿಧ ಅನಾರೋಗ್ಯ ಸಮಸ್ಯೆ ಕಾಡುವ ಸಾಧ್ಯತೆ ಇದೆ. ಇಂತಹ ತಂಬಾಕು ಉತ್ಪನ್ನಗಳನ್ನು ಕೆಲವೆಡೆ ಕಾನೂನು ಬಾಹಿರವಾಗಿ ಮಾರಾಟ ಮಾಡಲಾಗುತ್ತಿದೆ. ಅದೇ ರೀತಿ, ಕೆಲವರು ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ಮಾಡುತ್ತಿದ್ದಾರೆ. ಇದಕ್ಕೆ ಕಡಿವಾಣ ಹಾಕಲು ತಂತ್ರಜ್ಞಾನವನ್ನು ಬಳಸಿಕೊಳ್ಳಲಾಗಿದೆ. ದೂರಿನ ಅನುಸಾರ ಕ್ರಮ ಕೈಗೊಳ್ಳಲಾಗುತ್ತಿದೆ' ಎಂದು ಇಲಾಖೆಯ ಜಂಟಿ ಆಯುಕ್ತ (ಯೋಜನೆ) ಡಾ. ಸೆಲ್ವರಾಜನ್ ತಿಳಿಸಿದರು.

ಎಲ್‌ಎಲ್‌ಬಿ ಕೋರ್ಸ್: ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಕಾನೂನು ಕಾಲೇಜಿನಲ್ಲಿ ಐದು ವರ್ಷದ ಬಿಎ ಎಲ್‌ಎಲ್‌ಬಿ (ಹಾನರ್ಸ್) ಕೋರ್ಸ್‌ನ 2023-24ನೇ ಸಾಲಿನ ಪ್ರವೇಶಾತಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ದ್ವಿತೀಯ ಪಿಯುನಲ್ಲಿ ಶೇ 45ರಷ್ಟು ಅಂಕ ಪಡೆದಿರುವವರು ಅರ್ಜಿ ಸಲ್ಲಿಸಬಹುದು. ಅರ್ಜಿಗಳನ್ನು ವೆಬ್‌ಸೈಟ್ www.bangaloreuniversity.ac.in ಅಥವಾ www.ulcbangalore.com ಮೂಲಕ ಪಡೆಯಬಹುದು. ಅರ್ಜಿ ಸಲ್ಲಿಸಲು ಮೇ 26 ಕೊನೆ ದಿನ.

ವಿಳಾಸ: ಪ್ರಾಂಶುಪಾಲರು, ವಿಶ್ವವಿದ್ಯಾಲಯ ಕಾನೂನು ಕಾಲೇಜು, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ ಆವರಣ, ಬೆಂಗಳೂರು-560056.
ಮಾಹಿತಿಗೆ: 080-22961172ಗೆ ಸಂಪರ್ಕಿಸಿ.



ಪ್ರತಿಭಟನೆ ಕೇರಳದಲ್ಲಿ ಯುವವೈದ್ಯೆ ಡಾ. ವಂದನಾ ದಾಸ್ ಅವರ ಹತ್ಯೆಯನ್ನು ಖಂಡಿಸಿ ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ವಿದ್ಯಾರ್ಥಿಗಳು ನಗರದಲ್ಲಿ ಗುರುವಾರ ಮೇಣದಬತ್ತಿ ಬೆಳಗಿಸಿ ಪ್ರತಿಭಟಿಸಿದರು. –ಪ್ರಜಾವಾಣಿ ಚಿತ್ರ

ಪೂರ್ಣಪ್ರಜ್ಞಾ ಶಾಲೆಗೆ ಶೇ 100 ಫಲಿತಾಂಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಗಸಂದ್ರದಲ್ಲಿರುವ ವಿಡಿಯ ಪೂರ್ಣಪ್ರಜ್ಞಾ ಶಾಲೆಯ ವಿದ್ಯಾರ್ಥಿನಿ ಶ್ರೀರಕ್ಷಾ ಶಾನಭೋಗ್ (ಶೇ 99.52) ಪಡೆದು ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ರಾಜ್ಯಕ್ಕೆ ನಾಲ್ಕನೇ ಸ್ಥಾನ ಪಡೆದಿದ್ದಾರೆ.

ಈ ಶಾಲೆಯು 25 ವರ್ಷಗಳಿಂದ ಶೇ 100ರಷ್ಟು ಫಲಿತಾಂಶ ಪಡೆಯುತ್ತಾ ಬಂದಿದೆ. 30ಕ್ಕೂ ಹೆಚ್ಚು ವಿದ್ಯಾರ್ಥಿಗಳು 600ಕ್ಕೂ ಹೆಚ್ಚು ಅಂಕ ಪಡೆದಿದ್ದು, ಅನೇಕರು ಹಲವು ವಿಷಯಗಳಲ್ಲಿ ನೂರಕ್ಕೆ ನೂರು ಅಂಕಗಳನ್ನು ಪಡೆದು ಉತ್ತಮ ಸಾಧನೆ ಮಾಡಿದ್ದಾರೆ ಎಂದು ಕಾಲೇಜಿನ ಪ್ರಾಂಶುಪಾಲರು ಮತ್ತು ಆಡಳಿತ ಮಂಡಳಿ ತಿಳಿಸಿದೆ.



ಶ್ರೀರಕ್ಷಾ ಶಾನಭೋಗ (ಶೇ 99.52)



ಚೈತನ್ಯಾ ಎನ್. ಭಟ್, (ಶೇ 99.36)



ಪೋಷಿತಾ ಪಿ.ಕೆ., (ಶೇ 99.36)



ಮೇಘಾ ಎಂ.ಡಿ., (ಶೇ 98.24), ಸೇಂಟ್ ಮೇರಿ ಕಾನ್ವೆಂಟ್ ಪ್ರೌಢಶಾಲೆ, ಮಾರೇನಹಳ್ಳಿ, ವಿಜಯನಗರ

ಹಂಪಿನಗರದ ಕ್ಯಾಮ್ಲಿನ್ ಪ್ರೌಢಶಾಲೆ



ಮೆರಿನ್ ವಿನ್ಸಂಟ್ (ಶೇ 99.36)



ಅಮೂಲ್ಯ ಎಂ.ಆರ್. (ಶೇ 96.48)



ಸಂಜನಾ ಆರ್. (ಶೇ 96.16)



ನಯನಾ ಎಂ. (ಶೇ 95.52)



ಹರ್ಷಿಣಿ ಆರ್. ಹಾವನೂರ್ (ಶೇ 94.72)



ಬಾನವಲ್ಲಿ ಕೆ. ಅಯ್ಯಂಗಾರ್ (ಶೇ 93.28)



ದೀಪಕ್ ಎಸ್. (ಶೇ 91.52)



ತ್ರೇಯಿ ಆರ್. ಎನ್. (ಶೇ 90.08)



ವಂದಿತಾ ಪಿ. (ಶೇ 90.08)

ತುಂಗಾನಗರದ ಶ್ರೀವಿದ್ಯಾ ಪಬ್ಲಿಕ್ ಪ್ರೌಢಶಾಲೆ



ಆರ್. ನಿರಂಜನ್ (ಶೇ 98)



ಮೋಹಿನಿ ಲೋದ್ವಾಲ್ (ಶೇ 95.2)

ಮನೆಯಲ್ಲೇ ಮಲಗಿದ್ದ ಮಗು ಠಾಣೆ ಮೆಟ್ಟಿಲೇರಿದ್ದ ಪೋಷಕರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆಯಲ್ಲಿದ್ದ ಬಟ್ಟೆಗಳ ರಾಶಿ ಕೆಳಗೆ ಮಗು ಮಲಗಿದ್ದನ್ನು ಗಮನಿಸದೇ, 'ಮಗು ಅಪಹರಣವಾಗಿದೆ' ಎಂದು ಪೋಷಕರು ಠಾಣೆ ಮೆಟ್ಟಿಲೇರಿದ್ದ ಘಟನೆ ಕೆ.ಆರ್. ಪುರದಲ್ಲಿ ನಡೆದಿದೆ.

ಮಗುವನ್ನು ಹುಡುಕಿಕೊಟ್ಟಿರುವ ಕೆ.ಆರ್.ಪುರ ಠಾಣೆ ಪೊಲೀಸರು, ಪೋಷಕರ ಬೇಜವಾಬ್ದಾರಿ ವರ್ತನೆಗೆ ಅಸಮಾಧಾನ ವ್ಯಕ್ತಪಡಿಸಿ ಎಚ್ಚರಿಕೆ ನೀಡಿದ್ದಾರೆ.

'ಕೆ.ಆರ್. ಪುರ ಬಳಿಯ ಜನತಾ ಕಾಲೊನಿ ನಿವಾಸಿ ಮೀನಾ, ತಮ್ಮ 6 ವರ್ಷದ ಹೆಣ್ಣು ಮಗು ಜೊತೆ ವಾಸವಿದ್ದಾರೆ. ಗುರುವಾರ ರಾತ್ರಿ 7.30 ಗಂಟೆ ಸುಮಾರಿಗೆ ಠಾಣೆಗೆ ಬಂದಿದ್ದ ಮೀನಾ, 'ಮನೆಯಲ್ಲಿ ಆಟವಾಡುತ್ತಿದ್ದ ಮಗಳು ಏಕಾಏಕಿ ಕಾಣೆಯಾಗಿದ್ದಾಳೆ. ಯಾರೋ ಅಪಹರಣ ಮಾಡಿಕೊಂಡು ಹೋಗಿದ್ದಾರೆ' ಎಂಬುದಾಗಿ ಗೋಳಾಡಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ದೂರು ಪಡೆದು ತನಿಖೆ ಮುಂದುವರಿಸಿದ್ದ ಪಿಎಸ್ಐ ರಮ್ಯಾ ಹಾಗೂ ಸಿಬ್ಬಂದಿ, ಮಗುವಿಗಾಗಿ ಶೋಧ ಆರಂಭಿಸಿದ್ದರು. ಮನೆಯ ಅಕ್ಕ-ಪಕ್ಕದ ಸ್ಥಳಗಳು, ಪರಿಚಯಸ್ಥರ ಮನೆಗಳು ಹಾಗೂ ಇತರೆಡೆ ಹುಡುಕಾಡಿದ್ದರು. ಯಾವುದೇ ಸುಳಿವು ಸಿಕ್ಕಿರಲಿಲ್ಲ.'


'ಮನೆಯಲ್ಲಿ ಆಟವಾಡುತ್ತಿದ್ದ ಮಗಳು ಕಾಣೆಯಾಗಿದ್ದಾಳೆ' ಎಂಬುದಾಗಿ ತಾಯಿ ಹೇಳಿಕೆ ನೀಡಿದ್ದರಿಂದ, ಸಿಬ್ಬಂದಿ ಮನೆಯೊಳಗೆ ಹುಡುಕಾಟ ಆರಂಭಿಸಿದ್ದರು. ಇದೇ ಸಂದರ್ಭದಲ್ಲಿ ಬಟ್ಟೆಗಳ ರಾಶಿಯ ಕೆಳಗೆ ಮಗು ಮಲಗಿದ್ದು ಕಂಡಿತ್ತು. ಅದನ್ನು ನೋಡಿ ತಾಯಿ ಹಾಗೂ ಸಿಬ್ಬಂದಿ ನಿಟ್ಟುಸಿರು ಬಿಟ್ಟರು' ಎಂದು ಮೂಲಗಳು ತಿಳಿಸಿವೆ.

ಮೈ ಮೇಲೆ ಬಟ್ಟೆಗಳ ರಾಶಿ ಹಾಕಿದ್ದ ತಾಯಿ: 'ಗುರುವಾರ ಸಂಜೆ ಮನೆಯಲ್ಲಿ ಆಟವಾಡುತ್ತಿದ್ದ ಮಗು, ಬಟ್ಟೆ ಇರಿಸುತ್ತಿದ್ದ ಜಾಗಕ್ಕೆ ಹೋಗಿ ಮಲಗಿತ್ತು. ಅದರ ಮೇಲೆ ಬಟ್ಟೆಯೊಂದು ಬಿದ್ದಿತ್ತು. ಅದನ್ನು ತಾಯಿ ಗಮನಿಸಿರಲಿಲ್ಲ. ಇದರ ನಡುವೆಯೇ ತಾಯಿ, ತೊಳೆದು ಒಣಗಿಸಿದ್ದ ಬಟ್ಟೆಗಳನ್ನು ತಂದು ಮಗುವಿನ ಮೇಲೆ ಹಾಕಿದ್ದರು. ಅವಾಗಲೂ ಮಗುವನ್ನು ನೋಡಿರಲಿಲ್ಲ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಮಗು ಕಾಣದಿದ್ದರಿಂದ ಗಾಬರಿಗೊಂಡಿದ್ದ ತಾಯಿ, ಹಲವೆಡೆ ಹುಡುಕಾಡಿದ್ದರು. ನಂತರವೇ ಠಾಣೆಗೆ ಬಂದಿದ್ದರು. ಸದ್ಯ ಮಗು ಪತ್ತೆಯಾಗಿದ್ದು, ತಾಯಿಗೆ ಬುದ್ಧಿವಾದ ಹೇಳಿ ಕಳುಹಿಸಲಾಗಿದೆ' ಎಂದು ತಿಳಿಸಿವೆ.

ಅಪಘಾತ: ಬಿಬಿಎಂಪಿ ಪರಿವೀಕ್ಷಕ ಸಾವು

ಪ್ರಜಾವಾಣಿ ವಾರ್ತೆ



ಕೆ.ಎಲ್. ಉಮೇಶ್

ಬೆಂಗಳೂರು: ನಾಯಂಡಹಳ್ಳಿ ಜಂಕ್ಷನ್ ಬಳಿ ಏಪ್ರಿಲ್ 26ರಂದು ಸಂಭವಿಸಿದ್ದ ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡಿದ್ದ ಕೆ.ಎಲ್. ಉಮೇಶ್ (59) ಅವರು ಕಿಮ್ಸ್ ಆಸ್ಪತ್ರೆಯಲ್ಲಿ ಗುರುವಾರ ಮೃತಪಟ್ಟಿದ್ದಾರೆ.

ರಾಜರಾಜೇಶ್ವರಿನಗರದ ನಿವಾಸಿ ಉಮೇಶ್, 134ನೇ ವಾರ್ಡ್ ಬಾಪೂಜಿನಗರ ವಿಜಯನಗರ ಉಪ ವಿಭಾಗದಲ್ಲಿ ಗುತ್ತಿಗೆ ಆಧಾರದಲ್ಲಿ ಪರಿವೀಕ್ಷಕರಾಗಿ ಕೆಲಸ ಮಾಡುತ್ತಿದ್ದರು. ಅವರಿಗೆ ಪತ್ನಿ ಹಾಗೂ ಮಗ ಇದ್ದಾರೆ.

'ಉಮೇಶ್ ಅವರು ಕೆಲಸಕ್ಕೆಂದು ವಾರ್ಡ್ ಕಚೇರಿಯತ್ತ ದ್ವಿಚಕ್ರ ವಾಹನದಲ್ಲಿ ಹೊರಟಿದ್ದರು. ಇದೇ ಸಂದರ್ಭದಲ್ಲಿ ಬೊಲೆರೊ ವಾಹನ, ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದಿತ್ತು. ರಸ್ತೆಗೆ ಬಿದ್ದು ತೀವ್ರ ಗಾಯಗೊಂಡಿದ್ದ ಉಮೇಶ್ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು' ಎಂದು ಬ್ಯಾಟರಾಯನಪುರ ಸಂಚಾರ ಠಾಣೆ ಪೊಲೀಸರು ಹೇಳಿದರು.

'ಬೊಲೆರೊ ವಾಹನ ಚಾಲಕನ ನಿರ್ಲಕ್ಷ್ಯ ಹಾಗೂ ಅತಿ ವೇಗದ ಚಾಲನೆಯಿಂದ ಅಪಘಾತ ಸಂಭವಿಸಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ. ಚಾಲಕನನ್ನು ಬಂಧಿಸಲಾಗಿದೆ' ಎಂದರು.

ಸುದ್ದಿ 2 ನಿಮಿಷ

3 ಕ್ಷೇತ್ರಗಳಲ್ಲಿ ಬಾಜಿ ಕಟ್ಟಲು ಆಹ್ವಾನ: ಇಬ್ಬರ ಬಂಧನ

ಕೊಳ್ಳೇಗಾಲ: ಇಲ್ಲಿನ ಬಸ್ತೀಪುರ ಬಡಾವಣೆಯಲ್ಲಿ ತಮ್ಮ ಇಷ್ಟದ ಅಭ್ಯರ್ಥಿಗಳು ಗೆಲ್ಲುತ್ತಾರೆ ಎಂದು ಲಕ್ಷಾಂತರ ರೂಪಾಯಿ ನಗದು ಹಿಡಿದುಕೊಂಡು ಬಾಜಿಗೆ ಆಹ್ವಾನಿಸಿದ್ದ ಇಬ್ಬರನ್ನು ನಗರ ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

ಮಲ್ಲೇಶ್ ಹಾಗೂ ರಾಜು ಬಂಧಿತರು.

ಮಲ್ಲೇಶ್ ತರಕಾರಿ ವ್ಯಾಪಾರಿಯಾಗಿದ್ದು ₹8 ಲಕ್ಷ ನಗದು ಕಟ್ಟು ಹಿಡಿದುಕೊಂಡು ಪಂಥಕ್ಕೆ ಆಹ್ವಾನಿಸಿದ್ದರು.

'ವರುಣ ಕ್ಷೇತ್ರದಲ್ಲಿ ಸಿದ್ದರಾಮಯ್ಯ ಪರವಾಗಿ ₹3 ಲಕ್ಷ, ಹನೂರಿನಲ್ಲಿ ಜೆಡಿಎಸ್ ಅಭ್ಯರ್ಥಿ ಮಂಜುನಾಥ್ ಪರವಾಗಿ ₹ 3 ಲಕ್ಷ ಹಾಗೂ ಕೊಳ್ಳೇಗಾಲದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಎ.ಆರ್. ಕೃಷ್ಣಮೂರ್ತಿ ಪರವಾಗಿ ₹ 2 ಲಕ್ಷ ಹಣ ಕಟ್ಟುತ್ತೇನೆ. ಬನ್ನಿ ಬಾಜಿ ಕಟ್ಟಿ' ಎಂದು ಮಲ್ಲೇಶ್ ಆಹ್ವಾನಿಸಿದ್ದರು.

ಚುನಾವಣಾಧಿಕಾರಿಗಳ ಮೌಖಿಕ ಸೂಚನೆ ಮೇರೆಗೆ ಠಾಣೆ ಪೊಲೀಸರು ಜೂಜಾಟಕ್ಕೆ ಪ್ರಚೋದನೆ ನೀಡಿದ್ದಾರೆಂದು ಇಬ್ಬರನ್ನು ಬಂಧಿಸಿದ್ದಾರೆ.

'ಕೃಷಿ ವಿಸ್ತರಣಾ ಕಾರ್ಯಕರ್ತರ ಕೊರತೆ'



ಬೆಂಗಳೂರು: 'ರಾಜ್ಯದಲ್ಲಿ 700 ರೈತರಿಗೆ ಒಬ್ಬ ಕೃಷಿ ವಿಸ್ತರಣಾ ಕಾರ್ಯಕರ್ತ ಇರಬೇಕಿತ್ತು. ಆದರೆ, 1,600 ರಿಂದ 1,700 ರೈತರಿಗೆ ಒಬ್ಬ ಕೃಷಿ ವಿಸ್ತರಣಾ ಕಾರ್ಯಕರ್ತ ಇದ್ದಾರೆ' ಎಂದು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಡಾ.ಎಸ್.ವಿ. ಸುರೇಶ ಹೇಳಿದರು.

ಕೃಷಿ ವಿಶ್ವವಿದ್ಯಾಲಯ, ಬೆಂಗಳೂರಿನ ರೈತ ತರಬೇತಿ ಸಂಸ್ಥೆ ಆಶ್ರಯದಲ್ಲಿ ನಡೆದ ಕಾರ್ಯಕ್ರಮದಲ್ಲಿ 'ಕೃಷಿ ಪರಿಕರ ಮಾರಾಟಗಾರರಿಗೆ ಕೃಷಿ ವಿಸ್ತರಣಾ ಸೇವೆ'ಯಲ್ಲಿ ಡಿಪ್ಲೊಮಾ (ದೇಸಿ) ಪ್ರಮಾಣ ಪತ್ರ ವಿತರಿಸಿ ಮಾತನಾಡಿದರು.

'ವಿಸ್ತರಣಾ ಕಾರ್ಯಕರ್ತರ ಕೊರತೆ ಸರಿದೂಗಿಸಲು ಸ್ಥಳೀಯಮಟ್ಟದಲ್ಲಿ ರೈತರಿಗೆ ಸದಾಕಾಲ ಸಿಗುವ ಕೃಷಿ ಪರಿಕರ ಮಾರಾಟಗಾರರಿಗೆ ಸೂಕ್ತ ತರಬೇತಿ ನೀಡಬೇಕು. ಆಗ ಸಮಸ್ಯೆ ಸ್ವಲ್ಪ ನೀಗಬಹುದು' ಎಂದು ಸಲಹೆ ನೀಡಿದರು.

'ದೇಶದಲ್ಲಿ ಶೇ 55ರಷ್ಟಿರುವ ಕೃಷಿಕರಿಗೆ ಸಕಾಲದಲ್ಲಿ ತಂತ್ರಜ್ಞಾನ ವರ್ಗಾಯಿಸಲು ಕೃಷಿ ವಿಶ್ವವಿದ್ಯಾಲಯ ಮತ್ತು ಕೃಷಿ ಇಲಾಖೆ ಸಿಬ್ಬಂದಿಗೆ ಸಾಧ್ಯವಾಗುತ್ತಿಲ್ಲ. ಪ್ರಪಂಚದ ವಿವಿಧೆಡೆಯ ಕೃಷಿ ಪ್ರಗತಿಯ ಬಗ್ಗೆ ಸ್ಥಳದಲ್ಲಿಯೇ ತಿಳಿದುಕೊಳ್ಳಲು ಸಾಮಾಜಿಕ ಜಾಲತಾಣಗಳ ಬಳಕೆ ಅನಿವಾರ್ಯ' ಎಂದು ಹೇಳಿದರು.

ವಿಸ್ತರಣಾ ನಿರ್ದೇಶಕ ಡಾ.ವಿ.ಎಲ್.ಮಧುಪ್ರಸಾದ್ ಮಾತನಾಡಿ, 'ಕೃಷಿ ಪರಿಕರ ಮಾರಾಟಗಾರರು, ತಮ್ಮ ಪರಿಕರಗಳನ್ನು ಮಧ್ಯವರ್ತಿಗಳ ಮೂಲಕ ಮಾರಾಟ ಮಾಡುವ ಬದಲು ರೈತರ ಜತೆಗೆ ನೇರ ಸಂಪರ್ಕ ಸಾಧಿಸಬೇಕು. ರೈತರು ಮತ್ತು ಕೃಷಿ ಪರಿಕರಗಳ ಮಾರಾಟಗಾರರ ನಡುವೆ ಸಮನ್ವಯತೆ ಇರಬೇಕು' ಎಂದು ಹೇಳಿದರು.

ಕಸಾಪ: 51 ದತ್ತಿ ಪ್ರಶಸ್ತಿಗೆ ಪುಸ್ತಕ ಆಹ್ವಾನ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) 2022ನೇ ಸಾಲಿನ 51 ದತ್ತಿ ಪ್ರಶಸ್ತಿಗಳಿಗೆ ಪುಸ್ತಕಗಳನ್ನು ಆಹ್ವಾನಿಸಿದೆ.

2022ರ ಜನವರಿ 1ರಿಂದ ಡಿಸೆಂಬರ್ 31ರೊಳಗೆ ಪ್ರಕಟಗೊಂಡ ಪುಸ್ತಕಗಳನ್ನು ಲೇಖಕರು ಹಾಗೂ ಪ್ರಕಾಶಕರು ಕಳುಹಿಸಬಹುದಾಗಿದೆ. ಪ್ರಶಸ್ತಿಗಳು ₹ 250ರಿಂದ ₹10 ಸಾವಿರದವರೆಗೆ ನಗದು ಬಹುಮಾನ ಹೊಂದಿವೆ.

ಬಿಸಲೇರಿ ಜಯಣ್ಣ ಮತ್ತು ಬಿಸಲೇರಿ ಬ್ರದರ್ಸ್ ದತ್ತಿ, ವಿ. ಗೌರಮ್ಮ ಗಂಗಾಧರಯ್ಯ ಮತ್ತು ಮಕ್ಕಳ ಸಾಹಿತ್ಯ ಪ್ರಶಸ್ತಿ, ಭಾರತಿ ಮೋಹನ ಕೋಟಿ ದತ್ತಿ, ಹೊಳಲ್ಕೆರೆ ಪದ್ಮಾವತಮ್ಮ ಶ್ರೀಪಾಲಶೆಟ್ಟಿ ಡಾ. ಮದನಕೇಸರಿ ಜೈನ ದತ್ತಿ ಹಾಗೂ ಪೂಜ್ಯ ಸ್ವಸ್ತಿಶ್ರೀ ದೇವೇಂದ್ರಕೀರ್ತಿ ದತ್ತಿ ಪ್ರಶಸ್ತಿ ತಲಾ ₹ 10 ಸಾವಿರ ನಗದು ಒಳಗೊಂಡಿವೆ.

ಪ್ರಶಸ್ತಿಗೆ ಪುಸ್ತಕ ಸಲ್ಲಿಸುವವರು ಕನ್ನಡ ಸಾಹಿತ್ಯ ಪರಿಷತ್ತಿನ ಆಜೀವ ಸದಸ್ಯತ್ವವನ್ನು ಕಡ್ಡಾಯವಾಗಿ ಹೊಂದಿರಬೇಕು. ಇಲ್ಲವಾದಲ್ಲಿ ಸದಸ್ಯತ್ವ ಪಡೆದು, ಪುಸ್ತಕ ಕಳುಹಿಸಬಹುದು. ಈಗಾಗಲೇ ನಿರ್ದಿಷ್ಟ ದತ್ತಿ ಪ್ರಶಸ್ತಿಯಲ್ಲಿ ಒಂದು ಬಾರಿ ಪ್ರಶಸ್ತಿ ಪುರಸ್ಕೃತರಾಗಿದ್ದರೆ ಅದೇ ವಿಭಾಗಕ್ಕೆ ಮತ್ತೆ ಭಾಗವಹಿಸುವಂತಿಲ್ಲ. ಆದರೆ, ಬೇರೆ ದತ್ತಿ ವಿಭಾಗಕ್ಕೆ ಪುಸ್ತಕಗಳನ್ನು ಕಳುಹಿಸಲು ಅವಕಾಶವಿರುತ್ತದೆ.

ಒಬ್ಬರು ಎಷ್ಟು ಪ್ರಕಾರದ ದತ್ತಿ ವಿಭಾಗಕ್ಕಾದರೂ ಪುಸ್ತಕಗಳನ್ನು ಕಳುಹಿಸಬಹುದು. ಪ್ರತಿ ವಿಭಾಗಕ್ಕೂ ಪ್ರತ್ಯೇಕ ಮೂರು ಪುಸ್ತಕಗಳನ್ನು ಸಲ್ಲಿಸಬೇಕು. ಪ್ರಶಸ್ತಿಯ ಪರಿಶೀಲನೆಗೆ ಕಳುಹಿಸಿರುವ ಪುಸ್ತಕಗಳನ್ನು ಹಿಂದಿರುಗಿಸುವುದಿಲ್ಲ ಎಂದು ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದ್ದಾರೆ.

ಪುಸ್ತಕಗಳ ಪ್ರತಿಗಳು ಯಾವ ದತ್ತಿಗೆ ಎನ್ನುವುದನ್ನು ಪುಸ್ತಕದ ಮೊದಲ ಪುಟದಲ್ಲಿ ಸ್ಪಷ್ಟವಾಗಿ ಬರೆದು, ಜೂನ್ 24ರೊಳಗೆ ಗೌರವ ಕಾರ್ಯದರ್ಶಿಗಳು, ಕನ್ನಡ ಸಾಹಿತ್ಯ ಪರಿಷತ್ತು, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-560 018 ಈ ವಿಳಾಸಕ್ಕೆ ಕಳುಹಿಸಬೇಕು. ವಿವರಕ್ಕೆ www.kasapa.inಗೆ ಭೇಟಿ ನೀಡಬಹುದು. **ಸಂಪರ್ಕಕ್ಕೆ:** 080 26612991 ಅಥವಾ 26623584

ತಾಂತ್ರಿಕ ತೊಂದರೆ ನೆಪ ಹೇಳುತ್ತಿರುವ ಕಾಲೇಜು ಶಿಕ್ಷಣ ಇಲಾಖೆ

ಪದವಿ ಪ್ರವೇಶಕ್ಕೆ ವಿದ್ಯಾರ್ಥಿಗಳ ಪರದಾಟ

• ಬಾಲಚಂದ್ರ

ಮೈಸೂರು: ರಾಜ್ಯದಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆ ಫಲಿತಾಂಶ ಪ್ರಕಟವಾಗಿ 20 ದಿನವಾದರೂ ತಾಂತ್ರಿಕ ಸಮಸ್ಯೆಯಿಂದ ಸರ್ಕಾರಿ ಪದವಿ ಕಾಲೇಜುಗಳಲ್ಲಿ ದಾಖಲಾತಿ ಪ್ರಕ್ರಿಯೆ ಕುಂಟುತ್ತಿದೆ.

ರಾಜ್ಯದ ಯಾವುದೇ ಭಾಗದಲ್ಲಿ ಖಾಸಗಿ, ಸರ್ಕಾರಿ ಪದವಿ ಕಾಲೇಜಿಗೆ ದಾಖಲಾಗಲು ಕಾಲೇಜು ಶಿಕ್ಷಣ ಇಲಾಖೆಯ https://uucms.karnataka.gov.in/Login/OnlineStudentRegistrationForm ವೆಬ್‌ಸೈಟ್ ಮೂಲಕ ಅರ್ಜಿ ಸಲ್ಲಿಸಬೇಕು. ವಿದ್ಯಾರ್ಥಿಗಳ ವೈಯಕ್ತಿಕ ವಿವರ, ವಿಳಾಸ, ಮೊಬೈಲ್ ಸಂಖ್ಯೆಯೊಂದಿಗೆ ದಾಖಲಿಸಬೇಕು. ನಂತರ ಬರುವ ಒಟಿಪಿ ನಮೂದಿಸಬೇಕು. ಬಳಿಕ ಭಾವಚಿತ್ರ, ಡಿಜಿಟಲ್ ಸಹಿ ಸೇರ್ಪಡೆ, ಮೀಸಲಾತಿ, ಹಿಂದಿನ ವಿದ್ಯಾಭ್ಯಾಸದ ವಿವರಗಳನ್ನು ನೀಡಬೇಕು.

ಆದರೆ, 'ವೈಯಕ್ತಿಕ ವಿವರ ದಾಖಲಿಸುವಷ್ಟರಲ್ಲಿ ಸರ್ವರ್ ಕೈ ಕೊಡುವುದು ಮಾಮೂಲಿಯಾಗಿದೆ. ಕೆಲವೊಮ್ಮೆ ಮಾಹಿತಿ ದಾಖಲಿಸಿದರೂ ನೆಟ್‌ವರ್ಕ್ ಸಮಸ್ಯೆಯಿಂದ ಮೊಬೈಲ್‌ಗೆ ಒಟಿಪಿ ಬರುವುದಿಲ್ಲ. ಸೈಬರ್ ಕೇಂದ್ರಕ್ಕೆ ಹೋಗಿ ಗಂಟೆಗಟ್ಟಲೆ ಕೂತರೂ, ಸಮಸ್ಯೆ ಕಾಡುತ್ತಿರುತ್ತದೆ' ಎಂದು ಹುಣಸೂರು ತಾಲ್ಲೂಕಿನ ಚಿಲ್ಕುಂದದ ವಿದ್ಯಾರ್ಥಿನಿ ಸರಿತಾ ಅಳಲು ತೋಡಿಕೊಂಡರು.

'ಇದರಿಂದ ಕನಿಷ್ಠ ಮೂರು ಬಾರಿ ಅರ್ಜಿ ಹಾಕಲು ಪ್ರಯತ್ನಿಸಿದರೂ ಸಾಧ್ಯವಾಗಿಲ್ಲ. ಆನ್‌ಲೈನ್ ವ್ಯವಸ್ಥೆ ಬಳಕೆದಾರರ ಸ್ನೇಹಿಯಾಗಿಲ್ಲ' ಎಂದು ದೂರಿದರು.

ಹಣ ಪಡೆದು ಅವಕಾಶ: 'ಖಾಸಗಿ ಕಾಲೇಜುಗಳೂ ಇದೇ ಮಾದರಿಯಲ್ಲಿ ವಿದ್ಯಾರ್ಥಿಗಳನ್ನು ದಾಖಲಿಸಿಕೊಳ್ಳಬೇಕು ಎಂಬುದು ನಿಯಮ. ಆದರೆ, ಕಾಲೇಜಿನ ಆಡಳಿತ ಮಂಡಳಿಗಳು ವಿದ್ಯಾರ್ಥಿಗಳಿಂದ ಹಣ ಮುಂಗಡ ಪಡೆದು, ಸೀಟು ಖಾತ್ರಿಪಡಿಸಿ, ತಮ್ಮ ಸಿಬ್ಬಂದಿ ಮೂಲಕವೇ ದಾಖಲಾತಿ ಪ್ರಕ್ರಿಯೆ ನಡೆಸುತ್ತಿವೆ.

'ಪ್ರವೇಶ ಪ್ರಕ್ರಿಯೆಯಲ್ಲಿ ವಿಶ್ವವಿದ್ಯಾಲಯ, ಕಾಲೇಜು ಹಂತ ಹಾಗೂ ಯುಯುಸಿಎಂಎಸ್ ಮೂರು ಹಂತದಲ್ಲಿ ಮಾಹಿತಿ ದಾಖಲಿಸಬೇಕು. ಈ ಸಮಸ್ಯೆ ಬಗ್ಗೆ ಅಧಿಕಾರಿಗಳ ಗಮನಕ್ಕೆ ತಂದರೂ ಪ್ರಯೋಜನವಾಗಿಲ್ಲ. ತಾತ್ಕಲಿಕವಾಗಿ ಹಣ ಪಡೆದು, ಮಕ್ಕಳ ಪ್ರವೇಶಾತಿ ಖಾತ್ರಿಪಡಿಸಿಕೊಳ್ಳುತ್ತಿದ್ದೇವೆ' ಎಂದು ಕಾಲೇಜೊಂದರ ಆಡಳಿತ ಮಂಡಳಿ ಸದಸ್ಯರೊಬ್ಬರು ತಿಳಿಸಿದರು.

ಮುಖ್ಯಾಂಶಗಳು

- ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಕೆಗೆ ಕಿರಿಕಿರಿ
- ಆಫ್‌ಲೈನ್ ಮೂಲಕ ಅವಕಾಶ ನೀಡಲು ಮನವಿ
- ತಾಂತ್ರಿಕ ತೊಂದರೆ ಬಗೆಹರಿಸಲು ವಿದ್ಯಾರ್ಥಿಗಳ ಒತ್ತಾಯ

ತಾಂತ್ರಿಕ ತೊಂದರೆ ಗಮನಕ್ಕೆ ಬಂದಿದೆ. ನಮ್ಮ ವ್ಯಾಪ್ತಿಯಲ್ಲಿ ಏನೂ ಮಾಡಲು ಸಾಧ್ಯವಿಲ್ಲ. ಕೇಂದ್ರ ಕಚೇರಿಯಲ್ಲೇ ಸರಿಪಡಿಸಬೇಕು
ಡಾ.ಗಿರಿಧರ್ ರಾವ್ ಎಂ.ಎಸ್., ಜಂಟಿ ನಿರ್ದೇಶಕ, ಕಾಲೇಜು ಶಿಕ್ಷಣ ಇಲಾಖೆ, ಮೈಸೂರು

ಮೇ 30ಗಳ ಕೊನೆವರೆಗೂ ಅವಕಾಶ

'ಮೈಸೂರಿನ ಮಹಾರಾಣಿ ವಿಜ್ಞಾನ ಕಾಲೇಜಿನಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯಡಿ ಬಿಎಸ್ಸಿಗೆ 1,100, ಬಿಸಿಎ ಪದವಿಗೆ 200 ಸೀಟುಗಳಿವೆ. ಮೈಸೂರು, ಮಂಡ್ಯ, ಹಾಸನ, ಚಾಮರಾಜನಗರದ ಜೊತೆಗೆ, ಬೇರೆ ಜಿಲ್ಲೆಗಳ ವಿದ್ಯಾರ್ಥಿನಿಯರು ಇಲ್ಲಿ ಪ್ರವೇಶ ಪಡೆಯಲು ಹಾತೊರೆಯುತ್ತಾರೆ. ಆದರೆ, ಇದುವರೆಗೂ 100 ಮಂದಿಯಷ್ಟೇ ಅರ್ಜಿ ಸಲ್ಲಿಸಿದ್ದಾರೆ' ಎಂದು ಪ್ರಾಂಶುಪಾಲ ಡಾ.ಡಿ.ರವಿ 'ಪ್ರಜಾವಾಣಿ'ಗೆ ತಿಳಿಸಿದರು.

'ಹಲವರು ಸಿಇಟಿ, ನೀಟ್ ಪರೀಕ್ಷೆ ಬರೆದು ಅಲ್ಲಿ ಸೀಟು ಸಿಗದಿದ್ದರೆ, ಮತ್ತೆ ವಿಜ್ಞಾನ ಪದವಿಗೆ ಸೇರಲು ಬರುತ್ತಾರೆ. ಹೀಗಾಗಿ ಮೇ ಕೊನೆವರೆಗೂ ಅವಕಾಶ ಕಲ್ಪಿಸಲಾಗುವುದು' ಎಂದರು.

ಅರ್ಜಿ ಆಹ್ವಾನ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಐದು ವರ್ಷದ ಬಿ.ಎಸ್ಸಿ, ಆನರ್ಸ್ ಮತ್ತು ಎಂ.ಎಸ್ಸಿ. ಭೂಗೋಳ ವಿಜ್ಞಾನ ಮತ್ತು ಜಿಯೊ ಇನ್ಫರ್ಮ್ಯಾಟಿಕ್ಸ್ ಕೋರ್ಸ್‌ನ 2023–24ನೇ ಸಾಲಿನ ಪ್ರವೇಶಾತಿಗೆ ಅರ್ಜಿ ಆಹ್ವಾನಿಸಿದೆ.

ವೆಬ್‌ಸೈಟ್ https://uucms.karnataka.gov.in/ ಮೂಲಕ ಪಡೆಯಬಹುದು. ಅರ್ಜಿ ಸಲ್ಲಿಸಲು ಮೇ 22 ಕೊನೆ ದಿನ. **ಮಾಹಿತಿಗೆ:** www.bangaloreuniversity.ac.in

ನಿಧನ ವಾರ್ತೆ

ಪ್ರೊ. ಜಯಸಿಂಹ



ಬೆಂಗಳೂರು: ಶಿಕ್ಷಣ ತಜ್ಞ ಪ್ರೊ. ಜಯಸಿಂಹ(75) ಅವರು ಬೆಂಗಳೂರಿನಲ್ಲಿ ಇತ್ತೀಚೆಗೆ ನಿಧನರಾಗಿದ್ದಾರೆ.

ಮೈಸೂರಿನ ಬನುಮಯ್ಯ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದ ಅವರು, ನಿವೃತ್ತಿ ನಂತರ ಬೆಂಗಳೂರಿನಲ್ಲಿ ನೆಲೆಸಿದ್ದರು. ಅವರಿಗೆ ಪತ್ನಿ, ಪುತ್ರ, ಪುತ್ರಿ ಇದ್ದಾರೆ.

ಕೌಟುಂಬಿಕ ವ್ಯಾಜ್ಯ: ಸಮನ್ಸ್ ಜಾರಿ ಪ್ರಕ್ರಿಯೆ ದೋಷ ಎತ್ತಿಹಿಡಿದ ಹೈಕೋರ್ಟ್

ವಿಚ್ಛೇದನ ಆದೇಶ ರದ್ದು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಕೌಟುಂಬಿಕ ನ್ಯಾಯಾಲಯದ ಆದೇಶ ರದ್ದುಪಡಿಸಿದ ಹೈಕೋರ್ಟ್
- ಏಕಪಕ್ಷೀಯ ನಿರ್ಧಾರ ಸರಿಯಲ್ಲ: ನ್ಯಾಯಪೀಠ ಅಭಿಪ್ರಾಯ



ಬೆಂಗಳೂರು: ದಂಪತಿ ಮಧ್ಯದ ಕೌಟುಂಬಿಕ ವ್ಯಾಜ್ಯವೊಂದರಲ್ಲಿ, ಪ್ರತಿವಾದಿ ಪತ್ನಿಗೆ ಸೂಕ್ತ ರೀತಿಯಲ್ಲಿ ಸಮನ್ಸ್ ಜಾರಿಗೊಳಿಸದೆ ಏಕಪಕ್ಷೀಯ-ವಾಗಿ ವಿಚಾರಣೆ ನಡೆಸಿ ವಿಚ್ಛೇದನದ ಡಿಕ್ರಿ ಮಂಜೂರು ಮಾಡಿದ್ದ ಕೌಟುಂಬಿಕ ನ್ಯಾಯಾಲಯದ ಆದೇಶವನ್ನು ಹೈಕೋರ್ಟ್ ರದ್ದುಪಡಿಸಿದೆ.

ಕೌಟುಂಬಿಕ ನ್ಯಾಯಾಲಯದ ಆದೇಶ ಪ್ರಶ್ನಿಸಿ ಮಹಿಳೆಯೊಬ್ಬರು ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಅಲೋಕ್ ಆರಾಧೆ ಹಾಗೂ ನ್ಯಾಯಮೂರ್ತಿ ವಿಜಯ್ ಕುಮಾರ್ ಎ. ಪಾಟೀಲ್ ಅವರಿದ್ದ ವಿಭಾಗೀಯ ನ್ಯಾಯಪೀಠ ಮಾನ್ಯ ಮಾಡಿದೆ.

‘ಪತ್ನಿಗೆ ನೋಂದಾಯಿತ ಅಂಚೆ (ಆರ್‌ಪಿಎಡಿ) ಮೂಲಕ ಸಮನ್ಸ್ ಜಾರಿ ಮಾಡಲಾಗಿದೆ. ಅದರ ಲಕೋಟೆಯ ಮೇಲಿದ್ದ, ‘ಸ್ವೀಕರಿಸಿಲ್ಲ’ ಎಂಬ ಹಿಂಬರಹದ ಆಧಾರದಡಿ ವಿಚಾರಣಾ ನ್ಯಾಯಾಲಯವು ಪ್ರಕರಣವನ್ನು ಏಕ ಪಕ್ಷೀಯವಾಗಿ ನಿರ್ಧರಿಸಿದೆ. ಸಮನ್ಸ್ ನೀಡುವ ವಿಚಾರದಲ್ಲಿ ಕೌಟುಂಬಿಕ ನ್ಯಾಯಾಲಯ ಅನುಸರಿಸಿರುವ ಈ ಕಾರ್ಯವಿಧಾನ ಸರಿಯಲ್ಲ’ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

‘ನಾಗರಿಕ ಪ್ರಕ್ರಿಯಾ ಸಂಹಿತೆಯ ನಿಯಮ 17ರ ಪ್ರಕಾರ ಪ್ರತಿವಾದಿಯು ಸಮನ್ಸ್ ಸ್ವೀಕೃತಿಗೆ ಸಹಿ ಹಾಕದಿದ್ದರೆ, ಸಮನ್ಸ್ ನೀಡುವ ಸಂದರ್ಭದಲ್ಲಿ ಮನೆಯಲ್ಲಿ ಇರದಿದ್ದರೆ, ಅಲ್ಲಿಗೆ ತೆರಳಿದ್ದ ಅಧಿಕಾರಿ ಪ್ರತಿವಾದಿ ಮನೆಯ ಮುಂಬಾಗಿಲಿನ ಮೇಲೆ ಅಥವಾ ಮನೆಯ ಯಾವುದಾದರೂ ಒಂದು ಎದ್ದು ಕಾಣಬಹುದಾದ ಜಾಗದಲ್ಲಿ ಸಮನ್ಸ್ ಪ್ರತಿ ಅಂಟಿಸಿ, ಮೂಲ ಪ್ರತಿಯನ್ನು ಕೋರ್ಟ್‌ಗೆ ಹಿಂದಿರುಗಿಸಬೇಕು. ಯಾವ ಕಾರಣಕ್ಕೆ ಹೀಗೇ ಮಾಡಲಾಗಿದೆ ಎಂಬುದನ್ನು, ಮನೆಯನ್ನು ಗುರುತಿಸಿದ ವ್ಯಕ್ತಿಯ ಹೆಸರು, ವಿಳಾಸ ಮತ್ತು ಯಾರ ಉಪಸ್ಥಿತಿಯಲ್ಲಿ ಸಮನ್ಸ್ ಕಾಪಿಯನ್ನು ಅಂಟಿಸಲಾಗಿದೆ ಎಂಬ ಬಗ್ಗೆ ವರದಿ ಸಲ್ಲಿಸಬೇಕು. ಆದರೆ, ಪ್ರಕರಣದಲ್ಲಿ ಈ ಪ್ರಕ್ರಿಯೆಗಳು ಪಾಲನೆಯಾಗಿಲ್ಲ’ ಎಂದು ನ್ಯಾಯಪೀಠ ಆದೇಶದಲ್ಲಿ ವಿವರಿಸಿದೆ.

ಕೌಟುಂಬಿಕ ನ್ಯಾಯಾಲಯ ದಂಪತಿಗೆ ವಿಚ್ಛೇದನ ನೀಡಿ 2017ರ ಏಪ್ರಿಲ್ 28ರಂದು ಹೊರಡಿಸಿದ್ದ ಡಿಕ್ರಿ ಆದೇಶವನ್ನು ರದ್ದು-ಪಡಿಸಿರುವ ನ್ಯಾಯಪೀಠ, ಪ್ರಕರಣವ-ನ್ನು ಪುನಃ ವಿಚಾರಣಾ ನ್ಯಾಯಾಲಯಕ್ಕೆ ಹಿಂದಿರುಗಿಸಿದೆ.

‘ಉಭಯ ಪಕ್ಷಗಾರರಿಗೂ ಸೂಕ್ತ ಅವಕಾಶ ನೀಡಿ ಆರು ತಿಂಗಳ ಒಳಗೆ ಪ್ರಕರಣವನ್ನು ಕಾನೂನು ಪ್ರಕಾರ ನಿರ್ಧರಿಸಬೇಕು’ ಎಂದು ಆದೇಶಿಸಿದೆ. ದಂಪತಿ 2006ರಲ್ಲಿ ಇಸ್ಲಾಂ ಧರ್ಮದಂತೆ ಮದುವೆಯಾಗಿದ್ದರು. ‘ಪತ್ನಿಗೆ ಅಕ್ರಮ ಸಂಬಂಧವಿದೆ’ ಎಂದು ಆರೋಪಿಸಿದ್ದ ಪತಿ, ವಿಚ್ಛೇದನ ಕೋರಿ ಕೌಟುಂಬಿಕ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದರು.

ಎಂಬಿಬಿಎಸ್: ಅಧಿಕ ಶುಲ್ಕ ಸಂಗ್ರಹ ಮರುಪಾವತಿಗೆ ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸರ್ಕಾರ ನಿಗದಿಪಡಿಸಿದ ಪ್ರಮಾಣಕ್ಕಿಂತಲೂ ಹೆಚ್ಚುವರಿಯಾಗಿ ಎಂಬಿಬಿಎಸ್ ಪದವಿಯ 70 ವಿದ್ಯಾರ್ಥಿಗಳಿಂದ ಸಂಗ್ರಹಿಸಿರುವ ಶುಲ್ಕವನ್ನು ಮರು ಪಾವತಿ ಮಾಡಿ’ ಎಂದು ನಗರದ ರಾಜರಾಜೇಶ್ವರಿ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಗೆ ಹೈಕೋರ್ಟ್ ನಿರ್ದೇಶಿಸಿದೆ.

‘ಹೆಚ್ಚುವರಿಯಾಗಿ ಸಂಗ್ರಹಿಸಿದ ಶುಲ್ಕವನ್ನು ಮರುಪಾವತಿಸುವಂತೆ ಕಾಲೇಜಿಗೆ ನಿರ್ದೇಶಿಸಬೇಕು’ ಎಂದು ಕೋರಿ ಜೆ. ಬಿಂದುಶ್ರೀ ಸೇರಿದಂತೆ 70 ವಿದ್ಯಾರ್ಥಿಗಳು ಸಲ್ಲಿಸಿದ್ದ ಮೂರು ಪ್ರತ್ಯೇಕ ರಿಟ್ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಅಲೋಕ್ ಆರಾಧೆ ಮತ್ತು ವಿಜಯ ಕುಮಾರ ಎ. ಪಾಟೀಲ ಅವರಿದ್ದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಇತ್ತೀಚೆಗೆ ಆದೇಶಿಸಿದೆ.

‘ಅರ್ಜಿದಾರ ವಿದ್ಯಾರ್ಥಿಗಳಿಂದ 2017-2018, 2018-2019, 2019-2020 ಮತ್ತು 2020-2021ನೇ ಸಾಲಿನವರೆಗೆ ರಾಜ್ಯ ಸರ್ಕಾರ ಮತ್ತು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ನಿಗದಿಪಡಿಸಿದ್ದ ಪ್ರಮಾಣಕ್ಕಿಂತಲೂ ಹೆಚ್ಚುವರಿಯಾಗಿ ಶುಲ್ಕ ಸಂಗ್ರಹಿಸಿದ್ದೀರಿ. ಈ ಶುಲ್ಕವನ್ನು ವಾರ್ಷಿಕ ಶೇ 6ರಷ್ಟು ಬಡ್ಡಿ ದರಲ್ಲಿ ಎರಡು ತಿಂಗಳ ಒಳಗೆ ಹಿಂದಿರುಗಿಸಿ’ ಎಂದು ನ್ಯಾಯಪೀಠ ನಿರ್ದೇಶಿಸಿದೆ.

‘2023ರ ಫೆಬ್ರುವರಿಯಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದ ಅರ್ಜಿದಾರ ವಿದ್ಯಾರ್ಥಿಗಳು, ರಾಜ್ಯ ಸರ್ಕಾರ ಮತ್ತು ಕೆಇಎ ನಿಗದಿಪಡಿಸಿದ್ದ ಪ್ರಮಾಣಕ್ಕಿಂ-ತಲೂ ಅಧಿಕ ಶುಲ್ಕವನ್ನು ಪ್ರವೇಶಾತಿ ಸಂದರ್ಭದಲ್ಲಿ ಕಾಲೇಜು ನಮ್ಮಿಂದ ಸಂಗ್ರಹಿಸಿದೆ. ಆ ಹಣವನ್ನು ಮರು ಪಾವತಿಸಲು ನಿರ್ದೇಶಿಸಬೇಕು’ ಎಂದು ಕೋರಿದ್ದರು.

ಇಬ್ಬರು ಮಕ್ಕಳೊಂದಿಗೆ ತಂದೆ ಆತ್ಮಹತ್ಯೆ

ಆನೇಕಲ್: ಜಿಗಣಿ ಪೊಲೀಸ್ ಠಾಣೆ ವ್ಯಾಪ್ತಿಯ ಕೊಪ್ಪ ಸಮೀಪದ ನಿರ್ಮಾಣ್ ಬಡಾವಣೆಯಲ್ಲಿ ವ್ಯಕ್ತಿಯೊಬ್ಬರು ತನ್ನ ಇಬ್ಬರು ಮಕ್ಕಳನ್ನು ನೇಣು ಹಾಕಿ ತಾನು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಪತ್ನಿಯ ವರ್ತನೆಯಿಂದ ಬೇಸತ್ತು ಮಕ್ಕಳೊಂದಿಗೆ ಪ್ರತ್ಯೇಕವಾಗಿ ವಾಸಿಸುತ್ತಿದ್ದ ಬೆಂಗಳೂರಿನ ಬಿಟಿಎಂ ಬಡಾವಣೆಯ ನಿವಾಸಿ ಹರೀಶ್ (35) ಮಕ್ಕಳಾದ ಪ್ರಜ್ವಲ್(6) ಮತ್ತು ರಿಷಬ್ (4) ಬುಧವಾರ ಮನೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಪತ್ನಿಯೊಂದಿಗೆ ಜಗಳವಾಡಿ ಕೊಂಡು ಹದಿನೈದು ದಿನಗಳ ಹಿಂದೆಯಷ್ಟೇ ಬಂದು ಇಲ್ಲಿನ ಬಾಡಿಗೆ ಮನೆಯಲ್ಲಿ ಹರೀಶ್ ಮಕ್ಕಳೊಂದಿಗೆ ವಾಸವಿದ್ದರು.

ಪೋಕ್ಸೊ ಕೃತ್ಯ ಸಮಾಜ ವಿರೋಧಿ: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಕ್ಕಳ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯ ಪ್ರಕರಣಗಳು ಸಮಾಜಕ್ಕೇ ವಿರುದ್ಧವಾದ ಕೃತ್ಯಗಳು‘ ಎಂದು ತೀವ್ರ ಕಳವಳ ವ್ಯಕ್ತಪಡಿಸಿರುವ ಹೈಕೋರ್ಟ್, ಪೋಕ್ಸೊ ಪ್ರಕರಣದ ಆರೋಪಿಯನ್ನು ನಿರಪರಾಧಿ ಎಂದು ತೀರ್ಮಾನಿಸಿದ್ದ ವಿಚಾರಣಾ ನ್ಯಾಯಾಲಯದ ಆದೇಶವನ್ನು ರದ್ದುಪಡಿಸಿದೆ.

ಪೋಕ್ಸೊ ಪ್ರಕರಣವೊಂದರ-ಲ್ಲಿ ಆರೋಪಿಯನ್ನು ಖುಲಾಸೆಗೊ-ಳಿಸಿದ್ದ ವಿಚಾರಣಾ ನ್ಯಾಯಾಲಯದ ಕ್ರಮವನ್ನು ಪ್ರಶ್ನಿಸಿ ರಾಜ್ಯ ಪ್ರಾಸಿಕ್ಯೂಷನ್ ಸಲ್ಲಿಸಿದ್ದ ಕ್ರಿಮಿನಲ್ ಮೇಲ್ಮನವಿ-ಯನ್ನು ನ್ಯಾಯಮೂರ್ತಿ ಕೆ.ಎಸ್. ಮುದಗಲ್ ಮತ್ತು ನ್ಯಾಯಮೂರ್ತಿ ರಾಜೇಂದ್ರ ಬದಾಮಿಕರ್ ಅವರಿದ್ದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ.

‘ಪ್ರಕರಣದಲ್ಲಿ ಆರೋಪಿ ಸಂತ್ರಸ್ತೆ-ಯನ್ನು ಮದುವೆಯಾಗಿದ್ದು, ದಂಪತಿಗೆ ಒಂದು ಮಗು ಇದ್ದರೂ ಶಿಕ್ಷೆಯಿಂದ ವಿನಾಯಿತಿ ಪಡೆಯಲು ಆತ ಅರ್ಹನಲ್ಲ’ ಎಂಬ ಅಭಿಪ್ರಾಯ ವ್ಯಕ್ತಪಡಿಸಿರುವ ನ್ಯಾಯಪೀಠ ಆರೋಪಿಗೆ 7 ವರ್ಷ ಜೈಲು ಶಿಕ್ಷೆ ಮತ್ತು ₹ 50 ಸಾವಿರ ದಂಡ ವಿಧಿಸಿದೆ.

‘ಘಟನೆ ನಡೆದಾಗ ಸಂತ್ರಸ್ತೆಗೆ 14, ಆರೋಪಿಗೆ 27 ವರ್ಷವಾಗಿತ್ತು. ಘಟನೆ ನಂತರ ಸಂತ್ರಸ್ತೆ ಆರೋಪಿಯ ಜೊತೆಗಿರಲು ಒಪ್ಪಿದ್ದರೂ, ಇದನ್ನು ಒಪ್ಪಿತ ಲೈಂಗಿಕ ಕ್ರಿಯೆ ಎನ್ನಲಾಗದು. ಅಪ್ರಾಪ್ತ ವಯಸ್ಸಿನವರನ್ನು ರಕ್ಷಣೆ ಮಾಡುವುದು ಇಡೀ ಸಮಾಜದ ಕರ್ತವ್ಯವಾಗಿರುತ್ತದೆ’ ಎಂದು ನ್ಯಾಯಪೀಠ ಹೇಳಿದೆ.

‘ಆರೋಪಿಗೆ ಶಿಕ್ಷೆ ವಿಧಿಸಲು ಸಾಕ್ಷ್ಯಾ-ಧಾರಗಳಿದ್ದರೂ, ವಿಚಾರಣಾ ನ್ಯಾಯಾಲಯ, ಅಪಹರಣ, ಲೈಂಗಿಕ ದೌರ್ಜನ್ಯ ಸಾಬೀತಾಗಿಲ್ಲ ಎಂಬ ಅಭಿಪ್ರಾಯಕ್ಕೆ ಬಂದಿರುವುದು ಪೋಕ್ಸೊ ಕಾಯ್ದೆ-2012ರ ಕಲಂ 4, 6, 29, 30 ಹಾಗೂ ಸುಪ್ರೀಂ ಕೋರ್ಟ್‌ನ ತೀರ್ಪುಗಳಿಗೆ ವಿರುದ್ಧವಾಗಿದೆ’ ಎಂದು ಆದೇಶದಲ್ಲಿ ವಿವರಿಸಿದೆ.

ಹಳಿ ಅಳವಡಿಕೆ ಕಾಮಗಾರಿ ಪ್ರಗತಿ • ಬೆನ್ನಿಗಾನಹಳ್ಳಿ ನಿಲ್ದಾಣದಲ್ಲಿ ಟ್ರ್ಯಾಕ್, ಸಿಗ್ನಲಿಂಗ್ ಅಂತಿಮ ಹಂತಕ್ಕೆ

ಜೂನ್‌ಗೆ ಬೈಯಪ್ಪನಹಳ್ಳಿ–ಕೆ.ಆರ್.ಪುರ ಮೆಟ್ರೊ

• ವಿಜಯಕುಮಾರ್ ಎಸ್.ಕೆ.



ಬೈಯಪ್ಪನಹಳ್ಳಿ ಕೆ.ಆರ್.ಪುರ ನಡುವಿನ ಮೆಟ್ರೊ ರೈಲು ಮಾರ್ಗದ ಕಾಮಗಾರಿ ಪ್ರಗತಿಯಲ್ಲಿರುವುದು –ಪ್ರಜಾವಾಣಿ ಚಿತ್ರ

ಬೆಂಗಳೂರು: ವೈಟ್‌ಫೀಲ್ಡ್‌ಗೆ ನೇರ ಮೆಟ್ರೊ ರೈಲು ಸಂಚಾರಕ್ಕೆ ತೊಡಕಾಗಿರುವ ಬೈಯಪ್ಪನಹಳ್ಳಿ ಮತ್ತು ಕೆ.ಆರ್.ಪುರ ನಡುವಿನ ಬಾಕಿ ಕಾಮಗಾರಿ ಚುರುಕಿನಿಂದ ನಡೆಯುತ್ತಿದೆ. ನಿರೀಕ್ಷೆಯಂತೆ ಜೂನ್‌ನಲ್ಲಿ ರೈಲುಗಳ ಕಾರ್ಯಾಚರಣೆಗೆ ಇಳಿಸಲು ಬಿಎಂಆರ್‌ಸಿಎಲ್ ಸಿದ್ಧತೆ ನಡೆಸಿದೆ.

ಬೆನ್ನಿಗಾನಹಳ್ಳಿ ಬಳಿ ಹಾದು ಹೋಗಿರುವ ಬೆಂಗಳೂರು– ಸೇಲಂ ರೈಲ್ವೆ ಮಾರ್ಗದ ಮೇಲ್ಭಾಗದಲ್ಲಿ ತೆರೆದ ವೆಬ್ ಗರ್ಡರ್ ಅಳವಡಿಕೆ ಮಾಡುವುದು ಸವಾಲಿನ ಕೆಲಸವಾಗಿತ್ತು. ಅದನ್ನು ಫೆಬ್ರುವರಿಯಲ್ಲೇ ಯಶಸ್ವಿಯಾಗಿ ಪೂರ್ಣಗೊಳಿಸಿದೆ.

65 ಮೀಟರ್ ಉದ್ದ ಮತ್ತು 550 ಟನ್ ತೂಕದ ಈ ವೆಬ್ ಗರ್ಡರ್ ಅನ್ನು ರೈಲು ಹಳಿಯಿಂದ 8.45 ಮೀಟರ್ ಎತ್ತರದಲ್ಲಿ ಯಶಸ್ವಿಯಾಗಿ ಅಳವಡಿಸಲಾಗಿದೆ. ಬೆಂಗಳೂರು ಮೆಟ್ರೊ ರೈಲು ಮಾರ್ಗದಲ್ಲಿ ಅಳವಡಿಕೆಯಾದ ಅತಿ ಉದ್ದದ ವೆಬ್ ಗರ್ಡರ್ ಇದಾಗಿದೆ.

ಪ್ರಜಾವಾಣಿ ವಿಶೇಷ

ಈ ಕಾಮಗಾರಿ ಪೂರ್ಣಗೊಂಡ ನಂತರ ವಯಡಕ್ಟ್ ಕಾಮಗಾರಿ ಆರಂಭಿಸಲಾಗಿತ್ತು. ಈ ಕಾಮಗಾರಿಯೂ ಪೂರ್ಣಗೊಂಡಿದ್ದು, ಹಳಿ ಅಳವಡಿಕೆ ಕಾಮಗಾರಿ ಪ್ರಗತಿಯಲ್ಲಿದೆ. ಬೆನ್ನಿಗಾನಹಳ್ಳಿ ನಿಲ್ದಾಣದಲ್ಲಿ ಟ್ರ್ಯಾಕ್, ಸಿಗ್ನಲಿಂಗ್ ಮತ್ತು ನಿಲ್ದಾಣದ ಕಾಮಗಾರಿ ಅಂತಿಮ ಹಂತಕ್ಕೆ ಬಂದಿದೆ. ಎಲ್ಲ ಕಾಮಗಾರಿಗಳು ಈ ತಿಂಗಳ ಅಂತ್ಯಕ್ಕೆ ಪೂರ್ಣಗೊಳ್ಳುವ ಸಾಧ್ಯತೆ ಇದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಹೇಳುತ್ತಾರೆ.

ಪ್ರಯಾಣಿಕರ ಕೊರತೆ: ವೈಟ್‌ಫೀಲ್ಡ್ ತನಕ ಮೆಟ್ರೊ ರೈಲು ಸಂಚರಿಸುತ್ತಿದ್ದರೂ, ಮಧ್ಯದಲ್ಲಿ ಎರಡು ಕಿಲೋ ಮೀಟರ್ ಕಾಮಗಾರಿ ಬಾಕಿ ಇರುವುದರಿಂದ ಪ್ರಯಾಣಿಕರ ಆಸಕ್ತಿ ಕಡಿಮೆಯಾಗಿದೆ.

ನಿತ್ಯ 1 ಲಕ್ಷಕ್ಕೂ ಹೆಚ್ಚು ಜನ ಈ ಮಾರ್ಗದಲ್ಲಿ ಪ್ರಯಾಣ ಮಾಡಲಿದ್ದಾರೆ ಎಂದು ಅಧಿಕಾರಿಗಳು ಅಂದಾಜಿಸಿದ್ದರು. ಆದರೆ, ಸದ್ಯ 20 ಸಾವಿರ ಜನ ಮಾತ್ರ ಪ್ರಯಾಣ ಮಾಡುತ್ತಿದ್ದಾರೆ. ಎರಡೂ ನಿಲ್ದಾಣಗಳ ನಡುವೆ ಬಸ್‌ನಲ್ಲಿ ಪ್ರಯಾಣ ಮಾಡಿ ಮತ್ತೆ ಮೆಟ್ರೊ ರೈಲು ಹತ್ತಬೇಕಿರುವುದು ಜನರಲ್ಲಿ ಮೆಟ್ರೊ ರೈಲು ಪ್ರಯಾಣಕ್ಕೆ ನಿರಾಸಕ್ತಿ ಮೂಡುವಂತೆ ಮಾಡಿದೆ.

ಬೈಯಪ್ಪನಹಳ್ಳಿ–ಕೆ.ಆರ್.ಪುರ ನಡುವಿನ ಕಾಮಗಾರಿ ಪೂರ್ಣಗೊಂಡರೆ ನಿರೀಕ್ಷೆಯಂತೆ ಜನ ಪ್ರಯಾಣ ಮಾಡಲಿದ್ದಾರೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಹೇಳುತ್ತಾರೆ.

ಹಳದಿ ಮಾರ್ಗ: ಎರಡು ಹಂತದಲ್ಲಿ ಕಾರ್ಯಾಚರಣೆ

ಆರ್.ವಿ.ರಸ್ತೆ–ಬೊಮ್ಮಸಂದ್ರ ನಡುವಿನ ಹಳದಿ ಮಾರ್ಗವನ್ನು ಎರಡು ಹಂತದಲ್ಲಿ ಪೂರ್ಣಗೊಳಿಸಲು ಬಿಎಂಆರ್‌ಸಿಎಲ್ ಉದ್ದೇಶಿಸಿದೆ.

ಆರ್.ವಿ.ರಸ್ತೆಯಿಂದ ಸಿಲ್ಕ್‌ಬೋರ್ಡ್ ತನಕ ಮೊದಲ ಹಂತದಲ್ಲಿ, ಎರಡನೇ ಹಂತದಲ್ಲಿ ಸಿಲ್ಕ್‌ಬೋರ್ಡ್‌ನಿಂದ ಬೊಮ್ಮಸಂದ್ರ ತನಕ ರೈಲುಗಳು ಕಾರ್ಯಾಚರಣೆ ಮಾಡಲು ಯೋಜನೆ ರೂಪಿಸಿದೆ. ಆರ್.ವಿ.ರಸ್ತೆಯಿಂದ ಸಿಲ್ಕ್‌ಬೋರ್ಡ್ ನಡುವಿನ ಮಾರ್ಗದಲ್ಲಿ ಸಿವಿಲ್ ಮತ್ತು ನಿಲ್ದಾಣ ಕಾಮಗಾರಿಯೂ ಅಂತಿಮ ಹಂತದಲ್ಲಿದೆ. ಸೆಪ್ಟೆಂಬರ್ ಅಥವಾ ಅಕ್ಟೋಬರ್‌ನಲ್ಲಿ ರೈಲ್ವೆ ಸುರಕ್ಷತಾ ಆಯುಕ್ತರನ್ನು ಆಹ್ವಾನಿಸುವ ಸಾಧ್ಯತೆಯಿದೆ ಎಂದು ಅಧಿಕಾರಿಗಳು ಹೇಳುತ್ತಾರೆ.

ಸಿಲ್ಕ್‌ಬೋರ್ಡ್– ಬೊಮ್ಮಸಂದ್ರ ನಡುವೆ ಮೊದಲ ಹಂತದ ಕಾಮಗಾರಿ ಮುಕ್ತಾಯವಾಗಿದ್ದು, ಸಿಲ್ಕ್‌ಬೋರ್ಡ್ ತನಕ ರೈಲುಗಳ ಕಾರ್ಯಾಚರಣೆ ಆರಂಭಿಸಲಾಗುವುದು ಎಂದು ವಿವರಿಸಿದ್ದಾರೆ.

ಇನ್ನು ಸಿಲ್ಕ್‌ಬೋರ್ಡ್–ಕೆ.ಆರ್.ಪುರ–ಹೆಬ್ಬಾಳ–ವಿಮಾನ ನಿಲ್ದಾಣ ಮಾರ್ಗದ(ನೀಲಿ) ಕಾಮಗಾರಿ ಶೇ 27.78ರಷ್ಟು ಪೂರ್ಣಗೊಂಡಿದೆ. ವಯಡಕ್ಟ್ ಅಳವಡಿಕೆ ಕಾಮಗಾರಿ ಪ್ರಗತಿಯಲ್ಲಿದೆ ಎಂದೂ ಹೇಳಿದರು.

ಸುದ್ದಿ 2 ನಿಮಿಷ

ಸಿಬಿಎಸ್‌ಇ: ಹಲವು ಶಾಲೆಗಳಿಗೆ ಶೇ 100ರಷ್ಟು ಫಲಿತಾಂಶ

ಬೆಂಗಳೂರು: ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿ (ಸಿಬಿಎಸ್‌ಇ) 10 ಹಾಗೂ 12ನೇ ತರಗತಿಗಳ ಫಲಿತಾಂಶವನ್ನು ಶುಕ್ರವಾರ ಪ್ರಕಟಿಸಿದ್ದು, ನಗರದ ಹಲವು ಶಾಲೆಗಳು ಶೇ 100ರಷ್ಟು ಫಲಿತಾಂಶ ಪಡೆದಿವೆ.

ನ್ಯಾಷನಲ್ ಪಬ್ಲಿಕ್ ಸ್ಕೂಲ್ (ಎನ್‌ಪಿಎಸ್), ಎಚ್‌ಎಸ್‌ಆರ್ ಲೇಔಟ್‌ನ ಆದಿತ್ಯ ವಿವೇಕ್ ಗುಲವಾನಿ 12ನೇ ತರಗತಿಯಲ್ಲಿ ಶೇ 99.2 ಅಂಕ ಪಡೆದು ವಾಣಿಜ್ಯ ವಿಭಾಗದಲ್ಲಿ ಮೊದಲ ಸ್ಥಾನ ಪಡೆದಿದ್ದಾರೆ.

ಎಚ್‌ಎಸ್‌ಆರ್ ಲೇಔಟ್‌ನ ಎನ್‌ಪಿಎಸ್ ಶಾಲೆಯ ಅನಂತ ರಾಮನ್ ಸುಬ್ರಹ್ಮಣ್ಯಂ ಅಯ್ಯರ್ ಮತ್ತು ರಾಜಾಜಿನಗರ ಎನ್‌ಪಿಎಸ್ ಶಾಲೆಯ ಸುಸ್ಮಿತ್ ರಾಯ್ ಶೇ 98.4 ಅಂಕಗಳನ್ನು ಗಳಿಸಿ ವಿಜ್ಞಾನ ವಿಭಾಗದಲ್ಲಿ ಮೊದಲಿಗರಾಗಿದ್ದಾರೆ.

ಎಚ್‌ಎಸ್‌ಆರ್ ಲೇಔಟ್‌ನ ಎನ್‌ಪಿಎಸ್ ಶಾಲೆಯ ದಿಯಾ ಶ್ರೀನಿವಾಸನ್, ಬೆಂಗಳೂರು–ಪೂರ್ವದ ದೆಹಲಿ ಪಬ್ಲಿಕ್ ಸ್ಕೂಲ್‌ನ ಸೌಮ್ಯಾ ರಾಮಯ್ಯ ಅವರು ಶೇ 98 ಅಂಕಗಳನ್ನು ಗಳಿಸಿ ಮಾನವಿಕ ವಿಭಾಗದಲ್ಲಿ ಮೊದಲ ಸ್ಥಾನ ಗಳಿಸಿದ್ದಾರೆ.

10ನೇ ತರಗತಿಯಲ್ಲಿ ರಾಜಾಜಿನಗರದ ಎನ್‌ಪಿಎಸ್ ಶಾಲೆಯ ಕೆ.ರಿಷಿ ಶೇ 99 ಅಂಕಗಳನ್ನು ಗಳಿಸಿದ್ದರೆ, ಹುಳಿಮಾವುವಿನ ಬಿಜಿಎಸ್–ಎನ್‌ಪಿಎಸ್ ಶಾಲೆಯ ಸನತ್ ಕೌಂಡಿನ್ಯ ಶೇ 99.5 ಗಳಿಸಿದ್ದಾರೆ.

ಕೆರೆಗೆ ವಿಷಕಾರಿ ನೀರು ಸಾವಿರಾರು ಮೀನು ಸಾವು



ಮದ್ದೂರು (ಮಂಡ್ಯ ಜಿಲ್ಲೆ): ತಾಲ್ಲೂಕಿನ ಗೆಜ್ಜಲಗೆರೆಯಲ್ಲಿರುವ ಜಿಲ್ಲಾ ಹಾಲು ಒಕ್ಕೂಟದ ಡೇರಿಯ ರಾಸಾಯನಿಕ ಮಿಶ್ರಿತ ನೀರು ಸಮೀಪದ ಕುದುರಗುಂಡಿ ಕೆರೆಗೆ ಶುಕ್ರವಾರ ಹರಿದು ಸಾವಿರಾರು ಮೀನುಗಳು ಸಾವನ್ನಪ್ಪಿವೆ.

ಡೇರಿಯಲ್ಲಿ ಗುರುವಾರ ಯಂತ್ರೋಪಕರಣ, ಕ್ಯಾನ್, ಟ್ಯಾಂಕರ್ ಸ್ವಚ್ಛಗೊಳಿಸಿ ರಾಸಾಯನಿಕ ಮಿಶ್ರಿತ ನೀರನ್ನು ಹಿಂಬದಿಯ ನಾಲೆಗೆ ಹರಿಸಲಾಗಿತ್ತು. ಅಲ್ಲಿಂದ 3 ಕಿ.ಮೀ ದೂರದಲ್ಲಿರುವ ಕೆರೆಗೆ ನಾಲೆಯ ಸಂಪರ್ಕ ಕಲ್ಪಿಸಿರುವುದರಿಂದ, ಒಂದು ವರ್ಷ ಮೀರಿದ ವಿವಿಧ ಜಾತಿಯ ಮೀನು ಹಾಗೂ ಮರಿಗಳು ಸತ್ತು ತೇಲಾಡುತ್ತಿವೆ.

ಮೀನು ಸಾಕಣೆಗಾಗಿ ಕೆರೆಯನ್ನು ಗುತ್ತಿಗೆ ಪಡೆದಿರುವ ಮೀನುಗಾರ ಚನ್ನಪ್ಪ ಒಕ್ಕೂಟದ ವಿರುದ್ಧ ಜಿಲ್ಲಾ ಪರಿಸರ ಅಧಿಕಾರಿಗೆ ದೂರು ನೀಡಿದ್ದಾರೆ. ‘5 ವರ್ಷಗಳ ಅವಧಿಗೆ ಕೆರೆಯನ್ನು ಗುತ್ತಿಗೆ ಪಡೆದಿದ್ದು, ₹ 8 ಲಕ್ಷ ವೆಚ್ಚವಾಗಿದೆ. ಒಕ್ಕೂಟದ ಡೇರಿ ನೀರು ಹರಿದು ಮೀನುಗಳೆಲ್ಲವೂ ಸತ್ತಿವೆ. ಅಧಿಕಾರಿಗಳು ಪರಿಶೀಲನೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಬೇಕು, ನಷ್ಟ ಪರಿಹಾರ ಕೊಡಿಸಬೇಕು’ ಎಂದು ಆಗ್ರಹಿಸಿದ್ದಾರೆ.



ನಗರದಲ್ಲಿ ಶುಕ್ರವಾರ ಮಾನಸ ಹೀಲಿಂಗ್ ಸೆಂಟರ್ ಪಬ್ಲಿಕೇಷನ್ಸ್ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ‘ಮೈಂಡ್ ಬ್ಲಾಕ್ ಆ್ಯಂಡ್ ವೈಟ್’ ಮತ್ತು ‘ಮನಸ್ಸಿನ ರಹಸ್ಯಗಳು’ ಪುಸ್ತಕವನ್ನು ಡಾ.ರಾಜ್‌ಕುಮಾರ್ ಅವರ ಪುತ್ರಿಯರಾದ ಲಕ್ಷ್ಮಿ ಗೋವಿಂದರಾಜ್ ಹಾಗೂ ಪೂರ್ಣಿಮಾ ರಾಮ್‌ಕುಮಾರ್ ಬಿಡುಗಡೆ ಮಾಡಿದರು. ಲೇಖಕರಾದ ಕೆ. ಪ್ರವೀಣ್ ನಾಯಕ್, ಸುಷ್ಮಿತಾ ಪಿ. ನಾಯಕ್ ಕಿಣಿ, ಪುಷ್ಪಾ ಇದ್ದರು

‘ಮನಸ್ಸಿಗೆ ಸಂಬಂಧಿಸಿದ ಪುಸ್ತಕ ಬರೆಯಲು ತಾಳ್ಮೆ ಅಗತ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮನುಷ್ಯರನ್ನು ಕಾಡುವ ಮಾನಸಿಕ ಸಮಸ್ಯೆಗಳಿಗೆ ಪುಸ್ತಕಗಳು ಒಂದಿಷ್ಟು ಬಿಡುಗಡೆಯ ದಾರಿ ಮಾಡಿಕೊಡುತ್ತವೆ’ ಎಂದು ನಟ ದಿವಂಗತ ಡಾ.ರಾಜ್‌ಕುಮಾರ್ ಅವರ ಪುತ್ರಿ ಪೂರ್ಣಿಮಾ ರಾಮ್‌ಕುಮಾರ್ ತಿಳಿಸಿದರು.

ಮಾನಸ ಹೀಲಿಂಗ್ ಸೆಂಟರ್ ಪಬ್ಲಿಕೇಷನ್ಸ್ ನಗರದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಸುಷ್ಮಿತಾ ಪಿ. ನಾಯಕ್ ಕಿಣಿ ಅವರ ‘ಮೈಂಡ್ ಬ್ಲಾಕ್ ಆ್ಯಂಡ್ ವೈಟ್’ ಮತ್ತು ಕೆ. ಪ್ರವೀಣ್ ನಾಯಕ್ ಅನುವಾದಿಸಿದ ‘ಮನಸ್ಸಿನ ರಹಸ್ಯಗಳು’ ಪುಸ್ತಕವನ್ನು ಡಾ.ರಾಜ್‌ಕುಮಾರ್ ಅವರ ಪುತ್ರಿಯರಾದ ಲಕ್ಷ್ಮಿ ಗೋವಿಂದರಾಜ್ ಹಾಗೂ ಪೂರ್ಣಿಮಾ ರಾಮ್‌ಕುಮಾರ್ ಬಿಡುಗಡೆ ಮಾಡಿದರು.

‘ಸಾಮಾನ್ಯವಾಗಿ ಮನುಷ್ಯನ ಬದುಕಿನಲ್ಲಿ ಸಾವಿರಾರು ಸಮಸ್ಯೆ- ಸವಾಲುಗಳು ಎದುರಾಗುತ್ತವೆ. ಅವುಗಳಲ್ಲಿ ಒಬ್ಬರು ಮತ್ತೊಬ್ಬರೊಂದಿಗೆ ವ್ಯಕ್ತಪಡಿಸುವ ಮತ್ತು ವ್ಯಕ್ತಪಡಿಸಲಾಗದ ವಿಷಯಗಳೂ ಇರುತ್ತವೆ. ಅಂತಹ ಅವ್ಯಕ್ತ ಸಮಸ್ಯೆ, ಸವಾಲುಗಳನ್ನು ‘ಮನಸ್ಸಿನ ರಹಸ್ಯಗಳು’ ಕೃತಿ ಪರಿಹರಿಸುತ್ತದೆ’ ಎಂದು ಪೂರ್ಣಿಮಾ ಹೇಳಿದರು.

‘ಮನಸ್ಸನ್ನು ಅರ್ಥಮಾಡಿಕೊಂಡು ಪುಸ್ತಕ ಬರೆಯುವುದು ಕಷ್ಟ. ಮನಸ್ಸಿಗೆ ಸಂಬಂಧಿಸಿದ ಪುಸ್ತಕ ಬರೆಯಲು ತಾಳ್ಮೆ ಅಗತ್ಯ. ಯುವಜನರಿಂದ ಹಿಡಿದು ಇಳಿವಯಸ್ಸಿನವರೆಗೆ ಎಲ್ಲರೂ ಓದುವಂತಹ ಪುಸ್ತಕ ಇವಾಗಿವೆ. ಮನಸ್ಸಿಗೆ ಸಂಬಂಧಿಸಿದ ಪುಸ್ತಕಗಳು ಮತ್ತಷ್ಟು ಬರೆಯುವಂತಾಗಬೇಕು’ ಎಂದು ಆಶಿಸಿದರು.

ಬೆನ್ನಿಗಾನಹಳ್ಳಿ – ಚಿಕ್ಕಬಾಣಾವರ ನಡುವಿನ ಕಾರಿಡಾರ್

ಉಪನಗರ ರೈಲು ಯೋಜನೆ ರಕ್ಷಣಾ ಇಲಾಖೆ ಜತೆ ಒಪ್ಪಂದ

ಪ್ರಜಾವಾಣಿ ವಾರ್ತೆ



ಉಪನಗರ ರೈಲು ಮಾರ್ಗದ ಕಾರಿಡಾರ್–2 ಕಾಮಗಾರಿ ಜಾಲಹಳ್ಳಿ ಬಳಿ ಆರಂಭವಾಗಿರುವುದು

ಬೆಂಗಳೂರು: ಉಪನಗರ ರೈಲು ಯೋಜನೆಯ ಬೆನ್ನಿಗಾನಹಳ್ಳಿ-ಚಿಕ್ಕಬಾಣಾವರ ನಡುವಿನ ಕಾರಿಡಾರ್‌ಗೆ (ಮಲ್ಲಿಗೆ) ಅಗತ್ಯ ಇರುವ ರಕ್ಷಣಾ ಇಲಾಖೆ ಜಾಗ ಪಡೆಯಲು ಶುಕ್ರವಾರ ಒಡಂಬಡಿಕೆ ಏರ್ಪಟ್ಟಿದೆ.

ಭಾರತೀಯ ವಾಯುಸೇನೆ ಮತ್ತು ಕೆ-ರೈಡ್ (ಕರ್ನಾಟಕ ರೈಲ್ವೆ ಮೂಲಸೌಕರ್ಯ ಅಭಿವೃದ್ಧಿ ನಿಯಮಿತ) ಅಧಿಕಾರಿಗಳು ಒಡಂಬಡಿಕೆ ಸಹಿ ಹಾಕಿದರು.

ಜಾಲಹಳ್ಳಿಯ ವಾಯುಸೇನೆಗೆ ಸೇರಿದ ಜಾಗದಲ್ಲಿ ಗೋಡೆ ನಿರ್ಮಿಸಲು ಅನುಮತಿ ನೀಡಲಾಗಿದೆ. ಜತೆಗೆ ಆ ಜಾಗವನ್ನೂ ಹಸ್ತಾಂತರಿಸಲಾಗಿದೆ. ಉದ್ದೇಶಿತ ‘ಮಲ್ಲಿಗೆ’ ಕಾರಿಡಾರ್ ಮಾರ್ಗದಲ್ಲಿ ಸಮೀಕ್ಷೆ, ಭೂತಾಂತ್ರಿಕ ಪರಿಶೀಲನೆ ಮತ್ತಿತರ ಕಾರ್ಯಗಳು ಪೂರ್ಣಗೊಂಡಿವೆ ಎಂದು ಕೆ–ರೈಡ್ ಮಾಹಿತಿ ನೀಡಿದೆ.

ಮಾರ್ಗದುದ್ದಕ್ಕೂ ನಿರ್ಮಿಸಲಾಗುವ ಸೇತುವೆ, ಎರಡೂ ಬದಿ ತಡೆಗೋಡೆಗಳು ಮತ್ತಿತರ ಕಾಮಗಾರಿಗೆ ಅಗತ್ಯ ಕಾಂಕ್ರೀಟ್ ಪೂರೈಸುವ ಮೂರು ಬ್ಯಾಚಿಂಗ್ ಘಟಕಗಳು ಇಲ್ಲಿ ಬರಲಿವೆ ಎಂದು ತಿಳಿಸಿದೆ.

ಜಾಲಹಳ್ಳಿ, ಬೆನ್ನಿಗಾನಹಳ್ಳಿ ಮತ್ತು ಹೆಬ್ಬಾಳ ಮೂರರ ಪೈಕಿ ಈಗಾಗಲೇ ಎರಡು ಘಟಕಗಳು ಕಾರ್ಯಾರಂಭ ಮಾಡಿದ್ದು, ಜಾಲಹಳ್ಳಿ ಘಟಕ ಶೀಘ್ರ ಪೂರ್ಣಗೊಳ್ಳಲಿದೆ ಎಂದು ಕೆ–ರೈಡ್ ತಿಳಿಸಿದೆ.

ಮಲ್ಲಿಗೆ ಮಾರ್ಗಕ್ಕೆ ಅಗತ್ಯ ಇರುವ 157 ಎಕರೆ ರೈಲ್ವೆ ಜಾಗ ಈಗಾಗಲೇ ಕೆ-ರೈಡ್‌ಗೆ ಹಸ್ತಾಂತರಗೊಂಡಿದೆ. 5.11 ಎಕರೆ ಖಾಸಗಿ ಭೂಮಿ ಸ್ವಾಧೀನ ಕಾರ್ಯ ಅಂತಿಮ ಹಂತದಲ್ಲಿದೆ ಎಂದು ವಿವರಿಸಿದೆ.

12 ನಿಲ್ದಾಣಕ್ಕೆ ಟೆಂಡರ್: ಈ ಕಾರಿಡಾರ್‌ನ 12 ನಿಲ್ದಾಣಗಳು ಮತ್ತು ಎರಡು ಘಟಕಗಳ ನಿರ್ಮಾಣಕ್ಕೆ ಶೀಘ್ರವೇ ಟೆಂಡರ್ ಆಹ್ವಾನಿಸಲಾಗುತ್ತಿದ್ದು, ಟೆಂಡರ್ ಪೂರ್ಣಗೊಂಡರೆ ಕಾಮಗಾರಿ ಚುರುಕಾಗಲಿದೆ ಎಂದು ಕೆ-ರೈಡ್ ಅಧಿಕಾರಿಗಳು ತಿಳಿಸಿದ್ದಾರೆ.

148.17 ಕಿಲೋ ಮೀಟರ್ ಉದ್ದದ ನಾಲ್ಕು ಕಾರಿಡಾರ್‌ಗೆ ₹15,767 ಕೋಟಿ ಅಂದಾಜು ವೆಚ್ಚದ ಯೋಜನೆ ರೂಪುಗೊಂಡಿದೆ.

ಟ್ವಿಟರ್ ನೂತನ ಸಿಇಒ ಲಿಂಡಾ ಯಾಕಾರಿನೊ



ಸ್ಯಾನ್‌ಫ್ರಾನ್ಸಿಸ್ಕೊ(ಎಎಫ್‌ಪಿ): ಟ್ವಿಟರ್‌ನ ನೂತನ ಸಿಇಒ ಆಗಿ ಲಿಂಡಾ ಯಾಕಾರಿನೊ ನೇಮಕವಾಗಿದ್ದಾರೆ.

‘ಲಿಂಡಾ ಅವರು ಟ್ವಿಟರ್‌ನ ಸಂಪೂರ್ಣ ವ್ಯವಹಾರದ ಉಸ್ತುವಾರಿ ಹೊರಲಿದ್ದಾರೆ. ನಾನು ಇನ್ನು ಮುಂದೆ ಉತ್ಪನ್ನ ವಿನ್ಯಾಸ ಮತ್ತು ಹೊಸ ತಂತ್ರಜ್ಞಾನದ ಮೇಲೆ ಗಮನ ಕೇಂದ್ರೀಕರಿಸುತ್ತೇನೆ’ ಎಂದು ಟ್ವಿಟರ್ ಮುಖ್ಯಸ್ಥ ಎಲಾನ್ ಮಸ್ಕ್ ತಿಳಿಸಿದ್ದಾರೆ.

ಲಿಂಡಾ ಅವರು 2011 ರಿಂದಲೂ ಎನ್‌ಬಿಸಿ ಯೂನಿವರ್ಸಲ್‌ನ ಜಾಹೀರಾತು ಮತ್ತು ಪಾಲುದಾರಿಕೆ ವಿಭಾಗದ ಕಾರ್ಯ ನಿರ್ವಾಹಕಿಯಾಗಿ ಕೆಲಸ ಮಾಡುತ್ತಿದ್ದಾರೆ. ಕಳೆದ ವರ್ಷ ಟ್ವಿಟರ್ ಖರೀದಿಸಿದ್ದ ಮಸ್ಕ್, ಸಿಇಒ ಆಗಿದ್ದ ಭಾರತದ ಪರಾಗ್ ಅಗ್ರವಾಲ ಅವರನ್ನು ವಜಾಗೊಳಿಸಿ ತಾವೇ ಅಧಿಕಾರ ವಹಿಸಿಕೊಂಡಿದ್ದರು. ಆರು ವಾರಗಳ ಬಳಿಕ ಲಿಂಡಾ ಅಧಿಕಾರ ಸ್ವೀಕರಿಸಲಿದ್ದಾರೆ.



ಮುಸ್ಲಿಂ ಲೇಖಕರ ಸಂಘವು ದಿವಂಗತ ಯು.ಟಿ.ಫರೀದ್ ಸ್ಮರಣಾರ್ಥ ನೀಡುವ 2021ನೇ ಸಾಲಿನ ‘ಮುಸ್ಲಿಂ ಸಾಹಿತ್ಯ ಪ್ರಶಸ್ತಿ’ಯನ್ನು ಬರಹಗಾರ, ಬೆಂಗಳೂರಿನಲ್ಲಿ ಕೃಷಿ ಇಲಾಖೆಯ ಅಧಿಕಾರಿಯಾಗಿರುವ ಡಾ. ನೂರ್ ಸಮದ್ ಅಬ್ಬಲಗೆರೆ ಅವರಿಗೆ ಪ್ರದಾನ ಮಾಡಲಾಯಿತು

ಮುಸ್ಲಿಂ ಸಾಹಿತ್ಯ ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

ಮಂಗಳೂರು: ಪ್ರತಿಫಲದ ನಿರೀಕ್ಷೆಯಿಲ್ಲದೆ, ನಿಷ್ಠೆ, ಬದ್ಧತೆಯಿಂದ ಕೆಲಸ ಮಾಡಿದರೆ ಪ್ರಪಂಚದಲ್ಲಿ ಏನನ್ನು ಬೇಕಾದರೂ ದಕ್ಕಿಸಿಕೊಳ್ಳಬಹುದು ಎಂದು ಬರಹಗಾರ ಬೆಂಗಳೂರಿನ ಡಾ. ನೂರ್ ಸಮದ್ ಅಬ್ಬಲಗೆರೆ ಅಭಿಪ್ರಾಯಪಟ್ಟರು.

ಮುಸ್ಲಿಂ ಲೇಖಕರ ಸಂಘವು ಶುಕ್ರವಾರ ಇಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ದಿವಂಗತ ಯು.ಟಿ.ಫರೀದ್ ಸ್ಮರಣಾರ್ಥ ನೀಡುವ 2021ನೇ ಸಾಲಿನ ‘ಮುಸ್ಲಿಂ ಸಾಹಿತ್ಯ ಪ್ರಶಸ್ತಿ’ ಸ್ವೀಕರಿಸಿ ಅವರು ಮಾತನಾಡಿದರು.

‘ಪ್ರಜಾವಾಣಿಯ ಸಹಪಾಠಿ’ ಪತ್ರಿಕೆಯ ಕೀಟ ಪ್ರಪಂಚ ಅಂಕಣದಲ್ಲಿ ಪ್ರಕಟವಾದ ಲೇಖನಗಳ ಸಂಗ್ರಹ ‘ವಿಸ್ಮಯ ಕೀಟ ಪ್ರಪಂಚ’ ಕೃತಿಗೆ ಈ ಪ್ರಶಸ್ತಿ ದೊರೆತಿರುವುದಕ್ಕೆ ಅವರು, ಪತ್ರಿಕೆಯನ್ನು ಸ್ಮರಿಸಿದರು. ಪ್ರಶಸ್ತಿಯು ₹ 10ಸಾವಿರ ನಗದು, ಸ್ಮರಣಿಕೆಯನ್ನು ಒಳಗೊಂಡಿದೆ.

ಪ್ರಶಸ್ತಿ ಪ್ರದಾನ ಮಾಡಿ ಶಾಸಕ ಯು.ಟಿ.ಖಾದರ್ ಮಾತನಾಡಿದರು.

ಜೈಲಿನಿಂದಲೇ ಜಾಮೀನಿಗೆ ಒತ್ತಡ: ದೂರು ದಾಖಲು

ಪ್ರಜಾವಾಣಿ ವಾರ್ತೆ

ಮೈಸೂರು: ‘ಇಲ್ಲಿನ ಕೇಂದ್ರ ಕಾರಾಗೃಹದಲ್ಲಿ ವಿಚಾರಣಾಧೀನ ಕೈದಿಯಾಗಿರುವ ಆದಿಲ್ ಖಾನ್ ದುರಾನಿ ನನಗೆ ಕರೆ ಮಾಡಿ, ಜಾಮೀನು ಪಡೆಯಲು ಸಹಕಾರ ನೀಡಬೇಕು, ವಕೀಲರನ್ನು ಭೇಟಿಯಾಗಿ ನನ್ನ ಆಕ್ಷೇಪಣೆ ಇಲ್ಲವೆಂಬ ಹೇಳಿಕೆ ನೀಡಬೇಕೆಂದು ಒತ್ತಡ ಹೇರುತ್ತಿದ್ದಾನೆ’ ಎಂದು ಆರೋಪಿಸಿ ಸಂತ್ರಸ್ತೆ, ಇರಾನಿ ಯುವತಿ ನರಸಿಂಹರಾಜ ಠಾಣೆಗೆ ದೂರು ನೀಡಿದ್ದು, ಎಫ್‌ಐಆರ್ ದಾಖಲಾಗಿದೆ.

ಈ ಹಿಂದೆ ವಿದ್ಯಾಭ್ಯಾಸಕ್ಕೆಂದು ಮೈಸೂರಿಗೆ ಬಂದಿದ್ದ ಇರಾನಿ ಯುವತಿಗೆ, ಸ್ಥಳೀಯ ಹೋಟೆಲ್ ಉದ್ಯಮದಲ್ಲಿ ತೊಡಗಿಸಿಕೊಂಡಿದ್ದ ಆದಿಲ್ ಲೈಂಗಿಕ ಮತ್ತು ದೈಹಿಕ ಶೋಷಣೆ ಮಾಡಿದ್ದು, ಖಾಸಗಿ ಫೋಟೊ ಮತ್ತು ವಿಡಿಯೊಗಳನ್ನು ಕೆಲವರೊಂದಿಗೆ ಹಂಚಿಕೊಂಡಿದ್ದ ಎಂಬ ಆರೋಪ ಕೇಳಿಬಂದಿತ್ತು. ಸಂತ್ರಸ್ತ ಯುವತಿಯು ನೀಡಿದ ದೂರಿನನ್ವಯ ಪ್ರಕರಣ ದಾಖಲಿಸಿ, ಆತನನ್ನು ಕಾರಾಗೃಹದಲ್ಲಿ ವಿಚಾರಣಾಧೀನ ಕೈದಿಯಾಗಿ ಇರಿಸಲಾಗಿತ್ತು.

‘ಆತ ಅಲ್ಲಿಂದ 3-4 ಸಿಮ್‌ಗಳಿಂದ 15ಕ್ಕೂ ಹೆಚ್ಚು ಬಾರಿ ಕರೆ ಮಾಡಿ ಜಾಮೀನು ಹಿಂಪಡೆಯಲು ಸಹಕರಿಸುವಂತೆ ಒತ್ತಾಯಿಸಿದ್ದಾನೆ’ ಎಂದು ಯುವತಿ ದೂರಿದ್ದಾರೆ.

‘ಕಾರಾಗೃಹದೊಳಗೆ ಮೊಬೈಲ್ ಬಳಸಿದ ಹಾಗೂ ಒತ್ತಡ ಹಾಕಿದ ಕುರಿತು ಸಂತ್ರಸ್ತೆಯು ಒಡನಾಡಿ ಸಂಸ್ಥೆಯ ಮೂಲಕ ಪ್ರಕರಣದ ತನಿಖಾಧಿಕಾರಿ, ನರಸಿಂಹರಾಜ ಠಾಣಾ ಇನ್‌ಸ್ಪೆಕ್ಟರ್‌ಗೆ ಮೇ 5ರಂದು ದೂರು ನೀಡಿದ್ದರು. ಅವರು ಮ್ಯಾಜಿಸ್ಟ್ರೇಟ್‌ಗೆ ಹಸ್ತಾಂತರಿಸಿದ್ದು ಅಲ್ಲಿ ಸಂತ್ರಸ್ತೆಯ ಹೇಳಿಕೆ ಪಡೆದು ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ’ ಎಂದು ಸಂಸ್ಥೆಯ ನಿರ್ದೇಶಕ ಸ್ಟ್ಯಾನ್ಲಿ ‘ಪ್ರಜಾವಾಣಿ’ಗೆ ತಿಳಿಸಿದರು.

‘ಕಾರಾಗೃಹದಲ್ಲಿದ್ದರೂ ತನ್ನ ಪ್ರತಿ ಚಲನವಲನದ ಮಾಹಿತಿ ಆರೋಪಿಗೆ ಹೇಗೆ ತಲುಪುತ್ತಿದೆ ಎಂದು ಸಂತ್ರಸ್ತೆ ಆಶ್ಚರ್ಯ ಹಾಗೂ ಆತಂಕ ವ್ಯಕ್ತಪಡಿಸಿದ್ದಾರೆ. ಆಕೆ ಒಡನಾಡಿಯನ್ನು ಸಂಪರ್ಕಿಸಿದ್ದಕ್ಕಾಗಿ ಆರೋಪಿ ಸಿಡಿಮಿಡಿಗೊಂಡಿದ್ದಾನೆ. ಕಾರಾಗೃಹದಲ್ಲಿ ಇದ್ದುಕೊಂಡೇ ಅಕ್ರಮ ಎಸಗಿರುವ ಆದಿಲ್‌ಗೆ ಸರ್ಕಾರಿ ಅಭಿಯೋಜಕರು ಹಾಗೂ ತನಿಖಾಧಿಕಾರಿಗಳು ಜಾಮೀನು ನೀಡದಂತೆ ಆಕ್ಷೇಪ ಸಲ್ಲಿಸಬೇಕು’ ಎಂದು ಒತ್ತಾಯಿಸಿದರು. ದೂರಿನ ಕುರಿತು ಪ್ರತಿಕ್ರಿಯಿಸಿದ ಎನ್‌ಆರ್ ಠಾಣೆಯ ಪೊಲೀಸರು, ‘ತನಿಖೆ ನಡೆಯಲಿದೆ’ ಎಂದರು.

ಆದಿಲ್ ಖಾನ್ ದುರಾನಿ ವಿರುದ್ಧ ಮುಂಬೈನ ಬಾಲಿವುಡ್ ನಟಿ ರಾಕಿ ಸಾವಂತ್ ಅವರನ್ನು ಮದುವೆಯಾಗಿ ವಂಚಿಸಿದ್ದ ಪ್ರಕರಣದಲ್ಲೂ ದೂರು ದಾಖಲಾಗಿದೆ.

ಬಿಎಂಸಿಆರ್‌ಐ ಡೀನ್ ಡಾ. ರಮೇಶ್ ಕೃಷ್ಣ ಅಭಿಮತ

‘ಶುಶ್ರೂಷಕರು ಆಸ್ಪತ್ರೆಗಳ ಬೆನ್ನೆಲುಬು’

ಪ್ರಜಾವಾಣಿ ವಾರ್ತೆ



ವಾಣಿವಿಲಾಸ ಆಸ್ಪತ್ರೆಯ ಶುಶ್ರೂಷಕರು ನೃತ್ಯ ಪ್ರದರ್ಶಿಸಿದರು

ಬೆಂಗಳೂರು: ‘ವೈದ್ಯರು ಮತ್ತು ರೋಗಿಗಳ ನಡುವೆ ಸಂಪರ್ಕ ಸೇತುವೆಯಾಗಿ ಕಾರ್ಯ ನಿರ್ವಹಿಸುವ ಶುಶ್ರೂಷಕರು, ಆಸ್ಪತ್ರೆಗಳ ಬೆನ್ನೆಲುಬಾಗಿದ್ದಾರೆ’ ಎಂದು ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ (ಬಿಎಂಸಿಆರ್‌ಐ) ಡೀನ್ ಡಾ.ರಮೇಶ್ ಕೃಷ್ಣ ತಿಳಿಸಿದರು.

ಫ್ಲಾರೆನ್ಸ್ ನೈಟಿಂಗೇಲ್ ಅವರ ಜನ್ಮದಿನದ ಪ್ರಯುಕ್ತ ಬಿಎಂಸಿಆರ್‌ಐ ವಾಣಿವಿಲಾಸ ಆಸ್ಪತ್ರೆಯಲ್ಲಿ ಶುಕ್ರವಾರ ನಡೆದ ಅಂತರರಾಷ್ಟ್ರೀಯ ಶುಶ್ರೂಷಕರ ದಿನದಲ್ಲಿ ಅವರು ಮಾತನಾಡಿದರು.

‘ಆಸ್ಪತ್ರೆ ಒಳ್ಳೆಯ ಹೆಸರು ಪಡೆಯಲು ವೈದ್ಯರಷ್ಟೇ ಶುಶ್ರೂಷಕರೂ ಮುಖ್ಯರಾಗುತ್ತಾರೆ. ಕೋವಿಡ್ ಸಂದರ್ಭದಲ್ಲಿ ಶುಶ್ರೂಷಕರು ಜೀವದ ಹಂಗು ತೊರೆದು ಕಾರ್ಯ ನಿರ್ವಹಿಸಿದ್ದಾರೆ. ಅದರಲ್ಲೂ ವಾಣಿವಿಲಾಸ ಆಸ್ಪತ್ರೆಯಲ್ಲಿ ಕೋವಿಡ್ ಹಾಗೂ ಕೋವಿಡೇತರ ಕರ್ತವ್ಯ ನಿರ್ವಹಿಸಿ, ಎಲ್ಲರ ಮೆಚ್ಚುಗೆಗೆ ಭಾಜನರಾಗಿದ್ದಾರೆ’ ಎಂದು ಶ್ಲಾಘಿಸಿದರು.

‘ಶುಶ್ರೂಷಕರು ಸೇರಿ ವಿವಿಧ ಸಿಬ್ಬಂದಿಯ ನೇಮಕಾತಿ ಬಗ್ಗೆ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ’ ಎಂದರು.

ವಾಣಿವಿಲಾಸ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕಿ ಡಾ.ಸಿ. ಸವಿತಾ, ‘ಶುಶ್ರೂಷಕ ವೃತ್ತಿ ಶ್ರೇಷ್ಠವಾದ ವೃತ್ತಿಯಾಗಿದೆ. ರೋಗಿಗಳಿಗೆ ಔಷಧದ ಜತೆಗೆ ಸಾಂತ್ವನ, ಧೈರ್ಯ, ಕಾಳಜಿಯ ಅವಶ್ಯಕತೆ ಇರುತ್ತದೆ. ಇದನ್ನು ಒದಗಿಸುವ ಕೆಲಸ ಮಾಡಬೇಕು. ಶುಶ್ರೂಷಕರ ಕೊರತೆಯ ನಡುವೆಯೂ ಆಸ್ಪತ್ರೆ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ’ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ 10 ವರ್ಷ ಮೇಲ್ಪಟ್ಟು ಕಾರ್ಯ ನಿರ್ವಹಿಸಿದ ಶುಶ್ರೂಷಕರನ್ನು ಗೌರವಿಸಲಾಯಿತು. ವಿವಿಧ ಕ್ರೀಡೆಗಳಲ್ಲಿ ಜಯಿಸಿದವರಿಗೆ ಪ್ರಶಸ್ತಿ ವಿತರಿಸಲಾಯಿತು. ಬಳಿಕ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ವಾಣಿವಿಲಾಸ ಆಸ್ಪತ್ರೆಯ ನಿವಾಸಿ ವೈದ್ಯಾಧಿಕಾರಿ ಡಾ.ಸಂತೋಷ್ ಡಿ. ಪ್ರಭಾ, ಶುಶ್ರೂಷ ಅಧೀಕ್ಷಕಿ ಸುಮಿತ್ರಾ ದೇವಿ, ರಾಜ್ಯ ಸರ್ಕಾರಿ ನೌಕರರ ಸಂಘದ ಕೋಶಾಧ್ಯಕ್ಷ ಶ್ರೀನಿವಾಸ್ ಇದ್ದರು.

ಕದ್ರಿ ದೇವಾಲಯ ಅಕ್ರಮ ಪ್ರವೇಶ ಪ್ರಕರಣ ದಾಖಲು

ಮಂಗಳೂರು: ನಗರದ ಕದ್ರಿ ಮಂಜುನಾಥೇಶ್ವರ ದೇವಾಲಯಕ್ಕೆ ಅಕ್ರಮವಾಗಿ ಪ್ರವೇಶಿಸಿದ ಆರೋಪದ ಮೇಲೆ ಮೂವರ ವಿರುದ್ಧ ಮಂಗಳೂರು ಪೂರ್ವ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹಸನ್ ಶಾಹಿನ್ (19), ಉಮ್ಮರ್ ಫಾರೂಕ್ (21), ಮಹಮ್ಮದ್ ಜಾಫರ್ (18) ಆರೋಪಿಗಳು. ಗುರುವಾರ ರಾತ್ರಿ 10 ಗಂಟೆಯ ಸುಮಾರಿಗೆ ಮೋಟಾರ್ ಸೈಕಲ್‌ನಲ್ಲಿ ಬಂದ ಈ ಮೂವರು ಅಕ್ರಮವಾಗಿ ಪ್ರವೇಶಿಸಿ ದೇವಾಲಯದ ಅಂಗಣದಲ್ಲಿ ಸುತ್ತಾಡುತ್ತಿದ್ದರು. ಸಂಶಯಗೊಂಡ ದೇವಾಲಯದ ಸಿಬ್ಬಂದಿ ಅವರನ್ನು ವಿಚಾರಿಸಿದ್ದಾರೆ. ಸಮರ್ಪಕವಾಗಿ ಉತ್ತರ ನೀಡದೆ, ಭದ್ರತಾ ಸಿಬ್ಬಂದಿಗೆ ಅವಾಚ್ಯ ಪದಗಳಿಂದ ಬೈದು ಬೆದರಿಕೆ ಹಾಕಿದ್ದಾರೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ದೇವಾಲಯದ ವ್ಯವಸ್ಥಾಪನಾ ಸಮಿತಿಯವರು ನೀಡಿದ ದೂರಿನಂತೆ ಪ್ರಕರಣ ದಾಖಲಿಸಿಕೊಂಡು, ಈ ಮೂವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ ಎಂದು ಮಂಗಳೂರು ಪೊಲೀಸ್ ಕಮಿಷನರ್ ಕುಲದೀಪ್ ಕುಮಾರ್ ಜೈನ್ ತಿಳಿಸಿದ್ದಾರೆ.

ರಾಯಚೂರು: ವರ್ಷ ಪೂರೈಸಿದ ಏಮ್ಸ್ ಹೋರಾಟ

ರಾಯಚೂರು: ಜಿಲ್ಲೆಯಲ್ಲಿ ಅಖಿಲ ಭಾರತೀಯ ವೈದ್ಯವಿಜ್ಞಾನ ಸಂಸ್ಥೆ (ಏಮ್ಸ್) ಸ್ಥಾಪಿಸುವಂತೆ ಒತ್ತಾಯಿಸಿ ಜಿಲ್ಲಾ ಏಮ್ಸ್ ಹೋರಾಟ ಸಮಿತಿ ಜಿಲ್ಲಾ ಕ್ರೀಡಾಂಗಣದಲ್ಲಿ ಆರಂಭಿಸಿರುವ ಅನಿರ್ದಿಷ್ಟಾವಧಿ ಧರಣಿ ಶನಿವಾರ ಒಂದು ವರ್ಷ ಪೂರ್ಣಗೊಳಿಸಿತು.

‘ಏಮ್ಸ್‌ಗೆ ಪರ್ಯಾಯ ವೈದ್ಯಕೀಯ ಸಂಸ್ಥೆ ರಾಯಚೂರಿನಲ್ಲಿ ಸ್ಥಾಪಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬಜೆಟ್‌ನಲ್ಲಿ ಘೋಷಿಸಿದ್ದರು. ಏಮ್ಸ್‌ಗೆ ಪರ್ಯಾಯ ಎನ್ನುವುದು ದೇಶದಲ್ಲಿಯೇ ಇಲ್ಲ. ರಾಯಚೂರು ಜನರ ಕಣ್ಣೊರೆಸುವ ತಂತ್ರವನ್ನು ರಾಜ್ಯ ಸರ್ಕಾರ ಮಾಡಿದೆ’ ಎಂದು ಹೋರಾಟಗಾರರು ಆರೋಪಿಸಿದ್ದಾರೆ. ಧರಣಿಯನ್ನು ಮುಂದುವರಿಸಿದ್ದಾರೆ.

‘ಪೂರ್ಣಪ್ರಮಾಣದ ಏಮ್ಸ್ ಸ್ಥಾಪಿಸುವಂತೆ ಕೇಂದ್ರ ಸರ್ಕಾರಕ್ಕೆ ಅಧಿಕೃತ ಪ್ರಸ್ತಾವ ಕಳುಹಿಸುವವರೆಗೂ ಧರಣಿ ಮುಂದುವರಿಸುತ್ತೇವೆ’ ಎಂದು ಹೋರಾಟಗಾರರು ತಿಳಿಸಿದ್ದಾರೆ. 2022ರ ಮೇ 12ರಂದು ಧರಣಿ ಆರಂಭವಾಯಿತು.



ಅಂತರರಾಷ್ಟ್ರೀಯ ಶುಶ್ರೂಷಕರ ದಿನದ ಪ್ರಯುಕ್ತ ಶಿವಾಜಿನಗರದಲ್ಲಿರುವ ಎಚ್.ಎಸ್.ಐ.ಎಸ್. ಘೋಷ ಆಸ್ಪತ್ರೆಯಲ್ಲಿ ಶುಶ್ರೂಷಕರು ಕೇಕ್ ಕತ್ತರಿಸಿ ಶುಕ್ರವಾರ ಸಂಭ್ರಮಿಸಿದರು – ಪ್ರಜಾವಾಣಿ ಚಿತ್ರ

ಉದಕಮಂಡಲ ರೇಸ್

ಕಿಂಗ್ಸ್ ವಾಕ್ ಗೆಲ್ಲುವ ನಿರೀಕ್ಷೆ

ಫೈಲ್‌ಡ್ರೈವರ್ ಹ್ಯಾಂಡಿಕ್ಯಾಪ್ ರೇಸ್‌ನ ಮೊದಲನೇ ಡಿವಿಷನ್ ಶನಿವಾರದ ಉದಕಮಂಡಲ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಈ ರೇಸ್‌ನಲ್ಲಿ ಕಿಂಗ್ಸ್ ವಾಕ್ ಗೆಲ್ಲುವ ನಿರೀಕ್ಷೆಯಿದೆ.ಬೆಳಿಗ್ಗೆ 10.30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಲೇಡಿ ಜೀನ್ 7, ಗ್ಲೋರಿಯಸ್ ವಿಕ್ಟರಿ 2, ಟಿಫೊಸಿ 1
2ನೇ ರೇಸ್: ಸುಪ್ರೀಮ್ ಗ್ರ್ಯಾಂಡ್ಯೂರ್ 3, ಆನ್ಜಿಯೊ 2, ಮಿಸ್ಟರ್ ಮೊಜಾರಕ್ 5
3ನೇ ರೇಸ್: ಮಿಸ್ ಅಲ್ಯೂರ್ 6, ಕಲ್ಲಪೋಸ್ 5, ಅರೋರ ಬೊರಾಲಿಸ್ 3
4ನೇ ರೇಸ್: ಮಾನ್ ಜನರಲ್ 2, ಬಿಗ್ ಟ್ರೆಷರ್ 4, ಕಿಂಗ್ಸ್ ಷೋ 3
5ನೇ ರೇಸ್: ಮೇಫ್ಲವರ್ 9, ಸ್ಟರ್ನ್ ಮೇಡನ್ 2, ಥ್ರಿಲ್ ಆಫ್ ಪವರ್ 1
6ನೇ ರೇಸ್: ವಿಂಡ್ಸರ್ ವಾಕ್ 5, ಸುಪರಕಿಗಾ 1, ಮೆಮೋರಿ ಲೇನ್ 7
7ನೇ ರೇಸ್: ಕಿಂಗ್ಸ್ ವಾಕ್ 2, ಟರ್ಫ್ ಬ್ಯೂಟಿ 8, ರಾಯಲ್ ಟ್ರೆಷರ್ 7
8ನೇ ರೇಸ್: ಗ್ಯಾನ್‌ಟನ್ 7, ಸ್ಟ್ರಾಂಬೊಲಿಸಿಸ್ 6, ರಾಯಲ್ ಬೆರೋನ್ 5

ಉತ್ತಮ ಬೆಟ್: ಮಿಸ್ ಅಲ್ಯೂರ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
4,5,6,7,8	1,2,3	4,5,6	6.7.8

ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿ.ವಿ. ಕುಲಪತಿ ಡಾ.ಎಂ.ಕೆ.ರಮೇಶ್ ಅಭಿಮತ

ಶುಶ್ರೂಷಕರಿಗೆ ಗುಣಮಟ್ಟದ ತರಬೇತಿ ಅಗತ್ಯ

ಪ್ರಜಾವಾಣಿ ವಾರ್ತೆ



ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಪ್ರದರ್ಶನ ನೀಡಿದ ಕೆಂಪೇಗೌಡ ಇನ್‌ಸ್ಟಿಟ್ಯೂಟ್ ಆಫ್ ನರ್ಸಿಂಗ್‌ನ ಶುಶ್ರೂಷಕ ವಿದ್ಯಾರ್ಥಿಗಳು – ಪ್ರಜಾವಾಣಿ ಚಿತ್ರ

ಬೆಂಗಳೂರು: ‘ವೈದ್ಯಕೀಯ ಕ್ಷೇತ್ರದಲ್ಲಿ ಪ್ರಮುಖ ಪಾತ್ರ ವಹಿಸುವ ಶುಶ್ರೂಷಕರ ಕೌಶಲ ವೃದ್ಧಿಗೆ ಗುಣಮಟ್ಟದ ಶಿಕ್ಷಣ ಹಾಗೂ ತರಬೇತಿ ಅಗತ್ಯ’ ಎಂದು ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಡಾ.ಎಂ.ಕೆ.ರಮೇಶ್ ತಿಳಿಸಿದರು.

ಅಂತರರಾಷ್ಟ್ರೀಯ ಶುಶ್ರೂಷಕರ ದಿನದ ಪ್ರಯುಕ್ತ ಕೆಂಪೇಗೌಡ ಇನ್‌ಸ್ಟಿಟ್ಯೂಟ್ ಆಫ್ ನರ್ಸಿಂಗ್, ಆಂಗ್ಲೋ-ಇಂಡಿಯನ್ ಯುನಿಟಿ ಸೆಂಟರ್ ಮತ್ತು ಗಾರ್ಷಮ್ ಪ್ರತಿಷ್ಠಾನ ಜಂಟಿಯಾಗಿ ನಗರದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಅಮೆರಿಕ ಸೇರಿ ವಿವಿಧ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಹರ್ನಿಯಾ ಮುಂತಾದ ಸಾಮಾನ್ಯ ಶಸ್ತ್ರಚಿಕಿತ್ಸೆಗೆ ಒಂದು ವರ್ಷ ಕಾಯಬೇಕಾದ ಪರಿಸ್ಥಿತಿ ಇದೆ. ಆದ್ದರಿಂದ, ವಿದೇಶಿಗರು ಅತಿ ಕಡಿಮೆ ವೆಚ್ಚದಲ್ಲಿ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳಲು ಇಲ್ಲಿಗೆ ಬರುತ್ತಿದ್ದಾರೆ. ಶೀಘ್ರ ಹಾಗೂ ಅಗ್ಗದ ಚಿಕಿತ್ಸೆಗೆ ದೇಶ ಹೆಸರಾಗಿದೆ. ವೈದ್ಯರು ರೋಗಿಗೆ ಶಸ್ತ್ರಚಿಕಿತ್ಸೆ ನಡೆಸಿದ ಬಳಿಕ, ಚಿಕಿತ್ಸೆ ನೀಡಿದ ನಂತರ ಅವರ ಆರೋಗ್ಯ ಸುಧಾರಣೆಯ ಜವಾಬ್ದಾರಿ ಶುಶ್ರೂಷಕರ ಮೇಲೆ ಇರುತ್ತದೆ. ಕೋವಿಡ್ ಸಂದರ್ಭದಲ್ಲಿ ಶುಶ್ರೂಷಕರು ತಮ್ಮ ಜೀವವನ್ನು ಒತ್ತೆಯಿಟ್ಟು, ರೋಗಿಗಳ ಆರೈಕೆ ಮಾಡಿದರು. ವೈದ್ಯಕೀಯ ಸೇವೆ ಇನ್ನಷ್ಟು ಸುಧಾರಿಸಲು ಶುಶ್ರೂಷಕರಿಗೆ ವೈದ್ಯಕೀಯ ಶಿಕ್ಷಣ ಸಂಸ್ಥೆಗಳು ಗುಣಮಟ್ಟದ ಶಿಕ್ಷಣ ಮತ್ತು ತರಬೇತಿ ನೀಡಬೇಕು’ ಎಂದು ಹೇಳಿದರು.

ಕರ್ನಾಟಕ ಸ್ಟೇಟ್ ನರ್ಸಿಂಗ್ ಕೌನ್ಸಿಲ್‌ನ ಕುಲಸಚಿವ ಒ. ಪುಸನ್ನ ಕುಮಾರ್, ‘ಶುಶ್ರೂಷಕರಿಂದ ರೋಗಿಗಳಿಗೆ ಉತ್ಕೃಷ್ಟ ಸೇವೆ ದೊರೆಯಬೇಕು. ಭಾವಿ ಶುಶ್ರೂಷಕರಿಗೆ ಸೂಕ್ತ ಶಿಕ್ಷಣ ಮತ್ತು ತರಬೇತಿ ನೀಡಬೇಕು’ ಎಂದರು.

ಕೆಂಪೇಗೌಡ ವೈದ್ಯಕೀಯ ಮಹಾವಿದ್ಯಾಲಯದ ಅಧ್ಯಕ್ಷ ಡಾ.ಡಿ.ಕೆ. ರಮೇಶ್, ‘ವೈದ್ಯಕೀಯ ಕ್ಷೇತ್ರದಲ್ಲಿ ನಡೆಯುವ ಆವಿಷ್ಕಾರ ಮತ್ತು ತಂತ್ರಜ್ಞಾನಗಳ ಅರಿವು ಶುಶ್ರೂಷಕರಿಗೆ ಇರಬೇಕು’ ಎಂದು ತಿಳಿಸಿದರು.

ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಹನುಮಂತರಾಯಪ್ಪ, ‘ಶುಶ್ರೂಷಕರಲ್ಲಿ ತಾಳ್ಮೆ, ಮಾನವೀಯ ಗುಣಗಳು ಇರಬೇಕು’ ಎಂದು ಕಿವಿಮಾತು ಹೇಳಿದರು.

ಆಂಗ್ಲೊ ಇಂಡಿಯನ್ ಯುನಿಟಿ ಸೆಂಟರ್ ಅಧ್ಯಕ್ಷ ಐವಾನ್ ನಿಗ್ಲಿ, ಕೆಂಪೇಗೌಡ ನರ್ಸಿಂಗ್ ಸಂಸ್ಥೆಯ ಪ್ರಾಂಶುಪಾಲೆ ಡಾ.ವಿ.ಟಿ. ಲಕ್ಷ್ಮಮ್ಮ, ಕೆಐಎನ್ ಸಂಸ್ಥೆಯ ಅಧ್ಯಕ್ಷ ಡಾ.ಎಂ.ಬಿ. ಮಂಜೇಗೌಡ, ಆಂಗ್ಲೊ ಇಂಡಿಯನ್ ಯುನಿಟಿ ಸೆಂಟರ್‌ನ ಉಪಾಧ್ಯಕ್ಷ ಲೂಸಿಯ ಎಡ್ವರ್ಡ್, ಗಾರ್ಷಮ್ ಪ್ರತಿಷ್ಠಾನದ ಅಧ್ಯಕ್ಷ ಜಿನ್ಸ್ ಪೌಲ್ ಇದ್ದರು.

ಧಾರವಾಡ, ಗದಗ, ಕೊಪ್ಪಳ ಸೇರಿ ವಿವಿಧೆಡೆ ಮುಂದುವರಿದ ವರ್ಷಧಾರೆ

ಮಳೆ: ಸಿಡಿಲಿಗೆ ಯುವಕ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಧಾರವಾಡ, ಬೆಂಗಳೂರು ಗ್ರಾಮಾಂತರ ಮತ್ತು ಕೊಪ್ಪಳ, ಗದಗ ಜಿಲ್ಲೆಯ ವಿವಿಧೆಡೆ ಶುಕ್ರವಾರ ಉತ್ತಮ ಮಳೆಯಾಗಿದೆ. ಕೊಪ್ಪಳದಲ್ಲಿ ಸಿಡಿಲು ಬಡಿದು ಯುವಕ ಮೃತಪಟ್ಟಿದ್ದಾನೆ.

ಕೊಪ್ಪಳ ಜಿಲ್ಲೆ ಕುಕನೂರು ತಾಲ್ಲೂಕಿನ ವೀರಾಪುರ ಗ್ರಾಮದ ಮಲ್ಲೇಶ್ ಗಾಳೆಪ್ಪ ಹೊಸಮನಿ (26) ಹೊಲದಲ್ಲಿ ಕೆಲಸ ಮಾಡುವಾಗ, ಸಿಡಿಲು ಬಡಿದು ಮೃತಪಟ್ಟಿದ್ದಾರೆ. ಅಳವಂಡಿ ಸಮೀಪದ ಹನುಕುಂಟಿ ಗ್ರಾಮದ ರೈತ ಈರಪ್ಪ ಗೋಣೇಪ್ಪ ಅವರಿಗೆ ಸೇರಿದ ಎತ್ತು ಸಿಡಿಲು ಬಡಿದು ಮೃತಪಟ್ಟಿದೆ.

ಹುಬ್ಬಳ್ಳಿ ವರದಿ: ಕಿತ್ತೂರು ಕರ್ನಾಟಕ ಭಾಗದಲ್ಲಿ ಧಾರವಾಡ, ಹೊಸಪೇಟೆ, ಗದಗ ಜಿಲ್ಲೆಯ ವಿವಿಧೆಡೆ ಉತ್ತಮ ಮಳೆ ಸುರಿಯಿತು.

ಲಕ್ಷ್ಮೇಶ್ವರದಲ್ಲಿ ಬಿರುಗಾಳಿಗೆ ಕೆಲ ಮನೆಗಳ ಚಾವಣಿ ಶೀಟುಗಳು ಹಾರಿಹೋಗಿವೆ. ಲಕ್ಷ್ಮೇಶ್ವರ ತಾಲ್ಲೂಕಿನ ಕೊಂಡಿಕೊಪ್ಪದಲ್ಲಿ ಆಲಿಕಲ್ಲು ಮಳೆಯಾಗಿದೆ. ವಿಜಯನಗರ ಜಿಲ್ಲೆ ಅರಸೀಕೆರೆ ಹೋಬಳಿಯ ಗಡಿಭಾಗದಲ್ಲಿ ಗುರುವಾರ ರಾತ್ರಿ ಸುರಿದ ಧಾರಾಕಾರ ಆಲಿಕಲ್ಲು ಮಳೆಗೆ ಕಟಾವು ಹಂತದಲ್ಲಿದ್ದ ಭತ್ತದ ಬೆಳೆಗಳು ನೆಲಕಚ್ಚಿದೆ.

ಬದ್ರ ಅಚ್ಚುಕಟ್ಟು ಪ್ರದೇಶಕ್ಕೆ ಸೇರಿದ ಹಿರೇಮೆಗಳಗೆರೆ, ಲಕ್ಷ್ಮೀಪುರ, ಸಿಂಗ್ರಿಹಳ್ಳಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಕಟಾವು ಹಂತದಲ್ಲಿದ್ದ ಭತ್ತದ ಫಸಲು ಚಾಪೆ ಹಾಸಾಗಿದೆ. ಗಾಳಿಗೆ ವಡ್ಡಿನಹಳ್ಳಿ ಗ್ರಾಮದ ಸೀತಮ್ಮ ಎನ್ನುವವರ ಮನೆ ಚಾವಣಿ ಹಾರಿದ್ದು, ದಿನ ಬಳಕೆಯ ಸಾಮಗ್ರಿಗಳು ಹಾನಿಯಾಗಿವೆ.

ಉರುಳಿ ಬಿದ್ದ ಮರಗಳು- (ಆನೇಕಲ್ ವರದಿ): ತಾಲ್ಲೂಕಿನ ಇಂಡ್ಲವಾಡಿ ಸುತ್ತಮುತ್ತ ಒಂದು ತಾಸಿಗೂ ಸುರಿದ ಬಿರುಗಾಳಿ ಸಹಿತ ಭಾರಿ ಮಳೆಗೆ ಅನೇಕ ದೊಡ್ಡ ಮರಗಳು ಬುಡಸಮೇತ ಉರುಳಿ ಬಿದ್ದಿವೆ.

ಇಂಡ್ಲವಾಡಿಪುರದಲ್ಲಿ ದನಗಳ ಶೆಡ್ ಮೇಲೆ ಭಾರಿ ಗಾತ್ರದ ಹುಣಸೆ ಮರವೊಂದು ಬುಡಸಮೇತ ಬಿದ್ದಿದೆ. ಕೊಟ್ಟಿಗೆಯಲ್ಲಿ ಕಟ್ಟಲಾಗಿದ್ದ ದನಗಳಿಗೆ ಗಾಯಗಳಾಗಿವೆ. ಹಲಸಿನ ಮರವೊಂದು ಮನೆಯ ಮೇಲೆ ಉರುಳಿ ಬಿದ್ದಿದೆ. ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ. ರೈತರ ಗ್ರೀನ್ ಹೌಸ್‌ಗಳು ನೆಲಕಚ್ಚಿವೆ.



ಆನೇಕಲ್ ತಾಲ್ಲೂಕಿನ ಇಂಡ್ಲವಾಡಿಪುರದಲ್ಲಿ ರಸ್ತೆ ಅಡ್ಡಲಾಗಿ ಬಿದ್ದಿರುವ ಬೃಹತ್ ಮರ

2 ದಿನ ಬಿರುಗಾಳಿ ಸಹಿತ ಮಳೆ ಸಾಧ್ಯತೆ

ಬೆಂಗಳೂರು: ರಾಜ್ಯದ ಹಲವು ಜಿಲ್ಲೆಗಳಲ್ಲಿ ಶನಿವಾರ, ಭಾನುವಾರ ಬಿರುಗಾಳಿ ಸಹಿತ ಧಾರಾಕಾರ ಮಳೆಯಾಗುವ ಸಾಧ್ಯತೆಯಿದ್ದು, ಗಾಳಿಯು ಪ್ರತಿಗಂಟೆಗೆ 30ರಿಂದ 40 ಕಿ.ಮೀ ವೇಗದಲ್ಲಿ ಬೀಸಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಕರಾವಳಿ ಭಾಗದ ಎಲ್ಲ ಜಿಲ್ಲೆಗಳು, ದಕ್ಷಿಣ ಒಳನಾಡಿನ ಬೆಂಗಳೂರು ನಗರ ಮತ್ತು ಗ್ರಾಮಾಂತರ, ಚಾಮರಾಜನಗರ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ಹಾಸನ, ಕೊಡಗು, ಮಂಡ್ಯ, ಮೈಸೂರು, ರಾಮನಗರ, ಶಿವಮೊಗ್ಗ ಜಿಲ್ಲೆಗಳಲ್ಲಿ ಭಾರಿ ಮಳೆಯಾಗಲಿದೆ. ಉತ್ತರ ಒಳನಾಡಿನ ಬೆಳಗಾವಿ, ಧಾರವಾಡ, ಗದಗ, ಹಾವೇರಿಯ ಅಲ್ಲಲ್ಲಿ ಮಳೆ ಆಗಲಿದೆ ಎಂದು ಸೂಚನೆ ನೀಡಿದೆ.

ಮೋಚಾ: ಪಶ್ಚಿಮ ಬಂಗಾಳದಲ್ಲಿ ಮುನ್ನೆಚ್ಚರಿಕೆ

ಕೋಲ್ಕತ್ತ (ಪಿಟಿಐ): ಮೋಚಾ ಚಂಡಮಾರುತದ ಸಂಭವನೀಯ ಹಾನಿ ತಗ್ಗಿಸಲು ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಪಶ್ಚಿಮ ಬಂಗಾಳ ಸರ್ಕಾರ ತೆಗೆದುಕೊಂಡಿದೆ. ಅಲ್ಲದೆ, ಕರಾವಳಿ ತೀರದ ಮತ್ತು ತಗ್ಗುಪ್ರದೇಶಗಳ ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗಿದೆ ಎಂದು ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ.

ಶುಕ್ರವಾರದಿಂದ ಮೂರು ದಿನ ಸಮುದ್ರಕ್ಕೆ ಇಳಿಯದಂತೆ ಮೀನುಗಾರರು ಮತ್ತು ಪ್ರವಾಸಿಗರಿಗೆ ಎಚ್ಚರಿಕೆ ನೀಡಲಾಗಿದೆ.

ಪಶ್ಚಿಮ ಬಂಗಾಳದ ಸುಂದರಬನದ ಕೆಲವು ಪ್ರದೇಶಗಳು, ದಕ್ಷಿಣ 24 ಪರಗಣ ಜಿಲ್ಲೆ ಮತ್ತು ಪುರ್ಬಾ ಮೇದಿನಿಪುರದ ಕರಾವಳಿಯ ತಗ್ಗು ಪ್ರದೇಶಗಳಿಂದ ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗಿದೆ. ಸುರಕ್ಷಿತ ಸ್ಥಳದಲ್ಲಿ ತೆರೆದಿರುವ ಆಸರೆ ಕೇಂದ್ರಗಳಿಗೆ ಕುಡಿಯುವ ನೀರು, ಹಾಲಿನ ಪುಡಿ, ಆಹಾರ ಮತ್ತು ಔಷಧಗಳನ್ನು ಪೂರೈಸಲಾಗಿದೆ. ಅಲ್ಲದೆ, ಈ ಪ್ರದೇಶಗಳಿಗೆ ಸಾಕಷ್ಟು ಪರಿಹಾರ ಸಾಮಗ್ರಿಗಳನ್ನು ರವಾನಿಸಲಾಗಿದೆ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

ಹೆಚ್ಚು ಪ್ರವಾಸಿಗರು ಭೇಟಿ ನೀಡುವ ದಿಘಾ, ಶಂಕರಾಪುರ, ಬಖ್ಖಾಳಿ ಪ್ರದೇಶಗಳಿಗೆ ಈಗಾಗಲೇ ವಿಪತ್ತು ನಿರ್ವಹಣಾ ತಂಡಗಳು, ಸ್ವಯಂ ಸೇವಕರು ತಲುಪಿದ್ದಾರೆ. ರಾಷ್ಟ್ರೀಯ ವಿಪತ್ತು ಸ್ಪಂದನಾ ಪಡೆಯ (ಎನ್‌ಡಿಆರ್‌ಎಫ್) ಶೋಧನೆ ಮತ್ತು ರಕ್ಷಣೆಯ ಎಂಟು ತುಕಡಿಗಳು ಗುರುವಾರ ರಾತ್ರಿಯೇ ತಲುಪಿವೆ ಎಂದು ಅವರು ತಿಳಿಸಿದ್ದಾರೆ.

ಮೋಚಾ ಚಂಡಮಾರುತವು ಭಾನುವಾರದ ವೇಳೆಗೆ ಬಾಂಗ್ಲಾದೇಶ-ಮ್ಯಾನ್ಮಾರ್ ಗಡಿಯನ್ನೂ ಅಪ್ಪಳಿಸುವ ನಿರೀಕ್ಷೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಮುನ್ಸೂಚನೆ ನೀಡಿದೆ.

‘ಎರಡಕ್ಕಿಂತ ಹೆಚ್ಚು ಮಕ್ಕಳಿರುವ ಉದ್ಯೋಗಿಗೆ ವೇತನ ಬಡ್ತಿ’

ಸಿಕ್ಕಿಂ ಸರ್ಕಾರದ ಯೋಜನೆ

ಗ್ಯಾಂಗ್ಟಕ್ (ಪಿಟಿಐ): ಎರಡು ಅಥವಾ ಮೂರು ಮಕ್ಕಳಿರುವ ಸರ್ಕಾರಿ ಉದ್ಯೋಗಿಗೆ ಮುಂಗಡ ಮತ್ತು ಹೆಚ್ಚುವರಿ ವೇತನ ಬಡ್ತಿ ನೀಡಲು ಸಿಕ್ಕಿಂ ಸರ್ಕಾರ ನಿರ್ಧರಿಸಿದೆ. ಇಲ್ಲಿನ ಸ್ಥಳೀಯ ಬುಡಕಟ್ಟು ಸಮುದಾಯದಗಳ ಜನಸಂಖ್ಯೆ ಹೆಚ್ಚಳವನ್ನು ಉತ್ತೇಜಿಸುವ ಸಲುವಾಗಿ ಸರ್ಕಾರ ಈ ಯೋಜನೆಯನ್ನು ರೂಪಿಸಿದೆ.

‘ಈ ಯೋಜನೆಯು ಇದೇ ಜನವರಿ 1ರಿಂದ ಪೂರ್ವಾನ್ವಯವಾಗಲಿದೆ. ಉದ್ಯೋಗಿಯ ಎರಡನೇ ಅಥವಾ ಮೂರನೇ ಮಗುವು 2023ರ ಜನವರಿ 1ರಂದು ಅಥವಾ ಇದರ ನಂತರ ಜನಿಸಿರಬೇಕು. ಜೊತೆಗೆ ಮಕ್ಕಳನ್ನು ದತ್ತು ಪಡೆದಿದ್ದರೆ ಅಂಥವರಿಗೆ ಈ ಯೋಜನೆ ಅನ್ವಯವಾಗುವುದಿಲ್ಲ’ ಎಂದು ಸಿಬ್ಬಂದಿ ಖಾತೆ ಸಚಿವಾಲಯವು ಮೇ 10ರಂದು ಸುತ್ತೋಲೆ ಹೊರಡಿಸಿದೆ.

‘ಸಿಕ್ಕಿಂ ನಿವಾಸಿ ಎಂದು ದೃಢಪಡಿಸುವ ಪ್ರಮಾಣಪತ್ರ ಹೊಂದಿರುವ ಉದ್ಯೋಗಿಗೆ ಮಾತ್ರ ಈ ಯೋಜನೆ ಅನ್ವಯವಾಗಲಿದೆ. ಮೂವರು ಮಕ್ಕಳಿರುವ ಉದ್ಯೋಗಿಗೆ ಒಂದು ವೇತನ ಬಡ್ತಿ ನೀಡಲಾಗುವುದು. ದಂಪತಿಯಲ್ಲಿ ಯಾರಾದರೂ ಒಬ್ಬರು ಈ ಯೋಜನೆ ಅಡಿಯಲ್ಲಿ ಅರ್ಜಿ ಸಲ್ಲಿಸಬಹುದು’ ಎಂದು ಸಚಿವಾಲಯ ತಿಳಿಸಿದೆ.

ಮಣಿಪುರ: ಕುಕಿ ಜನರಿಗೆ ಪ್ರತ್ಯೇಕ ಆಡಳಿತ ವ್ಯವಸ್ಥೆ- ಒತ್ತಾಯ

ಪ್ರಜಾವಾಣಿ ವಾರ್ತೆ

ಗುವಾಹಟಿ: ಮಣಿಪುರದಲ್ಲಿ ಹಿಂಸಾಚಾರ ಇನ್ನೂ ಶಮನಗೊಂಡಿಲ್ಲ. ಈ ನಡುವೆಯೇ ಚಿನ್, ಕುಕಿ, ಮಿಜೊ ಮತ್ತು ಜೋಮಿ ಬುಡಕಟ್ಟು ಜನರು ಹೆಚ್ಚಿರುವ ಪ್ರದೇಶಗಳಲ್ಲಿ ಪ್ರತ್ಯೇಕ ಆಡಳಿತ ವ್ಯವಸ್ಥೆ ರೂಪಿಸುವಂತೆ ಕುಕಿ ಸಮುದಾಯ ಪ್ರತಿನಿಧಿಸುವ 10 ಶಾಸಕರು ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಬಹುಸಂಖ್ಯಾತ ಮೈತೇಯಿ ಸಮುದಾಯ ದಿಂದಲೇ ಹಿಂಸಾಚಾರ ನಡೆದಿದೆ. ಇದಕ್ಕೆ ಬಿಜೆಪಿ ಸರ್ಕಾರ ಮೌನವಾಗಿ ಬೆಂಬಲ ನೀಡುತ್ತಿದೆ ಎಂದು ಶಾಸಕರು ಜಂಟಿ ಹೇಳಿಕೆಯಲ್ಲಿ ದೂರಿದ್ದಾರೆ. ಇದಕ್ಕೆ ಬಿಜೆಪಿಯ 4 ಶಾಸಕರೂ ಅಂಕಿತ ಹಾಕಿದ್ದಾರೆ.

ಸಂವಿಧಾನಾತ್ಮಕ ನೆಲೆಗಟ್ಟಿನಲ್ಲಿ ಕೇಂದ್ರ ಸರ್ಕಾರ ಪ್ರತ್ಯೇಕ ಆಡಳಿತ ವ್ಯವಸ್ಥೆ ಜಾರಿಗೆ ಕ್ರಮ-ವಹಿಸಬೇಕು ಎಂದಿದ್ದಾರೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ಯಾರ ಯೋಗ್ಯತೆಯನ್ನೂ ಅವರ ಲೋಪಗಳ ಆಧಾರದಿಂದ ಅಳೆಯಬಾರದು.

-ಸ್ವಾಮಿ ವಿವೇಕಾನಂದ

ಕೇಂದ್ರದ ಹಸ್ತಕ್ಷೇಪ: ಒಕ್ಕೂಟ ವ್ಯವಸ್ಥೆಗೆ ಬಲ ತುಂಬಿದ 'ಸುಪ್ರೀಂ' ತೀರ್ಪುಗಳು

ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ.ಚಂದ್ರಚೂಡ್ ನೇತೃತ್ವದ ಎರಡು ಸಂವಿಧಾನ ಪೀಠಗಳು ನೀಡಿರುವ ಎರಡು ತೀರ್ಪುಗಳು ದೇಶದ ಒಕ್ಕೂಟ ವ್ಯವಸ್ಥೆಗೆ ಸಂಬಂಧಿಸಿದಂತೆ ಅತ್ಯಂತ ಮಹತ್ವದ್ದಾಗಿವೆ. ಮಹಾರಾಷ್ಟ್ರದಲ್ಲಿ ಅಧಿಕಾರದಲ್ಲಿದ್ದ ಮಹಾ ವಿಕಾಸ ಆಘಾಡಿ ನೇತೃತ್ವದ ಸರ್ಕಾರದ ಪತನ ಮತ್ತು ಶಿವಸೇನಾದ ಇಬ್ಭಾಗಕ್ಕೆ ಸಂಬಂಧಿಸಿ ನೀಡಲಾದ ತೀರ್ಪು, ಆಗ ಮುಖ್ಯಮಂತ್ರಿಯಾಗಿದ್ದ ಉದ್ಧವ್ ಠಾಕ್ರೆ ಅವರಿಗೆ ಸಿಕ್ಕ ನೈತಿಕ ಜಯ. ಉದ್ಧವ್ ನೇತೃತ್ವದ ಸರ್ಕಾರ ಪತನವಾಗಿ ಏಕನಾಥ ಶಿಂದೆ ನೇತೃತ್ವದ ಸರ್ಕಾರ ರಚನೆಯಾಗುವ ಪ್ರಕ್ರಿಯೆಯಲ್ಲಿ ರಾಜ್ಯಪಾಲ ಭಗತ್ ಸಿಂಗ್ ಕೋಶಿಯಾರಿ ಮತ್ತು ಸ್ಪೀಕರ್ ರಾಹುಲ್ ನಾರ್ವೇಕರ್ ಅವರು ನಡೆದುಕೊಂಡ ರೀತಿಯು ಲೋಪದಿಂದ ಕೂಡಿತ್ತು ಎಂದು ನ್ಯಾಯಪೀಠವು ಸ್ಪಷ್ಟವಾಗಿ ಮತ್ತು ದೃಢವಾಗಿ ಹೇಳಿದೆ. ರಾಜಕೀಯ ಪಕ್ಷವೊಂದರ ಆಂತರಿಕ ವಿಚಾರಗಳು, ರಾಜಕೀಯ ಪಕ್ಷಗಳ ನಡುವಣ ತಿಕ್ಕಾಟಗಳಲ್ಲಿ ರಾಜ್ಯಪಾಲರು ಮಧ್ಯಪ್ರವೇಶಿಸುವಂತಿಲ್ಲ, ಇದಕ್ಕೆ ಸಂಬಂಧಿಸಿ ಸಾಂವಿಧಾನಿಕ ಅವಕಾಶ ಅಥವಾ ಕಾನೂನು ಇಲ್ಲ, ಹಾಗಾಗಿ, ರಾಜ್ಯಪಾಲರ ನಡವಳಿಕೆ ಅಸಾಂವಿಧಾನಿಕ ಎಂದು ನ್ಯಾಯಾಲಯ ಹೇಳಿದಂತಾಗಿದೆ. ಹಾಗಿದ್ದರೂ ಶಿಂದೆ ನೇತೃತ್ವದ ಶಿವಸೇನಾ ಮತ್ತು ಬಿಜೆಪಿ ಮೈತ್ರಿಕೂಟದ ಸರ್ಕಾರವು ಮುಂದುವರಿಯಬಹುದು ಎಂದೂ ಹೇಳಿದೆ. ಈ ತೀರ್ಪಿನಿಂದಾಗಿ ಮಹಾರಾಷ್ಟ್ರದ ಈಗಿನ ಸರ್ಕಾರದ ಸ್ಥಿತಿಯಲ್ಲಿ ಯಾವುದೇ ಬದಲಾವಣೆ ಆಗುವುದಿಲ್ಲ. ಆದರೆ, ತೀರ್ಪಿನಲ್ಲಿ ಹೇಳಿದ ಅಂಶಗಳು, ಮುಂದೆ ಇಂತಹ ಸನ್ನಿವೇಶ ಸೃಷ್ಟಿಯಾದಾಗ ರಾಜ್ಯಪಾಲರು ಮತ್ತು ಸ್ಪೀಕರ್ ಯಾವ ರೀತಿ ನಡೆದುಕೊಳ್ಳಬೇಕು ಎಂಬುದಕ್ಕೆ ಮಾರ್ಗಸೂಚಿಗಳಾಗಿವೆ.



ರಾಜ್ಯಪಾಲರನ್ನು ಬಳಸಿಕೊಂಡು ಚುನಾಯಿತ ಸರ್ಕಾರವನ್ನು ದುರ್ಬಲಗೊಳಿಸುವ ಪರಿಪಾಟ ಸರಿಯಲ್ಲ ಎಂಬುದನ್ನು, ಸಂದೇಹಕ್ಕೆ ಎಡೆ ಇಲ್ಲದಂತೆ ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿದೆ

ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಆಡಳಿತದ ನಿಜವಾದ ಅಧಿಕಾರವು ಚುನಾಯಿತ ಸರ್ಕಾರದ ಕೈಯಲ್ಲಿಯೇ ಇರಬೇಕು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡಕ್ಕೂ ಶಾಸನ ರೂಪಿಸುವ ಅಧಿಕಾರ ಇರುವ ವಿಚಾರಗಳಲ್ಲಿ ಕೇಂದ್ರದ ಕಾರ್ಯಕಾರಿ ಅಧಿಕಾರವು ಸೀಮಿತವಾಗಿರಬೇಕು. ಇಲ್ಲದೇಹೋದರೆ ರಾಜ್ಯಗಳ ಅಧಿಕಾರವೂ ಕೇಂದ್ರದ ಕೈಸೇರಿಬಿಡುವ ಅಪಾಯ ಇದೆ. ಹೀಗಾದರೆ, ಒಕ್ಕೂಟ ವ್ಯವಸ್ಥೆ ಮತ್ತು ಪ್ರಾತಿನಿಧ್ಯ ಆಧಾರಿತ ಪ್ರಜಾತಂತ್ರವು ಕಳೆದುಹೋಗುತ್ತದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ದೆಹಲಿಯ ಸೇವಾ ವಿಷಯಗಳ ಆಡಳಿತಾತ್ಮಕ ನಿಯಂತ್ರಣ ಕುರಿತು ಕೇಂದ್ರ ಸರ್ಕಾರ ಮತ್ತು ದೆಹಲಿ ಸರ್ಕಾರದ ನಡುವೆ ಸೃಷ್ಟಿಯಾಗಿದ್ದ ವಿವಾದದ ವಿಚಾರಣೆ ನಡೆಸಿದ ಸಂವಿಧಾನ ಪೀಠವು ಹೀಗೆ ಹೇಳಿದೆ. ಲೆಫ್ಟಿನೆಂಟ್ ಗವರ್ನರ್‌ಗೆ ಇರುವ ಅಧಿಕಾರದ ಕುರಿತಂತೆ ದೆಹಲಿ ಸರ್ಕಾರ ಮತ್ತು ಕೇಂದ್ರ ಸರ್ಕಾರದ ನಡುವೆ ನಿರಂತರವಾಗಿ ಸಂಘರ್ಷ ನಡೆದುಬಂದಿದೆ. ಸುಪ್ರೀಂ ಕೋರ್ಟ್‌ನ ಈಗಿನ ತೀರ್ಪು ಈ ಕಿತ್ತಾಟಕ್ಕೆ ಕೊನೆ ಹಾಡಬಲ್ಲದು. ದೆಹಲಿಯು ರಾಷ್ಟ್ರದ ರಾಜಧಾನಿ ಆಗಿರುವುದರಿಂದ ಅಧಿಕಾರಿಗಳನ್ನು ವರ್ಗಾಯಿಸುವ ಅಧಿಕಾರವು ತನ್ನಲ್ಲಿಯೇ ಇರಬೇಕು ಎಂದು ಕೇಂದ್ರ ಸರ್ಕಾರವು ವಾದಿಸಿತ್ತು. ಆದರೆ, ಈ ವಾದವನ್ನು ನ್ಯಾಯಾಲಯವು ಒಪ್ಪಿಲ್ಲ. ಪ್ರಜಾಸತ್ತಾತ್ಮಕವಾಗಿ ಚುನಾಯಿತವಾದ ಸರ್ಕಾರಕ್ಕೆ ಅಧಿಕಾರಿಗಳನ್ನು ನಿಯಂತ್ರಿಸುವ ಅಧಿಕಾರ ಇಲ್ಲದೇಹೋದರೆ, ಉತ್ತರದಾಯಿತ್ವದ ತತ್ವವೇ ಅರ್ಥಹೀನವಾಗುತ್ತದೆ ಎಂದು ಕೋರ್ಟ್ ಹೇಳಿದೆ. ಅಧಿಕಾರವೆಲ್ಲವೂ ಕೇಂದ್ರ ಸರ್ಕಾರದ ಬಳಿಯೇ ಕೇಂದ್ರೀಕೃತವಾಗಬೇಕು ಎಂಬ ವಾದವೇ ಪ್ರಜಾಸತ್ತಾತ್ಮಕ ವ್ಯವಸ್ಥೆಗೆ ಮಾರಕ. ಸುಪ್ರೀಂ ಕೋರ್ಟ್ ನೀಡಿರುವ ಎರಡೂ ತೀರ್ಪುಗಳು ರಾಜ್ಯಪಾಲರು ಮತ್ತು ಲೆಫ್ಟಿನೆಂಟ್ ಗವರ್ನರ್‌ಗಳಿಗೆ ಸಂಬಂಧಿಸಿದ್ದಾಗಿವೆ. ರಾಜ್ಯಗಳಲ್ಲಿ ಕೇಂದ್ರದ ಪ್ರತಿನಿಧಿಯಾಗಿರುವ ರಾಜ್ಯಪಾಲರು ಮತ್ತು ಲೆಫ್ಟಿನೆಂಟ್ ಗವರ್ನರ್‌ಗಳು ಕೇಂದ್ರದ ಆಡಳಿತಾರೂಢ ಪಕ್ಷದ ಕೈಗೊಂಬೆಯಂತೆ ವರ್ತಿಸುತ್ತಾರೆ ಎಂಬ ಆರೋಪ ಇತ್ತೀಚಿನ ದಿನಗಳಲ್ಲಿ ಜೋರಾಗಿಯೇ ಕೇಳಿಬರುತ್ತಿದೆ. ಅಂತಹ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್ ನೀಡಿದ ತೀರ್ಪಿಗೆ ಹೆಚ್ಚಿನ ಮಹತ್ವ ಇದೆ. ರಾಜ್ಯಗಳ ಆಡಳಿತದಲ್ಲಿ ಹಸ್ತಕ್ಷೇಪವಾಗುತ್ತಿದೆ ಎಂಬ ಆರೋಪದ ಕುರಿತು ಆಡಳಿತಾರೂಢ ಪಕ್ಷದ ನಾಯಕರು ಮತ್ತು ರಾಜ್ಯಪಾಲರಾಗಿ ಕೆಲಸ ಮಾಡುತ್ತಿರುವವರು ಕೂಡ ಆತ್ಮಾವಲೋಕನ ಮಾಡಿಕೊಳ್ಳುವ ಅಗತ್ಯ ಇದೆ. ರಾಜ್ಯಪಾಲರ ಮೂಲಕವಾಗಲಿ, ಕಾನೂನು ರಚನೆಯ ಮೂಲಕವಾಗಲಿ ಅಥವಾ ಇನ್ನಾವುದೇ ರೀತಿಯಲ್ಲಿ ಆಗಲಿ ರಾಜ್ಯದ ಆಡಳಿತದಲ್ಲಿ ಹಸ್ತಕ್ಷೇಪ ನಡೆಸಲು ಕೇಂದ್ರ ನಡೆಸುವ ಪ್ರಯತ್ನವು ಒಕ್ಕೂಟ ವ್ಯವಸ್ಥೆಯ ಪರಿಕಲ್ಪನೆಗೆ ಕೊಡಲಿ ಪೆಟ್ಟು ಕೊಡುತ್ತದೆ. ಹಾಗೆಯೇ ಚುನಾಯಿತ ಸರ್ಕಾರವೊಂದರ ಅಧಿಕಾರವನ್ನು ಮೊಟಕು ಮಾಡುವ ಯತ್ನ ಕೂಡ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ತರವಲ್ಲ. ದೆಹಲಿ ಸರ್ಕಾರಕ್ಕೆ ಸಂವಿಧಾನದತ್ತವಾಗಿ ದಕ್ಕಿರುವ ಅಧಿಕಾರವನ್ನು ಚಲಾಯಿಸಲು ಕೇಂದ್ರವಾಗಲಿ ಲೆಫ್ಟಿನೆಂಟ್ ಗವರ್ನರ್ ಆಗಲಿ ಅಡ್ಡಿಯಾಗಬಾರದು. ರಾಜ್ಯಪಾಲರನ್ನು ಬಳಸಿಕೊಂಡು ಚುನಾಯಿತ ಸರ್ಕಾರವನ್ನು ದುರ್ಬಲಗೊಳಿಸುವ ಪರಿಪಾಟವು ಸರಿಯಲ್ಲ ಎಂಬುದನ್ನು ಸುಪ್ರೀಂ ಕೋರ್ಟ್ ಸಂದೇಹಕ್ಕೆ ಎಡೆ ಇಲ್ಲದಂತೆ ಹೇಳಿದೆ.

ಪಕ್ಷವು ನಿಭಾಯಿಸಬೇಕಾದ ಎಲ್ಲ ಬಗೆಯ ಸಂಕಷ್ಟಗಳಿಗೂ ಅಗ್ರಗಣ್ಯ ನಾಯಕನೇ ಮುಲಾಮು

ಮೋದಿ ವರ್ಚಸ್ಸು: ಅಷ್ಟೇ ಸಾಕೆ?



ವಿಶ್ಲೇಷಣೆ

ಕೃಷ್ಣ ಪ್ರಸಾದ್

ಬೆಂಗಳೂರಿನವರೇ ಆದ ಇತಿಹಾಸಕಾರ ರಾಮಚಂದ್ರ ಗುಹಾ ಅವರ ಒಂದು ಮಹತ್ವದ ಪುಸ್ತಕ ಆರು ವರ್ಷಗಳ ಹಿಂದೆ ಓದುಗರ ಕೈ ಸೇರಿತು. ಅದರ ಶೀರ್ಷಿಕೆ: 'ಇಂಡಿಯಾ ಆಫ್ಟರ್ ಗಾಂಧಿ' (ಗಾಂಧಿ ನಂತರ ಭಾರತ). ದೇಶ ಸ್ವಾತಂತ್ರ್ಯ ಪಡೆದ ನಂತರದ ಕಾಲಘಟ್ಟವನ್ನು, ಕುಸಿಯುತ್ತಾ ಬಂದ ಅದರ ಸ್ಥಿತಿಗತಿಯನ್ನು ಗುಹಾ ಅವರು ಸುಮಾರು ಒಂದು ಸಾವಿರ ಪುಟಗಳಲ್ಲಿ ಸಂಕ್ಷಿಪ್ತವಾಗಿ ಚಿತ್ರಿಸಿದ್ದಾರೆ.

'ಮೋದಿ ನಂತರ ಭಾರತ' ಎಂಬ ಪುಸ್ತಕ ಬರೆಯಲು ಇನ್ನೂ ಸಮಯವಿದೆ. ಆದರೆ ಕರ್ನಾಟಕ ವಿಧಾನಸಭಾ ಚುನಾವಣೆಯ ಫಲಿತಾಂಶ ಹೊರಬೀಳುವ ಈ ದಿನ (ಮೇ 13) ಪ್ರಧಾನಿ ನರೇಂದ್ರ ಮೋದಿ ಅವರನ್ನು ಕುರಿತು ಇನ್ನೊಂದು ಪ್ರಶ್ನೆಯನ್ನು ಕೇಳಬಹುದು: 'ಮೋದಿ ನಂತರ ಬಿಜೆಪಿ ಭವಿಷ್ಯ ಏನು?' ಟೊಳ್ಳು ಪ್ರಚಾರದಿಂದ ಹಿಂದೆ ಸರಿದು ವಸ್ತುನಿಷ್ಠವಾಗಿ ವಿಚಾರ ಮಾಡಿದಾಗ, ಈ ಪ್ರಶ್ನೆಗೆ ಸಿಗುವ ಉತ್ತರ ಅವರ ಪಕ್ಷಕ್ಕಾಗಲಿ, ಕಾರ್ಯಕರ್ತರಿಗಾಗಲಿ, ಮತದಾರರಿಗಾಗಲಿ ಭರವಸೆಯನ್ನು ಉಂಟು ಮಾಡುವಂತೆ ಇರುವುದಿಲ್ಲ.

ಕರ್ನಾಟಕದ ಚುನಾವಣೆಯಲ್ಲಿ ಇಂದು ಬಿಜೆಪಿ ಸೋತರೂ ಗೆದ್ದರೂ ಈ ಪ್ರಶ್ನೆ ಉದ್ಭವಿಸುತ್ತದೆ. ಅಕಸ್ಮಾತ್ ಗೆದ್ದರೆ, ಪಕ್ಷ ಹಾಗೂ ಅದರ ಮಾಧ್ಯಮ ಭಜನಾ ಮಂಡಳಿಯು ಸಹಜವಾಗಿ ಅದಕ್ಕೆ ಮೋದಿಯವರೇ ಕಾರಣ ಎಂದು ಡಂಗೂರ ಬಾರಿಸುವುದು ಗ್ಯಾರಂಟಿ. ಅದು ಸ್ವಲ್ಪ ಮಟ್ಟಿಗೆ ನಿಜ ಕೂಡ. ಕೋಟಿಗಟ್ಟಲೆ ಹಣ ಸುರಿದು, ಮೋದಿ ಅವರು ಊರಿಂದ ಊರಿಗೆ ಹಾರಿ, ಕೈ ಬೀಸಿ, ಕೊಂಚ ಅತಿ ವಿನಮ್ರವಾಗಿ ನಮಸ್ಕರಿಸಿ, ನಿಜವೋ ಸುಳ್ಳೋ ಸುಸ್ತಿಲ್ಲದೆ ಅದೇ ರಾಗ ಹಾಡಿ ಮತ ಕೋರಿದ್ದನ್ನು ಕನ್ನಡಿಗರು ನೋಡಿದ್ದಾರೆ, ಓದಿದ್ದಾರೆ, ಕೇಳಿದ್ದಾರೆ.

ಶಾಲೆ, ಕಾಲೇಜು ತರಗತಿಗಳಿಗೆ ಚಕ್ಕರ್ ಹೊಡೆಯುವ ಹುಡುಗರು ಹೇಗಾದರೂ ಪಾಸಾಗಬೇಕೆಂದು ಪರೀಕ್ಷೆ ಸಮಯದಲ್ಲಿ ಹೇಗೆ ತಿಣುಕಾಡುತ್ತಾರೋ ಅಂತಹುದೇ ಸ್ಥಿತಿ ಮೋದಿಯವರದ್ದಾಗಿತ್ತು ಎಂದು ಹೇಳಬಹುದು. ಪ್ರವಾಹ ಹಾಗೂ ಕೋವಿಡ್‌ನಿಂದ ತತ್ತರಿಸುತ್ತಿದ್ದ ರಾಜ್ಯಕ್ಕೆ 2020- 21ರ ಎರಡು ವರ್ಷಗಳ ಅವಧಿಯಲ್ಲಿ ಒಂದೇ ಒಂದು ಬಾರಿ ಭೇಟಿ ನೀಡಿದ್ದ ಮೋದಿ, ಪ್ರಸಕ್ತ ಸಾಲಿನಲ್ಲಿ ನಾಲ್ಕೂವರೆ ತಿಂಗಳ ಅವಧಿಯಲ್ಲೇ 11 ಬಾರಿ ಬಂದಿದ್ದಾರೆ, 25 ಜಿಲ್ಲೆಗಳಲ್ಲಿ ಕಾಣಿಸಿಕೊಂಡಿದ್ದಾರೆ, ಹತ್ತು ದಿನಗಳಲ್ಲಿ 19 ರ‍್ಯಾಲಿಗಳು ಮತ್ತು ಐದು ರೋಡ್ ಶೋಗಳನ್ನು ನಡೆಸಿದ್ದಾರೆ.


ಈ ದೃಷ್ಟಿಕೋನದಿಂದ ನೋಡಿದರೆ, 2023ರ ಕರ್ನಾಟಕ ವಿಧಾನಸಭಾ ಚುನಾವಣೆಯು ಮೋದಿ ಅವರು ಏಕಾಂಗಿಯಾಗಿ ಎದುರಿಸಿದ ಕದನ ಕಣವಾಗಿ ಮಾರ್ಪಟ್ಟಿತ್ತು ಎಂದೇ ಹೇಳಬಹುದು. 2024ರ ಲೋಕಸಭಾ ಚುನಾವಣೆಗೆ ಮುನ್ನ ನಡೆದ ಈ ಚುನಾವಣೆಯನ್ನು ಅವರು ಹಾಗೆ ಪರಿಗಣಿಸಬೇಕಾದುದು ಪ್ರಾಯಶಃ ಅನಿವಾರ್ಯ ಕೂಡ ಆಗಿತ್ತು.

ಕೇಂದ್ರ ಸರ್ಕಾರದ ನೀತಿಗಳಿಂದ ಗಗನಕ್ಕೆ ಏರಿದ ಅಗತ್ಯ ವಸ್ತುಗಳ ಬೆಲೆ, ಬಿಜೆಪಿ ನೇತೃತ್ವದ ಆಡಳಿತಾರೂಢ ರಾಜ್ಯ ಸರ್ಕಾರದ ಕಳಪೆ ಪ್ರದರ್ಶನ, ಶೇ 40ರಷ್ಟು ಲಂಚದ ಆರೋಪ, ಬಿ.ಎಸ್.ಯಡಿಯೂರಪ್ಪ ಅವರನ್ನು ಮೂಲೆಗುಂಪು ಮಾಡಿ ಲಿಂಗಾಯತರಿಗೆ ರವಾನಿಸಿದ ಸಂದೇಶ, ಚುನಾವಣೆಯಲ್ಲಿ ಹಳಬರನ್ನು ಮೂಲೆಗೆ ತಳ್ಳಿ, ಹೊಸ ಮುಖಗಳನ್ನು ಕಣಕ್ಕಿಳಿಸಿದ ನಂತರದ ಸ್ಥಿತಿ ಎಲ್ಲವನ್ನೂ ನಿಭಾಯಿಸಬೇಕಾದ ಪಕ್ಷಕ್ಕೆ ಮೋದಿಯವರ ವರ್ಚಸ್ಸೇ ಮುಲಾಮು.

ಇಂದಿನ ಫಲಿತಾಂಶದಲ್ಲಿ ಬಿಜೆಪಿಯು 113ರ ಮ್ಯಾಜಿಕ್ ಸಂಖ್ಯೆ ತಲುಪಿದರೆ, ನೆಮ್ಮದಿಯ ನಿಟ್ಟುಸಿರನ್ನೇನೋ ಬಿಡಬಹುದು. ಆದರೆ, ಮೋದಿ ಅವರು ಇಲ್ಲದಿದ್ದರೆ ಇಂಥದ್ದೊಂದು ಸಾಧನೆ ಸಾಧ್ಯವಾಗುತ್ತಿತ್ತೇ, ಮುಂದೆ ಅವರಿಲ್ಲದೆ ಅಂತಹ ಗೆಲುವು ದೊರೆಯಬಹುದೇ ಎಂಬಂತಹ ಪ್ರಶ್ನೆಗಳು ಸಂಘ ಪರಿವಾರದ ರೂವಾರಿಗಳನ್ನು ಕಾಡಬೇಕು. ಈ ಮಟ್ಟದ ಅಸಾಧಾರಣ ಶಕ್ತಿ, ದೃಢ ಮನಸ್ಸು, ಮತದಾರರನ್ನು ಸೆಳೆಯುವ ಸಾಮರ್ಥ್ಯ, ಸ್ವೀಕಾರಾರ್ಹತೆ ಬಿಜೆಪಿಯ ಬೇರೆ ಯಾವುದಾದರೂ ರಾಷ್ಟ್ರೀಯ ಅಥವಾ ರಾಜ್ಯ ನಾಯಕನಿಗೆ ಇದೆಯೇ? ಯೋಚಿಸಬೇಕಾದ ಸಂಗತಿ.

ಭಕ್ತರಿಗಂತೂ 'ಮೋದಿ ನಂತರ ಬಿಜೆಪಿ' ಎಂಬ ಪ್ರಶ್ನೆ ಊಹಿಸಲೂ ಅಸಾಧ್ಯ. ಆದರೆ ವಾಟ್ಸ್‌ಆ್ಯಪ್ ಲೋಕದಿಂದ ಹೊರಬಂದರೆ, ವಾಸ್ತವ ಅವರ ಮುಂದೆ ತೆರೆದುಕೊಳ್ಳುತ್ತದೆ. ಮೋದಿ ಅವರಿಗೆ ಈಗ 73 ವರ್ಷ ವಯಸ್ಸು. ಇನ್ನೆಷ್ಟು ವರ್ಷ ಅವರು ಹೀಗೆ ಪ್ರತಿ ರಾಜ್ಯದಲ್ಲಿ ಪ್ರತಿ ಚುನಾವಣೆಯಲ್ಲಿ ಪ್ರತಿ ಅಭ್ಯರ್ಥಿಯ ಪರವಾಗಿ ತಮ್ಮ ದೈಹಿಕ ಶಕ್ತಿ ಮತ್ತು ಸಾಮರ್ಥ್ಯವನ್ನು ಪಣಕ್ಕಿಟ್ಟು ಬಿಜೆಪಿಯನ್ನು ಗೆಲ್ಲಿಸಲು ಸಾಧ್ಯ? ಇದಲ್ಲದೆ, ಚುನಾವಣಾ ಆಯೋಗವೇನಾದರೂ ಎಲ್ಲ ರಾಜ್ಯಗಳಲ್ಲೂ ಏಕಕಾಲಕ್ಕೆ ಚುನಾವಣೆ ನಡೆಸಿದರೆ?

ಇನ್ನೊಂದೆಡೆ, ಬಿಜೆಪಿ ಸೋತರೆ ಅಥವಾ 2008ರಲ್ಲಿ ಯಡಿಯೂರಪ್ಪ ಅವರು ತಂದುಕೊಟ್ಟಷ್ಟು ಸೀಟುಗಳೂ (110) ಸಿಗದಿದ್ದರೆ 'ಮೋದಿ ನಂತರ ಬಿಜೆಪಿ' ಎಂಬ ಪ್ರಶ್ನೆ ಇನ್ನಷ್ಟು ಎದ್ದು ಕಾಣುತ್ತದೆ. ಮೋದಿ ಇಷ್ಟರಮಟ್ಟಿಗೆ ಬೆವರು ಸುರಿಸಿ, ಪ್ರಚಾರ ನಡೆಸಿ, ಸ್ವಪ್ರಶಂಸೆ ಮಾಡಿಕೊಂಡರೂ ಡಬಲ್ ಎಂಜಿನ್ನಿಗೆ ಇರುವ ಶಕ್ತಿ ಇಷ್ಟೆಯೇ ಎಂಬ ಪ್ರಶ್ನೆ ಎದುರಾಗುತ್ತದೆ. ಮೋದಿಯವರ ಕೈಯಲ್ಲೇ ಇಷ್ಟಾದರೆ, ಇನ್ನು ಬಿಜೆಪಿಯ ಮುಂದಿನ ಪೀಳಿಗೆಯ ನೇತಾರರು ಡಬಲ್ ಎಂಜಿನ್ ಬಳಸಿ ಇನ್ನೆಷ್ಟು ಬಲವಾಗಿ ಎಳೆಯಲು ಸಾಧ್ಯ? ಪಕ್ಷವು ನಾಲ್ಕು ಬಾರಿ ಸರ್ಕಾರ ರಚಿಸಿದ ರಾಜ್ಯದಲ್ಲೇ ಹೀಗಾದರೆ, ಬೇರೆ ರಾಜ್ಯಗಳಲ್ಲಿ ಹೇಗೆ?



ಹಾಗೆ ನೋಡಿದರೆ, ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷವು ಬಿಜೆಪಿಗಿಂತ ಒಂದೇ ಒಂದು ಸ್ಥಾನವನ್ನು ಹೆಚ್ಚು ಗೆದ್ದರೂ ಅದರಿಂದ ಮೋದಿಯವರ ವರ್ಚಸ್ಸಿಗೆ ದೊಡ್ಡ ಧಕ್ಕೆ (ಗಮನಾರ್ಹ ಅಂಶವೆಂದರೆ, 2018ರ ಚುನಾವಣೆಯಲ್ಲಿ ಬಿಜೆಪಿ 104 ಹಾಗೂ ಕಾಂಗ್ರೆಸ್ 78 ಸ್ಥಾನಗಳನ್ನು ಪಡೆದಿದ್ದವು). ಪ್ರಧಾನಿಯವರ ಉಪಸ್ಥಿತಿಯನ್ನು, ಅವರ ಸ್ವಯಂಘೋಷಿತ ಸಾಧನೆಗಳನ್ನು ಬಂಡವಾಳವನ್ನಾಗಿ ಇಟ್ಟುಕೊಂಡು ದಕ್ಷಿಣ ಭಾರತದ ಬೇರೆ ರಾಜ್ಯಗಳಲ್ಲಿ ದಾಪುಗಾಲು ಹಾಕಲು ಬಹಳಷ್ಟು ಪ್ರಯತ್ನಿಸುತ್ತಿರುವ ಬಿಜೆಪಿ, ಕರ್ನಾಟಕದಲ್ಲಿ ಇಂದು ಸೋತರೆ ಆ ಕನಸಿಗೆ ಹಿನ್ನಡೆಯಾಗುತ್ತದೆ. ಆಗ, ಮೋದಿ ಅವರ ನಂತರ ಚುನಾವಣೆ ಎದುರಿಸುವುದು ಪಕ್ಷಕ್ಕೆ ಇನ್ನಷ್ಟು ಕಷ್ಟವಾಗುವುದು ಖಚಿತ.

ನಾಗ್ಪುರದವರ ಕಲ್ಪನೆಯಲ್ಲಿ ಮೋದಿ ಅವರು ಸಂಘ ಪರಿವಾರದ ರಾಜಕೀಯ ಮುಖವಾಡ ಅಷ್ಟೆ. ಕೊಟ್ಟ ಜವಾಬ್ದಾರಿಯನ್ನು ನಿಭಾಯಿಸುತ್ತಿದ್ದಾರೆ. ಮುಂದೆ ಮೋದಿ ಅವರ ಬದಲು ಯಾರೇ ಬಂದರೂ ಬಿಜೆಪಿ ಇದೇ ಹಾದಿಯಲ್ಲಿ ಸಾಗುತ್ತದೆ. ಒಂಬತ್ತು ವರ್ಷಗಳ ಮೋದಿ ಅವರ ಆಡಳಿತಾವಧಿಯ ನಂತರವೂ ಈ ಮಾತನ್ನು ಯಾರಾದರೂ ನಂಬಿದರೆ ಅವರು ಇನ್ನು ಏನನ್ನು ಬೇಕಾದರೂ ನಂಬಬಹುದು.

'ಸಬ್ ಕಾ ಸಾಥ್ ಸಬ್ ಕಾ ವಿಕಾಸ್' ಎಂದು ಮೋದಿ ಅವರು ಹೇಳಿದರೆ, ದಲಿತರು ಮತ್ತು ಮುಸಲ್ಮಾನರು ಒಂದಿಷ್ಟು ಮಟ್ಟಿಗಾದರೂ ಅದನ್ನು ನಂಬಬಹುದು. ಆದರೆ, ಅದೇ ಮಾತು ಅಮಿತ್ ಶಾ ಅಥವಾ ಯೋಗಿ ಆದಿತ್ಯನಾಥ ಅವರ ಬಾಯಿಯಿಂದ ಬಂದರೆ? ಯಡಿಯೂರಪ್ಪ ಹಾಗೂ ಬಿ.ಎಲ್.ಸಂತೋಷ್ ಅವರ ನಡುವೆ ಸಂಧಾನ ನಡೆಸುವ ಸಾಮರ್ಥ್ಯ ನಿತಿನ್ ಗಡ್ಕರಿ ಅಥವಾ ರಾಜನಾಥ ಸಿಂಗ್ ಅವರಿಗೆ ಇದೆಯೇ? ಜಾರಿ ನಿರ್ದೇಶನಾಲಯ (ಇ.ಡಿ), ಆದಾಯ ತೆರಿಗೆ ಇಲಾಖೆ (ಐ.ಟಿ) ಮತ್ತು ಜೆಸಿಬಿ ಇಲ್ಲದೆ ಇವರು ಯಾರಾದರೂ ದೇಶದಾದ್ಯಂತ ನಾಯಕರಾಗಿ ಮಿಂಚಬಲ್ಲರೇ?

ಎಲ್ಲಾ ಮೊಟ್ಟೆಗಳನ್ನು ಒಂದೇ ಬುಟ್ಟಿಯಲ್ಲಿ ಹಾಕಿ, ಬಿಜೆಪಿ ಒಂದು ಅಪೂರ್ವ ಸ್ಥಿತಿಯತ್ತ ತೇಲುತ್ತಿದೆ. ಮುಂಬರುವ ದಿನಗಳಲ್ಲಿ ಅದರ ನಾಯಕತ್ವ ಕೊರತೆಯೇ ವಿರೋಧ ಪಕ್ಷಗಳಿಗೆ ಆಶಾಕಿರಣವಾಗುವ ಲಕ್ಷಣಗಳಿವೆ.

ಬರೋಬ್ಬರಿ ತೊಂಬತ್ತು ವರ್ಷಗಳ ಹಿಂದೆ, ಸರ್ವಾಧಿಕಾರಿ ಅಡಾಲ್ಫ್ ಹಿಟ್ಲರ್ ಜರ್ಮನಿಯಲ್ಲಿ ಅಧಿಕಾರಕ್ಕೆ ಬಂದರು. ತಾವು ಸ್ಥಾಪಿಸಿದ ನ್ಯಾಷನಲ್ ಸೋಷಿಯಲಿಸ್ಟ್ ಜರ್ಮನ್ ವರ್ಕರ್ಸ್ ಪಾರ್ಟಿಯು (ಎನ್‌ಎಸ್‌ಡಿಎಪಿ) ಮುಂದಿನ ಒಂದು ಸಾವಿರ ವರ್ಷಗಳ ಕಾಲ ಆಳ್ವಿಕೆ ನಡೆಸುತ್ತದೆ, ಇದು, ದೇಶವನ್ನು ಆಳಿದ ಪ್ರಮುಖ ರೋಮನ್ ಮತ್ತು ಜರ್ಮನ್ ಸಾಮ್ರಾಜ್ಯಗಳ ನಂತರದ ಮೂರನೇ ಸಾಮ್ರಾಜ್ಯವಾಗಿದೆ (ಥರ್ಡ್ ರೈಖ್) ಎಂದು ದುರಹಂಕಾರದಿಂದ ಘೋಷಿಸಿದರು. ಅವರ ಅಂಧ ಭಕ್ತರು ಈ ಮಾತನ್ನು ನಂಬಿದರು. ಅದಾದ ಬರೀ ಹನ್ನೆರಡು ವರ್ಷಗಳಲ್ಲಿ ಹಿಟ್ಲರ್ ಪತನವಾಯಿತು. ಅವರ ಜೊತೆ ಅವರ ಫ್ಯಾಸಿಸ್ಟ್ ಪಕ್ಷವೂ ಮಣ್ಣುಮುಕ್ಕಿತು. 'ಹಿಟ್ಲರ್ ನಂತರ ಎನ್‌ಎಸ್‌ಡಿಎಪಿ' ಪುಸ್ತಕ ಪ್ರಕಟವಾಗಲೇ ಇಲ್ಲ.

ಚುರುಮುರಿ



ಭಾಳ ತಿಳಕೊಂಡೇನಿ...

• ಸಿದ್ದಯ್ಯ ಹಿರೇಮಠ

'ಲೇ ಬಾ ಇಲ್ಲಿ, ಎಲ್ಲಿ ಹೊಂಟಿ? ಈಟ್ ದಿನಾ ಎಲ್ಲಿ ಹೋಗಿದ್ದಿ?' ಓಡೋಡಿ ಹೋಗುತ್ತಿದ್ದ ಶಾಂಬರ ಸಂತ್ಯಾನ್ನ ತಡೆದು ಕೇಳಿದ ಹನುಮಂತ.

'ಇಲೆಕ್ಷನ್ ಪ್ರಚಾರಕ್ಕ ಅಡ್ಯಾಡೇವಿ ಹದಿನೈದ್ ದಿನಾ. ಜೈ ಅಂದಿದ್ದಕ್ಕ ಒಬ್ ಮನಶ್ಯಾಗ ಐದ್ನೂರ್ ರೂಪಾಯ್ ಕೊಟ್ರು. ಅದಕ್ಕ ಹುಬ್ಬಳ್ಳಿ, ಹೆಬ್ಬಳ್ಳಿ, ಧಾರವಾಡ, ಕುಂದಗೋಳ, ಹಾವೇರಿ, ಶಿಗ್ಗಾಂವಿ ಅಂತ ಅಡ್ಯಾಡೇವಿ. ಸಿದ್ರಾಮಯ್ಯ, ಅಮಿತ್ ಶಾ, ಮೋದಿ, ಖರ್ಗೆ, ರಾಹುಲ್, ಎಚ್‌ಡಿಕೆ, ಯಡಿಯೂರಪ್ಪ, ಶಿವರಾಜಕುಮಾರ, ಸುದೀಪ ಬಂದಾಗ ಹೋಗಿದ್ವಿ'.

'ಚೋಟದಿ, ಇಷ್ಟೆಲ್ಲಾ ಕಡೇ ಹೋಗಿಯಲ್ಲ, ನಿನಗ ಏನರ ತಿಳೀತನಲೇ?'

'ಯಾಕ ತಿಳ್ಯಂಗಿಲ್ಲ? ನಾ ಸಣ್ಣಾಂವಿದ್ರೂ ಒಂದಿಷ್ಟ್ ವಿಚಾರಾ ಗೊತ್ತಾಗ್ಯಾವು'.

'ಹಂಗಾರ ಹೇಳಲೇ ಇಷ್ಟೆಲ್ಲಾ ಅಡ್ಡಾಡಿ ಬಂದೀಯಲ್ಲ ಏನೇನ್ ತಿಳಕೊಂಡೀ?'

'ನೋಡಪಾ, ನಾವು ಇನ್‌ಮ್ಯಾಲೆ ಭಾರತ್ ಮಾತಾಕಿ ಜೈ ಅನ್ನದಿದ್ರೂ ಜೈ ಬಜರಂಗ ಬಲಿ ಅಂತ ಹೇಳಬೇಕು. ಹಾವು ಎಲ್ಲೇ ಕಾಣಲಿ, ಅವುನ್ನ ನೆಕ್ಕಬಾರದು. ನೆಕ್ಕಿದ್ರ ಸತ್ತ ಹೋಕ್ಕೇವಿ. ಇದೂವರೆಗೆ ಮೋದಿ ಬರೇ 91 ಸಲಾ ಬ್ಯಾರೇದೌರ ಕಡೆ ಬೈಸ್ಕೊಂಡಾನ. ಇಲೆಕ್ಷನ್ನಿಗೆ ಯಾರ್ ನಿಂತಾರಾ, ಬಿಟ್ಟಾರಾ ಅವನ್ನೆಲ್ಲಾ ನೋಡಬಾರದು. ಒಟ್ಟ ಎಲ್ಲಾರೂ ವೋಟ್ ಹಾಕಿ ಬರಬೇಕು. ಮತ್ತೊಂದ್ ಮುಖ್ಯ ವಿಷಯ ಏನಂದ್ರ, ಅದು ಸ್ವಾಭಿಮಾನ. ಒಂದ್ ಪಾರ್ಟಿ ಬಿಟ್ ಬ್ಯಾರೆ ಪಾರ್ಟಿಗೆ ಹೋದೌರ್ ಕಡೆ ಮಾತ್ರ ಅದು ಜಾಸ್ತಿ ಇರತೈತಿ. ಅವರು ಮರ್ಡರ್ ಮಾಡಿ ಜೈಲಿಗ್ಯರ ಹೋಗಿ ಬಂದಿರಲಿ, ರೊಕ್ಕಾ ತಿಂದು ಛೀ, ಥೂ... ಅನಿಸ್ಕೊಂಡಿರ್ಲಿ. ಆಗ ಅದಕ್ಕ ಧಕ್ಕೆ ಆಗಿರೂದಿಲ್ಲ. ಆದ್ರ ಅವರ ಪಾರ್ಟಿ ಟಿಕೆಟ್ ಕೊಡಲಿಲ್ಲಾ ಅಂತಂದ್ರ ಅವರ ಸ್ವಾಭಿಮಾನಕ್ಕ ಧಕ್ಕೆ ಆಗಿರತ್ತ. ಕಡೇದ್ದು ಭಾಳ ಇಂಪಾರ್ಟೆಂಟು ಕೇಳು'.

'ಯಾರು ಎಷ್ಟರ ಹೇಳ್ಲಿ, ಹೆಚ್ಚು ಜನ ರೊಕ್ಕಾ ತೊಗೊಂಡ ಮತದಾನ ಮಾಡ್ತಾರ. ರೊಕ್ಕಾ ಕೊಡಲಿಲ್ಲಂದ್ರ ಬೂತ್ ಕಡೆ ಕಾಲಿಡೂದಿಲ್ಲ. ಇನ್ನೂ ಭಾಳ ವಿಷಯ ಐತಿ, ಎಲ್ಲಾ ಹೇಳಾಕ ನಂಗ ಟೈಮಿಲ್ಲ. ಈಗ ಗೆದ್ದವರಿಗೆ ಜೈ ಅನ್ನಾಕ ಹೋಗಬೇಕು. ಅವರು ತಲೀಗೆ ಒಂದ್ ಸಾವಿರ ಕೊಡತಾರಂತ...' ಸಂತ್ಯಾ ಲಗುಬಗೆಯಿಂದ ಹೆಜ್ಜೆ ಹಾಕಿದ.

ದಿನದ ಟ್ವೀಟ್

ಹೊಣೆಗಾರಿಕೆಯ ಅರಿವಿರಲಿ



ಚುನಾವಣಾ ಆಯೋಗವು ಮತದಾರರ ಹೆಸರಿನ ಕರಡು ಪಟ್ಟಿ, ಪರಿಷ್ಕೃತ ಪಟ್ಟಿ ಹಾಗೂ ಅಂತಿಮ ಪಟ್ಟಿಯನ್ನು ಪ್ರಕಟಿಸುತ್ತದೆ. ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರು ಇಲ್ಲವೆಂದು ಚುನಾವಣೆಯ ದಿನ ದೂರುವ ಬದಲು, ಪಟ್ಟಿಯಲ್ಲಿ ಹೆಸರು ಇದೆಯೇ ಎಂಬುದನ್ನು ಮುಂಚಿತವಾಗಿಯೇ ಖಚಿತಪಡಿಸಿಕೊಳ್ಳುವ ಜವಾಬ್ದಾರಿ ಮತದಾರರ ಮೇಲೂ ಇದೆ. ಆದರೆ, ಆನ್‌ಲೈನ್ ಅಥವಾ ಆಫ್‌ಲೈನ್ ಮೂಲಕ ಇದನ್ನು ಹೇಗೆ ಪರಿಶೀಲಿಸಬೇಕು ಎಂಬುದು ಬಹಳಷ್ಟು ಶಿಕ್ಷಿತರಿಗೂ ಗೊತ್ತಿರುವುದಿಲ್ಲ. ಪಟ್ಟಿಯಲ್ಲಿ ಹೆಸರು ಬಿಟ್ಟುಹೋಗಿರುವುದಕ್ಕೆ ನಾವು ಪೂರ್ತಿಯಾಗಿ ಚುನಾವಣಾ ಆಯೋಗವನ್ನು ದೂಷಿಸಲಾಗದು.

ರೋಹಿತ್ ಸಿಂಹ, ಎಂಜಿನಿಯರ್

ಕಿಡಿನುಡಿ



ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ (ಎಂಜಿಎನ್‌ಆರ್‌ಇಜಿಎಸ್) ಹಾಜರಾತಿ ಆ್ಯಪ್ ದೋಷಪೂರಿತವಾಗಿದ್ದು, ಅದರ ಬಳಕೆಯನ್ನು ಕೈಬಿಡಬೇಕು ಎಂಬುದನ್ನು ತಜ್ಞರು ಒಪ್ಪಿದ್ದಾರೆ. ಈಗ ಮೋದಿ ನೇತೃತ್ವದ ಸರ್ಕಾರವು ಈ ಆ್ಯಪ್ ಅನ್ನು ತಕ್ಷಣವೇ ಹಿಂಪಡೆಯಬೇಕು. ಜೊತೆಗೆ, ದೀರ್ಘಕಾಲದಿಂದ ಬಾಕಿ ಉಳಿದಿರುವ ವೇತನವನ್ನು ಬಿಡುಗಡೆ ಮಾಡಬೇಕು. ಗ್ರಾಮೀಣ ಕೂಲಿಕಾರರಿಗೆ ಅವರ ಕಾನೂನುಬದ್ಧ ಸವಲತ್ತು ನಿರಾಕರಿಸುವುದನ್ನು ಹಾಗೂ ಯೋಜನೆಯನ್ನು ನಾಶಗೊಳಿಸುವುದನ್ನು ನಿಲ್ಲಿಸಬೇಕು.

ಸೀತಾರಾಂ ಯೆಚೂರಿ, ಸಿಪಿಎಂ ನಾಯಕ

25 ವರ್ಷಗಳ ಹಿಂದೆ

ಬುಧವಾರ, 13-5-1998

• ಕೇಂದ್ರ ಸರ್ಕಾರಿ ನೌಕರರ ನಿವೃತ್ತಿ ವಯಸ್ಸು 60ಕ್ಕೆ ಏರಿಸಲು ನಿರ್ಧಾರ

ನವದೆಹಲಿ, ಮೇ 12 (ಪಿಟಿಐ)– ಕೇಂದ್ರ ಸರ್ಕಾರಿ ನೌಕರರ ನಿವೃತ್ತಿ ವಯಸ್ಸನ್ನು 58 ವರ್ಷದಿಂದ 60 ವರ್ಷಕ್ಕೆ ಏರಿಸಲು ಕೇಂದ್ರ ಸಚಿವ ಸಂಪುಟ ಇಂದು ನಿರ್ಧರಿಸಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಪ್ರಧಾನ ಮಂತ್ರಿ ಅಟಲ್ ಬಿಹಾರಿ ವಾಜಪೇಯಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಂಪುಟ ಸಭೆಯಲ್ಲಿ, ಸರ್ಕಾರಿ ಸೇವೆಗೆ ಸೇರಲು ಇರುವ ಗರಿಷ್ಠ ವಯೋಮಿತಿಯನ್ನು ಕೂಡ 2 ವರ್ಷ ಹೆಚ್ಚಿಸಲು ನಿರ್ಧರಿಸಲಾಗಿದೆ.

• ಭಾರತದ ವಿರುದ್ಧ ಅಮೆರಿಕ ಕಠಿಣ ಕ್ರಮ?

ವಾಷಿಂಗ್ಟನ್, ಮೇ 12 (ಪಿಟಿಐ)– ಮೂರು ಅಣ್ವಸ್ತ್ರ ಸಾಧನಗಳ ಭೂಗತ ಪರೀಕ್ಷಾರ್ಥ ಸ್ಫೋಟವನ್ನು ನಡೆಸಿದ ಭಾರತದ ವಿರುದ್ಧ ತೀವ್ರ ರೀತಿಯ ಆರ್ಥಿಕ ದಿಗ್ಬಂಧನ ವಿಧಿಸಲು ಆಲೋಚನೆ ಹೊಂದಿರುವುದಾಗಿ ಅಮೆರಿಕ ಅಧ್ಯಕ್ಷ ಬಿಲ್ ಕ್ಲಿಂಟನ್ ಅವರು ಇಂದು ರಾತ್ರಿ ಪ್ರಕಟಿಸಿದ್ದಾರೆ.

50 ವರ್ಷಗಳ ಹಿಂದೆ

ಭಾನುವಾರ, 13-5-1973

• ಮರು ಬಾಡಿಗೆಗೆ ನಗರಸಭೆ ಕಟ್ಟಡಗಳನ್ನು ನೀಡಿರುವವರ ವಿರುದ್ಧ ಕ್ರಮ: ಬಸವಲಿಂಗಪ್ಪ

ಬೆಂಗಳೂರು, ಮೇ 12– ಬೆಂಗಳೂರು ನಗರಸಭೆಗೆ ಸೇರಿರುವ ಕೆಲವು ಕಟ್ಟಡಗಳನ್ನು ಪಡೆದಿರುವ ಕೆಲವರು ಅವನ್ನು ಉಪ ಬಾಡಿಗೆಗೆ ಕೊಟ್ಟಿರುವುದನ್ನು ಇಂದು ವಿಧಾನಸಭೆಯಲ್ಲಿ ಒಪ್ಪಿಕೊಂಡ ಪೌರಾಡಳಿತ ಸಚಿವ ಶ್ರೀ ಬಿ. ಬಸವಲಿಂಗಪ್ಪ ಅವರು, ಅವರನ್ನು ಹೊರದೂಡಲು ಸರ್ಕಾರ ಕ್ರಮ ಕೈಗೊಳ್ಳುವುದೆಂದು ತಿಳಿಸಿದರು.

ನಗರಸಭೆಗೆ 2,249 ವಸತಿ ಕಟ್ಟಡಗಳು, 4,667 ಅಂಗಡಿಗಳು ಹಾಗೂ ಚಪ್ಪರದ ಅಂಗಡಿಗಳು ಸೇರಿವೆ ಎಂದೂ, 102 ಅಂಗಡಿಗಳು ಖಾಲಿಯಾಗಿವೆ ಎಂದೂ ಇದರಿಂದ ವರ್ಷಕ್ಕೆ 13,14, 852 ರೂಪಾಯಿ ಬಾಡಿಗೆ ರೂಪದಲ್ಲಿ ವಸೂಲಾಗುತ್ತಿದೆ ಎಂದೂ ಸಚಿವರು ಶ್ರೀ ಕೆ.ಆರ್. ಶ್ರೀನಿವಾಸಲು ನಾಯ್ಡು ಅವರ ಪ್ರಶ್ನೆಗೆ ಉತ್ತರ ನೀಡಿದರು.

ಸಂಗತ

ಚುನಾವಣಾ ಕರ್ತವ್ಯ: ಹೆಚ್ಚಲಿ ವೃತ್ತಿಪರತೆ

ಚುನಾವಣಾ ಕಾರ್ಯಕ್ಕೆ ನಿಯೋಜನೆಗೊಳ್ಳುವ ಸಿಬ್ಬಂದಿಯಲ್ಲಿ ಪಾರದರ್ಶಕವಾಗಿ ಚುನಾವಣೆ ನಡೆಸುವ ಬದ್ಧತೆಯನ್ನು ಮೈಗೂಡಿಸುವ ಕುರಿತು ಚುನಾವಣಾ ಆಯೋಗ ಚಿಂತಿಸಬೇಕಿದೆ

• ಎಚ್.ಕೆ.ಶರತ್

ಅನುಭವ ಪಾಠ ಕಲಿಸುತ್ತದೆ ಎಂಬುದು ತೀರಾ ಜನಜನಿತ ಅನಿಸಿಕೆ. ಪ್ರಜಾಪ್ರಭುತ್ವದ ತಳಪಾಯವನ್ನು ಭದ್ರಪಡಿಸುವ ದಿಸೆಯಲ್ಲಿ ಮಹತ್ವದ ಪಾತ್ರ ವಹಿಸುವ ಚುನಾವಣೆಗಳನ್ನು ಪಾರದರ್ಶಕವಾಗಿ ಮತ್ತು ಕಾನೂನುಬದ್ಧವಾಗಿ ನಡೆಸುವ ಮಹೋನ್ನತ ಜವಾಬ್ದಾರಿ ಹೊಂದಿರುವ ಚುನಾವಣಾ ಆಯೋಗಕ್ಕೂ ಸಹಜವಾಗಿಯೇ ಈ ಮಾತು ಅನ್ವಯಿಸುತ್ತದೆ. ಚುನಾವಣಾ ಪ್ರಕ್ರಿಯೆಯು ಕಾಲಾಂತರದಲ್ಲಿ ಸರಳವಾಗುತ್ತ, ಹೆಚ್ಚೆಚ್ಚು ಪಾರದರ್ಶಕವಾಗುತ್ತ ಮತ್ತಷ್ಟು ಜನಸ್ನೇಹಿ ಆಗಬೇಕಲ್ಲವೇ? ಆದರೆ ವಾಸ್ತವದಲ್ಲಿ ಆಗುತ್ತಿರುವುದೇನು?

ಅಭ್ಯರ್ಥಿಗಳ ಖರ್ಚುವೆಚ್ಚ ಚುನಾವಣೆಯಿಂದ ಚುನಾವಣೆಗೆ ಏರುತ್ತಲೇ ಇದೆ. ಹಣ, ಮದ್ಯ, ಮಾಂಸ, ಸೀರೆ, ಕುಕ್ಕರ್ ಸೇರಿದಂತೆ ನಾನಾ ರೀತಿಯ ಉಡುಗೊರೆಗಳನ್ನು ಮತದಾರರಿಗೆ ತಲುಪಿಸುವ ಕಾರ್ಯ ವ್ಯವಸ್ಥಿತವಾಗಿ ನಡೆಯುತ್ತಿದೆ. ಹಂಚಿಕೆಯಾಗುವ ಉಡುಗೊರೆಗಳ ಪ್ರಮಾಣಕ್ಕೂ ಚುನಾವಣಾ ಅಕ್ರಮ ತಡೆಯುವ ಭಾಗವಾಗಿ ವಶಪಡಿಸಿಕೊಳ್ಳುವ ಹಣ ಮತ್ತು ವಸ್ತುಗಳ ಪ್ರಮಾಣಕ್ಕೂ ಅಜಗಜಾಂತರ ಇದೆ. ಹತ್ತಾರು ಕೋಟಿಗಳನ್ನು ವ್ಯಯಿಸದೆ ಚುನಾವಣೆ ಎದುರಿಸುವುದಕ್ಕೇ ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾಗಿರುವುದು ಗುಟ್ಟಿನ ವಿಚಾರವೇನಲ್ಲ. ವಾಸ್ತವ ಹೀಗಿದ್ದರೂ, ಚುನಾವಣಾ ಆಯೋಗ ಗಂಭೀರವಾದ ಕ್ರಮಗಳನ್ನು ಪ್ರಯೋಗಿಸುವ ಉಮೇದು ತೋರುತ್ತಿಲ್ಲ. ಏಕೆ ಹೀಗಾಗುತ್ತಿದೆ ಎನ್ನುವ ಆತ್ಮವಿಮರ್ಶೆಗೂ ಒಡ್ಡಿಕೊಂಡಂತೆ ಕಾಣುತ್ತಿಲ್ಲ.

ಚುನಾವಣಾ ಅಕ್ರಮಗಳ ತಡೆಗಾಗಿ ಹಾಕುವ ಚೆಕ್‌ಪೋಸ್ಟುಗಳು, ರಚಿಸುವ ತಪಾಸಣಾ ತಂಡಗಳಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಯಲ್ಲಿ ಅಕ್ರಮಗಳಿಗೆ ತಡೆ ಒಡ್ಡುವ ಆಸಕ್ತಿ ಇರುವುದೇ? ಸಾವಿರಾರು ಸಿಬ್ಬಂದಿ ಹಗಲು ರಾತ್ರಿ ಎನ್ನದೆ ಕೆಲಸ ಮಾಡಿದರೂ ಎಲ್ಲ ಬಗೆಯ ಆಮಿಷಗಳೂ ಸರಾಗವಾಗಿ ಮತದಾರರ ಮನೆ ಬಾಗಿಲನ್ನು ತಲುಪುವುದಾದರೂ ಹೇಗೆ ಸಾಧ್ಯ?

ಚುನಾವಣಾ ಕೆಲಸಗಳಿಗೆ ನಿಯೋಜನೆಗೊಳ್ಳುವ ಬಹುತೇಕ ಮಂದಿ ಸರ್ಕಾರಿ ನೌಕರರು. ಇವರಲ್ಲಿ ಹಲವರಿಗೆ ರಾಜಕಾರಣಿಗಳನ್ನು ಎದುರು ಹಾಕಿಕೊಳ್ಳುವ ಉಸಾಬರಿಯಂತೂ ಬೇಡವೇ ಬೇಡ. ಚುನಾವಣಾ ಅಕ್ರಮ ತಡೆಯಲು ಮುಂದಾಗಿ ಯಾರ ವಿರುದ್ಧವಾದರೂ ಪ್ರಕರಣ ದಾಖಲಿಸಿದರೆ, ಚುನಾವಣೆ ಮುಗಿದ ನಂತರ ಅದರ ಅಡ್ಡಪರಿಣಾಮಗಳಿಗೆ ತಲೆ ಕೊಡಬೇಕಾದವರು ತಾವು ಮಾತ್ರವೇ ಎನ್ನುವ ತಿಳಿವಳಿಕೆ ಇವರಲ್ಲಿ ಇರುತ್ತದೆ. ಹೀಗಾಗಿಯೇ ಅಕ್ರಮಗಳು ಕಂಡರೂ ಕಾಣದ ಹಾಗೆ ನಟಿಸುವುದರಲ್ಲೇ ತಮ್ಮ ಹಿತ ಅಡಗಿದೆ ಎಂಬ ಧೋರಣೆಗೆ ಅವರು ಬದ್ಧ. ತಡೆಯಲೇಬೇಕಾದಂತಹ ಬಾಹ್ಯ ಒತ್ತಡ ಸೃಷ್ಟಿಯಾಗದ ವಿನಾ ಅಕ್ರಮಗಳ ತಡೆಗೆ ಅವರು ಮುಂದಾಗಲಾರರು.

ಮತದಾನ ನಡೆಯುವ ದಿನ ಮತಕೇಂದ್ರಕ್ಕೆ ಹೋಗಿ ತಮ್ಮ ಹಕ್ಕು ಚಲಾಯಿಸಲು ಚುನಾವಣಾ ಕಾರ್ಯದಲ್ಲಿ ತೊಡಗುವ ಸಿಬ್ಬಂದಿಗೆ ಸಾಧ್ಯವಾಗದು. ಹೀಗಾಗಿಯೇ ಅವರಿಗೆ ಅಂಚೆ ಮತಪತ್ರದ ಮೂಲಕ ಹಕ್ಕು ಚಲಾಯಿಸುವ ಅವಕಾಶ ಕಲ್ಪಿಸಲಾಗುತ್ತದೆ. ಸಾಮಾನ್ಯ ಮತದಾರರ ಮೇಲೆ ಹೂಡುವ ಬಂಡವಾಳಕ್ಕೆ ಹೋಲಿಸಿದರೆ, ಅದರ ಎರಡರಿಂದ ಮೂರುಪಟ್ಟು ಬಂಡವಾಳವನ್ನು ಅಂಚೆ ಮತಪತ್ರದ ಮೂಲಕ ಮತ ಚಲಾಯಿಸುವವರ ಮೇಲೆ ಹೂಡಲು ಅಭ್ಯರ್ಥಿಗಳು ಉತ್ಸಾಹ ತೋರುತ್ತಾರೆ. ಇದಕ್ಕೆ ಕಾರಣವೂ ಇದೆ. ತಾವು ಯಾರಿಗೆ ಮತ ಚಲಾಯಿಸುತ್ತೇವೆ ಎಂಬುದನ್ನು ಅಭ್ಯರ್ಥಿಗಳಿಗೆ ಅಥವಾ ಅವರ ಕಡೆಯವರಿಗೆ ತೋರಿಸಲು ಇಲ್ಲಿ ಹೆಚ್ಚಿನ ಅವಕಾಶವಿದೆ. ಇನ್ನು ಕೆಲವೊಮ್ಮೆ ಕೆಲವರು, ತಮ್ಮ ಕೈಗೆ ಸಿಕ್ಕ ಅಂಚೆ ಮತಪತ್ರವನ್ನು ಹಣ ಪಡೆದು ಅಭ್ಯರ್ಥಿಗಳಿಗೆ ನೀಡುವ ಪರಿಪಾಟವೂ ಇದೆ. ಇದಕ್ಕೆ ಕಡಿವಾಣ ಹಾಕುವ ಸಲುವಾಗಿ, ಕಾರ್ಯನಿರ್ವಹಿಸುವ ಜಿಲ್ಲೆಯ ವ್ಯಾಪ್ತಿಯಲ್ಲೇ ಮತವಿದ್ದವರು ನಿಗದಿತ ಸ್ಥಳದಲ್ಲಿ ಮತಪತ್ರ ಪಡೆದು, ಅಲ್ಲೇ ಮತ ಚಲಾಯಿಸಬೇಕೆನ್ನುವ ಕಟ್ಟುಪಾಡನ್ನು ಈ ಬಾರಿ ಕೆಲವೆಡೆ ವಿಧಿಸಲಾಯಿತು. ಇದು ಹಲವರ ಅಸಮಾಧಾನಕ್ಕೂ ಕಾರಣವಾಯಿತು.



ಗಮನಾರ್ಹ ಸಂಗತಿ ಎಂದರೆ, ಹೀಗೆ ಅಂಚೆ ಮತಪತ್ರಗಳನ್ನು ಮಾರಿಕೊಳ್ಳುವವರ ಮೇಲೆಯೇ ಚುನಾವಣಾ ಅಕ್ರಮ ತಡೆಯುವ ಹಾಗೂ ಪಾರದರ್ಶಕವಾಗಿ ಚುನಾವಣೆ ನಡೆಸುವ ಹೊಣೆಗಾರಿಕೆ ಇರುವುದು. ಸ್ವತಃ ಮತ ಮಾರಿಕೊಳ್ಳುವವರು ಪಾರದರ್ಶಕವಾಗಿ ಚುನಾವಣೆ ನಡೆಸುವ ಬದ್ಧತೆ ಹೊಂದಿರುವರೇ?

ಇದಲ್ಲದೆ ಮತದಾನ ನಡೆಯುವ ದಿನ ಮತಕೇಂದ್ರದಲ್ಲಿ ಅನುಸರಿಸಬೇಕಾದ ನಿಯಮಗಳಲ್ಲಿ ಕೆಲವನ್ನು ಪಾಲಿಸುವುದಂತೂ ಅಸಾಧ್ಯವೇ ಸರಿ. ಉದಾಹರಣೆಗೆ, ಕುಟುಂಬಸ್ಥರ ನೆರವು ಪಡೆದು ಮತ ಚಲಾಯಿಸಲು ಬರುವ ಪ್ರತಿ ಮತದಾರನ ಸಂಗಡಿಗರಿಂದ ಘೋಷಣಾ ಪತ್ರದ ನಮೂನೆ ತುಂಬಿಸಿ ಸಹಿ ಪಡೆದುಕೊಳ್ಳಬೇಕು. ನಿಯಮ ಪಾಲಿಸಲು ಹೋದರೆ, ಈ ಕೆಲಸ ಮಾಡುವುದಕ್ಕೆ ದಿನವಿಡೀ ಒಬ್ಬ ಸಿಬ್ಬಂದಿಯನ್ನು ಹೆಚ್ಚುವರಿಯಾಗಿ ನಿಯೋಜಿಸಬೇಕಾದ ಸ್ಥಿತಿ ಎಷ್ಟೋ ಮತಗಟ್ಟೆಗಳಲ್ಲಿ ನಿರ್ಮಾಣವಾಗುತ್ತದೆ. ಹೀಗಾಗಿ, ಸಂಗಡಿಗರ ಘೋಷಣಾ ಪತ್ರ ಬಳಸುವ ಉಸಾಬರಿಗೆ ಸಾಮಾನ್ಯವಾಗಿ ಚುನಾವಣಾ ಸಿಬ್ಬಂದಿ ಹೋಗಲಾರರು.

ಅನುಭವದ ಮೂಲಕ ಪಾಠ ಕಲಿಯುವ ಪ್ರಕ್ರಿಯೆಗೆ ಚುನಾವಣಾ ಆಯೋಗ ತನ್ನನ್ನು ಒಡ್ಡಿಕೊಳ್ಳಬೇಕಿದೆ. ವಾಸ್ತವದಲ್ಲಿ ಪಾಲಿಸಲು ಸಾಧ್ಯವಾಗದ ನಿಯಮಗಳನ್ನು ಹಾಗೇ ಉಳಿಸಿಕೊಳ್ಳುವ ಅಗತ್ಯ ಇದೆಯೇ ಎಂದು ಪರಿಶೀಲಿಸಲು ಮುಂದಾಗಬೇಕಿದೆ. ಚುನಾವಣಾ ಕಾರ್ಯಕ್ಕೆ ನಿಯೋಜನೆಗೊಳ್ಳುವ ಸಿಬ್ಬಂದಿಯಲ್ಲಿ ಹೆಚ್ಚಿನ ವೃತ್ತಿಪರತೆ ಮತ್ತು ಪಾರದರ್ಶಕವಾಗಿ ಚುನಾವಣೆ ನಡೆಸುವ ಬದ್ಧತೆಯನ್ನು ಮೈಗೂಡಿಸುವ ದಿಸೆಯಲ್ಲಿ ಏನೆಲ್ಲ ಮಾಡಬಹುದು ಎಂಬ ಕುರಿತೂ ಚಿಂತಿಸಬೇಕಾದ ಜರೂರತ್ತಿದೆ.

ವಾಚಕರ ವಾಣಿ

ಪುಸ್ತಕ ಖರೀದಿಗೆ ಸಿಗಲಿ ಚಾಲನೆ

ಗ್ರಂಥಾಲಯ ಇಲಾಖೆಗೆ 2020ನೇ ಸಾಲಿನ ಪುಸ್ತಕ ಆಯ್ಕೆ ಪ್ರಕ್ರಿಯೆಯು 2022ರ ನವೆಂಬರ್‌ನಲ್ಲಿ ಪೂರ್ಣಗೊಂಡಿದ್ದರೂ ಪುಸ್ತಕಗಳನ್ನು ಖರೀದಿಸಿ ಅಗತ್ಯ ಅನುದಾನ ಬಿಡುಗಡೆ ಮಾಡುವಲ್ಲಿ ಸರ್ಕಾರ ನಿರ್ಲಕ್ಷ್ಯ ತೋರಿದೆ. ಇಂತಹ ಕಾರ್ಯವೈಖರಿಯಿಂದಾಗಿ ಸಾರ್ವಜನಿಕ ಗ್ರಂಥಾಲಯಗಳಲ್ಲಿ ಹೊಸ ಪುಸ್ತಕಗಳಿಲ್ಲದೆ ಅಸಂಖ್ಯ ಓದುಗರು ಬೇಸರಗೊಂಡಿದ್ದಾರೆ.

ಲಕ್ಷಾಂತರ ರೂಪಾಯಿ ಹೂಡಿ ಪುಸ್ತಕ ಪ್ರಕಟಿಸಿದ ಪ್ರಕಾಶಕರು ನಷ್ಟ ಅನುಭವಿಸಿದರೆ, ಉತ್ಸಾಹಿ ಬರಹಗಾರರು ಹೊಸ ಕೃತಿ ರಚಿಸಿ ಪ್ರಕಟಿಸುವ ಉತ್ಸಾಹ ಕಳೆದುಕೊಳ್ಳುವಂತೆ ಆಗಿರುವುದು ವಿಷಾದಕರ. ಗ್ರಂಥಾಲಯಕ್ಕೆ ₹ 15 ಕೋಟಿ ಬಿಡುಗಡೆ ಮಾಡಲು ಸರ್ಕಾರ ಮೀನಮೇಷ ಎಣಿಸುವುದು ಸರಿಯಲ್ಲ. ನಮ್ಮ ಸಾಹಿತಿಗಳು ಸಹ ಈ ವಿಷಯದಲ್ಲಿ ಸರ್ಕಾರದ ಮೇಲೆ ಒತ್ತಡ ತರುತ್ತಿಲ್ಲ. ಸರ್ಕಾರದ ಈ ವಿಳಂಬ ಧೋರಣೆ, ಸುಸಂಸ್ಕೃತ ಸಮಾಜವನ್ನು ನಿರ್ಮಿಸುವಲ್ಲಿ ಅದು ತೋರುತ್ತಿರುವ ಅಸಡ್ಡೆ ಎಂದೇ ಟೀಕಿಸುವಂತಾಗಿದೆ. ಸರ್ಕಾರ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕು. ಪುಸ್ತಕ ಖರೀದಿಗೆ ಅಗತ್ಯ ಕ್ರಮ ಕೈಗೊಳ್ಳಬೇಕು.

ಸತ್ಯಬೋಧ, ಬೆಂಗಳೂರು

ಉದಾಸೀನ ಮನೋಭಾವದ ಸಂಕೇತ

ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ರಾಜಧಾನಿ ಬೆಂಗಳೂರಿನಲ್ಲಿ ಕಡಿಮೆ ಪ್ರಮಾಣದ ಮತದಾನ ಆಗಿರುವುದು, ಚುನಾವಣಾ ಪ್ರಕ್ರಿಯೆಯಲ್ಲಿ ಮತದಾರರಿಗಿರುವ ಉದಾಸೀನ ಮನೋಭಾವ ಹಾಗೂ ಅವರ ಮಾನಸಿಕ ದಾರಿದ್ರ್ಯದ ಸಂಕೇತವಾಗಿದೆ. ಹೀಗೆ ಯಾರು ಮತ ಚಲಾಯಿಸುವುದಿಲ್ಲವೋ ಅಂತಹವರ ಆಧಾರ್ ಕಾರ್ಡ್, ವಾಹನ ಚಾಲನಾ ಪರವಾನಗಿಯನ್ನು ರದ್ದುಪಡಿಸುವಂತೆ ಆಗಬೇಕು. ಈ ಕುರಿತು ಚುನಾವಣೆಗೆ ಮುನ್ನ ಸರ್ಕಾರವು ಅಧಿಸೂಚನೆ ಹೊರಡಿಸಬೇಕು. ಆಗಲಾದರೂ ಮತದಾನದ ಪ್ರಮಾಣಕ್ಕೆ ಸಂಬಂಧಿಸಿದಂತೆ ಪರಿಸ್ಥಿತಿ ಸುಧಾರಿಸಬಹುದೇನೊ.

ಮುರುಗೇಶ್ ಹನಗೋಡಿಮಠ, ಹುಬ್ಬಳ್ಳಿ

ಬೇಟೆಯಾಡಲು ಮತವೇನು ಪ್ರಾಣಿಯೇ?

ಮತದಾನ ಹಾಗೂ ಮತಬೇಟೆ ಎಂಬ ಪದಗಳ ಬಳಕೆ ಸರಿಯಲ್ಲ ಎಂಬ ಶಿವನಕೆರೆ ಬಸವಲಿಂಗಪ್ಪ ಅವರ ಅನಿಸಿಕೆ (ವಾ.ವಾ., ಮೇ 12) ಸೂಕ್ತವಾಗಿದೆ. ಭಾರತದ ಸಂವಿಧಾನವು ನಾಗರಿಕರಿಗೆ ನೀಡಿರುವ ಮತ ಚಲಾವಣೆಯ ಅವಕಾಶವು ನಮ್ಮ ಕರ್ತವ್ಯ ಮತ್ತು ಹಕ್ಕಾಗಿದೆ. ಬೇಟೆಯಾಡಲು ಮತ ಎಂಬುದೇನು ಪ್ರಾಣಿಯೇ?

ಗಣೇಶ ಜೋಶಿ, ಧಾರವಾಡ

ಸಮಾಜಕ್ಕಂಟಿದ ಕಳೆ ಕಿತ್ತೊಗೆಯಲಿ ಸಮಾನಮನಸ್ಕರು

'ಸದ್ಯದ ರಾಜಕೀಯ ವ್ಯವಸ್ಥೆಯನ್ನು ನೋಡಿದರೆ, ಮರ್ಯಾದೆ ಇದ್ದವರು ರಾಜಕಾರಣದಲ್ಲಿ ಇರಬಾರದ ಪರಿಸ್ಥಿತಿ ಎದುರಾಗಿದೆ' ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರು ವಿಷಾದದಿಂದ ಹೇಳಿದ ಮಾತು (ಪ್ರ.ವಾ., ಮೇ 11) 'ಕಿಡಿನುಡಿ'ಯಲ್ಲಿ ವ್ಯಕ್ತವಾಗಿದೆ. ಬಹಳಷ್ಟು ವರ್ಷಗಳ ಕಾಲ ರಾಜಕೀಯದಲ್ಲಿ ಇದ್ದು, ಅನುಭವ ಪಡೆದಿರುವ ಹೊರಟ್ಟಿ ಅವರು ತಡವಾಗಿಯಾದರೂ ತಮ್ಮ ಮನದಾಳದ ಇಂಗಿತ ವ್ಯಕ್ತಪಡಿಸಿದ್ದಾರೆ. ಹೇಸಿಗೆ ಬರುವಷ್ಟು ಹೊಲಸಾಗಿರುವ ವ್ಯವಸ್ಥೆಯನ್ನು ರಾಜಕೀಯದಲ್ಲಿರುವ ನಿಮ್ಮಂಥವರೇ ಸರಿಪಡಿಸಬೇಕು. ಮುಂದಿನ ದಿನಗಳಲ್ಲಿ ಇಂಥ ಅಪಾಯಕಾರಿ ಸನ್ನಿವೇಶ ಬಾರದ ಹಾಗೆ, ಪಕ್ಷ ಯಾವುದೇ ಇರಲಿ, ಸಮಾನಮನಸ್ಕರು ಸೇರಿ ಸಮಾಜಕ್ಕಂಟಿದ ಈ ಕಳೆಯನ್ನು ಒಂದಾಗಿ ಕಿತ್ತೊಗೆಯಬೇಕು.

ಈ ಸಮಸ್ಯೆಗೆ ಪರಿಹಾರ ಕಂಡುಕೊಂಡು ಸುಭಿಕ್ಷ ಸರ್ಕಾರಗಳು ಬರುವಂತೆ ನೋಡಿಕೊಳ್ಳುವ ಜವಾಬ್ದಾರಿ ನಿಮ್ಮಂಥವರು ಹಾಗೂ ಸಾರ್ವಜನಿಕರ ಮೇಲೆ ಇದೆ. ಈ ಬಾರಿಯ ಚುನಾವಣೆಯಲ್ಲಿ ನಡೆದಿದೆ ಎನ್ನಲಾದ ಪ್ರಲೋಭನೆ ಮತ್ತು ಅದಕ್ಕೆ ಒಳಗಾದವರ ಬಗ್ಗೆ ವ್ಯಕ್ತವಾಗುತ್ತಿರುವ ಮಾತುಗಳನ್ನು ಕೇಳಿದಾಗ ಬೇಸರವಾಗುತ್ತದೆ. ಹೊರಟ್ಟಿ ಅಂಥವರು ಈ ಬಗ್ಗೆ ಮಾತನಾಡಿ ಸುಮ್ಮನಾಗದೆ, ಇಂತಹ ವ್ಯವಸ್ಥೆಯ ವಿರುದ್ಧ ಚಳವಳಿ ಆರಂಭಿಸಲಿ.

ರುದ್ರಮೂರ್ತಿ ಎಂ.ಜೆ., ಚಿತ್ರದುರ್ಗ

ಅವರು ಇವರಾಗಿ...!

ಮುಗಿಯಿತು ಚುನಾವಣೆ ಕಾವು,
ಕಿತ್ತಾಟ, ಸುತ್ತಾಟ, ಗುದ್ದಾಟ
ಗೆದ್ದ ಮೇಲೆ ಅವರು ಇವರಾಗಿ,
ಇವರು ಅವರಾಗಿ
ಅವರಿವರೇ ಒಂದಾಗಿ
ಮಾಡುವರು ಮತದಾರರನ್ನು
ಮೂರ್ಖರನ್ನಾಗಿ!

ರಾಜೇಶ್ವರಿ ಹುಲ್ಲೇನಹಳ್ಳಿ
ಹಾಸನ

ಹೊರೆ ಇಳಿಸಿಕೊಳ್ಳುವ ಪರಿ...

ಹೊಸಪೇಟೆ ತಾಲ್ಲೂಕಿನ ಇಂಗಳಗಿ ಸಮೀಪದ 'ಅನ್ನಪೂರ್ಣೇಶ್ವರಿ ವಿದ್ಯಾಪೀಠ ಉಚಿತ ವಸತಿಯುತ ಪ್ರೌಢಶಾಲೆ'ಯನ್ನು ಚಲನಚಿತ್ರ ನಿರ್ಮಾಪಕಿ ಗೀತಾ ಶಿವರಾಜ್‌ಕುಮಾರ್ ಅವರು ದತ್ತು ಪಡೆದ ಬಗ್ಗೆ ವರದಿಯಾಗಿದೆ (ಪ್ರ.ವಾ., ಮೇ 12). ಇದು ಅನುಕರಣೀಯವೂ ಮಾದರಿಯೂ ಆದ ಕಾರ್ಯ. ಸೊರಗಿ ಸುಣ್ಣವಾಗಿರುವ ಕನ್ನಡ ಶಾಲೆಗಳಿಗೆ ಕಾಯಕಲ್ಪ ಕಲ್ಪಿಸುವ ಹೊಣೆ ಸರ್ಕಾರದ್ದು ಮಾತ್ರವಲ್ಲ, ಸಮಾಜದ ಋಣದಲ್ಲಿರುವ ಪ್ರತಿಯೊಬ್ಬರದೂ ಹೌದು. ನಮ್ಮ ಬೆನ್ನ ಮೇಲಿನ ಋಣದ ಹೊರೆಯನ್ನು ಇಳಿಸಿಕೊಳ್ಳಲು ಇದೊಂದು ಒಳ್ಳೆಯ ಅವಕಾಶ.

ತಾನು ಹುಟ್ಟಿ ಬೆಳೆದ ಹಳ್ಳಿಗೆ, ಓದಿದ ಶಾಲೆಗೆ ಒಂದಲ್ಲ ಒಂದು ರೀತಿಯಿಂದ, ಎಲೆಮರೆಯ ಕಾಯಿಯಂತೆ ಸಹಾಯ ಮಾಡುತ್ತಿರುವವರು ನಮ್ಮ ಮಧ್ಯೆ ಇದ್ದಾರೆ. ಆದರೆ ಅಂಥವರ ಸಂಖ್ಯೆ ತೀರಾ ಕಡಿಮೆ. ಸಾಹಿತಿ ಶಿವರಾಮ ಕಾರಂತರು ಒಂದು ಕಡೆ 'ನಾವು ಸಮಾಜದಿಂದ ಬಹಳಷ್ಟು ಪಡೆಯುತ್ತೇವೆ. ಸಮಾಜಕ್ಕೆ ಬಹಳಷ್ಟು ಕೊಡುತ್ತೇವೆ. ಆದರೆ ಪಡೆದದ್ದಕ್ಕಿಂತ ಕೊಟ್ಟದ್ದು ಸ್ವಲ್ಪವಾದರೂ ಜಾಸ್ತಿ ಇರಬೇಕು' ಎಂದು ಹೇಳಿರುವ ಮಾತು ನಮ್ಮ ಮನಸ್ಸಿನಲ್ಲಿ ಅನುರಣಿಸುತ್ತಿರಬೇಕು.

ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ನೆರೆ ಪರಿಹಾರ ಸಂಗ್ರಹದ ನೆನಕೆ


‘ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ’ದ ನೆವದಲ್ಲಿ ಚಿತ್ರೋದ್ಯಮದೊಟ್ಟಿಗಿನ ಬಾಂಧವ್ಯದ ಮೆಲುಕು



1961ರಲ್ಲಿ ಉತ್ತರ ಕರ್ನಾಟಕದಲ್ಲಿ ನೆರೆ. ಆ ಕಾಲಘಟ್ಟದಲ್ಲಿ ಸಂತ್ರಸ್ತರಿಗೆ ಪರಿಹಾರ ಸಂಗ್ರಹಿಸುವುದು ಸವಾಲೇ ಆಗಿತ್ತು. ಈಗಿನಂತೆ ಸಾಮಾಜಿಕ ಜಾಲತಾಣಗಳಾಗಲೀ, ಮೊಬೈಲ್ ತರಹದ ಸೌಕರ್ಯವಾಗಲೀ ಇರಲಿಲ್ಲ. ಆಗ ಕನ್ನಡ ಚಿತ್ರರಂಗವು ಮದ್ರಾಸ್‌ನಲ್ಲಿ ನೆಲೆಗೊಂಡಿತ್ತು. ಆದರೂ ಚಿತ್ರತಾರೆಯರು ತಮ್ಮ ಸಿನಿಮಾ ಚಟುವಟಿಕೆಯಿಂದ ತುಸು ಬಿಡುವು ಪಡೆದುಕೊಂಡು, ಸಂತ್ರಸ್ತರಿಗೆ ಪರಿಹಾರ ಸಂಗ್ರಹಿಸಲು ಮುಂದಾದರು. ಅದಕ್ಕಿಂತ ಗಮನಾರ್ಹ ಸಂಗತಿ ಎಂದರೆ, ‘ಪ್ರಜಾವಾಣಿ’ ಸಂತ್ರಸ್ತರಿಗೆ ಪರಿಹಾರ ಸಂಗ್ರಹಿಸಲು ಮೊದಲು ಮುಂದಾಗಿದ್ದು. ಆ ಅರ್ಥಪೂರ್ಣ ಅಭಿಯಾನಕ್ಕೆ ಚಿತ್ರರಂಗದ ದಿಗ್ಗಜರೆಲ್ಲ ಕೈಜೋಡಿಸಿದ್ದು ಐತಿಹಾಸಿಕ.

ಬರೀ ಒಂದು ಊರಿನಲ್ಲಿ ಪರಿಹಾರ ಸಂಗ್ರಹಿಸಲು ಕಲಾವಿದರು ನೆಲೆಗೊಂಡಿರಲಿಲ್ಲ. ವಿವಿಧ ನಗರ, ಪಟ್ಟಣಗಳನ್ನು ಸುತ್ತಿದರು. ಆಗ ‘ಪ್ರಜಾವಾಣಿ’ಯ ಒಂದು ಸಂಚಿಕೆಯಲ್ಲಿ ಪ್ರಕಟವಾಗಿದ್ದಂತೆ ಪರಿಹಾರ ನಿಧಿ ಸಂಗ್ರಹಿಸಿದ ಚಿತ್ರರಂಗದವರ ಹೆಸರುಗಳು ಹೀಗಿದ್ದವು:

ಪಂಡರಿಬಾಯಿ, ಲೀಲಾವತಿ, ಹರಿಣಿ, ಎಂ.ಎನ್. ಲಕ್ಷ್ಮಿದೇವಿ, ಶಾಂತಾ, ಜಯಶ್ರೀ, ಬಿ. ರಮಾದೇವಿ, ನೃತ್ಯ ತಾರೆಯರಾದ ರೇವತಿ ಮತ್ತು ಶಕುಂತಲಾ ಮೊದಲಾದವರೂ, ನಟರಾದ ರಾಜ್‌ಕುಮಾರ್, ಉದಯಕುಮಾರ್, ನರಸಿಂಹರಾಜು, ಬಾಲಕೃಷ್ಣ, ಡಿಕ್ಕಿ ಮಾಧವರಾವ್, ಅಶ್ವತ್ಥ್, ಹನುಮಂತಾಚಾರ್, ವಾದಿರಾಜ್, ವಿಮಲಾನಂದದಾಸ್, ನೃತ್ಯ ಕಲಾವಿದರಾದ ಕೃಷ್ಣಕುಮಾರ್, ಉಪೇಂದ್ರಾಚಾರ್ ಮೊದಲಾದವರೂ, ನಿರ್ಮಾಪಕ ಡಿ.ಆರ್. ನಾಯ್ಡು, ಸಂಗೀತ ನಿರ್ದೇಶಕ ನಾಗೇಂದ್ರ, ನೃತ್ಯ ನಿರ್ದೇಶಕ ಪಿ.ಎಸ್. ಗೋಪಾಲಕೃಷ್ಣನ್, ಸಾಹಿತಿ–ನಟ ಜಿ.ವಿ. ಅಯ್ಯರ್ ಅವರೂ ಪರಿಹಾರ ಸಂಗ್ರಹಿಸಿದವರಲ್ಲಿ ಇದ್ದರು.



1961ರಲ್ಲಿ ನೆರೆ ಸಂತ್ರಸ್ತರಿಗೆ ನೆರವಾಗಲು ಬೆಂಗಳೂರಿನಲ್ಲಿ ಪರಿಹಾರ ನಿಧಿ ಸಂಗ್ರಹಿಸಿದ ಚಿತ್ರರಂಗದ ಕಲಾವಿದರು

ಚಿತ್ರ: ಟಿ.ಎಲ್ ರಾಮಸ್ವಾಮಿ

1961ರ ಆಗಸ್ಟ್‌ನಲ್ಲಿ ಬೆಂಗಳೂರಿನಲ್ಲಿ ಮೊದಲು ಪರಿಹಾರ ಸಂಗ್ರಹಿಸುವ ಕೆಲಸ ಶುರುವಾಯಿತು. ಒಂದು ತಿಂಗಳ ನಂತರ ಆರು ದಿನಗಳ ಕಾಲ ಒಂದು ಸಾವಿರ ಮೈಲಿ ದೂರ ಪ್ರಯಾಣ ಮಾಡಿ, ಕಲಾವಿದರು ಪರಿಹಾರ ನಿಧಿ ಸಂಗ್ರಹಿಸಿದ್ದರು.

‘ಕಲಾವಿದರು ಸೆರಗೊಡ್ಡಿ, ಚೀಲ ಗೋಲಕಗಳನ್ನು ಹಿಡಿದು ಹಣ ಸಂಗ್ರಹಿಸುತ್ತಿದ್ದ ಮತ್ತು ಹುರುಪಿನಿಂದ ಜನ ಹಣ ನೀಡುತ್ತಿದ್ದ ದೃಶ್ಯಗಳು ಹೃದಯ ತುಂಬುವಂತಿದ್ದವು. ‘ಪ್ರವಾಹಗಳಿಂದ ಕಷ್ಟಪಡುತ್ತಿರುವವರಿಗೆ ಸಹಾಯ ಮಾಡಿ’ ಎಂಬ ತಾರೆಯರ ಕರೆಗೆ ಉದಾರವಾಗಿ ಓಗೊಟ್ಟು ಬಡವ ಬಲ್ಲಿದರೆಲ್ಲರೂ ಯಥಾಶಕ್ತಿ ಕಾಣಿಕೆ ಸಲ್ಲಿಸಿ ಸಂತ್ರಸ್ತರ ಬಗ್ಗೆ ಸಹಾನುಭೂತಿಯ ಪ್ರವಾಹವನ್ನೇ ಹರಿಸಿದರು’ ಎಂದು 1961ರ ಸೆಪ್ಟೆಂಬರ್ 26ರ ‘ಪ್ರಜಾವಾಣಿ’ ಸಂಚಿಕೆಯಲ್ಲಿ ವರದಿಯಾಗಿತ್ತು.

ಸಮಾಜಮುಖಿ ಕೆಲಸಕ್ಕೆ ಪತ್ರಿಕೆ ಮುಂದಾಗಿದ್ದಾಗ ಚಿತ್ರರಂಗದ ದಿಗ್ಗಜರೆಲ್ಲ ಕೈಜೋಡಿಸಿದ್ದರಿಂದ ಉತ್ತಮ ಮೊತ್ತ ಸಂಗ್ರಹಿಸಲು ಸಾಧ್ಯವಾಗಿತ್ತು. ಅದೊಂದು ಸಾಂಸ್ಕೃತಿಕ ಸಂಕ್ರಮಣಕ್ಕೂ ಕಾರಣವಾದದ್ದು ಇನ್ನೊಂದು ಮಹತ್ವದ ಸಂಗತಿ. ಅದುವರೆಗೆ ಮದ್ರಾಸ್‌ನಲ್ಲಿ ನೆಲೆಗೊಂಡಿದ್ದ ಕನ್ನಡ ಚಿತ್ರರಂಗವು ಆನಂತರ ಬೆಂಗಳೂರಿಗೆ ಸ್ಥಳಾಂತರಗೊಳ್ಳಲು ಪರಿಹಾರ ಸಂಗ್ರಹಣೆ ನಿಮಿತ್ತ ಎಲ್ಲರೂ ಒಗ್ಗಟ್ಟಾಗಿದ್ದೇ ನಾಂದಿಯಾಯಿತು. ಮುಂದೆ 1980ರ ದಶಕದಲ್ಲಿ ಗೋಕಾಕ್ ಚಳವಳಿ ನಡೆದಾಗಲೂ ಪತ್ರಿಕೆ ಹಾಗೂ ಚಿತ್ರರಂಗದವರ ಸಾಂಸ್ಕೃತಿಕ ಸಂಬಂಧ ಗಟ್ಟಿಯಾಗಿತ್ತು. ಅದು ಪ್ರಕಟಿತ ಸಂಚಿಕೆಗಳಲ್ಲೂ ವ್ಯಕ್ತಗೊಂಡಿದೆ.

ಚಲನಚಿತ್ರರಂಗ ‘ಪ್ರಜಾವಾಣಿ’ಯೊಂದಿಗೆ ಮೊದಲಿನಿಂದಲೂ ಅವಿನಾಭಾವ ಸಂಬಂಧ ಹೊಂದಿತ್ತು. ಅದರ ಮುಂದುವರಿಕೆಯಾಗಿ ‘ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ’ಕ್ಕೆ ಈಗ ದಿನಗಣನೆ ಶುರುವಾಗಿದೆ. ಕನ್ನಡ ಚಿತ್ರರಂಗ ಜಾಗತಿಕ ಮಟ್ಟದಲ್ಲಿಯೂ ಮೂಡಿಸುತ್ತಿರುವ ಛಾಪಿಗೆ ಇನ್ನೊಂದು ಅರ್ಥ ದಕ್ಕಿಸಿಕೊಡುವ ಪ್ರಯತ್ನವಿದು. ಒಟ್ಟು 24 ವಿಭಾಗಗಳಲ್ಲಿ ಅರ್ಹರನ್ನು ಪಾರದರ್ಶಕ ಪ್ರಕ್ರಿಯೆಯ ಮೂಲಕ ಗುರುತಿಸಿ, ಸನ್ಮಾನಿಸುವ ಹೆಜ್ಜೆಯನ್ನು ‘ಪ್ರಜಾವಾಣಿ’ ಇಡುತ್ತಿದೆ. ‘ಸಿನಿ ಸಮ್ಮಾನ’ದ ಯಾವ ವಿಭಾಗಗಳಲ್ಲಿ ಯಾರು ಯಾರು ನಾಮ ನಿರ್ದೇಶನಗೊಂಡಿದ್ದಾರೆ, ಯಾವ ಚಿತ್ರಗಳು ಆಯ್ಕೆಗೆ ಪಟ್ಟಿಗೊಂಡಿವೆ ಎನ್ನುವುದು ಇದೇ ಪುಟದಲ್ಲಿ ಪ್ರಕಟಗೊಳ್ಳಲಿದೆ. ಕುತೂಹಲದ ಕಣ್ಣು ನಿಮ್ಮದೂ ಆಗಿರಲಿ.

ಸಿನಿ ಸಮ್ಮಾನ ವೆಬ್‌ಸೈಟ್ ಲಿಂಕ್:
https://www.prajavani.net/cinesamman

ಸಿನಿ ಸಮ್ಮಾನ: ಪ್ರತಿಕ್ರಿಯೆಗಳು

ಸಿನಿಮಾ ತಂತ್ರಜ್ಞರಿಗೆ ಉಪಯುಕ್ತ



‘ಪ್ರಜಾವಾಣಿ’ 75 ವರ್ಷ ಪೂರೈಸಿರುವ ಈ ಸಂದರ್ಭದಲ್ಲಿ ಹೊಸ ಹೆಜ್ಜೆ ಇಟ್ಟಿದೆ. ನಾಡಿನ ಹಿರಿಯ, ವಿಶ್ವಾಸಾರ್ಹ ಪತ್ರಿಕೆಯಾಗಿರುವ ‘ಪ್ರಜಾವಾಣಿ’ ಕನ್ನಡದ ಸಿನಿಮಾಗಳಿಗೆ ಬೆಂಬಲವಾಗಿ ನಿಂತಿದೆ. ನನ್ನ ಸಿನಿಮಾದೊಳಗಿನ ಅಂಶಗಳನ್ನು, ವಿಮರ್ಶೆಗಳನ್ನು ಜನರಿಗೆ ಪತ್ರಿಕೆ ತಲುಪಿಸಿದೆ. ಯೋಚನೆಗೆ ದೂಡುವ, ಉಪಯುಕ್ತ ಸುದ್ದಿಗಳನ್ನು ನೀಡುವ ಮಾಧ್ಯಮವಿದು. 75 ವರ್ಷ ಪೂರೈಸಿರುವ ಸಂಭ್ರಮದಲ್ಲೇ ‘ಕನ್ನಡ ಸಿನಿ ಸಮ್ಮಾನ’ ಆಯೋಜಿಸುತ್ತಿರುದು ಚಿತ್ರರಂಗಕ್ಕೂ ಖುಷಿ ತಂದಿದೆ. ‘ಪ್ರಜಾವಾಣಿ’ ಹೇಗೆ ಒಂದು ಪ್ರತಿಷ್ಠಿತ ಪತ್ರಿಕೆಯಾಗಿದೆಯೋ ಅದೇ ರೀತಿ ಈ ಪ್ರಶಸ್ತಿ ಪ್ರತಿಷ್ಠಿತ ಪ್ರಶಸ್ತಿಯಾಗಲಿ ಎನ್ನುವುದು ನನ್ನ ಹಾರೈಕೆ. ಕಲಾವಿದರಿಗೆ ಯಾವತ್ತಿದ್ದರೂ ಬೆಂಬಲ ಇದ್ದೇ ಇರುತ್ತದೆ. ಆದರೆ ಈ ರೀತಿ ಪ್ರಶಸ್ತಿಗಳು ಚಿತ್ರರಂಗದಲ್ಲಿ ದುಡಿಯುವ ತಂತ್ರಜ್ಞರನ್ನು ಗುರುತಿಸಲು, ಅವರಿಗೆ ಬೆಂಬಲವಾಗಿ ನಿಲ್ಲಲು ಸಹಕಾರಿಯಾಗುತ್ತವೆ. ಸಿನಿಮಾ ಹಿಂದಿನ ಶಕ್ತಿಯಾಗಿರುವ ಇವರ ಬಗ್ಗೆ ಹೆಚ್ಚಿನ ಜನರಿಗೆ ತಿಳಿದಿರುವುದಿಲ್ಲ. ಇಂತಹ ಪ್ರತಿಭೆಗಳಿಗೆ ಪ್ರಶಸ್ತಿ ದೊರೆತಾಗ ಅವರು ಮುನ್ನೆಲೆಗೆ ಬರುತ್ತಾರೆ. ನನ್ನ ಪ್ರಕಾರ ಇಂತಹ ಪ್ರಶಸ್ತಿ ನೀಡುವ ಕಾರ್ಯಕ್ರಮಗಳು ಹೆಚ್ಚಾಗಿ ತಂತ್ರಜ್ಞರಿಗೆ ಉಪಯುಕ್ತ.


ಎ.ಹರ್ಷ, ನಿರ್ದೇಶಕ

ಹೆಸರು ಬರುವುದೇ ಸಾಧನೆಯಾಗಿತ್ತು

‘ಪ್ರಜಾವಾಣಿ’ ಪತ್ರಿಕೆ ಬಾಲ್ಯದಿಂದಲೂ ಓದಿಕೊಂಡು ಬಂದ ಪತ್ರಿಕೆ. ರಾಜ್ಯದಲ್ಲಿ ಎಷ್ಟೇ ಪತ್ರಿಕೆಗಳು ಬಂದರೂ ‘ಪ್ರಜಾವಾಣಿ’ಗೆ ಅದರದ್ದೇ ಸ್ಥಾನವಿದೆ. ಜನಮಾನಸದಲ್ಲಿ ಅಚ್ಚಳಿದುಬಿಟ್ಟಿದೆ. ನಮ್ಮ ಕಾಲದಲ್ಲಿ ಈ ಪತ್ರಿಕೆಯಲ್ಲಿ ಹೆಸರು ಕಾಣಿಸಿಕೊಂಡರೇ ಬಹಳ ದೊಡ್ಡ ಸಾಧನೆಯಾಗಿತ್ತು. ಅಷ್ಟು ಘನತೆ, ಗಾಂಭೀರ್ಯ ಹೊಂದಿದ ಪತ್ರಿಕೆ. ಶುಕ್ರವಾರದ ಸಿನಿಮಾ ಪುರವಣಿಯನ್ನು, ಪತ್ರಿಕೆಯಲ್ಲಿ ಬರುತ್ತಿದ್ದ ಸಿನಿಮಾ ವಿಮರ್ಶೆಗಳನ್ನು ಕಾದು ಓದುತ್ತಿದ್ದೆವು. ಇಂತಹ ಪತ್ರಿಕೆ 75 ವರ್ಷ ಪೂರೈಸಿರುವುದಕ್ಕೆ ಅಭಿನಂದನೆಗಳು. ಪತ್ರಿಕೆ ಜೊತೆಗಿನ ಅದೆಷ್ಟೋ ಸುಮಧುರ ನೆನಪುಗಳು, ಪತ್ರಿಕೆಯಲ್ಲಿ ಪ್ರಕಟವಾದ ಅದೆಷ್ಟೋ ಸಂದರ್ಶನಗಳು ನೆನಪಿನಲ್ಲಿ ಇವೆ. ವಿಮರ್ಶೆ ಕುರಿತಾಗಿನ ಚರ್ಚೆಗಳು, ವಾಗ್ವಾದಗಳನ್ನು ಮರೆತಿಲ್ಲ. ನಿತ್ಯದ ಓದಿನ ಸಂಗಾತಿಯಾದ ಪತ್ರಿಕೆ ‘ಸಿನಿ ಸಮ್ಮಾನ’ದ ಮೂಲಕ ಚಿತ್ರರಂಗಕ್ಕೆ ಗೌರವ ನೀಡುತ್ತಿರುವುದು ಅತ್ಯಂತ ಸಂತೋಷದ ಸಂಗತಿ. ಆರೋಗ್ಯ ಚೆನ್ನಾಗಿದ್ದರೆ ಈ ಕಾರ್ಯಕ್ರಮದಲ್ಲಿ ಖುದ್ದು ಭಾಗಿಯಾಗುವ ಇರಾದೆಯಿತ್ತು. ಪತ್ರಿಕೆ ಇನ್ನಷ್ಟು ಎತ್ತರಕ್ಕೆ ಬೆಳೆಯಲಿ. ಪ್ರಶಸ್ತಿ ಗಾತ್ರ ದೊಡ್ಡದಾಗಲಿ. ಈ ಹೆಜ್ಜೆಗೆ ಸದಾ ಶುಭಹಾರೈಕೆ ಇರುತ್ತದೆ.



ದ್ವಾರಕೀಶ್, ನಟ



ಲಾಂಛನದೊಂದಿಗೇ ಹಲವು ನೆನಪು



‘ಕನ್ನಡ ಸಿನಿ ಸಮ್ಮಾನ’ ಆರಂಭಿಸುತ್ತಿರುವುದು ವೈಯಕ್ತಿಕವಾಗಿ ನನಗೆ ಹೆಚ್ಚು ಖುಷಿ ನೀಡಿದೆ. ಏಕೆಂದರೆ ನಾವು ಚಿಕ್ಕವರಿದ್ದಾಗಿನಿಂದಲೂ ಓದುತ್ತಿರುವ ಪತ್ರಿಕೆ ‘ಪ್ರಜಾವಾಣಿ’. ‘ನಂದಿ’ ಎಂಬ ಲಾಂಛನವೇ ನಮಗೆ ಹಲವು ನೆನಪುಗಳನ್ನು ತರುತ್ತದೆ. ನನ್ನ ಕಿರುತೆರೆ ಹಾಗೂ ಬೆಳ್ಳಿತೆರೆ ಪಯಣ ಆರಂಭವಾದಾಗಿನಿಂದಲೂ ‘ಪ್ರಜಾವಾಣಿ’ ಸದಾ ನನ್ನ ಜೊತೆಗೆ ನಿಂತಿದೆ. ಇದಕ್ಕಾಗಿ ನಾನು ಈ ಪತ್ರಿಕೆಗೆ ಕೃತಜ್ಞ. ಕರ್ನಾಟಕದಲ್ಲಿರುವ ಬಹಳಷ್ಟು ಜನರಿಗೆ, ಚಂದನವನದ ಕಲಾವಿದರೊಂದಿಗೆ ಒಂದು ನಿಕಟವಾದ ನಂಟು ಹೊಂದಿರುವ ಪತ್ರಿಕೆ ಇದಾಗಿದೆ. ಸಿನಿಮಾ ಸುದ್ದಿಗಳನ್ನು ಬಿತ್ತರಿಸುವುದರಲ್ಲಿ ‘ಪ್ರಜಾವಾಣಿ’ಯದ್ದೇ ಮೇಲುಗೈ. ಕನ್ನಡ ಸಿನಿಮಾ ಮೇಲೆ, ಕನ್ನಡತನದ ಮೇಲೆ ಹೆಚ್ಚಿನ ಒಲವು ಹೊಂದಿರುವ ಪತ್ರಿಕೆ ಇದಾಗಿದೆ. ಇಂತಹ ಸಂಸ್ಥೆ ಒಂದು ಪ್ರಶಸ್ತಿಯನ್ನು ಆರಂಭಿಸುತ್ತಿರುವುದು ಹೆಮ್ಮೆಯ ವಿಷಯ. ನಮ್ಮ ಸಿನಿಮಾರಂಗಕ್ಕೆ ‘ಪ್ರಜಾವಾಣಿ’ಯ ಕೊಡುಗೆ ಇನ್ನಷ್ಟು ಹೆಚ್ಚಲಿದೆ ಎನ್ನುವ ನಂಬಿಕೆ ನನಗಿದೆ. ಚಂದನವನದ ಮೇಲೆ ‘ಪ್ರಜಾವಾಣಿ’ಗೆ ಇರುವ ಒಲವಿಗೆ ಕೋಟಿ ಕೋಟಿ ವಂದನೆಗಳು. ಪತ್ರಿಕೆಯ ಈ ಹೆಜ್ಜೆಯ ಜೊತೆ ನಾವೂ ಹೆಜ್ಜೆ ಹಾಕುತ್ತೇವೆ.

ಅದಿತಿ ಪ್ರಭುದೇವ, ನಟಿ

ಪತ್ರಿಕೆ ಸಂಭಾವನೆಯೇ ಆಸರೆ



‘ಪ್ರಜಾವಾಣಿ’ ಪತ್ರಿಕೆ ಜೊತೆಗೆ ಒಂದು ಅವಿನಾಭಾವ ಸಂಬಂಧವಿದೆ. ನಾನು ಪತ್ರಿಕೋದ್ಯಮ ಮುಗಿಸಿ ಸಿನಿಮಾ ರಂಗಕ್ಕೆ ಬಂದಾಗ ‘ಪ್ರಜಾವಾಣಿ’ಗೆ ಕ್ರೀಡಾ ಲೇಖನಗಳನ್ನು ಬರೆಯುತ್ತಿದ್ದೆ. ಆಗ ಸಿನಿಮಾ ಕ್ಷೇತ್ರದಲ್ಲಿ ನಾನು ಅಸಿಸ್ಟೆಂಟ್. ಸಿನಿಮಾದಲ್ಲಿ ಸಿಗುವುದಕ್ಕಿಂತ ಹೆಚ್ಚಿನ ಸಂಭಾವನೆ ಪತ್ರಿಕೆ ಬರವಣಿಗೆಯಿಂದ ಸಿಗುತ್ತಿತ್ತು. ಆ ಕಾಲಕ್ಕೆ ‘ಪ್ರಜಾವಾಣಿ’ ಬಹಳ ದೊಡ್ಡ ಮೊತ್ತದ ಗೌರವಧನ ನೀಡಿ ನನ್ನ ಬದುಕಿಗೆ ಆಸರೆಯಾಗಿತ್ತು. ಸಿನಿಮಾ ವಿಷಯಕ್ಕೆ ಬಂದರೆ, ಪತ್ರಿಕೆಯದ್ದು ನಿಷ್ಪಕ್ಷಪಾತ ಧೋರಣೆ. ಸಿನಿಮಾ ವಿಮರ್ಶೆ ವೇಳೆ ಒಳ್ಳೆಯದನ್ನು ಯಾಕೆ ಒಳ್ಳೆಯದೆಂದು, ಕೆಟ್ಟದ್ದನ್ನು ಯಾಕೆ ಸರಿ ಇಲ್ಲ ಎಂದು ಬಹಳ ಅಧಿಕೃತವಾಗಿ ಹೇಳುತ್ತದೆ. ನಾನು ‘ಪ್ರಜಾವಾಣಿ’ಯ ಕಾಯಂ ಓದುಗ. ಕನ್ನಡದ ಹೆಮ್ಮೆಯ ಪತ್ರಿಕೆ ಈ ರೀತಿ ಪ್ರಶಸ್ತಿ ನೀಡುತ್ತಿದೆ ಎಂಬ ಸುದ್ದಿಯೇ ಖುಷಿ ನೀಡುತ್ತದೆ. ಅದರ ಮೌಲ್ಯವೇ ಬೇರೆ. ಈ ಪ್ರಶಸ್ತಿ ನಮಗೆಲ್ಲ ಉತ್ತೇಜನ ನೀಡುತ್ತದೆ. ಇಂತಹ ವಿಶ್ವಾಸಾರ್ಹ ಪತ್ರಿಕೆ ಪ್ರಶಸ್ತಿ ಕೊಟ್ಟಾಗ ನಮ್ಮ ಜವಾಬ್ದಾರಿ ಹೆಚ್ಚಿಸುತ್ತೆ. ಸಪ್ಪೆಯಾಗಿರುವ ನಮ್ಮೊಳಗಿನ ಕ್ರಿಯಾಶೀಲತೆ ಹೆಚ್ಚಿಸುತ್ತದೆ.

ಸಂತೋಷ್ ರೈ ಪಾತಾಜೆ, ಛಾಯಾಗ್ರಾಹಕ

ವಿಕ್ರಮ್‌ಗೆ ಸಂಜನಾ ಜೋಡಿ?



ಸಂಜನಾ ಆನಂದ್

‘ಸಲಗ’ ಚಿತ್ರದ ಮೂಲಕ ಚಿತ್ರರಂಗದಲ್ಲಿ ಹೊಸ ಪಯಣ ಆರಂಭಿಸಿದ್ದ ನಟಿ ಸಂಜನಾ ಆನಂದ್, ವಿಕ್ರಮ್ ರವಿಚಂದ್ರನ್ ಹೊಸ ಸಿನಿಮಾ ‘ಮುಧೋಳ’ದಲ್ಲಿ ನಾಯಕಿಯಾಗಿ ನಟಿಸಲಿದ್ದಾರೆ ಎನ್ನುವ ಮಾತು ಕೇಳಿಬರುತ್ತಿದೆ. ಆದರೆ ಚಿತ್ರತಂಡ ಅಧಿಕೃತವಾಗಿ ಈ ಬಗ್ಗೆ ಘೋಷಣೆ ಮಾಡಿಲ್ಲ.

‘ಕೆಮಿಸ್ಟ್ರಿ ಆಫ್ ಕರಿಯಪ್ಪ’ ಸಿನಿಮಾದ ಮೂಲಕ ಸ್ಯಾಂಡಲ್‌ವುಡ್ ಪ್ರವೇಶ ಮಾಡಿದ್ದ ಸಂಜನಾ ಆನಂದ್, ಚಂದನವನ ಸೇರಿದಂತೆ ತೆಲುಗು ಚಿತ್ರರಂಗದಲ್ಲೂ ಸಕ್ರಿಯರಾಗಿದ್ದಾರೆ. ‘ಹನಿಮೂನ್’ ವೆಬ್ ಸರಣಿ ಬಳಿಕ, ಇತ್ತೀಚೆಗಷ್ಟೇ ಚಂದನ್ ಶೆಟ್ಟಿ ನಟನೆಯ ‘ಸೂತ್ರಧಾರಿ’ ಚಿತ್ರದ ಹಾಡೊಂದಕ್ಕೆ ಸಂಜನಾ ಹೆಜ್ಜೆ ಹಾಕಿದ್ದರು. ಸದ್ಯ ಅವರು ದಿನಕರ್ ತೂಗುದೀಪ ನಿರ್ದೇಶನದ ‘ರಾಯಲ್’ ಸಿನಿಮಾದ ಡಬ್ಬಿಂಗ್‌ನಲ್ಲಿ ತೊಡಗಿಸಿಕೊಂಡಿದ್ದಾರೆ.

‘ತ್ರಿವಿಕ್ರಮ್’ ಸಿನಿಮಾ ಮೂಲಕ ಚಿತ್ರರಂಗ ಪ್ರವೇಶಿಸಿದ್ದ ವಿಕ್ರಮ್ ಅವರ ಎರಡನೇ ಪ್ರಾಜೆಕ್ಟ್ ‘ಮುಧೋಳ’. ಚಿತ್ರದ ಶೂಟಿಂಗ್ ಈಗಾಗಲೇ ಆರಂಭವಾಗಿದ್ದು, ಇತ್ತೀಚೆಗೆ ಬಿಡುಗಡೆಯಾಗಿದ್ದ ಚಿತ್ರದ ಟೀಸರ್ ಸದ್ದು ಮಾಡುತ್ತಿದೆ. ರಗಡ್ ಲುಕ್‌ನಲ್ಲಿ ಇಲ್ಲಿ ವಿಕ್ರಮ್ ಕಾಣಿಸಿಕೊಂಡಿದ್ದು, ಮತ್ತೊಂದು ಗ್ಯಾಂಗ್‌ಸ್ಟರ್ ಸಿನಿಮಾ ಇದು ಎಂದು ಮೇಲ್ನೋಟಕ್ಕೆ ತಿಳಿಯುತ್ತಿದೆ. ಕಾರ್ತಿಕ್ ರಾಜನ್ ಈ ಸಿನಿಮಾಗೆ ಆ್ಯಕ್ಷನ್ ಕಟ್ ಹೇಳಿದ್ದು, ಇದು ಇವರ ಚೊಚ್ಚಲ ಚಿತ್ರ. ‘ಮುಧೋಳ’ ಚಿತ್ರಕ್ಕೆ ಯುವರಾಜ್ ಚಂದ್ರನ್ ಸಂಗೀತ ನಿರ್ದೇಶನ, ಮಾಸ್ತಿ ಸಂಭಾಷಣೆ ಇದೆ.

ಸೆಲೆಬ್ರಿಟಿಗಳ ತಾಯಿ ಪ್ರೀತಿ



ಸಂಯುಕ್ತ ಹಾಗೂ ಸುಧಾ ಬೆಳವಾಡಿ



ವಾಸುಕಿ ವೈಭವ್

ಭಾನುವಾರ (ಮೇ 14) ವಿಶ್ವ ಅಮ್ಮಂದಿರ ದಿನ. ಈ ಹೊತ್ತಿನಲ್ಲಿ ‘ಎಂದಿಗೂ ಸಾಲದು ನಿನ್ನ ಪ್ರೀತಿ ಅಮ್ಮ’ ಎನ್ನುತ್ತಾ ಬಂದಿದ್ದಾರೆ ಗಾಯಕ ವಾಸುಕಿ ವೈಭವ್. ಅವರ ಧ್ವನಿಯಲ್ಲಿ ಮೂಡಿಬಂದಿರುವ ಈ ಹಾಡು ಶನಿವಾರ (ಮೇ 13) ಸಂಜೆ ಆನಂದ್ ಆಡಿಯೊ ಯೂಟ್ಯೂಬ್‌ನಲ್ಲಿ ಬಿಡುಗಡೆಯಾಗಲಿದೆ.

ಹಾಡಿಗೆ ಅನಿತಾ ರಂಗಸ್ವಾಮಿ ಸಾಹಿತ್ಯವಿದೆ. ವಿಶೇಷವೆಂದರೆ ಚಿತ್ರರಂಗ ಹಾಗೂ ಕಿರುತೆರೆಯ ಹಲವು ಕಲಾವಿದರು ತಮ್ಮ ತಾಯಿ ಅಥವಾ ಮಕ್ಕಳ ಜೊತೆ ಈ ವಿಡಿಯೊದಲ್ಲಿ ಕಾಣಿಸಿಕೊಂಡಿದ್ದಾರೆ. ‘ಒಂದೇ ಹಾಡಿನಲ್ಲಿ ಹಲವು ಸೆಲೆಬ್ರಿಟಿಗಳು ತಮ್ಮ ತಾಯಿಯ ಜೊತೆಗಿರುವ ದೃಶ್ಯ ಕಾಣಸಿಗುವುದು ಅಪರೂಪ. ಈ ಬಾರಿಯ ವಿಶೇಷ ದಿನಕ್ಕೆ ಇದು ಅಭಿಮಾನಿಗಳಿಗೆ ನಮ್ಮಿಂದ ಒಂದು ಕೊಡುಗೆ’ ಎಂದಿದ್ದಾರೆ ಅನಿತಾ.

ದಿಗಂತ್, ಸುಧಾರಾಣಿ, ಅನು ಪ್ರಭಾಕರ್–ಗಾಯತ್ರಿ ಪ್ರಭಾಕರ್, ಶ್ರುತಿ ಹರಿಹರನ್, ಪದ್ಮಜಾ ರಾವ್, ಸುಧಾ ಬೆಳವಾಡಿ–ಸಂಯುಕ್ತ ಹೊರನಾಡು, ರಾಧಾ ರಾಮಚಂದ್ರನ್, ‘ಪುಟ್ಟಗೌರಿ ಮದುವೆ’ ಖ್ಯಾತಿಯ ಹರಿಣಿ ಶ್ರೀಕಾಂತ್, ‘ನನ್ನರಸಿ ರಾಧೆ’ ಹಾಗೂ ‘ತ್ರಿಪುರ ಸುಂದರಿ’ ಧಾರಾವಾಹಿ ಖ್ಯಾತಿಯ ಅಭಿನವ್ ವಿಶ್ವನಾಥನ್, ‘ಕನ್ನಡತಿ’ ಖ್ಯಾತಿಯ ರಂಜನಿ ರಾಘವನ್, ವಾಸು ದೀಕ್ಷಿತ್ ಮುಂತಾದವರು ಈ ಹಾಡಿನಲ್ಲಿ ಕಾಣಿಸಿಕೊಂಡಿದ್ದಾರೆ.

ಬಿಡುಗಡೆಗೆ ಸಜ್ಜಾಗುತ್ತಿರುವ ‘ಫಾರ್ ರಿಜಿಸ್ಟ್ರೇಷನ್’



ಮಿಲನ ನಾಗರಾಜ್

ಪೃಥ್ವಿ ಅಂಬಾರ್ ಹಾಗೂ ಮಿಲನ ನಾಗರಾಜ್ ನಟಿಸಿರುವ ‘ಫಾರ್ ರಿಜಿಸ್ಟ್ರೇಷನ್’ ಸೆನ್ಸಾರ್ ಪ್ರತಿ ಸಿದ್ಧಗೊಂಡಿದ್ದು, ಶೀಘ್ರದಲ್ಲಿ ಚಿತ್ರ ತೆರೆಗೆ ಬರಲಿದೆ ಎಂದು ಚಿತ್ರತಂಡ ಹೇಳಿದೆ.

ನವೀನ್ ದ್ವಾರಕಾನಾಥ್ ನಿರ್ದೇಶನದ ಚಿತ್ರ ಹಲವಾರು ವಿಷಯಗಳಿಂದ ಸುದ್ದಿ ಮಾಡಿತ್ತು. ಚಿತ್ರದ ಕೊನೆಯ ದೃಶ್ಯವೊಂದನ್ನು ಈಜುಕೊಳದಲ್ಲಿ ಚಿತ್ರೀಕರಿಸಲಾಗಿತ್ತು. ಚಿತ್ರದ ಒಂದು ಹಾಡನ್ನು ನೀರಿನ ಒಳಗೆ ಕ್ಯಾಮೆರಾ ಇಟ್ಟು ಚಿತ್ರೀಕರಿಸಿದ್ದರು. ಛಾಯಾಗ್ರಾಹಕ ಅಭಿಷೇಕ್ ಕಾಸರಗೋಡು ಈ ಹಾಡನ್ನು ಸೆರೆಹಿಡಿದಿದ್ದರು. ಇಮ್ರಾನ್ ಸರ್ದಾರಿಯಾ ನೃತ್ಯ ನಿರ್ದೇಶನ ಈ ಹಾಡಿಗಿತ್ತು.

‘ಚಿತ್ರೀಕರಣ ಸೇರಿದಂತೆ ಚಿತ್ರದ ಬಹುತೇಕ ಕೆಲಸ ಪೂರ್ತಿಗೊಂಡಿದ್ದು, ಹಿನ್ನೆಲೆ ಸಂಗೀತದ ಕೆಲಸ ನಡೆಯುತ್ತಿದೆ. ಸದ್ಯದಲ್ಲೇ ಚಿತ್ರದ ಸೆನ್ಸಾರ್ ಆಗಲಿದ್ದು, ಒಂದೆರಡು ತಿಂಗಳಲ್ಲಿ ಚಿತ್ರ ಬಿಡುಗಡೆಗೊಳಿಸಲಾಗುವುದು’ ಎಂದು ನಿರ್ದೇಶಕ ನವೀನ್ ದ್ವಾರಕಾನಾಥ್ ಹೇಳಿದ್ದಾರೆ.

ನಿಶ್ಚಲ್ ಫಿಲಂಸ್ ಮೂಲಕ ಎನ್.ನವೀನ್ ರಾವ್ ಈ ಚಿತ್ರ ನಿರ್ಮಾಣ ಮಾಡಿದ್ದಾರೆ. ಫೆ.10ರಂದು ಚಿತ್ರ ತೆರೆ ಕಾಣಲಿದೆ ಎಂದು ಈ ಹಿಂದೆ ಚಿತ್ರತಂಡ ಹೇಳಿತ್ತು. ಚಿತ್ರದ ಕೆಲಸ ಮುಗಿಯುವುದು ವಿಳಂಬವಾಗಿ ಚಿತ್ರ ಬಿಡುಗಡೆಯನ್ನೂ ಮುಂದೂಡಲಾಗಿತ್ತು. ಹರೀಶ್ ಸಂಗೀತ ನಿರ್ದೇಶನ ಹಾಗೂ ಮನು ಶೆಡ್ಗಾರ್ ಅವರ ಸಂಕಲನ ಚಿತ್ರಕ್ಕಿದೆ. ರವಿಶಂಕರ್, ಬಾಬು ಹಿರಣ್ಣಯ್ಯ, ಸ್ವಾತಿ, ಸುಧಾ ಬೆಳವಾಡಿ, ತಬಲನಾಣಿ, ರಮೇಶ್ ಭಟ್, ಸಿಹಿಕಹಿ ಚಂದ್ರು ಮತ್ತಿತರರು ತಾರಾಬಳಗದಲ್ಲಿದ್ದಾರೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪದಬಂಧ 5317

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ಮಲಗುವ ಮನೆಯಿದು (5)
4. ಈತ ಎಲ್ಲವನ್ನೂ ತಿಳಿದವನು (3)
5. ವರ ಮಾಡಿದ ಒತ್ತಾಯ (3)
6. ವನದಲ್ಲಿ ನುಸುಳಿದ ಮುಖ (3)
7. ನೂಲು ತೆಗೆಯುವ ಸಾಧನ (3)
9. ಉಲ್ಟಾ ಅಗಿರುವ ಮೆಟ್ಟು (2)
10. ದೇಹದ ಒಂದು ಭಾಗ (2)
12. ಅಸ್ಪಷ್ಟವಾಗಿದ್ದು ಮಂಕಾಗಿ ಕಾಣುವುದು (3)
14. ಒಂದು ದೇಶಕ್ಕೆ ಅಥವಾಪಂಗಡಕ್ಕೆ ಸೇರಿದ ಜನವರ್ಗ (3)
15. ಸುಮ್ಮನಿರಿ! ಹಿಗ್ಗು ಹೀಗೆ ಬಂದಿದೆ (3)
16. ಮಲಗುವಾಗ ಕಾಣಿಸಿದ ಆಳು (3)
17. ಪ್ರಾಯಕ್ಕೆ ಬಂದವನು (5)

ಮೇಲಿಂದ ಕೆಳಕ್ಕೆ

1. ನೂರು ವರ್ಷಗಳ ಅವಧಿ (4)
2. ಪದ್ಧತಿ ಅಥವಾ ರೂಢಿ (5)
3. ವನದ ಕೊನೆಗೆ ಮಾಡಿದ ಹೋಮ (3)
4. ನಿರಂತರ ಎಂದು ಹೀಗೆನ್ನಿ (3)
8. ಕಡ ಪಡೆದು ಧರಿಸಿರುವ ಬಳೆ (3)
9. ಈ ರೀತಿ ಕಾಪಾಡು (3)
10. ಸಂಖ್ಯೆಗಳ ಮೂಲಕ ಮಾಡುವ ಗಣಿತ (5)
11. ಇದು ಹೂವಿನ ಶರ (4)
13. ಹೂವು ಇಲ್ಲಿದೆ (3)
14. ಜನರೊಳಗಿರುವ ಹುಟ್ಟು! (3)

1		2		3	■	4		
	■		■	5			■	■
	■	6			■	7	8	
	■		■	■	■	■		■
■	9		■	■	■	10		■
■		■	■	■	■		■	11
12		13	■	14			■	
■	■	15			■		■	
16			■	17				

5316ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ತರಬೇತಿ 3.ಅಂಗರಾಗ
5.ಸೀಮಿತ 6.ವನಚರ
8.ರಕುತ 10.ಪಾನಕ
11.ಮಹಿಳೆ 12.ಸುದಿನ
14.ನಲಕಸಂ 17.ವಿನಯ
18.ಕಡೆಗೋಲು
19.ನಮಸ್ಕಾರ

ಮೇಲಿಂದ ಕೆಳಕ್ಕೆ:
1.ತನಿವ 2.ತಿಸೀರ
3.ಅಂತರ 4.ಗತ್ತು
7.ನಳನಳಿಸು
9.ತಲೆಹಿಡುಕ 13.ನವಿಲು
14.ನಯನ 15.ಸಂಸಾರ
16.ಶುಕ

ಸುಡೊಕು 5703

	9	2		3			6	8
4					7	3		9
		3		9		1		7
		4			9		8	
	2			5				3
8			2				4	
	4			2		8		
			9					5
2		8		7			3	

5702 ಸುಡೊಕು

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

7	9	4	3	5	8	6	2	1
3	8	5	2	6	1	7	9	4
2	1	6	4	9	7	8	3	5
5	2	7	8	3	9	1	4	6
4	6	1	7	2	5	3	8	9
9	3	8	6	1	4	5	7	2
1	5	2	9	8	3	4	6	7
8	4	9	5	7	6	2	1	3
6	7	3	1	4	2	9	5	8

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಮೇ 13, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ವಸಂತ ಋತು ತಿಥಿ: ವೈಶಾಖ ಕೃಷ್ಣ ಅಷ್ಟಮಿ ಗಂ. 06-51ನಂತರ ನವಮಿ ಗಂ. 28-43 ನಕ್ಷತ್ರ: ಧನಿಷ್ಠ ಗಂ. 11-35, ಯೋಗ: ಬ್ರಹ್ಮ ಗಂ. 09-22 ಕರಣ: ಕೌಲವ ಗಂ. 06-51, ಮೇಷ ಮಾಸದ 29 ನೇ ದಿನ, ಮಳೆನಕ್ಷತ್ರ: ಕೃತ್ತಿಕ 1. ರಾಹುಕಾಲ : ಬೆಳಿಗ್ಗೆ 09-00 – 11-30 , ಸೂರ್ಯೋದಯ : 06-09 ಸೂರ್ಯಾಸ್ತ : 06-45 ಮುಸ್ಲಿಂ ದಿನಾಂಕ : 22 ಶವ್ವಾಲ್
ಅದೃಷ್ಟ ಸಂಖ್ಯೆ : 9, 7

ಮೇಷ: ಕೆಲವೊಂದು ವಿಚಾರಗಳನ್ನು ಅರಿತ ಮೇಲೆ ನೀವಿರುವ ಜಾಗದಲ್ಲಿ ನೀವಂದುಕೊಂಡ ರೀತಿಯ ಭವಿಷ್ಯವೇ ಇರುವುದೇ ಎಂಬ ಚಿಂತೆ ಉಂಟಾಗುತ್ತದೆ. ವೃತ್ತಿರಂಗದಲ್ಲಿ ಪರಿಶ್ರಮಕ್ಕೆ ತಕ್ಕ ಯಶಸ್ಸು ದೊರೆಯುವುದು.

ವೃಷಭ: ಮನಸ್ಸಿನಲ್ಲಿರುವ ದುಗುಡಗಳನ್ನು ಹೇಳಿಕೊಳ್ಳಲು ಸರಿಯಾದ ವ್ಯಕ್ತಿಯ ಕೊರತೆ ಉಂಟಾಗುವುದು. ಯಾವುದೋ ಒಂದು ನಂಬಿಕೆಯ ಮೇಲೆ ಸಾಗುತ್ತಿದ್ದ ನಿಮ್ಮ ಜೀವನದಲ್ಲಿ ಇತರರ ಮಾತುಗಳು ವ್ಯತಿರಿಕ್ತ ಪರಿಣಾಮ ಬೀರಬಹುದು.

ಮಿಥುನ: ಮದುವೆಯ ವಿಚಾರದಲ್ಲಿ ಪದೇ ಪದೇ ಬರುತ್ತಿದ್ದ ವಿಘ್ನಗಳು ಸ್ನೇಹಿತನ ಸಹಾಯದಿಂದ ನಿವಾರಣೆಯಾಗುವುದು. ತಂತ್ರಜ್ಞಾನದಲ್ಲಿರುವ ಅನುಭವವು ಹೊಸ ಕಾರ್ಯಕ್ಷೇತ್ರದಲ್ಲಿ ಕಡಿಮೆ ಎಂದು ಅನ್ನಿಸುವುದು.

ಕರ್ಕಾಟಕ: ಮನೆಯಲ್ಲಿ ನಿಮ್ಮ ಶಕ್ತಿಗೂ ಮೀರಿ ಜವಾಬ್ದಾರಿಗಳನ್ನು ತೆಗೆದುಕೊಳ್ಳುತ್ತಿದ್ದರೂ ಇತರರು ನಿಮ್ಮ ಬಗ್ಗೆ ಲಘುವಾಗಿ ಮಾತನಾಡಿದಾಗ ಕೋಪ ಬಂದರೂ ಸುಮ್ಮನೆ ಇರಬೇಕಾದ ಪರಿಸ್ಥಿತಿ ಹೈರಾಣಾಗಿಸುತ್ತದೆ.

ಸಿಂಹ: ಭಾವನೆಗಳಿಗೆ ಕುಟುಂಬದವರು ಬೆಲೆ ಕೊಡದಿರುವುದು ಮಾನಸಿಕವಾಗಿ ನಿಮ್ಮನ್ನು ಬಹಳವಾಗಿ ನೊಂದುಕೊಳ್ಳುವಂತೆ ಮಾಡುತ್ತದೆ. ತಾಪಮಾನಕ್ಕೆ ತಕ್ಕ ಹಾಗೆ ನಿಮ್ಮ ಆಹಾರ ಪದ್ಧತಿಗಳನ್ನು ಬದಲಾಯಿಸುವುದು ಉತ್ತಮ.

ಕನ್ಯಾ: ಅನ್ಯರ ಸಮಸ್ಯೆಗಳಿಗೆ ನಿಮ್ಮ ಮಾತುಗಳಿಂದಾಗಿ ಪರಿಹಾರ ದೊರೆತಿರುವುದು ಸಂತೋಷಕ್ಕೆ ಕಾರಣವಾಗುತ್ತದೆ. ಮಗುವಿನ ಮೊದಲ ಮಾತು ಅಥವಾ ಮಕ್ಕಳ ಅಭಿವೃದ್ಧಿಯನ್ನು ಕಂಡು ಪುಳಕಿತಗೊಳ್ಳುವಿರಿ.

ತುಲಾ: ಪ್ರತಿದಿನವು ಗಣಕಯಂತ್ರದ ಮುಂದೆಯೆ ನಡೆಯುವ ಕೆಲಸದ ಮೇಲೆ ಬೇಸರ ಬರಬಹುದು. ದಿನಚರಿಯ ಬದಲಾವಣೆಗಾಗಿ ಸಣ್ಣ ಪ್ರಮಾಣದ ಪ್ರವಾಸಕ್ಕಾಗಿ ಯೋಚನೆ ನಡೆಸುವಿರಿ. ಪ್ರಾಣಿ ಹಿಂಸೆಯನ್ನು ನೋಡಬೇಕಾದೀತು.

ವೃಶ್ಚಿಕ: ರಕ್ಷಕರು ಕಾವಲಿಗೆ ಇರುವ ಸಮಯದಲ್ಲಿ ಸೋಮಾರಿತನವನ್ನು ಮಾಡಬೇಡಿ. ನಿರ್ಲಕ್ಷ್ಯ ಹಲವು ನಷ್ಟಕ್ಕೆ ಕಾರಣವಾಗಬಹುದು. ಯಾವುದೇ ಕಾರ್ಯ ಆರಂಭಿಸುವ ಮುನ್ನ ಪರಂಪರೆಯಲ್ಲಿ ನಡೆದು ಬಂದ ವಿಧಿ ಆಚರಿಸಿ.

ಧನು: ಎಲ್ಲರಿಗಿಂತ ಕಡಿಮೆ ಪರಿಶ್ರಮದಲ್ಲಿ ಒಳ್ಳೆಯ ಫಲಿತಾಂಶ ಬರುವುದು ಉಳಿದವರಿಗೆ ಆಶ್ಚರ್ಯ ಚಕಿತ ವಿಷಯವಾಗಿ ತೋರುವುದು. ತನು, ಮನ, ಧನ ಅರ್ಪಿಸಿ ಮಾಡಿದ ಸಮಾಜಕಾರ್ಯ ಜನಮನ್ನಣೆಗೊಳಗಾಗುವುದು.

ಮಕರ: ಹೆಂಡತಿಯನ್ನು ಉದ್ದೇಶಿಸಿ ಇತರರು ಹೇಳುವ ದೂರಿನ ಮಾತುಗಳನ್ನು ಕೇಳುವುದು ಸಹಿಸಲಾರದ ವಿಷಯವಾಗುತ್ತದೆ. ಪ್ರಾಣಾಯಾಮ ಧ್ಯಾನವನ್ನು ನಿರಂತರವಾಗಿ ಮಾಡುವ ಅಭ್ಯಾಸ ಮಾಡುವುದು ಒಳ್ಳೆಯದು.

ಕುಂಭ: ಸಕುಟುಂಬ ಸಮೇತರಾಗಿ ಮನೆದೇವರ ದರ್ಶನ ಮಾಡುವ ಆಸೆ ಮತ್ತೊಮ್ಮೆ ಕನಸಾಗಿ ಉಳಿಯುತ್ತದೆ. ಈವರೆಗೆ ಗಳಿಸಿದ ಒಳ್ಳೆಯ ಹೆಸರಿಗೆ ಕುತಂತ್ರಿಗಳು ಮಸಿ ಬಳಿಯುವ ಉಪಾಯ ಮಾಡುವರು.

ಮೀನ: ಸ್ವಚ್ಛಂದವಾಗಿ ಯೌವನವನ್ನು ಅನುಭವಿಸುತ್ತಿರುವವರಿಗೆ ಮದುವೆ ಎನ್ನುವ ಜವಾಬ್ದಾರಿ ಹೊರೆಸಲು ಪರಿವಾರದವರೆಲ್ಲರು ಕಾತುರರಾಗುವರು. ವೈದ್ಯರನ್ನು ಭೇಟಿ ಮಾಡುವ ಸನ್ನಿವೇಶ ಎದುರಾಗುವವು.

ಬೆಟ್ಟಿಂಗ್ ಭರಾಟೆ

ಭೂಮಿ, ಹಣ ಪಣಕ್ಕೆ

ಬೆಟ್ಟದಪುರ/ ಎಚ್.ಡಿಕೋಟೆ/ ಕೆ.ಆರ್.ನಗರ (ಮೈಸೂರು ಜಿಲ್ಲೆ): ಜಿಲ್ಲೆಯಲ್ಲಿ ಬೆಟ್ಟಿಂಗ್ ಭರಾಟೆ ಜೋರಾಗಿದ್ದು, ಪಣಕ್ಕಿಟ್ಟಿರುವ ಸ್ವತ್ತು, ಹಣದ ಬಗ್ಗೆ ಮಾತನಾಡಿರುವ ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿವೆ. ಕೆಲವರು ಕರಾರು ಪತ್ರಗಳನ್ನೂ ಬರೆದುಕೊಟ್ಟಿದ್ದಾರೆ.

ಪಿರಿಯಾಪಟ್ಟಣ ಕ್ಷೇತ್ರದಲ್ಲಿ ಜೆಡಿಎಸ್ ಅಭ್ಯರ್ಥಿ ಕೆ.ಮಹದೇವ್ ಹಾಗೂ ಕಾಂಗ್ರೆಸ್ ಅಭ್ಯರ್ಥಿ ಕೆ ವೆಂಕಟೇಶ್ ಪರ ಕಾರ್ಯಕರ್ತರು ಬೆಟ್ಟಿಂಗ್‌ಗೆ ಆಹ್ವಾನ ನೀಡುತ್ತಿದ್ದಾರೆ.

'ಕಾಂಗ್ರೆಸ್ ಅಭ್ಯರ್ಥಿ ಕೆ. ವೆಂಕಟೇಶ್ ಗೆಲುವು ಪಡೆಯುವರೆಂದು 1 ಎಕರೆ 37 ಗುಂಟೆ ಜಮೀನನ್ನು ಬೆಟ್ಟಿಂಗ್ ಕಟ್ಟುತ್ತೇನೆ' ಎಂದು ಬೆಟ್ಟದಪುರ ಹೋಬಳಿಯ ಹಾರನಹಳ್ಳಿ ನಿವಾಸಿ ಯೋಗೇಶ್ ಗೌಡ ಎಂಬುವರು ಆಹ್ವಾನ ನೀಡಿರುವ ವಿಡಿಯೊ ಹರಿದಾಡಿದೆ.

ಮೇಕೆಯನ್ನು ಬಾಜಿಗೆ ಇಟ್ಟರು

ಶ್ರೀರಂಗಪಟ್ಟಣ (ಮಂಡ್ಯ ಜಿಲ್ಲೆ): ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಪರ ತಾಲ್ಲೂಕಿನ ದೊಡ್ಡಪಾಳ್ಯದಲ್ಲಿ ಮೇಕೆಗಳನ್ನು ಪಣಕ್ಕಿಟ್ಟು ಎದುರಾಳಿಗಳನ್ನು ಬಾಜಿಗೆ ಕರೆದಿದ್ದಾರೆ.

ಗ್ರಾಮದ ನವೀನ್ ಮತ್ತು ಡಿ.ಆರ್. ಸೋಮೇಶ್ ತಮ್ಮ ಒಂದೊಂದು ಮೇಕೆಗಳನ್ನು ಪಣಕ್ಕಿಡುವುದಾಗಿ ಘೋಷಿಸಿದರು. ಊರಿನ ಗಣೇಶ ದೇವಾಲಯದ ಮುಂದೆ ಮೇಕೆಗಳನ್ನು ನಿಲ್ಲಿಸಿ ಬಾಜಿ ಕಟ್ಟುವವರು ಬನ್ನಿ ಎಂದು ಬಹಿರಂಗವಾಗಿ ಆಹ್ವಾನ ನೀಡಿದರು. ₹ 50 ಸಾವಿರ ಬೆಲೆ ಬಾಳುವ ಎರಡು ಮೇಕೆಗಳನ್ನು ಪಣಕ್ಕೆ ಇಡಲು ಸಿದ್ಧರಿದ್ದೇವೆ ಎಂದು ಹೇಳಿದರು.

'ಜೆಡಿಎಸ್, ಬಿಜೆಪಿ ಕಡೆಯಿಂದ ಯಾರೊಬ್ಬರೂ ಬಾಜಿಗೆ ಬಂದಿಲ್ಲ' ಎಂದು ಕಾಂಗ್ರೆಸ್ ಕಾರ್ಯಕರ್ತರಾದ ಶಿವಕುಮಾರ್, ಶ್ರೀಕಂಠು, ರೇವಣ್ಣ, ಪ್ರೇಮಕುಮಾರ್ ಹೇಳಿದರು.

ಮತ ರಹಸ್ಯ: ಯಾರಿಗೆ ಭವಿಷ್ಯ

ಒಂದನೇ ಪುಟದಿಂದ...

ಮತ ಎಣಿಕೆ ಪೂರ್ಣಗೊಳ್ಳುತ್ತಿದ್ದಂತೆಯೇ ಪಕ್ಷದ ಶಾಸಕರನ್ನು ಕರೆದೊಯ್ದು ಸುರಕ್ಷಿತ ಸ್ಥಳದಲ್ಲಿ ಹಿಡಿದಿಟ್ಟುಕೊಳ್ಳುವ ತಂತ್ರಗಾರಿಕೆಯನ್ನು ಆಯಾ ಪಕ್ಷಗಳ ನಾಯಕರು ಮಾಡುತ್ತಿದ್ದಾರೆ. ಬಿಜೆಪಿ ಮತ್ತು ಕಾಂಗ್ರೆಸ್ ನಾಯಕರು ಶುಕ್ರವಾರವೇ ಸಭೆಗಳನ್ನೂ ನಡೆಸಿದ್ದಾರೆ. ಜೆಡಿಎಸ್ ವರಿಷ್ಠರು ದೂರವಾಣಿ ಮೂಲಕ ತಮ್ಮ ಅಭ್ಯರ್ಥಿಗಳಿಗೆ ಸಂದೇಶ ರವಾನಿಸಿದ್ದಾರೆ.

ಚುನಾವಣಾ ಕಣದಲ್ಲಿ ಪ್ರಬಲರಾಗಿರುವ ಪಕ್ಷೇತರರು ಮತ್ತು ಕಡಿಮೆ ಸಂಖ್ಯೆಯ ಸ್ಥಾನ ಗಳಿಸಬಹುದಾದ ಪಕ್ಷಗಳ ಮೇಲೆ ಪ್ರಮುಖ ರಾಜಕೀಯ ಪಕ್ಷಗಳು ಕಣ್ಣು ನೆಟ್ಟಿವೆ. ಅತಂತ್ರ ಸ್ಥಿತಿ ನಿರ್ಮಾಣವಾದರೆ ಅಂತಹ ಶಾಸಕರನ್ನು ಸೆಳೆದು ಸರ್ಕಾರ ರಚನೆಯ ಕಸರತ್ತಿಗೆ ಕೈಹಾಕುವುದಕ್ಕೆ ತಂತ್ರಗಾರಿಕೆ ನಡೆಸುತ್ತಿವೆ.

ಫಲಿತಾಂಶದ ಮುನ್ನಾದಿನ ಗರಿಗೆದರಿದ ರಾಜಕೀಯ ಚಟುವಟಿಕೆ • ಮುಂದಿನ ನಡೆ ಬಗ್ಗೆ ಮೂರೂ ಪಕ್ಷಗಳ ಮುಖಂಡರ ಚರ್ಚೆ

'ದೊಡ್ಡ ಪಕ್ಷವಾದರೆ ಸರ್ಕಾರ ರಚನೆ ಕಸರತ್ತು'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈ ಬಾರಿ ಏಕೈಕ ಅತಿ ದೊಡ್ಡ ಪಕ್ಷವಾಗಿ ಹೊರ ಹೊಮ್ಮಿದರೆ ಮಾತ್ರ ಜೆಡಿಎಸ್ ಅಥವಾ ಪಕ್ಷೇತರರ ನೆರವಿನೊಂದಿಗೆ ಸರ್ಕಾರ ರಚಿಸುವ ಕಸರತ್ತಿಗೆ ಕೈ ಹಾಕುವ ಬಗ್ಗೆ ಬಿಜೆಪಿಯಲ್ಲಿ ಚರ್ಚೆ ನಡೆದಿದೆ.

'ಪಕ್ಷದ ಆಂತರಿಕ ಲೆಕ್ಕಾಚಾರದ ಪ್ರಕಾರ ಈ ಬಾರಿ 105 ರಿಂದ 120 ಸ್ಥಾನಗಳನ್ನು ಗೆಲ್ಲುವ ಸಾಧ್ಯತೆ ಇದೆ. ಒಂದು ವೇಳೆ ಮ್ಯಾಜಿಕ್ ಸಂಖ್ಯೆ 113 ದಾಟಿದರೆ ಪಕ್ಷೇತರರನ್ನು ಸೇರಿಸಿಕೊಂಡು ಸರ್ಕಾರ ರಚಿಸುವುದು. ಸಂಖ್ಯೆ 95 ರಿಂದ 113 ರ ಒಳಗೆ ಬಂದು ನಿಂತರೆ ಆಗ ಜೆಡಿಎಸ್ ಮತ್ತು ಪಕ್ಷೇತರರ ಜತೆ ಕೈ ಜೋಡಿಸುವುದು ಅನಿವಾರ್ಯ. ಈ ಹಿನ್ನೆಲೆಯಲ್ಲಿ ಗೆಲ್ಲಬಹುದಾದ ಪಕ್ಷೇತರರು ಮತ್ತು ಜೆಡಿಎಸ್ ಜತೆ ಸಂಪರ್ಕ ಸಾಧಿಸಲು ಹಲವು ನಾಯಕರಿಗೆ ಸೂಚನೆ ನೀಡಲಾಗಿದೆ' ಎಂದು ಬಿಜೆಪಿ ಮೂಲಗಳು ತಿಳಿಸಿವೆ.

'2018 ರಲ್ಲಿ ಏಕೈಕ ದೊಡ್ಡ ಪಕ್ಷವಾಗಿ ಹೊರಹೊಮ್ಮಿದ್ದರೂ ಸರ್ಕಾರ ರಚಿಸಲಾಗದ ಸ್ಥಿತಿ ಉದ್ಭವಿಸಿತ್ತು. ಯಡಿಯೂರಪ್ಪ ಮುಖ್ಯಮಂತ್ರಿಯಾಗಿ ಪ್ರಮಾಣ ಸ್ವೀಕರಿಸಿದರೂ ಸಂಖ್ಯೆ ಹೊಂದಿಸಲಾಗದೇ ರಾಜೀನಾಮೆ ನೀಡಿ ಮುಖಭಂಗ ಅನುಭವಿಸಬೇಕಾಯಿತು. ಆಗ ಜೆಡಿಎಸ್, ಕಾಂಗ್ರೆಸ್ ಜತೆ ಕೈ ಜೋಡಿಸಿತ್ತು. ಈ ಬಾರಿ ಕಾಂಗ್ರೆಸ್ ಅತಿ ಹೆಚ್ಚು ಸ್ಥಾನಗಳನ್ನು ಗೆದ್ದು, ಬಿಜೆಪಿ ಎರಡನೇ ಸ್ಥಾನಕ್ಕೆ ಕುಸಿದರೆ, ಅಂದರೆ 90ಕ್ಕಿಂತಲೂ ಕಡಿಮೆ ಸ್ಥಾನ ಗೆದ್ದರೆ ಸರ್ಕಾರ ರಚನೆ ಕಸರತ್ತಿಗೆ ಕೈ ಹಾಕದಿರಲು ತೀರ್ಮಾನಿಸಲಾಗಿದೆ' ಎಂದು ತಿಳಿಸಿವೆ.

'ಜೆಡಿಎಸ್ ಜತೆ ಈ ಹಿಂದೆ ಸರ್ಕಾರ ರಚಿಸಿ ಕಹಿ ಅನುಭವಿಸಿದ್ದ ಹಿನ್ನೆಲೆಯಲ್ಲಿ ಈ ಬಾರಿ ಫಲಿತಾಂಶ ಅತಂತ್ರ ಬಂದರೆ ಅವರ ಜತೆ ಸೇರಿ ಸರ್ಕಾರ ರಚಿಸಬೇಕೇ ಎಂಬ ಬಗ್ಗೆಯೂ ಚರ್ಚೆಯೂ ನಡೆದಿದೆ. ಜೆಡಿಎಸ್‌ನ ಎಲ್ಲ ಷರತ್ತುಗಳಿಗೆ ಮಣೆ ಹಾಕುತ್ತಲೇ ಹೋದರೆ ಸರ್ಕಾರ ನಡೆಸುವುದೇ ಕಷ್ಟವಾಗಬಹುದು. ಆದ್ದರಿಂದ ಫಲಿತಾಂಶದ ದಿಕ್ಕು ದೆಸೆ ನೋಡಿ ಆ ಬಳಿಕವೇ ಎಚ್ಚರಿಕೆಯ ಹೆಜ್ಜೆ ಇಡಬೇಕು. ಪರ್ಯಾಯ ಮಾರ್ಗಗಳ ಬಗ್ಗೆಯೂ ಚಿಂತನೆ ನಡೆಸಲಾಗಿದೆ' ಎಂದು ಮೂಲಗಳು ಹೇಳಿವೆ. ಪಕ್ಷದ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಗುರುವಾರ ಟ್ವೀಟ್ ಮಾಡಿದ ಪ್ರಕಾರ 31 ಸಾವಿರ ಬೂತ್‌ಗಳಲ್ಲಿ ಲೀಡ್ ಇದೆ. ಅವರು ನಿಖರ ಮಾಹಿತಿಯನ್ನು ಇಟ್ಟುಕೊಂಡೇ ಟ್ವೀಟ್ ಮಾಡಿರುತ್ತಾರೆ. ಈ ಪ್ರಕಾರ 105 ರಿಂದ 120 ಸ್ಥಾನಗಳವರೆಗೆ ಗೆಲ್ಲಬಹುದು ಎಂಬ ಲೆಕ್ಕಾಚಾರ ಮಾಡಲಾಗಿದೆ' ಎಂದು ಬಿಜೆಪಿಯ ನಾಯಕರೊಬ್ಬರು ತಿಳಿಸಿದರು.

ಮುಂದಿನ ನಡೆ: ಬಿಎಸ್‌ವೈ–ಬೊಮ್ಮಾಯಿ ಚರ್ಚೆ



ಸಿ.ಎಂ ಬಸವರಾಜ ಬೊಮ್ಮಾಯಿ ಅವರು ಬಿ.ಎಸ್. ಯಡಿಯೂರಪ್ಪ ಅವರನ್ನು ಭೇಟಿ ಚರ್ಚಿಸಿದರು. ಸಚಿವರಾದ ಮುರುಗೇಶ ನಿರಾಣಿ, ಬೈರತಿ ಬಸವರಾಜ, ರಾಜ್ಯಸಭೆ ಸದಸ್ಯ ಲೆಹರ್ ಸಿಂಗ್, ಮಾಜಿ ಶಾಸಕ ಎ.ಟಿ. ರಾಮಸ್ವಾಮಿ ಇದ್ದರು.

ಬಿಜೆಪಿಯ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಅವರನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಅವರ ಸಂಪುಟದ ಸಹದ್ಯೋಗಿಗಳು ಶುಕ್ರವಾರ ಭೇಟಿ ಮಾಡಿ ಸಮಾಲೋಚನೆ ನಡೆಸಿದರು.

ಪಕ್ಷ ಎಷ್ಟು ಸ್ಥಾನಗಳನ್ನು ಗೆಲ್ಲಬಹುದು, ಬಹುಮತ ಸಿಗದೇ ಏಕೈಕ ದೊಡ್ಡ ಪಕ್ಷವಾಗಿ ಹೊರ ಹೊಮ್ಮಿದರೆ ಮುಂದೇನು ಮಾಡಬೇಕು ಎಂಬ ಬಗ್ಗೆ ಸಭೆಯಲ್ಲಿ ಚರ್ಚಿಸಿದರು.

ಮತದಾನ ಬಳಿಕ ಬೂತ್ ಕಮಿಟಿಗಳಿಂದ ಸಂಗ್ರಹಿಸಿದ ಮಾಹಿತಿ ಪ್ರಕಾರ ಸರಳ ಬಹುಮತಕ್ಕೆ ಬೇಕಾದ ಸಂಖ್ಯೆಯನ್ನೂ ದಾಟಬಹುದು. ಸರಳ ಬಹುಮತಕ್ಕೆ ಕೊರತೆ ಆದರೆ ಗೆಲ್ಲಬಹುದಾದ ಪಕ್ಷೇತರರನ್ನು ಸಂಪರ್ಕಿಸಲು ಯಡಿಯೂರಪ್ಪ ಅವರು ಬೊಮ್ಮಾಯಿ ಮತ್ತು ಸಚಿವರಿಗೆ ಸಲಹೆ ನೀಡಿದರು ಎಂದು ಮೂಲಗಳು ತಿಳಿಸಿವೆ. ಯಾವ ಕ್ಷೇತ್ರಗಳಲ್ಲಿ ಪಕ್ಷ ಗೆಲ್ಲಲಿದೆ, ಯಾವ ಕ್ಷೇತ್ರಗಳಲ್ಲಿ 50–50ರ ಪರಿಸ್ಥಿತಿ ಇದೆ ಎಂಬ ಮಾಹಿತಿಯನ್ನೂ ನೀಡಿದರು. ಈ ಮಾಹಿತಿಗಳನ್ನು ಪಕ್ಷದ ವರಿಷ್ಠರಿಗೂ ನೀಡಿರುವುದಾಗಿ ಬೊಮ್ಮಾಯಿ ಅವರು ಯಡಿಯೂರಪ್ಪಗೆ ವಿವರಿಸಿದರು.

ಎಲ್ಲರೂ ನನಗೆ ಸಹಕಾರ ಕೊಡುತ್ತಾರೆ: ಡಿ.ಕೆ.ಶಿವಕುಮಾರ್



ಡಿ.ಕೆ. ಶಿವಕುಮಾರ್

ಬೆಂಗಳೂರು: 'ಸಂಕಷ್ಟದ ಕಾಲದಲ್ಲಿ ಪಕ್ಷವನ್ನು ಮುನ್ನಡೆಸಿದ್ದೇನೆ. ಈಗ ಹಿರಿಯರು, ಕಿರಿಯರು ಎಲ್ಲರೂ ನನಗೆ ಸಹಕಾರ ಕೊಡುತ್ತಾರೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ವಿಶ್ವಾಸ ವ್ಯಕ್ತಪಡಿಸಿದರು.

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡುವಾಗ 'ಇಪ್ಪತ್ತು ವರ್ಷಗಳಿಂದ ಕಾಯುತ್ತಿದ್ದ ಕಾಲ ಈಗ ಬಂದಿದೆಯೆ' ಎಂಬ ಪ್ರಶ್ನೆಗೆ, 'ದಿನೇಶ್ ಗುಂಡೂರಾವ್ ಸ್ವಯಂಪ್ರೇರಿತವಾಗಿ ರಾಜೀನಾಮೆ ಕೊಟ್ಟಾಗ ಸೋನಿಯಾಗಾಂಧಿ ಅವರು ನನಗೆ ಅಧಿಕಾರ ಕೊಟ್ಟರು. ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಅವರೂ ಉಪ ಚುನಾವಣೆ ಮುಗಿದ ಬಳಿಕ ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡುವುದಾಗಿ ಹೇಳಿದ್ದರು. ನಾನು ಅಧಿಕಾರ ಸ್ವೀಕರಿಸಿದ ದಿನದಿಂದ ನಿದ್ದೆ ಇಲ್ಲದೆ ಕೆಲಸ ಮಾಡಿದ್ದೇನೆ' ಎಂದರು.

'ಪಕ್ಷಕ್ಕೆ ಏನು ಮಾಡಬೇಕೋ ಎಲ್ಲವನ್ನೂ ಮಾಡಿದ್ದೇನೆ. ಶ್ರಮ ಹಾಕಿ ದುಡಿದಿದ್ದೇನೆ. ಈಗ ಬೇರೆ ಯಾವ ಸಂದರ್ಭವೂ ಉದ್ಭವವಾಗುವುದಿಲ್ಲ. ಎಲ್ಲರೂ ನನಗೆ ಸಹಕಾರ ಕೊಟ್ಟು, ಆಶೀರ್ವಾದ ಮಾಡುತ್ತಾರೆ. ಒಂದು ಉತ್ತಮವಾದ ಕಾಂಗ್ರೆಸ್ ಸರ್ಕಾರ ನೀಡುತ್ತೇವೆ' ಎಂದು ಹೇಳಿದರು.

'ಕಾಂಗ್ರೆಸ್‌ನಲ್ಲಿ ಅಧಿಕಾರ ಹಂಚಿಕೆ ಚರ್ಚೆ ನಡೆದಿದೆಯೇ' ಎಂಬ ಪ್ರಶ್ನೆಗೆ, 'ಯಾವುದೇ ರೀತಿಯ ಅಧಿಕಾರ ಹಂಚಿಕೆ ಚರ್ಚೆ ನಡೆದಿಲ್ಲ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ನಾಯಕರಾದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಏನು ತೀರ್ಮಾನ ಮಾಡುತ್ತಾರೋ ಅದೇ ಅಂತಿಮ' ಎಂದರು.

ಜೆಡಿಎಸ್ ನಾಯಕ ಎಚ್.ಡಿ.ಕುಮಾರಸ್ವಾಮಿ ಅವರ ಸಿಂಗಪುರ ಪ್ರವಾಸ ಕುರಿತ ಪ್ರಶ್ನೆಗೆ, 'ಅವರು ನನಗಿಂತ ಒಂದು ವರ್ಷ ಹಿರಿಯರು. ಆರೋಗ್ಯ ಸುಧಾರಣೆಗಾಗಿ ವಿಶ್ರಾಂತಿಗೆ ಹೋಗಿದ್ದಾರೆ. ನಾನು ವಿಶ್ರಾಂತಿ ಪಡೆಯಲು ಯೋಚಿಸಿದ್ದೆ. ಆದರೆ, ನಮ್ಮಲ್ಲಿ ಬೇಡ ಎನ್ನುತ್ತಿದ್ದಾರೆ' ಎಂದು ಹೇಳಿದರು.

2018ರ ಸ್ಥಿತಿ ಮರುಕಳಿಸದಂತೆ ಜೆಡಿಎಸ್ ಎಚ್ಚರಿಕೆ ಹೆಜ್ಜೆ



ಎಚ್.ಡಿ.ದೇವೇಗೌಡ

ಬೆಂಗಳೂರು: ಅತಂತ್ರ ಫಲಿತಾಂಶದ ನಿರೀಕ್ಷೆಗಳಿಂದಾಗಿ ಜೆಡಿಎಸ್ ಪಾಳಯದಲ್ಲಿ ಚಟುವಟಿಕೆಗಳು ಗರಿಗೆದರಿವೆ. ಪಕ್ಷದ ನಾಯಕರು ಒಂದು ಕಡೆ ಮೈತ್ರಿಯ ಬಾಗಿಲು ಮುಕ್ತವಾಗಿರಿಸಿದರೆ, ಮತ್ತೊಂದೆಡೆ ಗೆಲ್ಲಬಹುದಾದ ಪಕ್ಷದ ಅಭ್ಯರ್ಥಿಗಳ ಜತೆ ನಿರಂತರ ಸಂಪರ್ಕದಲ್ಲಿದ್ದಾರೆ.

2018ರ ಚುನಾವಣೆಯ ನಂತರದ ಪರಿಸ್ಥಿತಿ ಈ ಬಾರಿ ಉದ್ಭವಿಸದಂತೆ ನೋಡಿಕೊಳ್ಳಲು ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ.ದೇವೇಗೌಡ ಅವರೇ ಸ್ವತಃ ಕಣಕ್ಕೆ ಇಳಿದಿದ್ದಾರೆ. ಎರಡು ದಿನಗಳಿಂದ ಪದ್ಮನಾಭನಗರದ ತಮ್ಮ ಮನೆಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದರೂ, ಪಕ್ಷದ ಹಾಲಿ ಶಾಸಕರು ಹಾಗೂ ಗೆಲ್ಲಬಹುದಾದ ಅಭ್ಯರ್ಥಿಗಳನ್ನು ಕರೆಸಿಕೊಂಡು, ಕೆಲವರಿಗೆ ಕರೆ ಮಾಡಿ ಫಲಿತಾಂಶದ ಲೆಕ್ಕಾಚಾರಗಳ ಕುರಿತು ಮಾತುಕತೆ ನಡೆಸುವ ಮೂಲಕ ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಿದ್ದಾರೆ. ಶಾಸಕರಾದ ಜಿ.ಟಿ.ದೇವೇಗೌಡ, ಎಚ್.ಡಿ.ರೇವಣ್ಣ ಅವರೊಂದಿಗೆ ಶುಕ್ರವಾರ ಚರ್ಚೆ ನಡೆಸಿದ ದೇವೇಗೌಡರು, ಹಳೆ ಮೈಸೂರು, ಹಾಸನ ಭಾಗದ ಅಭ್ಯರ್ಥಿಗಳೊಂದಿಗೆ ನಿರಂತರ ಸಂಪರ್ಕದಲ್ಲಿರಲು ಸೂಚಿಸಿದ್ದಾರೆ ಎಂದು ಜೆಡಿಎಸ್ ಮೂಲಗಳು ಖಚಿತಪಡಿಸಿವೆ. 2018ರಲ್ಲಿ ಆಪರೇಷನ್ ಕಮಲದಿಂದ ಮೂವರು ಶಾಸಕರನ್ನು ಜೆಡಿಎಸ್ ಕಳೆದುಕೊಂಡಿತ್ತು. ಜೆಡಿಎಸ್‌ನಿಂದ ಗೆದ್ದಿದ್ದ ಮಹಾಲಕ್ಷ್ಮಿ ಲೇಔಟ್ ಕ್ಷೇತ್ರದ ಕೆ.ಗೋಪಾಲಯ್ಯ, ಹುಣಸೂರಿನ ಎಚ್.ವಿಶ್ವನಾಥ್, ಕೆ.ಆರ್.ಪೇಟೆಯ ಕೆ.ಸಿ. ನಾರಾಯಣಗೌಡ ಅವರು ಬಳಿಕ ಬಿಜೆಪಿಗೆ ಸೇರಿದ್ದರು.

ಈಗ ಆಪರೇಷನ್ ಅಸಾಧ್ಯ: 'ಜೆಡಿಎಸ್ ಟಿಕೆಟ್ ನೀಡಿರುವ, ಗೆಲ್ಲುವ ಅಭ್ಯರ್ಥಿಗಳೆಲ್ಲ ಗರತಿಯರೇ ಇದ್ದಾರೆ. ಹಿಂದಿನ ಸಲದಂತೆ ಈ ಬಾರಿ ಆಪರೇಷನ್ ಮಾಡಿ ಸೆಳೆದುಕೊಳ್ಳುವುದು ಅಸಾಧ್ಯ' ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ.ಇಬ್ರಾಹಿಂ ಹೇಳಿದ್ದಾರೆ. 'ಅತಂತ್ರ ವಿಧಾನಸಭೆ ನಿರ್ಮಾಣವಾದರೆ ಜೆಡಿಎಸ್ ಶಾಸಕರನ್ನು ಹಿಡಿದಿಡುವ ಅಗತ್ಯವಿಲ್ಲ' ಎಂದು ಅವರು ಪ್ರತಿಪಾದಿಸಿದ್ದಾರೆ.



ಯಾರಿಗೆ ಹಾರ? ಚುನಾವಣಾ ಫಲಿತಾಂಶದ ಮುನ್ನಾ ದಿನ ಬೆಂಗಳೂರಿನ ಮಾರುಕಟ್ಟೆಯಲ್ಲಿ ವ್ಯಾಪಾರಿಗಳು ಸೇಬುಹಣ್ಣಿನ ಹಾರ ಸಿದ್ಧಗೊಳಿಸಿದರು –ಪ್ರಜಾವಾಣಿ ಚಿತ್ರ/ ಕಿಶೋರ್ ಕುಮಾರ್ ಬೋಳಾರ್

ಶಾಸಕರ ಕರೆತರಲು ಉಸ್ತುವಾರಿ ನೇಮಕ

'ಆಪರೇಷನ್' ತಡೆಗೆ ಕಾಂಗ್ರೆಸ್ ಕಾರ್ಯತಂತ್ರ • ಬೆಂಗಳೂರಿನಲ್ಲಿ ಮಲ್ಲಿಕಾರ್ಜುನ ಖರ್ಗೆ ಮೊಕ್ಕಾಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚುನಾವಣಾ ಫಲಿತಾಂಶ ಪ್ರಕಟವಾದ ಮರುಕ್ಷಣದಿಂದಲೇ ತನ್ನ ಶಾಸಕರನ್ನು ರಕ್ಷಿಸಿಟ್ಟುಕೊಳ್ಳಲು ಕಾರ್ಯತಂತ್ರ ರೂಪಿಸಿರುವ ಕಾಂಗ್ರೆಸ್, ಪ್ರತಿ ಜಿಲ್ಲೆಗೆ ಮೂವರು ಉಸ್ತುವಾರಿಗಳನ್ನು ನೇಮಿಸಿದೆ. ಶಾಸಕರನ್ನು ಬೆಂಗಳೂರಿಗೆ ಕರೆತರುವ ಜವಾಬ್ದಾರಿಯನ್ನು ಅವರಿಗೆ ವಹಿಸಲಾಗಿದೆ.

ಬಿಜೆಪಿ 'ಆಪರೇಷನ್ ಕಮಲ' ಕಾರ್ಯಾಚರಣೆಗೆ ಪ್ರಯತ್ನಿಸಬಹುದು ಎಂಬ ಅನುಮಾನದ ಮೇಲೆ ಶನಿವಾರವೇ ಎಲ್ಲ ಶಾಸಕರನ್ನೂ ಒಂದೆಡೆ ಸೇರಿಸಲು ಪಕ್ಷದ ನಾಯಕರು ತೀರ್ಮಾನಿಸಿದ್ದಾರೆ. ಫಲಿತಾಂಶವನ್ನು ಅಧಿಕೃತ ವಾಗಿ ಘೋಷಿಸಿದ ತಕ್ಷಣವೇ ಶಾಸಕರನ್ನು ಬೆಂಗಳೂರಿಗೆ ಕರೆತರುವಂತೆ ಉಸ್ತುವಾರಿಗಳಿಗೆ ಸೂಚಿಸಲಾಗಿದೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಪಕ್ಷಕ್ಕೆ ಸಂಪೂರ್ಣ ಬಹುಮತ ಬಂದಲ್ಲಿ ಶನಿವಾರ ಅಥವಾ ಭಾನುವಾರವೇ ಶಾಸಕಾಂಗ ಪಕ್ಷದ ನಾಯಕನ ಆಯ್ಕೆ ಪ್ರಕ್ರಿಯೆ ಪೂರ್ಣಗೊಳಿಸಲು ವರಿಷ್ಠರು ನಿರ್ಧರಿಸಿದ್ದಾರೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಮತ್ತು ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಬೆಂಗಳೂರಿನಲ್ಲೇ ಮೊಕ್ಕಾಂ ಹೂಡಿದ್ದಾರೆ. ಕಾಂಗ್ರೆಸ್ ಹೈಕಮಾಂಡ್‌ನ ಇನ್ನಷ್ಟು ನಾಯಕರು ಶನಿವಾರ ಬೆಳಿಗ್ಗೆ ಬೆಂಗಳೂರು ತಲುಪುವ ಸಾಧ್ಯತೆ ಇದೆ.

ಕಾರ್ಯತಂತ್ರಕ್ಕಾಗಿ ಸರಣಿ ಸಭೆ: ಖರ್ಗೆ ಅವರನ್ನು ಶುಕ್ರವಾರ ಭೇಟಿ ಮಾಡಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಸಂಸದರೂ ಆಗಿರುವ ಅವರ ತಮ್ಮ ಡಿ.ಕೆ. ಸುರೇಶ್ ಮತ್ತು ಕಾಂಗ್ರೆಸ್ ಪ್ರಣಾಳಿಕೆ ಸಮಿತಿ ಅಧ್ಯಕ್ಷ ಜಿ.ಪರಮೇಶ್ವರ, ಕೆಲಕಾಲ ಮಾತುಕತೆ ನಡೆಸಿದರು. ಶಾಸಕರನ್ನು ರಕ್ಷಿಸಿಟ್ಟುಕೊಳ್ಳುವ ಬಗ್ಗೆ ಚರ್ಚೆ ನಡೆದಿದೆ ಎಂಬುದನ್ನು ಸುದ್ದಿಗಾರರಿಗೆ ಸೂಚ್ಯವಾಗಿ ತಿಳಿಸಿದ ಪರಮೇಶ್ವರ, 'ಈ ಬಾರಿ ನಾವು ಹೆಚ್ಚು ಎಚ್ಚರಿಕೆ ವಹಿಸುತ್ತೇವೆ' ಎಂದರು.

ವೇಣುಗೋಪಾಲ್, ಸುರ್ಜೇವಾಲಾ ಅವರೊಂದಿಗೆ ಖರ್ಗೆ ಎರಡು ಬಾರಿ ಪ್ರತ್ಯೇಕ ಸಭೆ ನಡೆಸಿದರು. ಹೋಟೆಲ್ ಒಂದರಲ್ಲಿ ಚರ್ಚೆ ನಡೆಸಿದ ಅವರು, ಬಳಿಕ ಇನ್ನೊಂದು ಹೋಟೆಲ್‌ಗೆ ಸಭೆ ಸ್ಥಳಾಂತರಿಸಿದರು. ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಮತ್ತು ರಾಜಕೀಯ ತಂತ್ರಗಾರ ಸುನೀಲ್ ಕನುಗೋಲು ಅವರೂ ಸಭೆಯಲ್ಲಿದ್ದರು. ದೀರ್ಘಕಾಲ ಚರ್ಚೆ ನಡೆಸಿದ ನಾಯಕರು, ಚುನಾವಣಾ ಫಲಿತಾಂಶ ಪ್ರಕಟವಾದ ಬಳಿಕ ಅನುಸರಿಸಬೇಕಾದ ಮಾರ್ಗಗಳ ಕುರಿತು ಸಮಾಲೋಚನೆ ನಡೆಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

'ಕೂಸು ಹುಟ್ಟದ ಮೇಲೆ ಕುಲಾವಿ'

'ಕೂಸು ಹುಟ್ಟುವ ಮೊದಲೇ ಕುಲಾವಿ ಹೊಲಿಸುವುದು ಬೇಡ. ಕೂಸು ಹುಟ್ಟಿದ ಮೇಲೆಯೇ ಹೊಲಿಸುತ್ತೇವೆ' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದರು.

ಕಾಂಗ್ರೆಸ್ ಅಧಿಕಾರಕ್ಕೆ ಬಂದಲ್ಲಿ ಮುಖ್ಯಮಂತ್ರಿ ಆಯ್ಕೆ ಕುರಿತ ಪ್ರಶ್ನೆಗೆ ಅವರು, 'ನಾಳೆ ಕೂಸಿನ ಗಾತ್ರ ನೋಡೋಣ. ತಲೆ ಗಾತ್ರ ದೊಡ್ಡದಿರುತ್ತದೋ? ಸಣ್ಣದಿರುತ್ತದೋ ನೋಡೋಣ. ಆಮೇಲೆ ನಿರ್ಧಾರ ಮಾಡೋಣ' ಎಂದರು.

'ನಮಗೆ ಬಹುಮತ ಬರುತ್ತದೆ. ಬಿಜೆಪಿಯವರ ವಿಶ್ವಾಸದ ಬಗ್ಗೆ ಮಾತನಾಡುವುದಿಲ್ಲ. ನನ್ನ ವಿಶ್ಲೇಷಣೆ ಮಾತ್ರ ಮಾಡುತ್ತೇನೆ. ನಾಳೆಯವರೆಗೂ ಕಾಯೋಣ' ಎಂದು ಹೇಳಿದರು.

ಕಾದು ನೋಡುವ ತಂತ್ರ

ಕಾಂಗ್ರೆಸ್ ಪಕ್ಷವು ಬಹುಮತದ ಸಮೀಪಕ್ಕೆ ಬಂದು ಕೆಲ ಸ್ಥಾನಗಳ ಕೊರತೆಯಾದರೆ ಅಥವಾ ಅತಂತ್ರ ಸ್ಥಿತಿ ನಿರ್ಮಾಣವಾದರೆ ಪಕ್ಷೇತರ ಶಾಸಕರನ್ನು ಸೆಳೆಯುವ ಕುರಿತು ನಾಯಕರು ಚರ್ಚೆ ಆರಂಭಿಸಿದ್ದಾರೆ. ಮತ ಎಣಿಕೆ ಪೂರ್ಣಗೊಂಡು ಸ್ಪಷ್ಟ ಚಿತ್ರಣ ದೊರೆತ ಬಳಿಕವೇ ಪಕ್ಷೇತರರ ಜತೆ ಮಾತುಕತೆ ಆರಂಭಿಸಲು ಕಾಂಗ್ರೆಸ್ ವರಿಷ್ಠರು ನಿರ್ಧರಿಸಿದ್ದಾರೆ ಎಂದು ಮೂಲಗಳು ಹೇಳಿವೆ. 'ಮತ ಎಣಿಕೆಗೂ ಮೊದಲೇ ಯಾರನ್ನೂ ಸಂಪರ್ಕಿಸಿ ಭರವಸೆ ನೀಡುವುದು ಬೇಡ. ನಿಚ್ಚಳ ಬಹುಮತಕ್ಕೆ ಕೊರತೆಯಾದರೆ ಮಾತ್ರವೇ ಬೆಂಬಲ ಯಾಚಿಸಬೇಕು' ಎಂಬ ಸೂಚನೆಯನ್ನು ವರಿಷ್ಠರು ನೀಡಿದ್ದಾರೆ ಎಂದು ಗೊತ್ತಾಗಿದೆ.

ಮಧ್ಯಪ್ರದೇಶ: ಎಂಜಿನಿಯರ್ ವಿರುದ್ಧ ಪ್ರಕರಣ

'ಶೋಧದ ವೇಳೆ ಪತ್ತೆಯಾದ ಸ್ವತ್ತುಗಳನ್ನು ನೋಡಿ, ನಾವೇ ದಂಗಾದೆವು' ಎಂದು ಲೋಕಾಯುಕ್ತದ ಅಧಿಕಾರಿಯೊಬ್ಬರು ಹೇಳಿದ್ದಾರೆ..

ಸಂಬಳ ₹30,000, ಆಸ್ತಿ ₹ 7 ಕೋಟಿ!



ತಿಂಗಳಿಗೆ ₹30,000 ವೇತನ ಪಡೆಯುವ ಗುತ್ತಿಗೆ ಆಧಾರಿತ ಸಹಾಯಕ ಎಂಜಿನಿಯರ್ ಬಳಿ ₹ 7 ಕೋಟಿಗೂ ಹೆಚ್ಚು ಮೌಲ್ಯದ ಆಸ್ತಿ. ಇದು ನಿಜ. ಮಧ್ಯಪ್ರದೇಶದ ವಸತಿ ನಿಗಮದಲ್ಲಿ ಗುತ್ತಿಗೆ ಆಧಾರದಲ್ಲಿ ಕೆಲಸದಲ್ಲಿರುವ ಹೇಮಾ ಮೀನಾ (34) ಎಂಬ ಸಹಾಯಕ ಎಂಜಿನಿಯರ್ ವಿರುದ್ಧ ಈಚೆಗೆ ಲೋಕಾಯುಕ್ತಕ್ಕೆ ದೂರು ಬಂದಿತ್ತು. 'ಹೇಮಾ ಮೀನಾ ಅವರು ತಮ್ಮ ವೇತನಕ್ಕಿಂತಲೂ ಹಲವುಪಟ್ಟು ಹೆಚ್ಚು ಮೌಲ್ಯದ ಆಸ್ತಿಯನ್ನು ಸಂಪಾದಿಸಿದ್ದಾರೆ. ಈ ಬಗ್ಗೆ ತನಿಖೆ ನಡೆಸಿ' ಎಂದು ದೂರಿನಲ್ಲಿ ಕೋರಲಾಗಿತ್ತು.

ದೂರಿನ ಆಧಾರದಲ್ಲಿ ಲೋಕಾಯುಕ್ತ ಪೊಲೀಸರು ಹೇಮಾ ಅವರಿಗೆ ಸೇರಿದ ತೋಟದ ಮನೆಗೆ ಶುಕ್ರವಾರ ಭೇಟಿ ನೀಡಿದ್ದರು. ಸೌರಶಕ್ತಿ ಫಲಕಗಳನ್ನು ರಿಪೇರಿ ಮಾಡಲು ಬಂದಿದ್ದೇವೆ ಎಂದು ತೋಟದ ಮನೆ ಪ್ರವೇಶಿಸಿದರು. ಶೋಧಕಾರ್ಯ ನಡೆಸಿದಾಗ ಅಪಾರ ಪ್ರಮಾಣದ ಆಸ್ತಿ ಪತ್ತೆಯಾಯಿತು. 'ಹೇಮಾ ವಿರುದ್ಧ ಭ್ರಷ್ಟಾಚಾರ ತಡೆ ಕಾಯ್ದೆ ಅಡಿ ಪ್ರಕರಣ ದಾಖಲಿಸಲಾಗಿದೆ. ಅವರನ್ನು ವಿಚಾರಣೆಗೆ ಕರೆಯಲಾಗಿದೆ. ಅವರು ಸ್ವತ್ತುಗಳ ಬಗ್ಗೆ ತೃಪ್ತಿದಾಯಕ ಉತ್ತರ ನೀಡದಿದ್ದರೆ, ಅವರನ್ನು ವಶಕ್ಕೆ ಪಡೆಯಲಾಗುತ್ತದೆ' ಎಂದು ಲೋಕಾಯುಕ್ತ ಅಧಿಕಾರಿಗಳು ತಿಳಿಸಿದ್ದಾರೆ.

ಪತ್ತೆಯಾದ ಸ್ವತ್ತುಗಳ ವಿವರ

- ಭೋಪಾಲ್‌ನ ಬಿಲ್ಖೀರಿಯಾದಲ್ಲಿ 20,000 ಚದರ ಅಡಿಯ ತೋಟ. ತೋಟದಲ್ಲಿ 10,000 ಚದರ ಅಡಿಯ ಬಂಗಲೆ. ಬಂಗಲೆಯಲ್ಲಿ 40 ಕೊಠಡಿಗಳು. ₹1 ಕೋಟಿಗೂ ಹೆಚ್ಚು ಮೌಲ್ಯದ ಕಟ್ಟಡ ನಿರ್ಮಾಣ ಸಾಮಗ್ರಿಗಳು
- ದುಬಾರಿ ಬೆಲೆಯ ವಿದೇಶಿ ತಳಿಯ 35 ಸೇರಿ ಒಟ್ಟು 100 ನಾಯಿಗಳು. ನಾಯಿಗಳಿಗೆ ರೊಟ್ಟಿ ಮಾಡಲು ₹ 2.5 ಲಕ್ಷ ಮೌಲ್ಯದ ಯಂತ್ರ. ನಾಯಿಗಳಿಗೆಂದೇ ವಿಶೇಷ ಕೊಠಡಿಗಳು ಮತ್ತು ಹೊರಾಂಗಣದಲ್ಲಿ ಪ್ರತ್ಯೇಕ ಆವರಣ
- ₹30 ಲಕ್ಷ ಮೌಲ್ಯದ ಟಿ.ವಿ
- ದುಬಾರಿ ಬೆಲೆಯ ಹಲವು ಗಿರ್ ಹಸುಗಳು ಸೇರಿ ಒಟ್ಟು 30 ಜಾನುವಾರುಗಳು
- ದುಬಾರಿ ಬೆಲೆಯ ಎಸ್‌ಯುವಿ ಸೇರಿದಂತೆ ಒಟ್ಟು 10 ಐಷಾರಾಮಿ ಕಾರುಗಳು. ತಲಾ ಒಂದು ಟ್ರ್ಯಾಕ್ಟರ್, ಟ್ಯಾಂಕರ್, ಟ್ರಕ್
- ಮನೆ ಸಹಾಯಕರು ಮತ್ತು ನೌಕರರೊಂದಿಗೆ ಮಾತನಾಡಲು ಅತ್ಯಾಧುನಿಕ ವಾಕಿ–ಟಾಕಿ ವ್ಯವಸ್ಥೆ. ಮೊಬೈಲ್ ಜಾಮರ್
- ₹10 ಲಕ್ಷ ಮೌಲ್ಯದ ಚಿನ್ನಾಭರಣ
- ₹77,000 ನಗದು, ಹಲವು ಜಮೀನು ಪತ್ರಗಳು

ಆಧಾರ: ಪಿಟಿಐ, ಎನ್.ಡಿ.ಟಿವಿ

ಬೆಟ್ಟಿಂಗ್; ಕಿರಣ್ ಗೌಡ ಮನೆಯಲ್ಲಿ ಶೋಧ

ಗುಂಡ್ಲುಪೇಟೆ/ಹನೂರು (ಚಾಮರಾಜನಗರ ಜಿಲ್ಲೆ): ಗುಂಡ್ಲುಪೇಟೆ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಸಿ.ಎಸ್.ನಿರಂಜನಕುಮಾರ್ ಗೆಲ್ಲುತ್ತಾರೆ ಎಂದು ಹೇಳಿ ₹ 1 ಕೋಟಿ ಬಾಜಿ ಕಟ್ಟುವ ಸವಾಲು ಹಾಕಿದ್ದ ಪುರಸಭಾ ಸದಸ್ಯ ಕಿರಣ್‌ಕುಮಾರ್ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಆತ ತಲೆಮರೆಸಿಕೊಂಡಿದ್ದಾರೆ. ಜೂಜಾಟಕ್ಕೆ ಪ್ರಚೋದನೆ ನೀಡಿದ್ದಾರೆಂದು ಗುಂಡ್ಲುಪೇಟೆ ಚುನಾವಣೆ ಶಾಖೆಯ ಅಧಿಕಾರಿ ಕೆಂಪಲಿಂಗಪ್ಪ ದೂರು ನೀಡಿದ್ದರು.

ಕಿರಣ್ ಅವರ ಮನೆಯಲ್ಲಿ ಪೊಲೀಸ್ ಅಧಿಕಾರಿಗಳು ದಿಢೀರ್ ಶೋಧ ಕಾರ್ಯಾಚರಣೆ ನಡೆಸಿ ₹ 1.20 ಲಕ್ಷ ನಗದು ವಶಕ್ಕೆ ಪಡೆದಿದ್ದಾರೆ.

'50 ಕಾರ್ಯಕರ್ತರು ತಲಾ ₹ 2 ಲಕ್ಷ ಹಾಕಿ ₹ 1 ಕೋಟಿ ಸಿದ್ಧ ಮಾಡಿಟ್ಟುಕೊಂಡಿದ್ದು, ನಿರಂಜನಕುಮಾರ್ ಪರವಾಗಿ ಬೆಟ್ ಕಟ್ಟಲು ಸಿದ್ಧರಿದ್ದೇವೆ. ಕಾಂಗ್ರೆಸ್ ಮುಖಂಡರು ಇದಕ್ಕೆ ಸ್ಪಂದಿಸಿ ಸವಾಲು ಸ್ವೀಕರಿಸಬೇಕು' ಎಂದು ಕಿರಣ್‌ಕುಮಾರ್, ನಗದು ಹಣದ ಕಟ್ಟುಗಳ ಮುಂದೆ ನಿಂತು ಮಾಡಿದ್ದ ವಿಡಿಯೊ ಜಾಲತಾಣಗಳಲ್ಲಿ ಹರಿದಾಡಿತ್ತು. ವಿಡಿಯೊ ಪರಿಶೀಲಿಸಿ ಕ್ರಮ ಕೈಗೊಳ್ಳುವುದಾಗಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು ಭರವಸೆ ನೀಡಿದ್ದರು. ಕಾಂಗ್ರೆಸ್ ಅಭ್ಯರ್ಥಿ ಗಣೇಶ್ ಪ್ರಸಾದ್ ಗೆಲ್ಲಲಿದ್ದು, ₹ 3 ಲಕ್ಷ ಬಾಜಿ ಕಟ್ಟುವುದಾಗಿ ವಿಡಿಯೊ ಮಾಡಿದ್ದ ತಾಲ್ಲೂಕಿನ ಮಲ್ಲಯ್ಯನಪುರ ಗ್ರಾಮದ ಮುದ್ದರಾಮೇಗೌಡ ವಿರುದ್ಧವೂ ಪಟ್ಟಣ ಠಾಣೆಯಲ್ಲಿ ಎಫ್ಐಆರ್ ದಾಖಲಾಗಿದೆ.

ಗುಂಡ್ಲುಪೇಟೆಯ ಮಲ್ಲಯ್ಯನಪುರ ಗ್ರಾಮ ಪಂಚಾಯಿತಿ ಸದಸ್ಯರೊಬ್ಬರು, ಕಾಂಗ್ರೆಸ್ ಅಭ್ಯರ್ಥಿ ಗೆಲ್ಲುತ್ತಾರೆಂದು ಘೋಷಿಸಿ, ಮೂರು ಎಕರೆ ಜಮೀನು ಮತ್ತು ₹75 ಲಕ್ಷ ಬಾಜಿ ಕಟ್ಟಲು ಸಿದ್ಧರಿದ್ದೇವೆ ಎಂದು ವಿಡಿಯೊದಲ್ಲಿ ಹೇಳಿದ್ದಾರೆ.

ಫಲಿತಾಂಶಕ್ಕೆ ಮುನ್ನ 'ಶಾಕ್'

ಒಂದನೇ ಪುಟದಿಂದ...

ಆದಾಯದ ಕೊರತೆ ನೀಗಿಸಲು ಪ್ರತಿ ಯೂನಿಟ್‌ಗೆ ಸರಾಸರಿ ₹1.39 (ಪ್ರತಿ ಯೂನಿಟ್‌ಗೆ ₹1.20ರಿಂದ ₹1.46) ಹೆಚ್ಚಿಸುವಂತೆ ಕೋರಿದ್ದವು. 2021–22ನೇ ಸಾಲಿನಲ್ಲೇ ಎಸ್ಕಾಂಗಳಿಗೆ ₹2337.08 ಕೋಟಿ ಮೊತ್ತದಷ್ಟು ಆದಾಯ ಕೊರತೆಯಾಗಿತ್ತು.

ಈ ವಿಷಯವನ್ನು ಸಮಗ್ರವಾಗಿ ಪರಿಶೀಲಿಸಿದ್ದ ಆಯೋಗವು ₹58,109 ಕೋಟಿ ವಾರ್ಷಿಕ ಆದಾಯ ಸಂಗ್ರಹಿಸಲು ಅನುಮೋದನೆ ನೀಡಿದೆ.

ಆದಾಯ ಕೊರತೆ ಸರಿದೂಗಿಸಲು ಎಲ್ಲ 'ಎಲ್‌ಟಿ' ಮತ್ತು 'ಎಚ್‌ಟಿ' ಗ್ರಾಹಕರಿಗೆ ಪ್ರತಿ ಯೂನಿಟ್‌ಗೆ ಸರಾಸರಿ 70 ಪೈಸೆ ದರ ಹೆಚ್ಚಿಸಲು ಒಪ್ಪಿಗೆ ಸೂಚಿಸಿದೆ.

ನಗರ, ಗ್ರಾಮೀಣ ಒಂದೇ ವಿಭಾಗಕ್ಕೆ: ದರ ನಿಗದಿಪಡಿಸುವುದನ್ನು ಸರಳಗೊಳಿಸುವ ನಿಟ್ಟಿನಲ್ಲಿ ನಗರ ಮತ್ತು ಗ್ರಾಮೀಣ ಪ್ರದೇಶದ ಗ್ರಾಹಕರನ್ನು ಒಂದೇ ವಿಭಾಗದಲ್ಲಿ ವಿಲೀನಗೊಳಿಸಲಾಗಿದೆ. ಆದರೆ, ಗ್ರಾಮೀಣ ಗ್ರಾಹಕರಿಗೆ ಪ್ರತಿ ಯೂನಿಟ್‌ಗೆ 30 ಪೈಸೆ ರಿಯಾಯತಿ ನೀಡಲು ಆದೇಶ ನೀಡಿದೆ.

ವಿವಿಧ ಯೋಜನೆಗಳಿಗೆ ₹14ಸಾವಿರ ಕೋಟಿ!: 2023–24ನೇ ಸಾಲಿಗೆ ಭಾಗ್ಯ ಜ್ಯೋತಿ, ಕುಟೀರ ಜ್ಯೋತಿ ಮತ್ತು ನೀರಾವರಿ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ಸರಬರಾಜಿಗಾಗಿ ಎಸ್ಕಾಂಗಳಿಗೆ ಸರ್ಕಾರ ₹14,508.08 ಕೋಟಿ ಮೊತ್ತ ಪಾವತಿಸಬೇಕಾಗುತ್ತದೆ ಎಂದು ಕೆಇಆರ್‌ಸಿ ತಿಳಿಸಿದೆ.

ಆದಾಯ ಕೊರತೆಗೆ ಕಾರಣ

- 2021–22ಲ್ಲಿ ಆದಾಯ ಕೊರತೆ ಮೊತ್ತ ₹1,720.11 ಕೋಟಿ
- ಕಲ್ಲಿದ್ದಲು ಖರೀದಿ ಹಾಗೂ ಸಾಗಾಣಿಕೆ ವೆಚ್ಚ ಏರಿಕೆಯಿಂದ 2023–24ರಲ್ಲಿ ವಿದ್ಯುತ್ ಖರೀದಿಯಲ್ಲಿ ಶೇ 13ರಷ್ಟು ಹೆಚ್ಚಳವಾಗುವ ನಿರೀಕ್ಷೆ
- ನೌಕರರ ವೇತನ ಮತ್ತು ಭತ್ಯೆಯ ಶೇ 20ರಷ್ಟು ಪರಿಷ್ಕರಣೆ
- ಬಂಡವಾಳ ಹೂಡಿಕೆ ಹೆಚ್ಚಳ
- ಬ್ಯಾಂಕ್‌ಗಳ ಸಾಲದ ಮೇಲಿನ ಬಡ್ಡಿ ದರಗಳಲ್ಲಿ ಹೆಚ್ಚಳ

ಸಿಬಿಎಸ್‌ಇ: ಬಾಲಕಿಯರದ್ದೇ ಮೇಲುಗೈ

ನವದೆಹಲಿ (ಪಿಟಿಐ): ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿಯ (ಸಿಬಿಎಸ್‌ಇ) 10 ಮತ್ತು 12ನೇ ತರಗತಿಯ ಫಲಿತಾಂಶ ಶುಕ್ರವಾರ ಪ್ರಕಟವಾಗಿದ್ದು, ಎರಡರಲ್ಲಿಯೂ ಬಾಲಕಿ ಯರು ಮೇಲುಗೈ ಸಾಧಿಸಿದ್ದಾರೆ.

10ನೇ ತರಗತಿಯ ಶೇ 93.12ರಷ್ಟು ಹಾಗೂ 12ನೇ ತರಗತಿಯ ಶೇ 87.33ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಫಲಿತಾಂಶವು ಕಳೆದ ಸಾಲಿಗಿಂತ ಕ್ರಮವಾಗಿ ಶೇ 1.28 ಹಾಗೂ ಶೇ 5.38ರಷ್ಟು ಕುಸಿತವಾಗಿದೆ.

10ನೇ ತರಗತಿಯಲ್ಲಿ ಪಾಸಾಗಿರುವ ಬಾಲಕಿಯರ ಪ್ರಮಾಣ ಶೇ 94.25ರಷ್ಟಿದ್ದರೆ, ಬಾಲಕರ ಪ್ರಮಾಣ ಶೇ 92.27ರಷ್ಟಿದೆ. 12ನೇ ತರಗತಿಯಲ್ಲಿ ತೇರ್ಗಡೆಯಾದ ಬಾಲಕಿಯರ ಪ್ರಮಾಣ ಶೇ 90.68ರಷ್ಟಿದ್ದರೆ, ಬಾಲಕರ ಪ್ರಮಾಣ ಶೇ 84.67ರಷ್ಟಾಗಿದೆ. ಕಳೆದ ವರ್ಷ 10 ಮತ್ತು 12ನೇ ತರಗತಿ ಫಲಿತಾಂಶ ಕ್ರಮವಾಗಿ ಶೇ 94.40 ಮತ್ತು ಶೇ 92.71ರಷ್ಟಿತ್ತು.

ಮೆರಿಟ್ ಪಟ್ಟಿ ಇಲ್ಲ: ವಿದ್ಯಾರ್ಥಿಗಳ ನಡುವೆ 'ಅನಾರೋಗ್ಯಕರ ಸ್ಪರ್ಧೆ' ತಪ್ಪಿಸಲು ಮೆರಿಟ್ ಪಟ್ಟಿಯನ್ನು ಪ್ರಕಟಿಸುವುದಿಲ್ಲ ಎಂದು ಮಂಡಳಿ ಘೋಷಿಸಿದೆ. ಅಲ್ಲದೆ ವಿದ್ಯಾರ್ಥಿಗಳು ಪಡೆದ ಅಂಕಗಳನ್ನು ಆಧರಿಸಿ ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನ ನೀಡುವುದನ್ನು ರದ್ದುಗೊಳಿಸಲು ಮಂಡಳಿ ನಿರ್ಧರಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆದರೆ ವಿವಿಧ ವಿಷಯಗಳಲ್ಲಿ ಅತ್ಯುತ್ತಮ ಅಂಕಗಳನ್ನು ಪಡೆದಿರುವ ಶೇ 0.1ರಷ್ಟು ವಿದ್ಯಾರ್ಥಿಗಳಿಗೆ ಮಂಡಳಿ 'ಮೆರಿಟ್ ಪ್ರಮಾಣ ಪತ್ರ' ನೀಡಲಿದೆ ಎಂದು ಮಂಡಳಿಯ ಹಿರಿಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಈ ವರ್ಷ 10 ಮತ್ತು 12ನೇ ತರಗತಿ ಪರೀಕ್ಷೆಯನ್ನು ಕ್ರಮವಾಗಿ 21.66 ಲಕ್ಷ ಹಾಗೂ 16.60 ಲಕ್ಷ ವಿದ್ಯಾರ್ಥಿಗಳು ಬರೆದಿದ್ದರು.

10 ಮತ್ತು 12ನೇ ತರಗತಿಯ 3.08 ಲಕ್ಷ ವಿದ್ಯಾರ್ಥಿಗಳು ಶೇ 90ಕ್ಕಿಂತ ಹೆಚ್ಚು ಹಾಗೂ 63,000 ವಿದ್ಯಾರ್ಥಿಗಳು ಶೇ 95ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದಿದ್ದಾರೆ. ಕಳೆದ ವರ್ಷ ಶೇ 90ಕ್ಕಿಂತ ಹೆಚ್ಚು ಅಂಕಗಳನ್ನು 3.71 ಲಕ್ಷ ಹಾಗೂ ಶೇ 95ಕ್ಕಿಂತ ಹೆಚ್ಚು ಅಂಕಗಳನ್ನು 98,340 ವಿದ್ಯಾರ್ಥಿಗಳು ಪಡೆದಿದ್ದರು.

ಮುಂದಿನ ವರ್ಷ ಫೆ. 15ರಿಂದ ಪರೀಕ್ಷೆ: 2023–24ನೇ ಶೈಕ್ಷಣಿಕ ವರ್ಷದ 10 ಮತ್ತು 12ನೇ ತರಗತಿಯ ಪರೀಕ್ಷೆ 2024ರ ಫೆಬ್ರುವರಿ 15ರಿಂದ ಆರಂಭವಾಗಲಿದೆ ಎಂದು ಸಿಬಿಎಸ್‌ಇ ಪರೀಕ್ಷಾ ನಿಯಂತ್ರಕರಾದ ಸಂಯಮ್ ಭಾರದ್ವಾಜ್ ತಿಳಿಸಿದ್ದಾರೆ.

'ಕಂಪಾರ್ಟ್‌ಮೆಂಟ್' ಇನ್ನು ಪೂರಕ ಪರೀಕ್ಷೆ

10 ಮತ್ತು 12ನೇ ತರಗತಿ ವಿದ್ಯಾರ್ಥಿಗಳಿಗೆ ನಡೆಸಲಾಗುತ್ತಿದ್ದ 'ಕಂಪಾರ್ಟ್‌ಮೆಂಟ್' ಪರೀಕ್ಷೆಯ ಹೆಸರನ್ನು 'ಪೂರಕ' ಪರೀಕ್ಷೆ ಎಂದು ಬದಲಿಸಿರುವುದಾಗಿ ಸಿಬಿಎಸ್‌ಇ ಪರೀಕ್ಷಾ ನಿಯಂತ್ರಕರಾದ ಸಂಯಮ್ ಭಾರದ್ವಾಜ್ ಶುಕ್ರವಾರ ತಿಳಿಸಿದ್ದಾರೆ.

ಜುಲೈನಲ್ಲಿ ಪೂರಕ ಪರೀಕ್ಷೆ: ಈ ವರ್ಷ ಜುಲೈನಲ್ಲಿ ಪೂರಕ ಪರೀಕ್ಷೆಗಳನ್ನು ನಡೆಸಲಾಗುವುದು. ಸದ್ಯದಲ್ಲಿಯೇ ವೇಳಾಪಟ್ಟಿಯನ್ನು ಪ್ರಕಟಿಸಲಾಗುವುದು. 10ನೇ ತರಗತಿಯ 1.34 ಲಕ್ಷ ಹಾಗೂ 12ನೇ ತರಗತಿಯ 1.25 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಪೂರಕ ಪರೀಕ್ಷೆ ಬರೆಯಲಿದ್ದಾರೆ ಎಂದು ಹೇಳಿದ್ದಾರೆ

ಪ್ರಜಾವಾಣಿ ಶೈಕ್ಷಣಿಕ ನೆರವು ನಿಧಿ

ಬಡ ವಿದ್ಯಾರ್ಥಿಗಳಿಗೆ ಉದಾರ ಕೊಡುಗೆ ನೀಡಿ

ಪ್ರಜಾವಾಣಿ–ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಎಸ್‌ಎಸ್‌ಎಲ್‌ಸಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಚೆಕ್ ಅಥವಾ ಡಿ.ಡಿ.ರೂಪದಲ್ಲಿ ಹಣವನ್ನು 'Deccan Herald-Prajavani relief Trust'ಗೆ ಕಳುಹಿಸಬಹುದು. ದಾನಿಗಳು ಹೆಸರು, ವಿಳಾಸ, ಮೊಬೈಲ್ ಸಂಖ್ಯೆ, ಆಧಾರ್/ಪ್ಯಾನ್ ಕಾರ್ಡ್ ಪ್ರತಿಯನ್ನು dept.finc@printersmysore.co.inಗೆ ಮೇಲ್ ಕಳುಹಿಸಿ.

ಆನ್‌ಲೈನ್/ಚೆಕ್ ಮೂಲಕವೂ ಹಣ ವರ್ಗಾಯಿಸಬಹುದು. ₹1,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಸೆಕ್ಷನ್ 80 ಜಿ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ

https://bit.ly/3xFpoz4

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಕೆಳಗಿನ ವಿವರ ಬಳಸಿ

'Deccan Herald-Prajavani Relief Trust'
Canara Bank, Cantonment Branch
A/c no. - 0404101200385
IFSC code - CNRB0000404
MICR Code - 560015009

ಸೂಚನೆ: ದಾನಿಗಳು ಲಕೋಟೆ ಮೇಲೆ ಶೈಕ್ಷಣಿಕ ನೆರವಿಗೆ ಕೊಡುಗೆ ಎಂದು ನಮೂದಿಸಬೇಕು

ವಿಳಾಸ: ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಪರಿಹಾರ ಟ್ರಸ್ಟ್
ನಂ. 75, ಮಹಾತ್ಮ ಗಾಂಧಿ ರಸ್ತೆ
ಬೆಂಗಳೂರು – 560001

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2023 ರ ಸಾಲಿನ ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕ ಗಳಿಸಿದ ಸಾಮಾಜಿಕ, ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಜತೆಗೆ ವಿಳಾಸ, ಮೊಬೈಲ್ ಸಂಖ್ಯೆ, ಐಎಫ್‌ಎಸ್‌ಸಿ ನಂಬರ್ ಉಳ್ಳ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಸಲ್ಲಿಸಬೇಕು. ಲಕೋಟೆಯ ಮೇಲೆ **'ಶೈಕ್ಷಣಿಕ ನೆರವಿಗೆ ಅರ್ಜಿ'** ಎಂದು ಬರೆಯಬೇಕು.

ಶೈಕ್ಷಣಿಕ ನೆರವು, ವಿದ್ಯಾರ್ಥಿ ಮಾತು

'ನೀಟ್ ಪರೀಕ್ಷೆ ಸಾಮಗ್ರಿ ಖರೀದಿಸುವೆ'



'ಪ್ರಜಾವಾಣಿ' ನೀಡಿದ ವಿದ್ಯಾರ್ಥಿವೇತನ ಪೂರ್ಣವಾಗಿ ಇನ್ನೂ ಬಳಸಿಲ್ಲ. ಉನ್ನತ ಶಿಕ್ಷಣ ಪಡೆಯಲು ಮತ್ತು ಪುಸ್ತಕಗಳ ಖರೀದಿಗೆ ಈ ಹಣವನ್ನು ಬಳಸಿಕೊಳ್ಳುತ್ತೇನೆ. ಇನ್ನಿತರ ಪರೀಕ್ಷೆಗಳಾದ ನೀಟ್, ಸಿಇಟಿಗಳ ಸಾಮಗ್ರಿಗಳನ್ನು ಖರೀದಿಸುತ್ತೇನೆ. ಪತ್ರಿಕೆ ನೀಡುವ ವಿದ್ಯಾರ್ಥಿವೇತನ ಬಡ ವಿದ್ಯಾರ್ಥಿಗಳಿಗೆ ಸಾಕಷ್ಟು ಅನುಕೂಲವಾಗಿದೆ.

ದೀಕ್ಷಾ ಕೆ., ಮುನೇಶ್ವರ ಲೇಔಟ್, ಚಿಕ್ಕಗೊಲ್ಲರಹಟ್ಟಿ, ಮಾಗಡಿ ಮುಖ್ಯರಸ್ತೆ, ಬೆಂಗಳೂರು

ಗುಜರಾತ್ ಸರ್ಕಾರದ ಆದೇಶ ಕಾನೂನು ಬಾಹಿರ: ಸುಪ್ರೀಂ ಕೋರ್ಟ್ ಮಧ್ಯಂತರ ತೀರ್ಪು

ನ್ಯಾಯಾಂಗ ಅಧಿಕಾರಿಗಳ ಬಡ್ತಿಗೆ ತಡೆ

ಪ್ರಜಾವಾಣಿ ವಾರ್ತೆ

ನವದೆಹಲಿ/ಬೆಂಗಳೂರು: ಗುಜರಾತ್‌ನ 68 ನ್ಯಾಯಾಂಗ ಅಧಿಕಾರಿಗಳನ್ನು ಜಿಲ್ಲಾ ನ್ಯಾಯಾಧೀಶರಾಗಿ ಬಡ್ತಿ ನೀಡುವಂತೆ ಗುಜರಾತ್ ಹೈಕೋರ್ಟ್ ಮಾಡಿದ್ದ ಶಿಫಾರಸು ಮತ್ತು ಗುಜರಾತ್ ಸರ್ಕಾರ ಹೊರಡಿಸಿದ್ದ ಆದೇಶಕ್ಕೆ ಸುಪ್ರೀಂ ಕೋರ್ಟ್ ಪೀಠವು ಶುಕ್ರವಾರ ತಡೆ ನೀಡಿದೆ. ಈ ಬಡ್ತಿ ಶಿಫಾರಸು ಮತ್ತು ಬಡ್ತಿ ಆದೇಶದ ವಿರುದ್ಧದ ಅರ್ಜಿಗಳನ್ನು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ನೇತೃತ್ವದ ಪೀಠವು ಪರಿಶೀಲಿಸಬೇಕು ಎಂದು ಪೀಠವು ತನ್ನ ಮಧ್ಯಂತರ ಆದೇಶದಲ್ಲಿ ಹೇಳಿದೆ.

ಕ್ರಿಮಿನಲ್ ಮಾನಹಾನಿ ಪ್ರಕರಣದಲ್ಲಿ ರಾಹುಲ್ ಗಾಂಧಿ ಅವರ ಅಪರಾಧ ನಿರ್ಣಯ ಮಾಡಿದ್ದ ಮತ್ತು ಎರಡು ವರ್ಷಗಳ ಜೈಲುಶಿಕ್ಷೆ ನೀಡಿ ತೀರ್ಪು ನೀಡಿದ್ದ ಸೂರತ್‌ನ ಮುಖ್ಯ

ಗುಜರಾತ್ ರಾಜ್ಯ ನ್ಯಾಯಾಂಗ ಸೇವಾ ನಿಯಮಗಳ ಪ್ರಕಾರ 'ದಕ್ಷತೆ ಮತ್ತು ಜೇಷ್ಠತೆ' ಆಧಾರದಲ್ಲಿ ಬಡ್ತಿ ನೀಡಬೇಕಿತ್ತು. ಈ ಬಡ್ತಿಯು ಆ ನಿಯಮಗಳಿಗೆ ವಿರುದ್ಧವಾಗಿವೆ

ಸುಪ್ರೀಂ ಕೋರ್ಟ್ ಪೀಠ

ಮ್ಯಾಜಿಸ್ಟ್ರೇಟ್ ಹರೀಶ್ ಎಚ್. ವರ್ಮಾ ಅವರೂ ಈ ಬಡ್ತಿ ಪಟ್ಟಿಯಲ್ಲಿದ್ದರು. ಅವರ ಬಡ್ತಿಗೂ ಈ ತಡೆ ಆದೇಶ ಅನ್ವಯವಾಗಲಿದೆ.

68 ನ್ಯಾಯಾಂಗ ಅಧಿಕಾರಿಗಳನ್ನು ಜಿಲ್ಲಾ ನ್ಯಾಯಾಧೀಶರಾಗಿ ಬಡ್ತಿ ಮಾಡುವಂತೆ ಗುಜರಾತ್ ಹೈಕೋರ್ಟ್ ಶಿಫಾರಸು ಮಾಡಿತ್ತು. ಈ ಶಿಫಾರಸಿನ ವಿರುದ್ಧ ನ್ಯಾಯಾಂಗ ಅಧಿಕಾರಿಗಳಾದ ರವಿಕುಮಾರ್ ಮಹೇತಾ ಮತ್ತು ಸಚಿನ್ ಪ್ರತಾಪ್‌ರಾಯ್ ಮೆಹ್ತಾ ಅವರು ಸುಪ್ರೀಂ ಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದರು. ನ್ಯಾಯಮೂರ್ತಿಗಳಾದ ಎಂ.ಆರ್.ಶಾ ಮತ್ತು ಸಿ.ಟಿ. ರವಿಕುಮಾರ್ ಅವರಿದ್ದ ಪೀಠವು ಈ ಅರ್ಜಿಯ ವಿಚಾರಣೆ ನಡೆಸಿತ್ತು.

'ಗುಜರಾತ್ ರಾಜ್ಯ ನ್ಯಾಯಾಂಗ ಸೇವಾ ನಿಯಮಗಳ ಪ್ರಕಾರ ನ್ಯಾಯಾಂಗ ಅಧಿಕಾರಿಗಳನ್ನು ಜಿಲ್ಲಾ ನ್ಯಾಯಾಧೀಶ ಹುದ್ದೆಗೆ ಪರಿಗಣಿಸುವಾಗ 'ದಕ್ಷತೆ ಮತ್ತು ಜೇಷ್ಠತೆ'ಯ ಪರಿಗಣಿಸಬೇಕು. ಜತೆಗೆ ಆ ಅಧಿಕಾರಿಗಳು ಅರ್ಹತಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಆದರೆ 68 ನ್ಯಾಯಾಂಗ ಅಧಿಕಾರಿಗಳನ್ನು ಬಡ್ತಿಗೆ ಆಯ್ಕೆ ಮಾಡುವಾಗ 'ಜೇಷ್ಠತೆ ಮತ್ತು ದಕ್ಷತೆ'ಯ ಮಾದರಿಯನ್ನು ಅನುಸರಿಸಲಾಗಿದೆ. ಈ ಬಡ್ತಿ ಶಿಫಾರಸಿಗೆ ತಡೆ ನೀಡಬೇಕು' ಎಂದು ಅವರು ಅರ್ಜಿಯಲ್ಲಿ ಕೋರಿದ್ದರು.

ಈ ಸಂಬಂಧ ವಿವರ ನೀಡುವಂತೆ ಗುಜರಾತ್ ಹೈಕೋರ್ಟ್‌ಗೆ ಮತ್ತು ಗುಜರಾತ್ ಸರ್ಕಾರಕ್ಕೆ ಪೀಠವು ಏಪ್ರಿಲ್ 13ರಂದು ನೋಟಿಸ್ ನೀಡಿತ್ತು. ಬಡ್ತಿ ಶಿಫಾರಸನ್ನು ಅನುಷ್ಠಾನಗೊಳಿಸಿ ಗುಜರಾತ್ ಸರ್ಕಾರವು ಏಪ್ರಿಲ್ 18ರಂದು ಆದೇಶ ಹೊರಡಿಸಿತ್ತು. ಏಪ್ರಿಲ್ 28ರಂದು ವಿಚಾರಣೆ ನಡೆಸಿದ್ದ ಪೀಠವು ಗುಜರಾತ್ ಸರ್ಕಾರದ ನಡೆಯನ್ನು ತರಾಟೆಗೆ ತೆಗೆದುಕೊಂಡಿತ್ತು. 'ಈ ವಿಷಯವು ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆ ಹಂತದಲ್ಲಿ ಇರುವಾಗ, ಅದನ್ನು ಮೀರಿ ಗುಜರಾತ್ ಸರ್ಕಾರ ಆದೇಶ ಹೊರಡಿಸಿದ್ದು ಸರಿಯಲ್ಲ' ಎಂದು ಹೇಳಿತ್ತು.

ಈಗ ಪೀಠವು, 'ಗುಜರಾತ್ ಹೈಕೋರ್ಟ್‌ನ ಬಡ್ತಿ ಶಿಫಾರಸು ಮತ್ತು ಗುಜರಾತ್ ಸರ್ಕಾರದ ಬಡ್ತಿ ಆದೇಶವು ಕಾನೂನುಬಾಹಿರ. ಈ ಬಡ್ತಿ ಪಟ್ಟಿಗೆ ತಡೆ ನೀಡಿದ್ದೇವೆ. ಈ ಪಟ್ಟಿಯಲ್ಲಿ ಬಡ್ತಿ ಪಡೆದವರನ್ನು, ಅವರು ಈ ಹಿಂದೆ ಇದ್ದ ಹುದ್ದೆಗಳಿಗೆ ವಾಪಸ್ ಕಳುಹಿಸಬೇಕು' ಎಂದು ತಮ್ಮ ಮಧ್ಯಂತರ ತೀರ್ಪಿನಲ್ಲಿ ಸೂಚಿಸಿದೆ.

ಸಿಜೆಐ ಪೀಠಕ್ಕೆ ಅರ್ಜಿ

ಈ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ (ಸಿಜೆಐ) ನೇತೃತ್ವದ ಪೀಠವು ನಡೆಸಬೇಕು ಎಂದು ಪೀಠವು ತನ್ನ ಆದೇಶದಲ್ಲಿ ಹೇಳಿದೆ.

'ವಿಷಯದ ಪ್ರಾಮುಖ್ಯತೆ ಮತ್ತು ನ್ಯಾಯಾಂಗ ಅಧಿಕಾರಗಳ ನೇಮಕಾತಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಈ ಹಿಂದೆ ವ್ಯಕ್ತಪಡಿಸಿದ್ದ ಅಭಿಪ್ರಾಯಗಳನ್ನು ಪರಿಗಣಿಸಿದರೆ, ಈ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ನೇತೃತ್ವದ ಪೀಠವು ನಡೆಸುವುದು ಸೂಕ್ತ ಎನಿಸುತ್ತದೆ' ಎಂದು ಪೀಠವು ತನ್ನ ಆದೇಶದಲ್ಲಿ ವಿವರಿಸಿದೆ.

ತಮಿಳುನಾಡು, ಪಶ್ಚಿಮ ಬಂಗಾಳ ಸರ್ಕಾರಕ್ಕೆ 'ಸುಪ್ರೀಂ' ನೋಟಿಸ್

'ದಿ ಕೇರಳ ಸ್ಟೋರಿ' ಚಿತ್ರ ನಿಷೇಧ ಕುರಿತ ಅರ್ಜಿ ವಿಚಾರಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: 'ದಿ ಕೇರಳ ಸ್ಟೋರಿ' ಚಿತ್ರ ಪ್ರದರ್ಶನವನ್ನು ನಿಷೇಧಿಸಿರುವ ಪಶ್ಚಿಮ ಬಂಗಾಳ ಸರ್ಕಾರ ಹಾಗೂ ಚಿತ್ರ ಪ್ರದರ್ಶನಕ್ಕೆ ಭದ್ರತೆ ಒದಗಿಸದ ತಮಿಳುನಾಡು ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಶುಕ್ರವಾರ ನೋಟಿಸ್ ನೀಡಿದೆ. ಬುಧವಾರದ (ಮೇ 17) ಒಳಗೆ ಪ್ರತಿಕ್ರಿಯೆ ಸಲ್ಲಿಸುವಂತೆ ನ್ಯಾಯಾಲಯ ಹೇಳಿದೆ.

ಈ ಸಂಬಂಧ ಚಿತ್ರ ನಿರ್ಮಾಪಕರು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದರು. ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಹಾಗೂ ನ್ಯಾಯಮೂರ್ತಿ ಪಿ.ಎಸ್.ನರಸಿಂಹ ಅವರಿದ್ದ ಪೀಠವು ಅರ್ಜಿಯ ವಿಚಾರಣೆ ನಡೆಸಿತು.

'ದೇಶದ ಬೇರೆಲ್ಲ ರಾಜ್ಯಗಳಲ್ಲೂ ಚಿತ್ರ ತೆರೆಕಂಡಿದೆ. ಪಶ್ಚಿಮ ಬಂಗಾಳವು ಈ ಎಲ್ಲ ರಾಜ್ಯಗಳಿಗಿಂತ ಯಾವುದೇ ರೀತಿಯಲ್ಲೂ ಭಿನ್ನವಾಗಿಲ್ಲ' ಎಂದು ಪಶ್ಚಿಮ ಬಂಗಾಳ ಸರ್ಕಾರಕ್ಕೆ ಹೇಳಿದೆ.

'ಚಿತ್ರಮಂದಿರಗಳ ಮೇಲೆ ದಾಳಿಗಳಾಗುತ್ತಿವೆ. ಕುರ್ಚಿಗಳಿಗೆ ಬೆಂಕಿ ಹಚ್ಚಲಾಗುತ್ತಿದೆ ಎಂದಾಕ್ಷಣ ಸಿನಿಮಾ ನಿಷೇಧಿಸಬೇಕು ಎಂದೇನೂ ಇಲ್ಲ. ಭದ್ರತೆ ಒದಗಿಸುವುದು ನಿಮ್ಮ ಆದ್ಯ ಕರ್ತವ್ಯ. ಆದ್ದರಿಂದ ಚಿತ್ರಮಂದಿರಗಳ ಭದ್ರತೆಗೆ ಯಾವ ಕ್ರಮ ಕೈಗೊಂಡಿದ್ದೀರಿ' ಎಂದು ತಮಿಳುನಾಡು ಸರ್ಕಾರವನ್ನು ಪೀಠ ಪ್ರಶ್ನಿಸಿದೆ. ತಮಿಳುನಾಡು ಪರ ಹೆಚ್ಚುವರಿ ಅಡ್ವೊಕೇಟ್ ಜನರಲ್ ಅಮಿತ್ ಆನಂದ್ ತಿವಾರಿ ಅವರು ವಾದ ಮಂಡಿಸಿದರು.

ವಿಚಾರಣೆಯನ್ನು ಗುರುವಾರಕ್ಕೆ ಮುಂದೂಡಲಾಯಿತು.

ನ್ಯಾಯಾಲಯ ಹೇಳಿದ್ದು...

- ದೇಶದ ಬೇರೆಲ್ಲಾ ಕಡೆ ಸಿನಿಮಾ ಪ್ರದರ್ಶನವಾಗುತ್ತಿದೆ. ಆದರೆ, ಈ ಎರಡು ರಾಜ್ಯಗಳಲ್ಲಿ ಯಾಕಾಗಿ ಸಿನಿಮಾಕ್ಕೆ ನಿಷೇಧ ಹೇರಲಾಗಿದೆ ಎಂಬ ಕಾರಣ ತಿಳಿಯುತ್ತಿಲ್ಲ
- ದೇಶದ ಬೇರೆ ರಾಜ್ಯಗಳ ಹಾಗೂ ಪಶ್ಚಿಮ ಬಂಗಾಳದ ಜನಸಂಖ್ಯಾ ಚಿತ್ರಣಕ್ಕೂ ಯಾವುದೇ ವ್ಯತ್ಯಾಸವಿಲ್ಲ. ಆದರೂ ಯಾಕಾಗಿ ಇಲ್ಲಿ ಚಿತ್ರವನ್ನು ನಿಷೇಧಿಸಲಾಗಿದೆ

ಕೇಂದ್ರದ ವಿರುದ್ಧ ಎಎಪಿ ಮತ್ತೆ ಅರ್ಜಿ

ನವದೆಹಲಿ (ಪಿಟಿಐ): ನಮ್ಮ ಅಧಿಕಾರದ ವ್ಯಾಪ್ತಿಗೆ ಬರುವ ಅಧಿಕಾರಿಗಳ ವರ್ಗಾವಣೆಯನ್ನು ಕೇಂದ್ರ ಸರ್ಕಾರ ಅನುಷ್ಠಾನ ಮಾಡುತ್ತಿಲ್ಲ. ಇದು ನ್ಯಾಯಾಂಗ ನಿಂದನೆಯಾಗುತ್ತದೆ ಎಂದು ದೆಹಲಿ ಸರ್ಕಾರವು ಶುಕ್ರವಾರ ಸುಪ್ರೀಂ ಕೋರ್ಟ್ ಮೊರೆ ಹೋಗಿದೆ.

ದೆಹಲಿಯ ಚುನಾಯಿತ ಸರ್ಕಾರವು ಶಾಸಕಾಂಗ ಮತ್ತು ಕಾರ್ಯಾಂಗದ ಅಧಿಕಾರಗಳನ್ನು ಹೊಂದಿದೆ ಎಂದು ಸುಪ್ರೀಂ ಕೋರ್ಟ್ ಗುರುವಾರವಷ್ಟೇ ತೀರ್ಪು ನೀಡಿತ್ತು. ತೀರ್ಪು ಬಂದ ಕೆಲವೇ ಗಂಟೆಗಳಲ್ಲಿ, ದೆಹಲಿ ಸರ್ಕಾರದ ಸೇವಾ ಇಲಾಖೆಯ ಕಾರ್ಯದರ್ಶಿ ಆಶಿಶ್ ಮೋರೆ ಅವರನ್ನು ಆ ಹುದ್ದೆಯಿಂದ ತೆಗೆದುಹಾಕಲಾಗಿತ್ತು. ಬೇರೊಬ್ಬ ಅಧಿಕಾರಿಯನ್ನು ಆ ಹುದ್ದೆಗೆ ವರ್ಗಾವಣೆ ಮಾಡಲಾಗಿತ್ತು.

ಆದರೆ ಸುಪ್ರೀಂ ಕೋರ್ಟ್‌ಗೆ ಶುಕ್ರವಾರ ಸಲ್ಲಿಸಿರುವ ಅರ್ಜಿಯಲ್ಲಿ ದೆಹಲಿ ಸರ್ಕಾರವು, 'ನಾವು ಯಾವುದೇ ಅಧಿಕಾರಿಗಳನ್ನು ವರ್ಗಾವಣೆ ಮಾಡುವುದಿಲ್ಲ ಎಂದು ಕೇಂದ್ರ ಸರ್ಕಾರವು ಹೇಳುತ್ತಿದೆ' ಎಂದು ಅರ್ಜಿಯಲ್ಲಿ ಆರೋಪಿಸಿದೆ.

ಮುಖ್ಯಾಂಶಗಳು

- **ದೆಹಲಿ ಸರ್ಕಾರದ ಅರ್ಜಿ ಪರಿಗಣಿಸಿದ ಸಿಜೆಐ ಚಂದ್ರಚೂಡ್**
- **ಅರ್ಜಿ ವಿಚಾರಣೆಗೆ ಮುಂದಿನ ವಾರ ಪೀಠ ರಚನೆ**

'ಎಲ್‌ಜಿಗೆ ನಾಮನಿರ್ದೇಶನದ ಅಧಿಕಾರವಿಲ್ಲ'

ದೆಹಲಿ ನಗರ ಪಾಲಿಕೆಗೆ (ಎಂಸಿಡಿ) ಸದಸ್ಯರನ್ನು ನಾಮನಿರ್ದೇಶನ ಮಾಡುವಲ್ಲಿ ಲೆಫ್ಟಿನೆಂಟ್ ಗವರ್ನರ್ (ಎಲ್‌ಜಿ) ಅವರು ಚುನಾಯಿತ ಸರ್ಕಾರದ ಸಚಿವ ಸಂಪುಟದ ಸಹಾಯ ಮತ್ತು ಸಲಹೆಗಳಂತೆ ನಡೆದುಕೊಳ್ಳಬೇಕು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ದೆಹಲಿ ಎಂಸಿಡಿಗೆ ಲೆಫ್ಟಿನೆಂಟ್ ಗವರ್ನರ್ ವಿ.ಕೆ.ಸಕ್ಸೇನಾ ಅವರು 10 ಸದಸ್ಯರನ್ನು ನಾಮನಿರ್ದೇಶನ ಮಾಡಿದ್ದರು. ಇದು ದೆಹಲಿ ಮಹಾನಗರ ಪಾಲಿಕೆ ಕಾಯ್ದೆಯ ಉಲ್ಲಂಘನೆ. ದೆಹಲಿ ಸಚಿವ ಸಂಪುಟದ ಸಹಾಯ ಮತ್ತು ಸಲಹೆಯ ಮೇರೆಗೆ ಸದಸ್ಯರನ್ನು ನಾಮ ನಿರ್ದೇಶನ ಮಾಡಬೇಕು ಎಂದು ದೆಹಲಿಯ ಎಎಪಿ ಸರ್ಕಾರ ವಾದಿಸಿತ್ತು.

ದೆಹಲಿ ಸರ್ಕಾರದ ವಾದವನ್ನು ಪರಿಗಣಿಸಿದ ಪೀಠವು, 'ಎಂಸಿಡಿಗೆ ಸದಸ್ಯರನ್ನು ನಾಮನಿರ್ದೇಶನ ಮಾಡುವ ಅಧಿಕಾರ ಲೆಫ್ಟಿನೆಂಟ್ ಗವರ್ನರ್‌ಗೆ ಇಲ್ಲ' ಎಂದು ಹೇಳಿತು.

'ಲೈಂಗಿಕ ದೌರ್ಜನ್ಯ ತನಿಖಾ ಸಮಿತಿ ಇಲ್ಲ'

ಪ್ರಜಾವಾಣಿ ವಾರ್ತೆ

ನವದೆಹಲಿ: ಸರ್ಕಾರದ ವಿವಿಧ ಇಲಾಖೆಗಳ ಕೆಲಸದ ಸ್ಥಳದಲ್ಲಿನ ಲೈಂಗಿಕ ದೌರ್ಜನ್ಯದ ತನಿಖೆಗೆ ಸಮಿತಿಯೇ ರಚನೆಯಾಗಿಲ್ಲ ಎಂದು ಸುಪ್ರೀಂ ಕೋರ್ಟ್ ಅಸಮಾಧಾನ ವ್ಯಕ್ತಪಡಿಸಿದೆ.

ಎಲ್ಲಾ ಸಚಿವಾಲಯಗಳು, ಇಲಾಖೆಗಳು, ಸರ್ಕಾರಿ ಸಂಸ್ಥೆಗಳು, ಸಾರ್ವಜನಿಕ ಮತ್ತು ಖಾಸಗಿ ವಲಯದ ಸಂಘ–ಸಂಸ್ಥೆಗಳಲ್ಲಿ ಲೈಂಗಿಕ ದೌರ್ಜನ್ಯ ತನಿಖಾ ಸಮಿತಿ ರಚನೆಯಾಗಿದೆಯೇ ಎಂಬುದನ್ನು ಕಾಲಮಿತಿಯೊಳಗೆ ಪರಿಶೀಲಿಸುವಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಸುಪ್ರೀಂ ಕೋರ್ಟ್ ಶುಕ್ರವಾರ ನಿರ್ದೇಶನ ನೀಡಿದೆ.

ಈ ಕುರಿತ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಎ.ಎಸ್.ಬೋಪಣ್ಣ ಮತ್ತು ಹಿಮಾ ಕೊಹ್ಲಿ ಅವರಿದ್ದ ನ್ಯಾಯಪೀಠವು, 'ಸುದೀರ್ಘ ಸಮಯ ಕಳೆದರೂ 2013ರ ಲೈಂಗಿಕ ದೌರ್ಜನ್ಯ ತಡೆ ಕಾಯ್ದೆ ಜಾರಿಯಲ್ಲಿ ಗಂಭೀರ ಲೋಪಗಳಾಗುತ್ತಿವೆ' ಎಂದು ಬೇಸರ ವ್ಯಕ್ತಪಡಿಸಿತು.

'ಅಸಮರ್ಪಕ ಸಮಿತಿಯು ನಡೆಸಿದ 'ಅರೆಬೆಂದ' ತನಿಖೆಯು ಆರೋಪಿ ಉದ್ಯೋಗಿಗಳಿಗೆ ದೊಡ್ಡ ಪ್ರಮಾಣದಲ್ಲಿ ದಂಡ ವಿಧಿಸುವಂಥ ಗಂಭೀರ ಪರಿಣಾಮಗಳಿಗೂ ಕಾರಣವಾಗಬಹುದು' ಎಂದು ಪೀಠ ಅಭಿಪ್ರಾಯಪಟ್ಟಿತು.

ಸಮಿತಿಗೆ ಸಂಬಂಧಿಸಿದಂತೆ ಇ–ಮೇಲ್ ವಿಳಾಸ, ಪ್ರಮುಖರ ದೂರವಾಣಿ ಸಂಖ್ಯೆ, ಆನ್‌ಲೈನ್ ದೂರು ದಾಖಲಿಸುವ ವಿಧಾನ ಮುಂತಾದವನ್ನು ಸಚಿವಾಲಯ ಅಥವಾ ಇಲಾಖೆಗಳ ವೆಬ್‌ಸೈಟ್‌ನಲ್ಲಿ ಪ್ರಕಟಿಸಬೇಕು ಎಂದು ಕೋರ್ಟ್ ಸೂಚಿಸಿತು.

ಮುಂಬೈ ಧಾರಣೆ

ಶೇಂಗಾ

12-5-2023

ಜಾವಾ 70/80(ಹೊಸ)	11750-11800
ಜಾವಾ 80/90(ಹೊಸ)	11150-11200
ದಪ್ಪ ಮಧ್ಯಪ್ರದೇಶ(ಹೊಸ)	11300-11400
ದಪ್ಪ ಗುಜರಾತ್(ಹೊಸ)	12300-12400

ಶೇಂಗಾ ಎಣ್ಣೆ (10 ಕೆಜಿಗೆ)


ಕಚ್ಚಾ (ತೆರಿಗೆ ಬಿಟ್ಟು)	1660 (1660)
ಒಂದು ವಾರದ ಡೆಲಿವರಿ	1655 (1655)
ಸೋಯಾ ಕಚ್ಚಾ	857 (860)
ಪಾಮ್ ವಾರದ ಡೆಲಿವರಿ	926 (933)
ಸೂರ್ಯಕಾಂತಿ ಎಣ್ಣೆ ಕಚ್ಚಾ	890 (900)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
60,800 (61,300)
ಬೆಳ್ಳಿ ಕೆ.ಜಿ
72,100 (74,650)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,297
ಇಂದಿನ ಅಂತ್ಯ	18,315
▲	18
ದಿನದ ಗರಿಷ್ಠ	18,342

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹515
12 ಮೊಟ್ಟೆಗೆ	₹70

ಮೈಸೂರು

100 ಮೊಟ್ಟೆಗೆ	₹520

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1650 (1650)
ಸೋಯಾ (ರಿಫೈನ್ಡ್)	₹957 (970)
ಸೂರ್ಯಕಾಂತಿ (ರಿಫೈನ್ಡ್)	₹980 (985)
ಪಾಮೋಲಿನ್	₹928 (935)

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹155.50
ಆರ್‌ಎಸ್‌ಎಸ್-5	₹149.50
ಗುಡ್ ಲಾಟ್	₹133

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹900-1300
ಮಧ್ಯಮ	₹600-800
ಸಣ್ಣ	₹300-500

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹8800-9650
ಕೆ.ಆರ್. ಪೇಟೆ	₹8450-8450
ತುರುವೇಕೆರೆ	₹9600-9600

ಚಿನ್ನ ₹710, ಬೆಳ್ಳಿ ₹2,690 ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಶುಕ್ರವಾರ ಚಿನ್ನದ ದರ 10 ಗ್ರಾಂಗೆ ₹710ರಷ್ಟು ಇಳಿಕೆ ಕಂಡು ₹60,970ರಂತೆ ಮಾರಾಟ ಆಯಿತು.

ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನದ ದರ ಇಳಿಕೆ ಆಗಿರುವುದರ ಪರಿಣಾವು ದೇಶಿ ಮಾರುಕಟ್ಟೆಯಲ್ಲಿಯೂಕಂಡು-ಬಂದಿತು ಎಂದು ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

ಬೆಳ್ಳಿ ಧಾರಣೆ ಕೆ.ಜಿ.ಗೆ ₹2,690ರಷ್ಟು ಕುಸಿತ ಕಂಡು ₹73,445ಕ್ಕೆ ತಲುಪಿತು.

ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನದ ದರ ಒಂದು ಔನ್ಸ್‌ಗೆ (28.34 ಗ್ರಾಂ) 2,009 ಡಾಲರ್ ಮತ್ತು ಬೆಳ್ಳಿ ಧಾರಣೆ ಒಂದು ಔನ್ಸ್‌ಗೆ 24.10 ಡಾಲರ್‌ನಂತೆ ಮಾರಾಟ ಆಯಿತು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	300-350
ನಡುಗೋಲು	450-500
ರಾಶಿ	500-550
ರಾಶಿ ಉತ್ತಮ	750-800
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-900
ಹಸಿರು ಉತ್ತಮ	1000-1100
ಹಸಿರು ಅತಿ ಉತ್ತಮ	1600-1650
ಕಾಳು ಮೆಣಸು	470
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-40000
ಹಳತು	48000-53000
ಕಾರ್ಕಳ	
ಹೊಸತು	30000-39500
ಹಳತು	40000-53000
ಕುಮಟಾ	
ಚಿಪ್ಪು	29509-32509
ಕೋಕ	19509-30099
ಫ್ಯಾಕ್ಟರಿ	12509-22779
ಹಳೆಚಾಲಿ	37509-39399
ಹೊಸಚಾಲಿ	36009-37099
ಕುಂದಾಪುರ	
ಹಳೆಚಾಲಿ	43000-46000
ಹೊಸಚಾಲಿ	36000-39000
ಶಿವಮೊಗ್ಗ	
ಬೆಟ್ಟೆ	48619-53000
ಗೊರಬಲು	20009-35450
ರಾಶಿ	35156-49099
ಸರಕು	58903-78400
ಸಿದ್ದಾಪುರ	
ಬಿಳಿಗೋಟು	28609-32119
ಚಾಲಿ	35399-37709
ಕೋಕ	26669-32699
ಕೆಂಪುಗೋಟು	29019-29619
ರಾಶಿ	42209-46709
ತಟ್ಟಿಬೆಟ್ಟೆ	38609-45899
ಶಿರಸಿ	
ಬೆಟ್ಟೆ	38389-42899
ಬಿಳಿಗೋಟು	24801-32314
ಚಾಲಿ	34299-37871
ಕೆಂಪುಗೋಟು	30601-32599
ರಾಶಿ	43199-46299
ಯಲ್ಲಾಪುರ	
ಬಿಳಿಗೋಟು	26010-33812
ಚಾಲಿ	34426-38411
ಕೋಕ	16629-30899
ಕೆಂಪುಗೋಟು	26122-34312
ರಾಶಿ	41119-50579
ತಟ್ಟಿಬೆಟ್ಟೆ	36699-45049

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	15300	15300	185.95 ಸೆಂಟ್ಸ್
ಎಸಿ	---	7700	7700	
ಆರ್‌ಪಿ	---	10675	10550	ಲಂಡನ್
ಆರ್‌ಸಿ	---	228 on OT	5750	2481 ಡಾಲರ್ಸ್

ಟಾಟಾ ಮೋಟರ್ಸ್: ₹5,408 ಕೋಟಿ ಲಾಭ

ನವದೆಹಲಿ (ಪಿಟಿಐ): ದೇಶಿ ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚಾಗುತ್ತಿರುವುದು, ವಾಹನಗಳ ಬೆಲೆ ಏರಿಕೆ ಮಾಡಿದ್ದು ಹಾಗೂ ಪೂರೈಕೆ ವ್ಯವಸ್ಥೆಯಲ್ಲಿನ ಸಮಸ್ಯೆಗಳು ನಿವಾರಣೆ ಆಗುತ್ತಿರುವುದು ಟಾಟಾ ಮೋಟರ್ಸ್ ಕಂಪನಿಗೆ ಮಾರ್ಚ್ ತ್ರೈಮಾಸಿಕದಲ್ಲಿ ₹5,408 ಕೋಟಿ ಲಾಭ ಗಳಿಸಲು ನೆರವಾಗಿವೆ.

ಕಂಪನಿಯು ಹಿಂದಿನ ವರ್ಷದ ಇದೇ ತ್ರೈಮಾಸಿಕದಲ್ಲಿ ₹1,033 ಕೋಟಿ ನಷ್ಟ ಅನುಭವಿಸಿತ್ತು.

2022-23ರ ಮಾರ್ಚ್ ತ್ರೈಮಾಸಿಕದಲ್ಲಿ ಕಂಪನಿಯ ಕಾರ್ಯಾಚರಣೆ ವರಮಾನವು ₹1.05 ಲಕ್ಷ ಕೋಟಿಗೆ ಏರಿಕೆ ಆಗಿದೆ.

ಮಾರ್ಚ್ 31ಕ್ಕೆ ಕೊನೆಗೊಂಡ ಹಣಕಾಸು ವರ್ಷದಲ್ಲಿ ಕಂಪನಿಯು ₹2,414 ಕೋಟಿ ನಿವ್ವಳ ಲಾಭ ಕಂಡಿದೆ.

ಹಿಂದಿನ ಆರ್ಥಿಕ ವರ್ಷದಲ್ಲಿ ಕಂಪನಿಯು ₹11,441 ಕೋಟಿ ನಿವ್ವಳ ನಷ್ಟ ಅನುಭವಿಸಿತ್ತು.

ಡಿವಿಡೆಂಡ್: ಕಂಪನಿಯ ಆಡಳಿತ ಮಂಡಳಿಯು ಪ್ರತಿ ಷೇರಿಗೆ ₹2ರಷ್ಟು ಡಿವಿಡೆಂಡ್ ನೀಡಲು ಶಿಫಾರಸು ಮಾಡಿದೆ.



ನಿಪ್ಪೊ ಲೋಗೊ

ನಿಪ್ಪೊ: ಹೊಸ ಲೋಗೊ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿಪ್ಪೊ ಹೆಸರಿನ ಬ್ಯಾಟರಿ ಸೆಲ್‌ಗಳನ್ನು ಉತ್ಪಾದಿಸುವ ಇಂಡೊ ನ್ಯಾಷನಲ್ ಲಿಮಿಟೆಡ್ ಕಂಪನಿಯು ತನ್ನ ಲೋಗೊ ಬದಲಾಯಿಸಿದೆ. ಹೊಸ ಲೋಗೊ ಕಂಪನಿಯ ಹೊಸ ಅಸ್ಮಿತೆಯನ್ನು ಪ್ರತಿನಿಧಿಸುತ್ತದೆ. ಇದು ಹೆಚ್ಚು ಸಮಕಾಲೀನವಾಗಿದೆ ಎಂದು ಪ್ರಕಟಣೆ ಹೇಳಿದೆ.

'ಈ ವರ್ಷ ನಾವು ನಿಪ್ಪೊದ ಸ್ವರ್ಣ ಮಹೋತ್ಸವ ಆಚರಿಸುತ್ತಿದ್ದೇವೆ. ನಮ್ಮ ಮೂಲ ವಹಿವಾಟಿನ ಜೊತೆಯಲ್ಲೇ, ಹೊಸ ಭಾರತವು ಸೃಷ್ಟಿಸುತ್ತಿರುವ ಅವಕಾಶಗಳನ್ನು ಬಳಸಿಕೊಳ್ಳುವುದಕ್ಕೂ ಸಿದ್ಧರಾಗಿದ್ದೇವೆ' ಎಂದು ಕಂಪನಿಯ ಜಂಟಿ ವ್ಯವಸ್ಥಾಪಕ ನಿರ್ದೇಶಕ ಆದಿತ್ಯ ರೆಡ್ಡಿ ಹೇಳಿದ್ದಾರೆ.

ರೆಪೊ ದರದಲ್ಲಿ ಯಥಾಸ್ಥಿತಿ ಮುಂದುವರಿಯುವ ಸಾಧ್ಯತೆ ಎಂದ ತಜ್ಞರು

ತಗ್ಗಿದ ಚಿಲ್ಲರೆ ಹಣದುಬ್ಬರ

ನವದೆಹಲಿ (ಪಿಟಿಐ): ಚಿಲ್ಲರೆ ಹಣದುಬ್ಬರ ಪ್ರಮಾಣವು ಏಪ್ರಿಲ್‌ನಲ್ಲಿ 18 ತಿಂಗಳ ಕನಿಷ್ಠ ಮಟ್ಟವಾದ ಶೇಕಡ 4.7ಕ್ಕೆ ಇಳಿಕೆ ಕಂಡಿದೆ. ತರಕಾರಿ, ಎಣ್ಣೆ ಮತ್ತು ಕೊಬ್ಬಿನ ಉತ್ಪನ್ನಗಳ ಬೆಲೆ ಇಳಿಕೆಯು ಹಣದುಬ್ಬರ ಪ್ರಮಾಣ ಕಡಿಮೆ ಆಗುವುದಕ್ಕೆ ನೆರವಾಗಿವೆ.

ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಚಿಲ್ಲರೆ ಹಣದುಬ್ಬರ ದರವನ್ನು ಶೇ 4ರಲ್ಲಿ ಇರಿಸಬೇಕು ಎಂಬ ಗುರಿಯನ್ನು ಹೊಂದಿದೆ. ಈಗ ಚಿಲ್ಲರೆ ಹಣದುಬ್ಬರ ದರವು ಸತತ ಎರಡು ತಿಂಗಳುಗಳಿಂದ ಆರ್‌ಬಿಐನ ಗರಿಷ್ಠ ಮಿತಿಗಿಂತ (ಶೇ 6) ಕಡಿಮೆ ಮಟ್ಟದಲ್ಲಿ ಉಳಿದಿದೆ. ಮಾರ್ಚ್‌ನಲ್ಲಿ ಹಣದುಬ್ಬರವು ಶೇ 5.66 ಆಗಿತ್ತು.

ಏಪ್ರಿಲ್‌ನಲ್ಲಿ ದಾಖಲಾಗಿರುವ ಹಣದುಬ್ಬರ ಪ್ರಮಾಣವು 2021ರ ಅಕ್ಟೋಬರ್ ನಂತರದ ಅತ್ಯಂತ ಕನಿಷ್ಠ. ಚಿಲ್ಲರೆ ಹಣದುಬ್ಬರದ ಪ್ರಮಾಣವನ್ನು ನಿರ್ಣಯಿಸುವಲ್ಲಿ ಹೆಚ್ಚಿನ ಪಾಲು ಹೊಂದಿರುವ ಆಹಾರ ವಸ್ತುಗಳ ಹಣದುಬ್ಬರ ಪ್ರಮಾಣವು ಏಪ್ರಿಲ್‌ನಲ್ಲಿ ಶೇ 3.84ಕ್ಕೆ ಇಳಿಕೆಯಾಗಿದೆ. ಇದು ಮಾರ್ಚ್‌ನಲ್ಲಿ ಶೇ 4.79ರಷ್ಟು, ಹಿಂದಿನ ವರ್ಷದ ಏಪ್ರಿಲ್‌ನಲ್ಲಿ ಶೇ 8.31ರಷ್ಟು ಇತ್ತು.

> ಚಿಲ್ಲರೆ ಹಣದುಬ್ಬರ ಇಳಿಕೆ ಆಗಿರುವುದು ತೃಪ್ತಿದಾಯಕ. ಇದು ಹಣಕಾಸು ನೀತಿಯು ಸರಿಯಾದ ದಾರಿಯಲ್ಲಿ ಸಾಗುತ್ತಿದೆ ಎಂಬ ವಿಶ್ವಾಸ ನೀಡುತ್ತಿದೆ
>
> **ಶಕ್ತಿಕಾಂತ ದಾಸ್,** ಆರ್‌ಬಿಐ ಗವರ್ನರ್

ಬೆಲೆ ಇಳಿಕೆ ಇಷ್ಟು...

12.33% ಎಣ್ಣೆ ಮತ್ತು ಕೊಬ್ಬಿನ ಉತ್ಪನ್ನಗಳು

6.5% ತರಕಾರಿಗಳು | **1.23%** ಮಾಂಸ ಮತ್ತು ಮೀನು

ಬೆಲೆ ಏರಿಕೆ ಇಷ್ಟು...

13.67% ಏಕದಳ ಧಾನ್ಯಗಳು ಮತ್ತು ಉತ್ಪನ್ನಗಳು

8.85% ಹಾಲು ಮತ್ತು ಅದರ ಉತ್ಪನ್ನಗಳು | **17.43%** ಸಂಬಾರ ಪದಾರ್ಥ

ಮಾಹಿತಿ: ರಾಷ್ಟ್ರೀಯ ಸಾಂಖ್ಯಿಕ ಕಚೇರಿ

ಚಿಲ್ಲರೆ ಹಣದುಬ್ಬರ ಪ್ರಮಾಣವು ಶೇ 5ಕ್ಕಿಂತ ಕಡಿಮೆ ಆಗಿರುವುದು ಹಾಗೂ ಕೈಗಾರಿಕಾ ಬೆಳವಣಿಗೆ ದರವು ಕುಸಿತ ಕಂಡಿರುವುದರಿಂ-ದಾಗಿ, ಆರ್‌ಬಿಐ ರೆಪೊ ದರವನ್ನು ಯಥಾಸ್ಥಿತಿಯಲ್ಲಿ ಕಾಯ್ದುಕೊಳ್ಳುವ ಸಾಧ್ಯತೆ ಇದೆ ಎಂದು ಐಸಿಆರ್‌ಎ ಸಂಸ್ಥೆಯ ಮುಖ್ಯ ಅರ್ಥಶಾಸ್ತ್ರಜ್ಞೆ ಅದಿತಿ ನಯ್ಯರ್ ಹೇಳಿದ್ದಾರೆ. ಆದರೆ, ರೆಪೊ ದರವನ್ನು ಇಳಿಕೆ ಮಾಡುವ ಸಾಧ್ಯತೆ ಕಡಿಮೆ ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಆರ್‌ಬಿಐ ರೆಪೊ ದರವನ್ನು ಹೆಚ್ಚಿಸುವ ಅಥವಾ ಕಡಿಮೆ ಮಾಡುವ ತೀರ್ಮಾನ ಕೈಗೊಳ್ಳುವಾಗ ಚಿಲ್ಲರೆ ಹಣದುಬ್ಬರ ಪ್ರಮಾಣವನ್ನು ಪರಿಗಣಿಸುತ್ತದೆ.

ಕೈಗಾರಿಕಾ ಉತ್ಪಾದನೆ 5 ತಿಂಗಳ ಕನಿಷ್ಠ

ನವದೆಹಲಿ (ಪಿಟಿಐ): ದೇಶದ ಕೈಗಾರಿಕಾ ಉತ್ಪಾದನೆಯು ಮಾರ್ಚ್‌ನಲ್ಲಿ ಶೇಕಡ 1.1ರಷ್ಟಕ್ಕೆ ಕುಸಿದಿದೆ. ಇದು ಐದು ತಿಂಗಳ ಕನಿಷ್ಠ ಮಟ್ಟ. ಫೆಬ್ರುವರಿಯಲ್ಲಿ ಈ ವಲಯದ ಬೆಳವಣಿಗೆಯು ಶೇ 5.8ರಷ್ಟು ಆಗಿತ್ತು.

ವಿದ್ಯುತ್ ಮತ್ತು ತಯಾರಿಕಾ ವಲಯಗಳ ಬೆಳವಣಿಗೆ ಕಡಿಮೆ ಆಗಿರುವುದರಿಂದ ಕೈಗಾರಿಕಾ ಉತ್ಪಾದನೆ ಈ ಮಟ್ಟಕ್ಕೆ ಇಳಿಕೆ ಕಂಡಿದೆ. ಈ ಹಿಂದೆ 2022ರ ಅಕ್ಟೋಬರ್‌ನಲ್ಲಿ ಶೇ 4.1ರಷ್ಟು ಕುಸಿತ ಕಂಡಿತ್ತು.

ಕೈಗಾರಿಕಾ ಉತ್ಪಾದನೆ ಸೂಚ್ಯಂಕದ (ಐಐಪಿ) ಆಧಾರದ ಮೇಲೆ ಲೆಕ್ಕ ಹಾಕುವ ಕೈಗಾರಿಕಾ ಉತ್ಪಾದನೆಯು 2022ರ ಮಾರ್ಚ್‌ನಲ್ಲಿ ಶೇ 2.2ರಷ್ಟು ಬೆಳವಣಿಗೆಗೆ ಕಂಡಿತ್ತು.

ರಾಷ್ಟ್ರೀಯ ಸಾಂಖ್ಯಿಕ ಕಚೇರಿಯು (ಎನ್‌ಎಸ್‌ಒ) ಬಿಡುಗಡೆ ಮಾಡಿರುವ ಅಂಕಿ-ಅಂಶಗಳ ಪ್ರಕಾರ, ತಯಾರಿಕಾ ವಲಯದ ಬೆಳವಣಿಗೆಯು ಕಳೆದ ವರ್ಷದ ಮಾರ್ಚ್‌ನಲ್ಲಿ 1.4ರಷ್ಟು ಇದ್ದಿದ್ದು ಈ ವರ್ಷದ ಮಾರ್ಚ್‌ನಲ್ಲಿ ಶೇ 0.5ಕ್ಕೆ ಇಳಿಕೆ ಆಗಿದೆ. ವಿದ್ಯುತ್ ವಲಯದ ಉತ್ಪಾದನೆ ಶೇ 6.1ರಿಂದ ಶೇ 1.6ಕ್ಕೆ ಕುಸಿದಿದೆ.

ಆದರೆ, ಗಣಿ ವಲಯದ ಉತ್ಪಾದನೆಯು ಶೇ 3.9ರಿಂದ ಶೇ 6.8ಕ್ಕೆ ಏರಿಕೆ ಕಂಡಿದೆ. ಬಂಡವಾಳ ಸರಕುಗಳ ವಲಯದ ಬೆಳವಣಿಗೆಯು ಶೇ 2.4ರಿಂದ ಶೇ 8.1ಕ್ಕೆ ಏರಿಕೆ ಆಗಿದೆ. 2022-23ರಲ್ಲಿ ಐಐಪಿ ಶೇ 5.1ರಷ್ಟು ಬೆಳವಣಿಗೆ ಕಂಡಿದೆ. 2021-22ರಲ್ಲಿ ಶೇ 11.4ರಷ್ಟು ಬೆಳವಣಿಗೆ ಕಂಡಿತ್ತು.

ಭ್ರಷ್ಟಾಚಾರ: ಇಮ್ರಾನ್‌ಗೆ ಜಾಮೀನು

ಕೋರ್ಟ್‌ನಲ್ಲೇ ವಕೀಲನಿಂದ ಖಾನ್ ಪರ ಘೋಷಣೆ; ವಿಚಾರಣೆ ವಿಳಂಬ

ಇಸ್ಲಾಮಾಬಾದ್ (ಪಿಟಿಐ): ಭ್ರಷ್ಟಾಚಾರ ಪ್ರಕರಣಕ್ಕೆ ಸಂಬಂಧಿಸಿ ಹೈಕೋರ್ಟ್‌ನ ವಿಶೇಷ ಪೀಠವು ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರಿಗೆ ಎರಡು ವಾರಗಳ ಅವಧಿಗೆ ಜಾಮೀನು ಮಂಜೂರು ಮಾಡಿತು.

ಅಲ್ ಖಾದಿರ್ ಟ್ರಸ್ಟ್ ಸಂಬಂಧಿತ ಪ್ರಕರಣದ ವಿಚಾರಣೆ ಆಲಿಸಿದ ನ್ಯಾಯಮೂರ್ತಿಗಳಾದ ಮಿಯಾಂಗುಲ್ ಹಸನ್ ಔರಂಗಜೇಬ್ ಮತ್ತು ಸಾಮನ್ ರಾಫತ್ ಇಮ್ತಿಯಾಜ್ ಅವರಿದ್ದ ಪೀಠ ಜಾಮೀನು ನೀಡಿತು.

ಇದೇ ಪ್ರಕರಣಕ್ಕೆ ಸಂಬಂಧಿಸಿ ರೇಂಜರ್ಸ್ ಭದ್ರತಾ ಪಡೆ ಇಮ್ರಾನ್ ಖಾನ್ ಅವರನ್ನು ಮಂಗಳವಾರ ವಷ್ಟೇ ಹೈಕೋರ್ಟ್ ಆವರಣದಿಂದಲೇ ಬಂಧಿಸಿತ್ತು. ಬಳಿಕ ಈ ಕ್ರಮವನ್ನು ಕಾನೂನು ಬಾಹಿರ ಎಂದು ಘೋಷಿಸಿದ್ದ ಸುಪ್ರಿಂ ಕೋರ್ಟ್ ಗುರುವಾರವಷ್ಟೇ ಇಮ್ರಾನ್ ಖಾನ್ ಬಿಡುಗಡೆಗೆ ಆದೇಶ ನೀಡಿತ್ತು.

ಶುಕ್ರವಾರ ಬಿಗಿ ಭದ್ರತೆಯಲ್ಲಿ ಸ್ಥಳೀಯ ಕಾಲಮಾನ ಬೆಳಿಗ್ಗೆ 11.30ಕ್ಕೆ ಕೋರ್ಟ್‌ಗೆ ಆಗಮಿಸಿದ 70 ವರ್ಷ ವಯಸ್ಸಿನ ಇಮ್ರಾನ್ ಖಾನ್ ಅವರು ನಿಯಮಾನುಸಾರ ಗುರುತು ಪತ್ತೆ ಪರೀಕ್ಷೆಗೆ ಒಳಪಟ್ಟರು.

ಬೆಳಿಗ್ಗೆ ವಿಚಾರಣೆ ಆರಂಭಕ್ಕೂ ಮುನ್ನ ವಕೀಲರೊಬ್ಬರು ಕಲಾಪ ಕೊಠಡಿಯಲ್ಲಿಯೇ ಖಾನ್ ಪರವಾಗಿ ಘೋಷಣೆಯನ್ನು ಕೂಗಿದರು. ಈ ಹಂತದಲ್ಲಿ ಭದ್ರತಾ ಕಾರಣಗಳಿಂದಾಗಿ ವಿಚಾರಣೆ ವಿಳಂಬವಾಯಿತು.

ವಕೀಲರು ಘೋಷಣೆ ಕೂಗಿದ ಬೆಳವಣಿಗೆಗೆ ಅಸಮಾಧಾನ ವ್ಯಕ್ತಪಡಿಸಿದ ನ್ಯಾಯಮೂರ್ತಿಗಳು, ಶುಕ್ರವಾರದ ಪ್ರಾರ್ಥನೆ ಬಳಿಕ ವಿಚಾರಣೆಯು ಆರಂಭವಾಗಲಿದೆ ಎಂದು ಪ್ರಕಟಿಸಿ ಹೊರನಡೆದರು.

ಅಲ್ ಖಾದಿರ್ ಟ್ರಸ್ಟ್‌ಗೆ ಅಕ್ರಮವಾಗಿ ಹಣ ವರ್ಗಾವಣೆ ಮಾಡಿ ಭ್ರಷ್ಟಾಚಾರ ನಡೆಸಿದ ಆರೋಪದಲ್ಲಿ ಎನ್‌ಎಬಿ ಸಿಬ್ಬಂದಿ ಖಾನ್ ಅವರನ್ನು ಮಂಗಳವಾರ ಹೈಕೋರ್ಟ್ ಆವರಣದ-ಲ್ಲಿಯೇ ಬಂಧಿಸಿದ್ದರು.

ಬಂಧನವನ್ನು ಈ ಮೊದಲು ಇಸ್ಲಾಮಾಬಾದ್ ಹೈಕೋರ್ಟ್ ಎತ್ತಿಹಿಡಿದಿತ್ತು. ಆದರೆ, ಸುಪ್ರೀಂ ಕೋರ್ಟ್‌ನ ತ್ರಿಸದಸ್ಯರ ಪೀಠವು, ಬಂಧನವನ್ನು ಅಸಿಂಧುಗೊಳಿಸಿ ಬಿಡುಗಡೆಗೆ ಆದೇಶಿಸಿತ್ತು.

ಮೇ 17ರವರೆಗೆ ಬಂಧನ ಬೇಡ: ಇಮ್ರಾನ್ ಖಾನ್ ಅವರ ವಿರುದ್ಧ ಮೇ 9ರ ನಂತರ ದಾಖಲಿಸಲಾದ ಪ್ರಕರಣಗಳಿಗೆ ಸಂಬಂಧಿಸಿ ಮೇ 17ರವರೆಗೂ ಬಂಧಿಸಬಾರದು ಎಂದು ಹೈಕೋರ್ಟ್ ಆದೇಶಿಸಿತು.

ಜಾಮೀನು ಮಂಜೂರು ಹಿಂದೆಯೇ ಪ್ರತ್ಯೇಕ ಅರ್ಜಿಯ ವಿಚಾರಣೆ ನಡೆಸಿದ ದ್ವಿಸದಸ್ಯರಿದ್ದ ನ್ಯಾಯಪೀಠ ಈ ಸಂಬಂಧ ನಿರ್ದೇಶನವನ್ನು ನೀಡಿತು.

'ತಮ್ಮ ವಿರುದ್ಧ ದಾಖಲಿಸಿರುವ ಎಲ್ಲ ಪ್ರಕರಣಗಳ ವಿವರ ನೀಡಬೇಕು ಹಾಗೂ ಈ ಎಲ್ಲ ಪ್ರಕರಣಗಳಿಗೆ ಸಂಬಂಧಿಸಿ ಜಾಮೀನು ನೀಡಬೇಕು' ಎಂದು ಇಮ್ರಾನ್ ಖಾನ್ ಅವರು ಅರ್ಜಿ ಸಲ್ಲಿಸಿದ್ದರು.

ಹಿಂಸಾಚಾರ: 3 ಸಾವಿರ ಮಂದಿ ಬಂಧನ

ಲಾಹೋರ್ (ಪಿಟಿಐ): ಇಮ್ರಾನ್ ಖಾನ್ ಬಂಧನ ಖಂಡಿಸಿ ಲಾಹೋರ್‌ನಲ್ಲಿ ನಡೆದ ಹಿಂಸಾಚಾರಗಳಿಗೆ ಸಂಬಂಧಿಸಿ 3000 ಜನರನ್ನು ಬಂಧಿಸಲಾಗಿದೆ ಎಂದು ಪಂಜಾಬ್ ಪ್ರಾಂತ್ಯದ ಪೊಲೀಸರು ತಿಳಿಸಿದ್ದಾರೆ.

ಪಿಟಿಐ ಪಕ್ಷದ ಮುಖಂಡ ಮುರಾದ್ ಸಯೀದ್ ವಿಡಿಯೊ ಸಂದೇಶ ನೀಡಿದ್ದು, 'ಹಿಂಸಾಚಾರ ಕೃತ್ಯಗಳಲ್ಲಿ 40 ಕಾರ್ಯಕರ್ತರು ಸತ್ತಿದ್ದು, 100ಕ್ಕೂ ಹೆಚ್ಚು ಜನ ಗಾಯಗೊಂಡಿದ್ದಾರೆ' ಎಂದು ತಿಳಿಸಿದ್ದಾರೆ.



ಇಮ್ರಾನ್ ಖಾನ್ ಅವರು ಶುಕ್ರವಾರ ಬಿಗಿಭದ್ರತೆಯಲ್ಲಿ ಇಸ್ಲಾಮಾಬಾದ್ ಹೈಕೋರ್ಟ್‌ಗೆ ಬಂದರು –ಎಎಫ್‌ಪಿ ಚಿತ್ರ

'ಸುಪ್ರೀಂ'ನದು ದ್ವಿಮುಖ ಧೋರಣೆ'

ಇಸ್ಲಾಮಾಬಾದ್ (ಪಿಟಿಐ): 'ಸುಪ್ರೀಂ ಕೋರ್ಟ್ ತನ್ನ 'ಆಪ್ತ' ಇಮ್ರಾನ್ ಖಾನ್ ಅವರಿಗೆ ಜಾಮೀನು ನೀಡಿದೆ. ಸುಪ್ರೀಂ ಕೋರ್ಟ್‌ನ ಈ ದ್ವಿಮುಖ ಧೋರಣೆಯೂ ದೇಶದಲ್ಲಿ ನ್ಯಾಯದ ಸಾವಿಗೆ ಕಾರಣವಾಗಲಿದೆ' ಎಂದು ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಶರೀಫ್ ಟೀಕಿಸಿದ್ದಾರೆ.

'ಗುರುವಾರ ಇಮ್ರಾನ್ ಅವರನ್ನು ಕೋರ್ಟ್‌ಗೆ ಹಾಜರುಪಡಿಸಿದಾಗ ಮುಖ್ಯ ನ್ಯಾಯಮೂರ್ತಿ ಅವರು 'ನಿಮ್ಮನ್ನು ನೋಡಿ ಸಮಾಧಾನವಾಯಿತು' ಎಂದಿದ್ದರು. 'ಇದನ್ನು ಅವರು ಭ್ರಷ್ಟಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಹೇಳಿದ್ದಾರೆ' ಎಂದು ಜಾಮೀನು ನೀಡಿದ ಕ್ರಮವನ್ನು ಉಲ್ಲೇಖಿಸಿ ಪ್ರಧಾನಿ ಹೇಳಿದರು.

'ಆಪ್ತನಿಗೆ ನೀವು ನೆರವು ನೀಡುವುದೇ ಆಗಿದ್ದರೆ ದೇಶದ ಜೈಲಿನಲ್ಲಿರುವ ಎಲ್ಲ ಡಕಾಯಿತರನ್ನು ಬಿಡುಗಡೆ ಮಾಡಿ. ಎಲ್ಲರು ಮುಕ್ತವಾಗಿರಲಿ' ಎಂದು ಸಂಪುಟ ಸಭೆಯಲ್ಲಿ ಮಾತನಾಡಿದ ಅವರು ಹೇಳಿದರು.

ಅದಾನಿ ಪ್ರಕರಣ: ಸೆಬಿ ತನಿಖೆ ಅವಧಿ ವಿಸ್ತರಣೆಗೆ 'ಸುಪ್ರೀಂ' ಪರಿಶೀಲನೆ

ನವದೆಹಲಿ (ಪಿಟಿಐ): ಅದಾನಿ ಸಮೂಹವು ತನ್ನ ಷೇರುಗಳ ಮೌಲ್ಯವನ್ನು ಅಕ್ರಮವಾಗಿ ಏರುಪೇರು ಮಾಡಿದೆ ಎಂಬ ಆರೋಪಗಳ ಕುರಿತು ತನಿಖೆಯನ್ನು ಪೂರ್ಣಗೊಳಿಸಲು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಗೆ (ಸೆಬಿ) ಇನ್ನೂ ಮೂರು ತಿಂಗಳ ಅವಧಿ ಕೊಡುವುದನ್ನು ಪರಿಶೀಲಿಸಲಾಗುವುದು ಎಂದು ಸುಪ್ರೀಂ ಕೋರ್ಟ್ ಶುಕ್ರವಾರ ಹೇಳಿದೆ.

ಮುಖ್ಯನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಮತ್ತು ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಮತ್ತು ಜೆ.ಬಿ. ಪಾರ್ದೀವಾಲಾ ಅವರಿದ್ದ ಪೀಠವು ಪ್ರಕರಣದ ವಿಚಾರಣೆ ನಡೆಸುತ್ತಿದೆ.

ತನಿಖೆ ಪೂರ್ಣಗೊಳಿಸಲು ಸೆಬಿಯು ಇನ್ನೂ ಆರು ತಿಂಗಳು ಸಮಯ ಕೇಳಿತ್ತು. ಆದರೆ, ಅಷ್ಟೊಂದು ಸಮಯ ನೀಡಲು ಪೀಠವು ಮುಂದಾಗಲಿಲ್ಲ. ಮೂರೇ ತಿಂಗಳಲ್ಲಿ ತನಿಖೆಯನ್ನು ಪೂರ್ಣಗೊಳಿಸಬೇಕು. ಸೆಬಿಯು ಚುರುಕಾಗಿ ಕೆಲಸ ಮಾಡಬೇಕು ಎಂದು ಪೀಠ ಹೇಳಿತು.

ಈ ಪ್ರಕರಣ ಸಂಬಂಧ ಸುಪ್ರೀಂ ಕೋರ್ಟ್ ನೇಮಿಸಿದ ನ್ಯಾಯಮೂರ್ತಿ (ನಿವೃತ್ತ) ಎ.ಎಂ. ಸಪ್ರೆ ಅವರ ಸಮಿತಿಯು ಸಲ್ಲಿಸಿದ ವರದಿಯನ್ನು ಕೋರ್ಟ್ ರಿಜಿಸ್ಟ್ರಿ ಸ್ವೀಕರಿಸಿದೆ. ವರದಿ ಪರಿಶೀಲಿಸಿದ ನಂತರ, ಸೆಬಿಯ ಅರ್ಜಿ ಮತ್ತು ಪಿಐಎಲ್‌ಗಳನ್ನು ಮೇ 15ರಂದು ವಿಚಾರಣೆ ನಡೆಸುವುದಾಗಿ ಪೀಠ ಹೇಳಿದೆ.

ಅರ್ಜಿದಾರ ಜಯಾ ಠಾಕೂರ್ ಪರ ಹಾಜರಾಗಿದ್ದ ವಕೀಲರು, ಸೆಬಿಯ ವೈಫಲ್ಯದ ಬಗ್ಗೆ ಪೀಠವು ಏನನ್ನೂ ಹೇಳಲಿಲ್ಲ ಎಂದಾಗ, ವಕೀಲರಿಗೆ ತೀಕ್ಷ್ಣ ಎಚ್ಚರಿಕೆ ನೀಡಿದ ಪೀಠವು, 'ಆರೋಪ ಮಾಡುವಾಗ ಎಚ್ಚರವಿರಲಿ. ಇದು ಷೇರು ಮಾರುಕಟ್ಟೆಯಲ್ಲಿನ ಭಾವನೆಗಳ ಮೇಲೂ ಪರಿಣಾಮ ಬೀರಬಹುದು. ನಿಮ್ಮ ಎಲ್ಲ ಆರೋಪಗಳನ್ನು ಪರಿಶೀಲಿಸಲು ಸಮಿತಿ ರಚಿಸಲಾಗಿದೆ' ಎಂದೂ ಹೇಳಿದೆ.

ಅದಾನಿ ಸಮೂಹವು ತನ್ನ ಷೇರು ದರಗಳನ್ನು ಅಕ್ರಮವಾಗಿ ಏರಿಳಿತ ಮಾಡಿದೆ ಮತ್ತು ಮಾಹಿತಿಗಳನ್ನು ಮುಚ್ಚಿಟ್ಟಿದೆ ಎನ್ನುವ ಆರೋಪಗಳನ್ನು ಮಾಡಿ ಅಮೆರಿಕದ ಹಿಂಡನ್‌ಬರ್ಗ್ ರಿಸರ್ಚ್ ಸಂಸ್ಥೆಯು ವರದಿ ಪ್ರಕಟಿಸಿತ್ತು.

ಶಿವಲಿಂಗ: ಕಾರ್ಬನ್ ಡೇಟಿಂಗ್ ಪರೀಕ್ಷೆಗೆ ಅಸ್ತು

ಪ್ರಜಾವಾಣಿ ವಾರ್ತೆ

ಲಖನೌ: ವಾರಾಣಸಿಯ ಕಾಶಿ ದೇಗುಲದ ಸಂಕೀರ್ಣದಲ್ಲಿರುವ ಜ್ಞಾನವಾಪಿ ಮಸೀದಿಯಲ್ಲಿ ಪತ್ತೆಯಾಗಿದೆ ಎಂದ ಹೇಳಲಾದ ಶಿವಲಿಂಗ ರೂಪದ ರಚನೆಯ ಕಾರ್ಬನ್ ಡೇಟಿಂಗ್ ಪರೀಕ್ಷೆಗೆ ಅಲಹಾಬಾದ್ ಹೈಕೋರ್ಟ್ ಶುಕ್ರವಾರ ಹಸಿರು ನಿಶಾನೆ ನೀಡಿದೆ.

ಮಸೀದಿಯ ಆವರಣದೊಳಗೆ ವಿಡಿಯೊ ಸಮೀಕ್ಷೆ ನಡೆಸಿದ್ದ ವೇಳೆ ಶಿವಲಿಂಗ ರೂಪದ ರಚನೆ ಕಳೆದ ವರ್ಷ ಪತ್ತೆಯಾಗಿತ್ತು ಎಂದು ಹೇಳಲಾಗಿದೆ. ಇದರ ಕಾರ್ಬನ್ ಡೇಟಿಂಗ್ ಪರೀಕ್ಷೆಗೆ ಅನುಮತಿ ಕೋರಿ ನಾಲ್ವರು ಹಿಂದೂ ಮಹಿಳೆಯರು ವಾರಾಣಸಿ ನ್ಯಾಯಾಲಯದ ಮೊರೆ ಹೋಗಿದ್ದರು. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿ ಮಸೀದಿಗೆ ಸಂಬಂಧಿಸಿದವರೂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

ಅರ್ಜಿಯ ವಿಚಾರಣೆ ನಡೆಸಿದ್ದ ವಾರಾಣಸಿ ನ್ಯಾಯಾಲಯವು, 'ಪರೀಕ್ಷೆಗೆ ಅನುಮತಿ ನೀಡಿದರೆ ಜಾಗಕ್ಕೆ ಹಾನಿಯಾಗುತ್ತದೆ ಹಾಗೂ ಸುಪ್ರೀಂ ಕೋರ್ಟ್ ಆದೇಶದ ಉಲ್ಲಂಘನೆಯಾಗುತ್ತದೆ' ಎಂದು ತೀರ್ಪು ನೀಡಿತ್ತು. ಇದನ್ನು ಪ್ರಶ್ನಿಸಿ ಹಿಂದೂ ಮಹಿಳೆಯರು ಹೈಕೋರ್ಟ್ ಮೆಟ್ಟಿಲೇರಿದ್ದರು.

ನ್ಯಾಯಮೂರ್ತಿ ಅರವಿಂದ್ ಕುಮಾರ್ ಮಿಶ್ರಾ ಅವರಿದ್ದ ಏಕ ಸದಸ್ಯ ಪೀಠವು, 'ಶಿವಲಿಂಗದ ಕಾಲಮಾನ, ಸ್ವಭಾವ ಹಾಗೂ ಇತರ ವಿಚಾರಗಳನ್ನು ತಿಳಿಯಲು ಕಾರ್ಬನ್ ಡೇಟಿಂಗ್ ಪರೀಕ್ಷೆ ನಡೆಸಬೇಕು. ಶಿವಲಿಂಗಕ್ಕೆ ಯಾವುದೇ ಹಾನಿ ಮಾಡಬಾರದು' ಎಂದು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಗೆ (ಎಎಸ್‌ಐ) ಸೂಚಿಸಿದೆ.

ಈ ಮೊದಲು ಅರ್ಜಿಯ ವಿಚಾರಣೆ ವೇಳೆ ಹೈಕೋರ್ಟ್, 'ಕಾರ್ಬನ್ ಡೇಟಿಂಗ್ ಪರೀಕ್ಷೆ ಮಾಡಲು ಸಾಧ್ಯವೇ' ಎಂಬ ಬಗ್ಗೆ ವರದಿ ಸಲ್ಲಿಸುವಂತೆ ಪುರಾತತ್ವ ಇಲಾಖೆಗೆ ಸೂಚಿಸಿತ್ತು.

ಏರ್ ಇಂಡಿಯಾಕ್ಕೆ ₹ 30 ಲಕ್ಷ ದಂಡ

ನವದೆಹಲಿ (ಪಿಟಿಐ): ಪೈಲಟ್‌ವೊಬ್ಬರು ವಿಮಾನದ ಕಾಕ್‌ಪಿಟ್‌ಗೆ ತನ್ನ ಸ್ನೇಹಿತೆಯನ್ನು ಕರೆಯಿಸಿಕೊಂಡು ಭದ್ರತಾ ನಿಯಮ ಉಲ್ಲಂಘಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಏರ್ ಇಂಡಿಯಾ ಸಂಸ್ಥೆಗೆ ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯವು (ಡಿಜಿಸಿಎ) ಶುಕ್ರವಾರ ₹ 30 ಲಕ್ಷ ದಂಡ ವಿಧಿಸಿದೆ.

ಅಲ್ಲದೇ, ಕರ್ತವ್ಯಲೋಪ ಎಸಗಿದ ಪೈಲಟ್ ಪರವಾನಗಿಯನ್ನು ಮೂರು ತಿಂಗಳು ಅಮಾನತುಗೊಳಿಸಿದೆ. ಭದ್ರತಾ ನಿಯಮ ಉಲ್ಲಂಘಿಸದಂತೆ ಸಹ ಪೈಲಟ್‌ಗೆ ಎಚ್ಚರಿಕೆ ನೀಡಲಾಗಿದೆ.

36 ಸಾವಿರ ಶಿಕ್ಷಕರ ನೇಮಕಾತಿ ರದ್ದು

ಕೋಲ್ಕತ್ತ: ನೇಮಕಾತಿಯಲ್ಲಿ ಅಕ್ರಮ ನಡೆದ ಹಿನ್ನೆಲೆಯಲ್ಲಿ ಪಶ್ಚಿಮ ಬಂಗಾಳದಲ್ಲಿ 36 ಸಾವಿರ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಯನ್ನು ರದ್ದುಪಡಿಸಿ ಕಲ್ಕತ್ತ ಹೈಕೋರ್ಟ್ ಶುಕ್ರವಾರ ಆದೇಶ ಹೊರಡಿಸಿದೆ.

3 ತಿಂಗಳೊಳಗೆ ಹೊಸ ನೇಮಕಾತಿ ನಡೆಸುವಂತೆ ರಾಜ್ಯ ಪ್ರಾಥಮಿಕ ಶಿಕ್ಷಣ ಮಂಡಳಿಗೆ ನ್ಯಾಯಮೂರ್ತಿ ಅಭಿಜಿತ್ ಗಂಗೋಪಾಧ್ಯಾಯ ಆದೇಶಿಸಿದ್ದಾರೆ.

2014ರಲ್ಲಿ ಶಿಕ್ಷಕರ ಹುದ್ದೆಗಳ ನೇಮಕಾತಿಗೆ ಪ್ರವೇಶ ಪರೀಕ್ಷೆ ನಡೆಸಲಾಗಿತ್ತು. ಇದರಡಿ ಆಯ್ಕೆಯಾದವರಿಗೆ 2016ರಲ್ಲಿ ನೇಮಕಾತಿಯ ಆದೇಶ ಪತ್ರ ನೀಡಲಾಗಿತ್ತು. ಒಟ್ಟು 42,500 ಶಿಕ್ಷಕರನ್ನು ನೇಮಿಸಿಕೊಳ್ಳಲಾಗಿದ್ದು, ಹೈಕೋರ್ಟ್‌ನಲ್ಲಿ ಈ ಪ್ರಕರಣದ ವಿಚಾರಣೆ ನಡೆಯುತ್ತಿದೆ.



ಗುಜರಾತ್‌ಗೆ ಸೋಲುಣಿಸಿದ ಮುಂಬೈ ಇಂಡಿಯನ್ಸ್; ರಶೀದ್ ಖಾನ್ ಆಲ್‌ರೌಂಡ್ ಆಟ ವ್ಯರ್ಥ

ಸೂರ್ಯ ಶತಕಕ್ಕೆ ಒಲಿದ ಗೆಲುವು

ಮುಂಬೈ (ಪಿಟಿಐ): ಸೂರ್ಯಕುಮಾರ್ ಯಾದವ್ ಅವರು ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ತಮ್ಮ ಚೊಚ್ಚಲ ಶತಕ ದಾಖಲಿಸಿದರು. ಅವರ ಅಮೋಘ ಬ್ಯಾಟಿಂಗ್ ನೆರವಿನಿಂದ ಮುಂಬೈ ಇಂಡಿಯನ್ಸ್ ತಂಡವು ಗುಜರಾತ್ ಟೈಟನ್ಸ್‌ಗೆ ಸೋಲುಣಿಸಿತು.

ಶುಕ್ರವಾರ ವಾಂಖೆಡೆ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಮುಂಬೈ 27 ರನ್‌ಗಳಿಂದ ಗೆದ್ದಿತು. ಗುಜರಾತ್ ತಂಡದ ರಶೀದ್ ಖಾನ್ (30ಕ್ಕೆ 4 ವಿಕೆಟ್, ಅಜೇಯ 79 ರನ್) ಆಲ್‌ರೌಂಡ್ ಆಟ ವ್ಯರ್ಥವಾಯಿತು. ಈ ಗೆಲುವಿನೊಂದಿಗೆ ಮುಂಬೈ ಪಾಯಿಂಟ್ಸ್ ಪಟ್ಟಿಯಲ್ಲಿ ಮೂರನೇ ಸ್ಥಾನಕ್ಕೇರಿತು.

ಮೊದಲು ಬ್ಯಾಟ್ ಮಾಡಿದ ಮುಂಬೈ 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 218 ರನ್ ಗಳಿಸಿತು. ಗುಜರಾತ್ ನಿಗದಿತ ಓವರ್‌ಗಳಲ್ಲಿ 8 ವಿಕೆಟ್‌ಗೆ 191 ರನ್ ದಾಖಲಿಸಿತು.

ಗುಜರಾತ್, ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಟೈಟನ್ಸ್ ತಂಡದ ಬೌಲರ್‌ಗಳನ್ನು ದಂಡಿಸಿದ ಸೂರ್ಯ 49 ಎಸೆತಗಳಲ್ಲಿ ಅಜೇಯ 103 ರನ್‌ಗಳನ್ನು ಗಳಿಸಿದರು. ಅದರಲ್ಲಿ ಅರ್ಧ ಡಜನ್ ಸಿಕ್ಸರ್ ಹಾಗೂ 11 ಬೌಂಡರಿಗಳಿದ್ದವು.

ಮುಂಬೈ ತಂಡದ ಆರಂಭಿಕ ಜೋಡಿ ರೋಹಿತ್ ಶರ್ಮಾ (29; 18ಎ) ಹಾಗೂ ಇಶಾನ್ ಕಿಶನ್ (31; 20ಎ) ಭರ್ಜರಿ ಆರಂಭ ನೀಡಿದರು. ಆರು ಓವರ್‌ಗಳಲ್ಲಿ 61 ರನ್‌ಗಳು ಹರಿದವು. ರಶೀದ್ ಖಾನ್ ಎಸೆತದಲ್ಲಿ ರೋಹಿತ್ ಔಟಾದರು. ಅದೇ ಓವರ್‌ನಲ್ಲಿ ಇಶಾನ್ ಕಿಶನ್ ಕೂಡ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದರು. ನೆಹಲ್ ವಡೇರಾ (15) ಕೂಡ ರಶೀದ್ ಎಸೆತದಲ್ಲಿ ಔಟಾದರು.

ಆದರೆ ಮೂರನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಬಂದಿದ್ದ ಸೂರ್ಯ ಅವರೊಂದಿಗೆ ಸೇರಿದ ವಿಷ್ಣು ವಿನೋದ್ (30 ರನ್) ಇನಿಂಗ್ಸ್‌ಗೆ ಬಲ ತುಂಬಿದರು. ವಿಷ್ಣು ಅವರು ಸೂರ್ಯಗೆ ಉತ್ತಮ ಜೊತೆ ನೀಡಿದರು.ಇದರಿಂದಾಗಿ 4ನೇ ವಿಕೆಟ್ ಜೊತೆಯಾಟದಲ್ಲಿ ಇವರಿಬ್ಬರೂ 65 ರನ್ ಸೇರಿಸಿದರು. 16ನೇ ಓವರ್‌ನಲ್ಲಿ ಮೋಹಿತ್ ಶರ್ಮಾ ಅವರು ವಿಷ್ಣು ವಿಕೆಟ್ ಗಳಿಸಿ ಜೊತೆಯಾಟ ಮುರಿದರು. ಆದರೆ ನಂತರದ ಆಟದಲ್ಲಿ ಸೂರ್ಯ ಪ್ರಜ್ವಲಿಸಿದರು. ಇನಿಂಗ್ಸ್‌ನ ಕೊನೆಯ ಎಸೆತವನ್ನು ಸ್ವೀಪ್ ಮಾಡಿ ಸಿಕ್ಸರ್‌ಗೆತ್ತಿ ಶತಕ ಪೂರೈಸಿದರು. ಗುಜರಾತ್ ಎದುರು ಮುಂಬೈ ಗರಿಷ್ಠ ಮೊತ್ತ ದಾಖಲಿಸಲೂ ಕಾರಣರಾದರು.

ಗಮನಸೆಳೆದ ರಶೀದ್: ಬೌಲಿಂಗ್‌ನಲ್ಲಿ ಮಿಂಚಿದ್ದ ರಶೀದ್ ಬ್ಯಾಟಿಂಗ್ ನಲ್ಲಿಯೂ ಅಬ್ಬರಿಸಿದರು. 32 ಎಸೆತಗಳಲ್ಲಿ 3 ಬೌಂಡರಿ ಹಾಗೂ 10 ಚಿತ್ತಾಪಹಾರಿ ಸಿಕ್ಸರ್‌ಗಳನ್ನು ಒಳಗೊಂಡ ಅಜೇಯ 79 ರನ್ ಕಲೆಹಾಕಿ ರಂಜಿಸಿದರು. ಮುರಿಯದ ಒಂಬತ್ತನೇ ವಿಕೆಟ್ ಜೊತೆಯಾಟದಲ್ಲಿ ರಶೀದ್ ಹಾಗೂ ಅಲ್ಜರಿ ಜೋಸೆಫ್ (7) ಕೇವಲ 40 ಎಸೆತಗಳಲ್ಲಿ 88 ರನ್ ಕಲೆಹಾಕಿದರು. ಮಧ್ಯಮ ಕ್ರಮಾಂಕದಲ್ಲಿ ಗುಜರಾತ್ ಪರ ವಿಜಯ ಶಂಕರ್ (29) ಹಾಗೂ ಡೇವಿಡ್ ಮಿಲ್ಲರ್ (41) ಹೊರತುಪಡಿಸಿ ಉಳಿದವರಿಂದ ಉತ್ತಮ ಆಟ ಮೂಡಿಬರಲಿಲ್ಲ.



ಸೂರ್ಯಕುಮಾರ್ ಯಾದವ್ ಶತಕ ಸಂಭ್ರಮ– ಎಎಫ್‌ಪಿ ಚಿತ್ರ

ಸ್ಕೋರ್ ಕಾರ್ಡ್

ಮುಂಬೈ ಇಂಡಿಯನ್ಸ್ 5ಕ್ಕೆ 218 (20 ಓವರ್)
ಇಶಾನ್ ಎಲ್‌ಬಿಡಬ್ಲ್ಯು ಬಿ ರಶೀದ್ 31 (20 ಎ., 4X4, 6X1)
ರೋಹಿತ್ ಸಿ ತೆವಾಟಿಯಾ ಬಿ ರಶೀದ್ 29 (18 ಎ., 4X3, 6X2)
ಸೂರ್ಯಕುಮಾರ್ ಔಟಾಗದೆ 103 (49 ಎ., 4X11, 6X6)
ನೇಹಲ್ ಬಿ ರಶೀದ್ 15 (7 ಎ., 4X1, 6X1),ವಿಷ್ಣು ಸಿ ಮನೋಹರ್ ಬಿ ಮೋಹಿತ್ 30 (20 ಎ., 4X2, 6X2)
ಡೇವಿಡ್ ಸಿ ಮತ್ತು ಬಿ ರಶೀದ್ 5 (3 ಎ., 4X1), ಗ್ರೀನ್ ಔಟಾಗದೆ 3 (3 ಎ.)
ಇತರೆ: 2 (ಲೆಗ್‌ಬೈ 2)
ವಿಕೆಟ್ ಪತನ: 1–61 (ರೋಹಿತ್ ಶರ್ಮಾ; 6.1), 2–66 (ಇಶಾನ್ ಕಿಶನ್; 6.5), 3–88 (ನೇಹಲ್ ವಡೇರಾ; 8.6), 4–153 (ವಿಷ್ಣು ವಿನೋದ್; 15.6), 5–164 (ಟಿಮ್ ಡೇವಿಡ್; 16.6)
ಬೌಲಿಂಗ್: ಮೊಹಮ್ಮದ್ ಶಮಿ 4–0–53–0, ಮೋಹಿತ್ ಶರ್ಮಾ 4–0–43–1, ರಶೀದ್ ಖಾನ್ 4–0–30–4, ನೂರ್ ಅಹಮದ್ 4–0–38–0, ಅಲ್ಜರಿ ಜೋಸೆಫ್ 4–0–52–0

ಗುಜರಾತ್ ಟೈಟನ್ಸ್ 8ಕ್ಕೆ 191 (20 ಓವರ್)
ಸಹಾ ಎಲ್‌ಬಿಡಬ್ಲ್ಯು ಬಿ ಆಕಾಶ್ 2 (5 ಎ)
ಗಿಲ್ ಬಿ ಆಕಾಶ್ 6 (9 ಎ)
ಹಾರ್ದಿಕ್ ಸಿ ಇಶಾನ್ ಬಿ ಬೆಹ್ರೆನ್‌ಡಾರ್ಫ್ 4 (3 ಎ., 4X1)
ವಿಜಯ್ ಶಂಕರ್ ಬಿ ಚಾವ್ಲಾ 29 (14 ಎ., 4X6)
ಮಿಲ್ಲರ್ ಎಲ್‌ಬಿಡಬ್ಲ್ಯು ಬಿ ಆಕಾಶ್ 41 (26 ಎ., 4X4, 6X2)
ಅಭಿನವ್ ಬಿ ಕಾರ್ತಿಕೇಯ 2 (3 ಎ)
ತೆವಾಟಿಯಾ ಸಿ ಗ್ರೀನ್ ಬಿ ಚಾವ್ಲಾ 14 (13 ಎ., 4X1), ರಶೀದ್ ಔಟಾಗದೆ 79 (32 ಎ., 4X3, 6X10), ನೂರ್ ಬಿ ಕಾರ್ತಿಕೇಯ 1 (3 ಎ)
ಜೋಸೆಫ್ ಔಟಾಗದೆ 7 (12 ಎ., 4X1)
ಇತರೆ: 6 (ಲೆಗ್ ಬೈ 3, ವೈಡ್ 3)
ವಿಕೆಟ್ ಪತನ: 1–7 (ವೃದ್ಧಿಮಾನ್ ಸಹಾ; 1.5), 2–12 (ಹಾರ್ದಿಕ್ ಪಾಂಡ್ಯ; 2.3), 3–26 (ಶುಭಮನ್ ಗಿಲ್; 3.5), 4–48 (ವಿಜಯ್ ಶಂಕರ್; 6.1), 5–55 (ಅಭಿನವ್ ಮನೋಹರ್; 7.1), 6–100 (ಡೇವಿಡ್ ಮಿಲ್ಲರ್; 11.6), 7–100 (ರಾಹುಲ್ ತೆವಾಟಿಯಾ; 12.1), 8–103 (ನೂರ್ ಅಹಮದ್; 13.2)
ಬೌಲಿಂಗ್: ಜೇಸನ್ ಬೆಹ್ರೆನ್‌ಡಾರ್ಫ್ 4–0–37–1, ಆಕಾಶ್ ಮಧ್ವಾಲ್ 4-0-31-3, ಕ್ರಿಸ್ ಜೋರ್ಡನ್ 4–0–34–0, ಪೀಯೂಷ್ ಚಾವ್ಲಾ 4–0–36–2, ಕುಮಾರ್ ಕಾರ್ತಿಕೇಯ 3–0–37–2, ಕ್ಯಾಮರಾನ್ ಗ್ರೀನ್ 1–0–13–0
ಫಲಿತಾಂಶ: ಮುಂಬೈ ಇಂಡಿಯನ್ಸ್ ತಂಡಕ್ಕೆ 27 ರನ್ ಗೆಲುವು

ಲಖನೌಗೆ ಹೈದರಾಬಾದ್ ಸವಾಲು

ಹೈದರಾಬಾದ್ (ಪಿಟಿಐ): ಪ್ಲೇ ಆಫ್ ಹಂತ ಪ್ರವೇಶಿಸಲು ಪ್ರಯತ್ನಿಸುತ್ತಿರುವ ಲಖನೌ ಸೂಪರ್ ಜೈಂಟ್ಸ್ ಶನಿವಾರ ಇಲ್ಲಿ ನಡೆಯಲಿರುವ ಪಂದ್ಯದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ಎದುರು ಕಣಕ್ಕಿಳಿಯಲಿದೆ.


ಕೃಣಾಲ್ ಪಾಂಡ್ಯ

ಅಂತಿಮ ನಾಲ್ಕರ ಘಟ್ಟ ಪ್ರವೇಶಿಸಲು ಲಖನೌ ತನ್ನ ಇನ್ನುಳಿದಿರುವ ಮೂರು ಪಂದ್ಯಗಳಲ್ಲಿ ಗೆಲುವು ಸಾಧಿಸುವುದು ಸುರಕ್ಷಿತ. ಪಾಯಿಂಟ್ ಪಟ್ಟಿಯಲ್ಲಿ ಐದನೇ ಸ್ಥಾನದಲ್ಲಿರುವ ಕೃಣಾಲ್ ಪಾಂಡ್ಯ ಬಳಗವು ಇದರಲ್ಲಿ ಒಂದು ಪಂದ್ಯ ಸೋತರೂ ಹಾದಿ ಕಠಿಣವಾಗಬಹುದು.

ಸನ್‌ರೈಸರ್ಸ್ ತಂಡ ಒಂಬತ್ತನೇ ಸ್ಥಾನದಲ್ಲಿದೆ. ಆದರೆ, ಪ್ಲೇ ಆಫ್ ಹಾದಿಯಿಂದ ಇನ್ನೂ ಸಂಪೂರ್ಣವಾಗಿ ಹೊರಬಿದ್ದಿಲ್ಲ. ಏಡನ್ ಮರ್ಕರಂ ಬಳಗಕ್ಕೆ ಬಾಕಿ ಉಳಿದಿರುವ ನಾಲ್ಕು ಪಂದ್ಯಗಳನ್ನೂ ಉತ್ತಮ ರನ್ ರೇಟ್‌ನೊಂದಿಗೆ ಗೆದ್ದರೆ ಕೊನೆಯ ಹಂತದ ಲೆಕ್ಕಾಚಾರದಲ್ಲಿ ಅವಕಾಶ ಸಿಗುವ ಸಾಧ್ಯತೆ ಇದೆ. ಆದರೆ ಈ ಹಾದಿ ಸುಲಭವಲ್ಲ.

ಅಂಕಿ ಸಂಖ್ಯೆ ಹಾಗೂ ಆಟಗಾರರ ಸಾಮರ್ಥ್ಯವನ್ನು ಹೋಲಿಕೆ ಮಾಡಿದರೆ ಸನ್‌ರೈಸರ್ಸ್‌ಗಿಂತ ಲಖನೌ ತಂಡವೇ ಬಲಿಷ್ಠವಾಗಿದೆ.

ಲಖನೌ ತಂಡವು ತನ್ನ ಕಳೆದ ಮೂರು ಪಂದ್ಯಗಳಲ್ಲಿ ಗೆಲುವಿನ ಮುಖ ನೋಡಿಲ್ಲ. ಅದರಲ್ಲಿ ಎರಡರಲ್ಲಿ ಸೋತಿದೆ. ಇನ್ನೊಂದು ಪಂದ್ಯ ಮಳೆಯಿಂದಾಗಿ ರದ್ದಾಗಿ ಒಂದು ಪಾಯಿಂಟ್ ದಕ್ಕಿತ್ತು

ಪಂದ್ಯ ಆರಂಭ: ಮಧ್ಯಾಹ್ನ 3.30ರಿಂದ
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ವಾಹಿನಿ, ಜಿಯೊ ಸಿನಿಮಾ ಆ್ಯಪ್

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಗುಜರಾತ್	12	8	4	0	16	0.761
ಚೆನ್ನೈ	12	7	4	1	15	0.493
ಮುಂಬೈ	12	7	5	0	14	-0.117
ರಾಜಸ್ಥಾನ	12	6	6	0	12	0.633
ಲಖನೌ	11	5	5	1	11	0.294
ಬೆಂಗಳೂರು	11	5	6	0	10	-0.345
ಕೋಲ್ಕತ್ತ	12	5	7	0	10	-0.357
ಪಂಜಾಬ್	11	5	6	0	10	-0.441
ಹೈದರಾಬಾದ್	10	4	6	0	8	-0.472
ಡೆಲ್ಲಿ	11	4	7	0	8	-0.605

ಶುಕ್ರವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

ಆರೆಂಜ್ ಕ್ಯಾಪ್ (ಹೆಚ್ಚು ರನ್)

ಆಟಗಾರ	ತಂಡ	ರನ್
ಡುಪ್ಲೆಸಿ	ಆರ್‌ಸಿಬಿ	576

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್)

ಆಟಗಾರ	ತಂಡ	ವಿಕೆಟ್
ರಶೀದ್	ಗುಜರಾತ್	23

ಡೆಲ್ಲಿ– ಪಂಜಾಬ್ ಸೆಣಸು ಇಂದು

ನವದೆಹಲಿ (ಪಿಟಿಐ): ಪಾಯಿಂಟ್ ಪಟ್ಟಿಯಲ್ಲಿ ಕೊನೆಯ ಸ್ಥಾನದಲ್ಲಿರುವ ಡೆಲ್ಲಿ ಕ್ಯಾಪಿಟಲ್ಸ್ ತಂಡ, ಐಪಿಎಲ್ ಟೂರ್ನಿಯ ಪಂದ್ಯದಲ್ಲಿ ಶನಿವಾರ ಪಂಜಾಬ್ ಕಿಂಗ್ಸ್ ತಂಡವನ್ನು ಎದುರಿಸಲಿದೆ.

11 ಪಂದ್ಯಗಳಿಂದ ಎಂಟು ಪಾಯಿಂಟ್ಸ್ ಹೊಂದಿರುವ ಡೆಲ್ಲಿ ತಂಡ 'ಪ್ಲೇ ಆಫ್' ರೇಸ್‌ನಿಂದ ಬಹುತೇಕ ಹೊರಬಿದ್ದಿದೆ. ಇನ್ನುಳಿದ ಮೂರು ಪಂದ್ಯಗಳನ್ನು ಗೆದ್ದರೆ 14 ಪಾಯಿಂಟ್ಸ್ ಆಗಲಿದೆ. ಇತರ ಪಂದ್ಯಗಳ ಫಲಿತಾಂಶವನ್ನು ಅವಲಂಬಿಸಿದರೂ, ಪ್ಲೇ ಆಫ್‌ನಲ್ಲಿ ಸ್ಥಾನ ಪಡೆಯುವುದು ಕಷ್ಟ. ಮತ್ತೊಂದೆಡೆ ಪಂಜಾಬ್ ತಂಡ ಕೂಡಾ ಲೀಗ್ ಹಂತದಲ್ಲೇ ಹೊರಬೀಳುವ ಅಪಾಯ ಎದುರಿಸುತ್ತಿದೆ. ಶಿಖರ್ ಧವನ್ ಬಳಗ 11 ಪಂದ್ಯಗಳಿಂದ 10 ಪಾಯಿಂಟ್ಸ್ ಹೊಂದಿದೆ. ಶನಿವಾರದ ಪಂದ್ಯ 'ಮಾಡು–ಮಾಡಿ' ಎನಿಸಿದ್ದು ಗೆಲ್ಲಲೇಬೇಕಾದ ಒತ್ತಡದಲ್ಲಿದೆ.

ಪಂದ್ಯ ಆರಂಭ: ರಾತ್ರಿ 7.30


ರವೀಂದ್ರ ರೇಷ್ಮೆ
ಹಿರಿಯ ಪತ್ರಕರ್ತ


ಅನಂತ ಚಿನಿವಾರ
ಹಿರಿಯ ಪತ್ರಕರ್ತ


ರವೀಂದ್ರ ಭಟ್
ಕಾರ್ಯನಿರ್ವಾಹಕ ಸಂಪಾದಕ, ಪ್ರಜಾವಾಣಿ


ಡಾ. ಸಮೀರ್ ಕಾಗಲ್ಕರ್
ಬಿಜೆಪಿ ಆರ್ಥಿಕ ಪ್ರಕೋಷ್ಠದ ರಾಜ್ಯ ಸಂಚಾಲಕ


ಭವ್ಯಾ ನರಸಿಂಹಮೂರ್ತಿ
ಕಾಂಗ್ರೆಸ್ ವಕ್ತಾರೆ


ಎಚ್.ಎನ್. ದೇವರಾಜ್
ಜೆಡಿಎಸ್ ವಕ್ತಾರ

ಬ್ರಿಜ್ ಭೂಷಣ್ ವಿರುದ್ಧ ಎಸ್‌ಐಟಿ ತನಿಖೆ

ನವದೆಹಲಿ (ಪಿಟಿಐ): ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಅಧ್ಯಕ್ಷ ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರು ಮಹಿಳಾ ಕುಸ್ತಿಪಟುಗಳಿಗೆ ಲೈಂಗಿಕ ಕಿರುಕುಳ ನೀಡಿರುವ ಆರೋಪ ಕುರಿತ ತನಿಖೆಗೆ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಿರುವುದಾಗಿ ದೆಹಲಿ ಪೊಲೀಸರು ವಿಶೇಷ ನ್ಯಾಯಾಲಯಕ್ಕೆ ಶುಕ್ರವಾರ ತಿಳಿಸಿದ್ದಾರೆ.


ಬ್ರಿಜ್ ಭೂಷಣ್

'ನಾವು ಪ್ರಕರಣದ ಗಂಭೀರತೆ ಪರಿಗಣಿಸಿ ಎಸ್‌ಐಟಿ ರಚಿಸಿದ್ದೇವೆ. ಪ್ರಕರಣದ ಬಗ್ಗೆ ಎಸ್‌ಐಟಿ ತನಿಖೆ ನಡೆಸಲಿದೆ' ಎಂದು ದೆಹಲಿ ಪೊಲೀಸರ ಪರವಾಗಿ ಪಬ್ಲಿಕ್ ಪ್ರಾಸಿಕ್ಯೂಟರ್ ಅತುಲ್ ಶ್ರೀವಾಸ್ತವ ಅವರು ನ್ಯಾಯಾಲಯಕ್ಕೆ ತಿಳಿಸಿದರು.

ಹೆಚ್ಚುವರಿ ಮುಖ್ಯ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ಹರ್ಜಿತ್ ಸಿಂಗ್ ಜಸ್ಪಾಲ್ ಅವರ ಮುಂದೆ, ಪ್ರಕರಣದ ವಸ್ತುಸ್ಥಿತಿ ವರದಿಯನ್ನು ಸಲ್ಲಿಸಲಾಯಿತು. ನ್ಯಾಯಾಧೀಶ ಜಸ್ಪಾಲ್ ಅವರು ತಮ್ಮ ಈ ಹಿಂದಿನ ಆದೇಶದಲ್ಲಿ ವಸ್ತುಸ್ಥಿತಿ ವರದಿ ಸಲ್ಲಿಸಲು ಪೊಲೀಸರಿಗೆ ನಿರ್ದೇಶನ ನೀಡಿದ್ದರು.

'ಪ್ರಕರಣದ ಸ್ವರೂಪ ಪರಿಗಣಿಸಿ, ಈ ವರದಿಯನ್ನು ಯಾರೊಂದಿಗೂ ಹಂಚಿಕೊಳ್ಳಬಾರದು' ಎಂದು ಅವರು ಮನವಿ ಮಾಡಿದರು. ಈ ವರದಿಯನ್ನು ಮುಚ್ಚಿದ ಲಕೋಟೆಯಲ್ಲಿ ದೆಹಲಿ ಪೊಲೀಸರು ಸಲ್ಲಿಸಿದರು.

ವರದಿ ಸಲ್ಲಿಕೆಯ ನಂತರ ನ್ಯಾಯಾಲಯವು ವಿಚಾರಣೆಯನ್ನು ಮೇ 27ಕ್ಕೆ ಮುಂದೂಡಿತು.

ಸಂತ್ರಸ್ತೆಯರ ಹೇಳಿಕೆ ನ್ಯಾಯಾಲಯದಲ್ಲಿ ದಾಖಲಿಸಬೇಕು ಮತ್ತು ನ್ಯಾಯಾಲಯದ ಮೇಲ್ವಿಚಾರಣೆಯಲ್ಲಿ ತನಿಖೆ ಆಗಬೇಕು ಎಂದು ಕುಸ್ತಿಪಟುಗಳು ಸಲ್ಲಿಸಿದ್ದ ಮನವಿಯ ಮೇರೆಗೆ ನ್ಯಾಯಾಧೀಶರು ದೆಹಲಿ ಪೊಲೀಸರಿಗೆ ವಸ್ತುಸ್ಥಿತಿ ವರದಿ ಸಲ್ಲಿಸುವಂತೆ ನೋಟಿಸ್ ನೀಡಿದ್ದರು.

ಹೇಳಿಕೆ ದಾಖಲಿಸಿದ ಪೊಲೀಸರು

ಮಹಿಳಾ ಕುಸ್ತಿಪಟುಗಳು ಮಾಡಿರುವ ಲೈಂಗಿಕ ಕಿರುಕುಳ ಆರೋಪಕ್ಕೆ ಸಂಬಂಧಿಸಿ ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರನ್ನು ದೆಹಲಿ ಪೊಲೀಸರು ಮತ್ತು ವಿಶೇಷ ತನಿಖಾ ತಂಡದ (ಎಸ್‌ಐಟಿ) ಅಧಿಕಾರಿಗಳು ಶುಕ್ರವಾರ ಸುಮಾರು ತಾಸು ವಿಚಾರಣೆಗೆ ಒಳಪಡಿಸಿದರು. ವಿಚಾರಣೆಯಲ್ಲಿ ಸಿಂಗ್ ನೀಡಿರುವ ಹೇಳಿಕೆಗಳನ್ನು ದೆಹಲಿ ಪೊಲೀಸರು ದಾಖಲಿಸಿಕೊಂಡಿದ್ದಾರೆ.

ಇದೇ ವೇಳೆ ಡಬ್ಲ್ಯುಎಫ್‌ಐ ಸಹಾಯಕ ಕಾರ್ಯದರ್ಶಿ ವಿನೋದ್ ತೋಮರ್ ಅವರ ಹೇಳಿಕೆಯನ್ನೂ ದೆಹಲಿ ಪೊಲೀಸರು ದಾಖಲಿಸಿಕೊಂಡರು. ವಿಚಾರಣೆಗೆ ಹಾಜರಾಗುವಂತೆ ಸಿಂಗ್ ಅವರಿಗೆ ನೋಟಿಸ್ ನೀಡಲಾಗಿತ್ತು. ವಿಚಾರಣೆಗೆ ಹಾಜರಾಗಿದ್ದ ಸಿಂಗ್ ಅವರನ್ನು ಮೂರು ತಾಸು ವಿಚಾರಣೆ ನಡೆಸಲಾಯಿತು. ವಿಶೇಷ ತನಿಖಾ ತಂಡ (ಎಸ್‌ಐಟಿ) ಕೂಡ ವಿಚಾರಣೆ ನಡೆಸಿತು. ಎರಡೂ ವಿಚಾರಣೆಗಳಲ್ಲಿ ಸಿಂಗ್ ಅವರು 'ಇದೊಂದು ಸುಳ್ಳು ಆರೋಪ' ಎಂದು ಹೇಳಿಕೆ ನೀಡಿದ್ದಾರೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

ತಮ್ಮ ಸಮರ್ಥನೆಗಳಿಗೆ ಪೂರಕ ದಾಖಲೆಗಳು ಅಥವಾ ಪುರಾವೆಗಳನ್ನು ಸಲ್ಲಿಸಲು ಸಿಂಗ್ ಅವರಿಗೆ ಸೂಚಿಸಲಾಗಿದೆ. ಸಿಂಗ್ ಜತೆಗೆ ಇನ್ನೂ 30 ಸಾಕ್ಷಿಗಳ ಹೇಳಿಕೆಗಳನ್ನು ದಾಖಲಿಸಿಕೊಳ್ಳಲಾಗಿದೆ. ಕುಸ್ತಿಪಟುಗಳ ಹೇಳಿಕೆಗಳನ್ನು ಮ್ಯಾಜಿಸ್ಟ್ರೇಟ್ ಮುಂದೆ ದಾಖಲಿಸಲಾಗುವುದು ಎಂದು ಅವರು ಹೇಳಿದರು.

ಸಕಾಲಕ್ಕೆ ಚಿಕಿತ್ಸೆ ಸಿಗದೆ ಸಾವು

ಪ್ರಜಾವಾಣಿ ವಾರ್ತೆ

ತುರುವೇಕೆರೆ (ತುಮಕೂರು): ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ವೈದ್ಯರಿಲ್ಲದೆ ಸಕಾಲಕ್ಕೆ ಚಿಕಿತ್ಸೆ ಸಿಗದೆ ಮಹಿಳೆಯೊಬ್ಬರು ಗುರುವಾರ ಮಧ್ಯರಾತ್ರಿ ಸಾವನ್ನಪ್ಪಿದ್ದಾರೆ.

ಪಟ್ಟಣದ ಅಗಸರ ಬೀದಿಯ ನಿರ್ಮಲ (40) ಎಂಬುವರಿಗೆ ಉಸಿರಾಟದ ತೊಂದರೆ ಕಾಣಿಸಿಕೊಂಡಿದ್ದು, ಗುರುವಾರ ರಾತ್ರಿ 11.45ರ ಸಮಯದಲ್ಲಿ ಚಿಕಿತ್ಸೆಗಾಗಿ ಆಸ್ಪತ್ರೆಗೆ ಕರೆ ತಂದಿದ್ದಾರೆ. ತಕ್ಷಣ ಚಿಕಿತ್ಸೆ ನೀಡುವಂತೆ ರೋಗಿಯ ಕಡೆಯವರು ಕೇಳಿಕೊಂಡಿದ್ದಾರೆ. ಅಲ್ಲಿ ಯಾರೊಬ್ಬರೂ ಸ್ಪಂದಿಸಿಲ್ಲ. ಚಿಕಿತ್ಸೆ ನೀಡಬೇಕಾದ ವೈದ್ಯರೂ ಇರಲಿಲ್ಲ.

ರಾತ್ರಿ ಪಾಳಿಯಲ್ಲಿ ಕರ್ತವ್ಯದಲ್ಲಿ ಇರಬೇಕಾಗಿದ್ದ ವೈದ್ಯ ಡಾ.ಮುರಳಿ ಆಸ್ಪತ್ರೆಯಲ್ಲಿ ಇರಲಿಲ್ಲ. ವೈದ್ಯರಿಗಾಗಿ ಹುಡುಕಾಟ ನಡೆಸಿದರೂ ಲಭ್ಯವಾಗಿಲ್ಲ. ಕೊನೆಗೆ ತರಬೇತಿ ವೈದ್ಯರೊಬ್ಬರು (ಹೌಸ್ ಸರ್ಜನ್) ಚಿಕಿತ್ಸೆ ನೀಡುವ ಪ್ರಯತ್ನ ನಡೆಸಿದ್ದರೂ ಅಷ್ಟರಲ್ಲಿ ರೋಗಿ ಮೃತಪಟ್ಟರು ಎಂದು ರೋಗಿಯ ಸಂಬಂಧಿಕರು ಆರೋಪಿಸಿದ್ದಾರೆ.

ತನಿಖೆಗೆ ಆದೇಶ: ಆಸ್ಪತ್ರೆಯಲ್ಲಿ ವೈದ್ಯರು ಇಲ್ಲದೆ, ಚಿಕಿತ್ಸೆ ಸಿಗದೆ ರೋಗಿ ಮೃತಪಟ್ಟಿರುವುದು ಗೊತ್ತಾಗಿದೆ. ಈ ಬಗ್ಗೆ ತನಿಖೆ ನಡೆಸಲು ಡಾ.ಪುರುಷೋತ್ತಮ್ ನೇತೃತ್ವದ ತಂಡ ರಚಿಸಲಾಗಿದೆ. ಐದು ದಿನಗಳಲ್ಲಿ ವರದಿ ನೀಡುವಂತೆ ಸೂಚಿಸಲಾಗಿದೆ. ತಕ್ಷಣ ವರದಿ ಸಲ್ಲಿಸುವಂತೆ ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿಗೂ ಸೂಚಿಸಲಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಡಿ. ಎನ್.ಮಂಜುನಾಥ್ 'ಪ್ರಜಾವಾಣಿ'ಗೆ ತಿಳಿಸಿದರು.

ಬಾರದ ಆಂಬುಲೆನ್ಸ್: ಗಾಯಾಳು ಸಾವು

ಹಾಸನ: ತಾಲ್ಲೂಕಿನ ಕಲ್ಕೆರೆ ಬಳಿ ಗುರುವಾರ ತಡರಾತ್ರಿ ನಡೆದ ಅಪಘಾತದಲ್ಲಿ ಗಾಯಗೊಂಡಿದ್ದ ಇಬ್ಬೀಡು ಗ್ರಾಮದ ಆನಂದ (30) ಅವರು, ಸಕಾಲಕ್ಕೆ ಆಂಬುಲೆನ್ಸ್ ಬರದೇ ಸ್ಥಳದಲ್ಲೇ ಮೃತಪಟ್ಟರು.

ಬೇಲೂರಿನಿಂದ ಹಾಸನದತ್ತ ಬೈಕ್‌ನಲ್ಲಿ ಬರುತ್ತಿದ್ದ ಅವರಿಗೆ ವಾಹನವೊಂದು ಡಿಕ್ಕಿ ಹೊಡೆದಿತ್ತು. ತೀವ್ರವಾಗಿ ಗಾಯಗೊಂಡು ಅವರು ರಸ್ತೆಗೆ ಬಿದ್ದ ಕೂಡಲೇ ಸ್ಥಳೀಯರು ಆಂಬುಲೆನ್ಸ್‌ಗೆ ಕರೆ ಮಾಡಿದ್ದರು. ವಾಹನ ಒಂದು ಗಂಟೆಯಾದರೂ ಬಾರದೆ ಅವರು ಅಲ್ಲಿಯೇ ಮೃತಪಟ್ಟರು.

'ಇದು ಅಮಾನವೀಯ ಘಟನೆ. ಆಂಬುಲೆನ್ಸ್ ನೆರವಿನಿಂದ ಗಾಯಾಳುವನ್ನು ಆಸ್ಪತ್ರೆಗೆ ಸಾಗಿಸಿದ್ದರೆ, ಚಿಕಿತ್ಸೆ ನೀಡಿ ಉಳಿಸಿಕೊಳ್ಳಬಹುದಿತ್ತು. ಆದರೆ ಆಂಬುಲೆನ್ಸ್ ಸಕಾಲಕ್ಕೆ ಬರಲಿಲ್ಲ' ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದರು.

'ಘಟನೆ ಕುರಿತು ತನಿಖೆ ನಡೆಸಲಾಗುತ್ತಿದೆ. ಕರೆ ಮಾಡಿದ ಸಮಯ, ಆಂಬುಲೆನ್ಸ್ ಸ್ಥಳಕ್ಕೆ ತೆರಳಿದ ಸಮಯ ಪರಿಶೀಲಿಸಲಾಗುತ್ತಿದೆ. ವಿಳಂಬವಾಗಿದ್ದರೆ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು' ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಶಿವಸ್ವಾಮಿ ಪ್ರತಿಕ್ರಿಯಿಸಿದರು.

ಪುರುಷರ ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಷಿಪ್: ಭಾರತದ ಶ್ರೇಷ್ಠ ಸಾಧನೆ

ದೀಪಕ್, ಹುಸಾಮುದ್ದೀನ್, ನಿಶಾಂತ್‌ಗೆ ಕಂಚು

ತಾಷ್ಕೆಂಟ್, ಉಜ್ಬೆಕಿಸ್ತಾನ (ಪಿಟಿಐ): ಭಾರತದ ಮೊಹಮ್ಮದ್ ಹುಸಾಮುದ್ದೀನ್, ನಿಶಾಂತ್ ದೇವ್ ಮತ್ತು ದೀಪಕ್ ಬೊರಿಯಾ ಅವರಿಗೆ ವಿಶ್ವ ಪುರುಷರ ಬಾಕ್ಸಿಂಗ್ ಚಾಂಪಿಯನ್‌ಷಿಪ್ ಫೈನಲ್ ಪ್ರವೇಶಿಸುವ ಕನಸು ಕೈಗೂಡಲಿಲ್ಲ.

ಆದರೆ ಮೂವರೂ ಕಂಚಿನ ಪದಕ ಜಯಿಸುವ ಮೂಲಕ ಇಲ್ಲಿ ನಡೆದ ಚಾಂಪಿಯನ್‌ಷಿಪ್‌ನಲ್ಲಿ ಭಾರತದ ಶ್ರೇಷ್ಠ ಸಾಧನೆ ದಾಖಲಾಯಿತು.

ಎರಡು ಪದಕ ಜಯಿಸಿದ್ದು ಭಾರತದ ಈ ಹಿಂದಿನ ಶ್ರೇಷ್ಠ ಸಾಧನೆಯಾಗಿತ್ತು. 2019ರ ಆವೃತ್ತಿಯಲ್ಲಿ ಅಮಿತ್ ಪಂಘಲ್ ಬೆಳ್ಳಿ ಮತ್ತು ಮನೀಷ್ ಕೌಶಿಕ್ ಕಂಚು ಜಯಿಸಿದ್ದರು. ಶುಕ್ರವಾರ ನಡೆದ ಸೆಮಿಫೈನಲ್ ಬೌಟ್‌ಗಳಲ್ಲಿ ದೀಪಕ್ ಹಾಗೂ ನಿಶಾಂತ್ ಅವರು ವೀರೋಚಿತ ಹೋರಾಟದಲ್ಲಿ ಸೋತರೆ, ಹುಸಾಮುದ್ದೀನ್ ಮೊಣಕಾಲು ನೋವಿನ ಕಾರಣ ಕಣಕ್ಕಿಳಿಯಯಲಿಲ್ಲ.

51 ಕೆಜಿ ವಿಭಾಗದ ನಾಲ್ಕರ ಘಟ್ಟದ ಬೌಟ್‌ನಲ್ಲಿ ದೀಪಕ್ 3–4ರಿಂದ ಎರಡು ಬಾರಿಯ ವಿಶ್ವ ಚಾಂಪಿಯನ್‌ಷಿಪ್ ಕಂಚಿನ ಪದಕ ವಿಜೇತ, ಫ್ರಾನ್ಸ್‌ನ ಬಿಲಾಲ್ ಬೆನ್ನಾಮಾ ಎದುರು ನಿರಾಸೆ ಅನುಭವಿಸಿದರು.


ದೀಪಕ್ ಬೊರಿಯಾ– ಟ್ವಿಟರ್ ಚಿತ್ರ

ಮೊದಲ ಸುತ್ತಿನಿಂದಲೇ ಬೆನ್ನಾಮಾ ಆಕ್ರಮಣಕಾರಿಯಾಗಿ ಕಂಡುಬಂದರು. ನೇರ ಪಂಚ್‌ಗಳ ಮೂಲಕ ದೀಪಕ್ ಅವರನ್ನು ಕಾಡಿದರು. ಭಾರತದ ಬಾಕ್ಸರ್‌ಗೆ ಹೆಚ್ಚು ಅವಕಾಶಗಳನ್ನು ನೀಡದೆ ಮೇಲುಗೈ ಸಾಧಿಸಿದರು.


ಎರಡನೇ ಸುತ್ತುನಲ್ಲಿ ದೀಪಕ್ ಅವರು ರಕ್ಷಣಾತ್ಮಕ ತಂತ್ರಗಳಿಗೆ ಮೊರೆ ಹೋದರೂ ಬೆನ್ನಾಮಾ ಸತತವಾಗಿ ದವಡೆಯ ಬಳಿ ಹೊಡೆತಗಳನ್ನು ಪ್ರಯೋಗಿಸಿದರು. ದೀಪಕ್ ಕೂಡ ಅಲ್ಪ ಪ್ರತಿದಾಳಿ ನಡೆಸಿದರು. ಈ ಸುತ್ತಿನಲ್ಲಿ ಉಭಯ ಬಾಕ್ಸರ್‌ಗಳು ಹೆಚ್ಚು ದಣಿದರು.


ಮೊಹಮ್ಮದ್ ಹುಸಾಮುದ್ದೀನ್

ಮೂರನೇ ಸುತ್ತಿನಲ್ಲಿ ಬೆನ್ನಾಮಾ ಮತ್ತಷ್ಟು ಆಕ್ರಮಣಕಾರಿಯಾದರು. ಬಲಿಷ್ಠ ಪಂಚ್‌ಗಳ ಮೂಲಕ ದೀಪಕ್ ಅವರನ್ನು ಕಂಗೆಡಿಸಿದರು.ಅಂತಿಮವಾಗಿ ರೆಫರಿಗಳು ಬೌಟ್ ಮರುಪರಿಶೀಲನೆಯ ಬಳಿಕ ಬೆನ್ನಾಮಾ ಅವರನ್ನು ವಿಜೇತರೆಂದು ಘೋಷಿಸಿದರು.

ದೀಪಕ್ ಅವರು 2019ರ ಆವೃತ್ತಿಯ ಬೆಳ್ಳಿ ವಿಜೇತ ಅಮಿತ್ ಪಂಘಲ್ ಬದಲಿಗೆ ಸ್ಥಾನ ಪಡೆದಿದ್ದರು.

57 ಕೆಜಿ ವಿಭಾಗದ ನಾಲ್ಕರ ಘಟ್ಟದ ಬೌಟ್‌ನಲ್ಲಿ, 29 ವರ್ಷದ ಹುಸಾಮುದ್ದೀನ್ ಅವರು ಕ್ಯೂಬಾದ ಸೈಡೆಲ್ ಹೊರ್ಟಾ ಎದುರು ಶುಕ್ರವಾರ ಕಣಕ್ಕಿಳಿಯಬೇಕಿತ್ತು.


ನಿಶಾಂತ್ ದೇವ್

‘ಹುಸಾಮುದ್ದೀನ್ ಅವರು ಗಾಯದ ಹಿನ್ನೆಲೆಯಲ್ಲಿ ವಾಕ್‌ಓವರ್ ನೀಡಿದ್ದು, ಕಂಚಿನ ಪದಕ ಪಡೆದಿದ್ದಾರೆ. ಕ್ವಾರ್ಟರ್‌ಫೈನಲ್ ಬೌಟ್‌ನಲ್ಲಿ ಗಾಯಗೊಂಡಿದ್ದ ಅವರಿಗೆ ಮುಂದಿನ ಬೌಟ್‌ನಲ್ಲಿ ಸ್ಪರ್ಧಿಸದಂತೆ ಸೂಚಿಸಲಾಗಿತ್ತು‘ ಎಂದು ಭಾರತ ಬಾಕ್ಸಿಂಗ್ ಫೆಡರೇಷನ್ (ಬಿಎಫ್‌ಐ) ಪ್ರಕಟಣೆಯಲ್ಲಿ ತಿಳಿಸಲಾಗಿದೆ.


ವಿಶ್ವ ಪುರುಷರ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಪದಕ ಜಯಿಸಿದ ಭಾರತೀಯರು

ಬಾಕ್ಸರ್	ಪದಕ	ವರ್ಷ
ವಿಜೇಂದರ್ ಸಿಂಗ್	ಕಂಚು	2009
ವಿಕಾಸ್ ಕೃಷ್ಣ	ಕಂಚು	2011
ಶಿವ ಥಾಪಾ	ಕಂಚು	2015
ಗೌರವ್ ಬಿಧುರಿ	ಕಂಚು	2017
ಅಮಿತ್ ಪಂಘಲ್	ಬೆಳ್ಳಿ	2019
ಮನೀಷ್ ಕೌಶಿಕ್	ಕಂಚು	2019
ಆಕಾಶ್ ಕುಮಾರ್	ಕಂಚು	2021
ಹುಸಾಮುದ್ದೀನ್	ಕಂಚು	2023
ದೀಪಕ್ ಬೊರಿಯಾ	ಕಂಚು	2023
ನಿಶಾಂತ್ ದೇವ್	ಕಂಚು	2023

71 ಕೆಜಿ ವಿಭಾಗದ ಸೆಮಿಫೈನಲ್‌ನಲ್ಲಿ ನಿಶಾಂತ್ ಅವರು ಕಜಕಸ್ತಾನದ ಅಸ್ಲಂಬೆಕ್ ಸಿಂಬರ್ಜನೆವ್ ಎದುರು ನಿರಾಸೆ ಅನುಭವಿಸಿದರು. ಇಬ್ಬರೂ ಬಾಕ್ಸರ್‌ಗಳು ಜಿದ್ದಾಜಿದ್ದಿನ ಪೈಪೋಟಿ ನಡೆಸಿದರು. ಆದರೆ ಅಂತಿಮವಾಗಿ ಪಾಯಿಂಟ್ಸ್ ಆಧಾರದಲ್ಲಿ ರೆಫರಿಗಳು ಅಸ್ಲಂಬೆಕ್ ಅವರನ್ನು ವಿಜೇತರೆಂದು ಪ್ರಕಟಿಸಿದರು.

ಬ್ಯಾಡ್ಮಿಂಟನ್: ‘ಸ್ಪಿನ್ ಸರ್ವ್’ಗೆ ಬಿಡಬ್ಲ್ಯುಎಫ್ ತಾತ್ಕಾಲಿಕ ನಿಷೇಧ

ನವದೆಹಲಿ (ಪಿಟಿಐ): ಬ್ಯಾಡ್ಮಿಂಟನ್‌ನಲ್ಲಿ ಸದ್ದು ಮಾಡುತ್ತಿರುವ ‘ಸ್ಪಿನ್ ಸರ್ವ್’ಗೆ ವಿಶ್ವ ಬ್ಯಾಡ್ಮಿಂಟನ್ ಫೆಡರೇಷನ್ (ಬಿಡಬ್ಲ್ಯುಎಫ್) ತಾತ್ಕಾಲಿಕ ನಿಷೇಧ ಹೇರಿದೆ. ಮೇ 29ರ ವರೆಗೆ ಯಾರೂ ‘ಸ್ಪಿನ್ ಸರ್ವ್’ ಮಾಡುವಂತಿಲ್ಲ ಎಂದಿದೆ.



ಭಾನುವಾರ ಆರಂಭವಾಗಲಿರುವ ಸುದಿರ್‌ಮನ್ ಕಪ್ ಫೈನಲ್ಸ್ ಮತ್ತು ಬಳಿಕದ ವಾರ ನಡೆಯಲಿರುವ ಮಲೇಷ್ಯಾ ಮಾಸ್ಟರ್ಸ್ ಟೂರ್ನಿಗೆ ಈ ನಿಷೇಧ ಅನ್ವಯವಾಗಲಿದೆ.

‘ಸ್ಪಿನ್ ಸರ್ವ್’ಗೆ ಶಾಶ್ವತ ನಿಷೇಧ ಹೇರಬೇಕೇ ಅಥವಾ ಮುಂದಿನ ದಿನಗಳಲ್ಲಿ ಇದನ್ನು ಪ್ರಯೋಗಿಸಲು ಅವಕಾಶ ನೀಡಬೇಕೇ ಎಂಬುದನ್ನು ಮೇ 27 ರಂದು ನಡೆಯಲಿರುವ ಬಿಡಬ್ಲ್ಯುಎಫ್ ಎಜಿಎಂನಲ್ಲಿ ನಿರ್ಧರಿಸಲಾಗುವುದು ಎಂದು ಫೆಡರೇಷನ್ ತಿಳಿಸಿದೆ.

ಡೆನ್ಮಾರ್ಕ್ ಆಟಗಾರ ಮಾರ್ಕಸ್ ರಿಂಡ್‌ಶೂಜ್ ಅವರು ಕಳೆದ ತಿಂಗಳು ನಡೆದಿದ್ದ ಪೋಲೆಂಡ್ ಓಪನ್ ಟೂರ್ನಿಯಲ್ಲಿ ‘ಸ್ಪಿನ್ ಸರ್ವ್’ ಪರಿಚಯಿಸಿದ್ದರು. ಬಳಿಕ ಇತರ ಕೆಲವು ಆಟಗಾರರೂ ಅದನ್ನು ಕರಗತಮಾಡಿಕೊಂಡಿದ್ದರು.

ಏನಿದು ಸ್ಪಿನ್ ಸರ್ವ್?: ಆಟಗಾರ ತನ್ನ ಹೆಬ್ಬೆರಳು ಮತ್ತು ಮಧ್ಯದ ಬೆರಳಿನ ನಡುವೆ ಶಟಲ್ ಕಾಕ್‌ನ ಕಾರ್ಕ್‌ಅನ್ನು ಹಿಡಿದಿಟ್ಟುಕೊಳ್ಳುವನು. ಆ ಬಳಿಕ ಷಟಲ್‌ಅನ್ನು ಗಿರಗಿರನೆ ತಿರುಗಿಸಿ ರ‍್ಯಾಕೆಟ್ ಮೂಲಕ ಎದುರಾಳಿಯತ್ತ ಹೊಡೆಯುವನು. ಷಟಲ್ ತಿರುಗುತ್ತಾ, ಅತ್ತಿತ್ತ ಓಲಾಡುತ್ತಾ ಎದುರಾಳಿಯತ್ತ ಹೋಗುವುದರಿಂದ ಅದನ್ನು ರಿಟರ್ನ್ ಮಾಡುವುದು ಕಷ್ಟ. ರಿಟರ್ನ್‌ಗೆ ಪ್ರಯತ್ನಿಸಿದರೂ ನೆಟ್‌ಗೆ ಬಡಿಯುತ್ತದೆ.

ಕ್ರಿಕೆಟ್: ಡಿಪಿಎಸ್ ತಂಡಗಳಿಗೆ ಜಯ

ಬೆಂಗಳೂರು: ಡಿಪಿಎಸ್ ಈಸ್ಟ್ ತಂಡವು ಟೈಗರ್ ಕಪ್ ಕ್ರಿಕೆಟ್ 14 ವರ್ಷದೊಳಗಿನವರ ಟೂರ್ನಿಯ ಪಂದ್ಯದಲ್ಲಿ ಜಯ ಗಳಿಸಿತು.

ಅಲ್ಟಾಯರ್ ಸ್ಪೋರ್ಟ್ಸ್ ಗ್ರೀನ್ ಪಾರ್ಕ್ ಅಂಗಣದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಡಿಪಿಎಸ್ ಈಸ್ಟ್ 9 ವಿಕೆಟ್‌ಗಳಿಂದ ಇಐಎಸ್‌ಬಿ ವಿರುದ್ಧ ಗೆದ್ದಿತು. ಮತ್ತೊಂದು ಪಂದ್ಯದಲ್ಲಿ ಡಿಪಿಎಸ್ ಸೌತ್ 3 ವಿಕೆಟ್‌ಗಳಿಂದ ಪಿಐಎಸ್‌ಸಿಎ ಸಿಬಿಟಿ ವಿರುದ್ಧ ಗೆದ್ದಿತು.

ಸಂಕ್ಷಿಪ್ತ ಸ್ಕೋರುಗಳು: ಇಐ ಎಸ್‌ಬಿ: 26 ಓವರ್‌ಗಳಲ್ಲಿ 4 ವಿಕೆಟ್‌ಗೆ 97 (ಋತ್ವಿಕ್ ಕುಲಶೇಖರ 35, ಬ್ರಯನ್ ಥಾಮಸ್ 30). ಡಿಪಿಎಸ್ ಈಸ್ಟ್: 15.5 ಓವರ್‌ಗಳಲ್ಲಿ 1 ವಿಕೆಟ್‌ಗೆ 98 (ಅಭಿನವ್ ಕುಲಕರ್ಣಿ 46, ಶಹಾನ್ ಶಾದಾಬ್ 46). ಫಲಿತಾಂಶ: ಡಿಪಿಎಸ್ ಈಸ್ಟ್‌ಗೆ 9 ವಿಕೆಟ್‌ಗಳ ಜಯ

ಪಿಐಎಸ್‌ಸಿಎ ಸಿಬಿಟಿ: 27.2 ಓವರ್‌ಗಳಲ್ಲಿ 104 (ಕೃಷ್ಣ ಕುಮಾರ್ 33; ಕಿಶನ್ ಜೆ. 7ಕ್ಕೆ 5). ಡಿಪಿಎಸ್ ಸೌತ್: 27.2 ಓವರ್‌ಗಳಲ್ಲಿ 7 ವಿಕೆಟ್‌ಗೆ 105 (ಹನ್ನಾನ್ ಅಹಮದ್ 31, ರ‍್ಯಾನ್ ತೋಮರ್ 22; ಕೃಷ್ಣಕುಮಾರ್ 9ಕ್ಕೆ 3, ನಳಿನ್ ಗೋಯಲ್ 17ಕ್ಕೆ 2). ಫಲಿತಾಂಶ: ಡಿಪಿಎಸ್ ಸೌತ್‌ಗೆ ಮೂರು ವಿಕೆಟ್‌ಗಳ ಗೆಲುವು.

ರಾಜ್ಯ ಚೆಸ್: ಅಭಿನವ್, ಲಿಯಾಗೆ ಗೆಲುವು

ಬೆಂಗಳೂರು: ಅಭಿನವ್ ಆನಂದ್ ಮತ್ತು ಲಿಯಾ ಆರ್. ಜೋಸೆಫ್, ಇಲ್ಲಿ ನಡೆಯುತ್ತಿರುವ 9 ವರ್ಷದೊಳಗಿನವರ ರಾಜ್ಯ ಚೆಸ್ ಟೂರ್ನಿಯಲ್ಲಿ ಕ್ರಮವಾಗಿ ಬಾಲಕರ ಮತ್ತು ಬಾಲಕಿಯರ ವಿಭಾಗಗಳಲ್ಲಿ ಮೊದಲ ಎರಡೂ ಪಂದ್ಯಗಳಲ್ಲಿ ಗೆದ್ದರು.

ಬೆಂಗಳೂರು ಗ್ರಾಮಾಂತರ ಜಿಲ್ಲೆ ಚೆಸ್ ಸಂಸ್ಥೆ ಮತ್ತು ಕರ್ನಾಟಕ ರಾಜ್ಯ ಚೆಸ್ ಸಂಸ್ಥೆಯ ಆಶ್ರಯದಲ್ಲಿ ಹೊಸಕೋಟೆ ತಾಲ್ಲೂಕಿನ ದುನ್ನಸಂದ್ರದ ಶೃಂಗ ಇಂಟರ್‌ನ್ಯಾಷನಲ್ ಸ್ಕೂಲ್‌ನಲ್ಲಿ ನಡೆಯುತ್ತಿರುವ ಟೂರ್ನಿಯ ಎರಡನೇ ಪಂದ್ಯದಲ್ಲಿ ಅಭಿನವ್ ಅವರು ಎಂ.ದೇವಾಂಶ್ ವಿರುದ್ಧ ಜಯಿಸಿದರು.

ಬಾಲಕರ ವಿಭಾಗದಲ್ಲಿ ಸಮಕ್ಷ್ ಅಶೋಕ್, ವೆಂಕಟ ನಾಗ, ಇಶಾನ್ ಖೇರ್, ನಿಶ್ಚಿತ್ ಗುರುಕರ್, ಇಶಾನ್ ಬನ್ಸಾಲಿ, ವಿದಿತ್, ವಿಯಾನ್ ಬನ್ಸೋರ್ ಮತ್ತು ಹರ್ಷಿತ್ ರಾಮ್ ಅವರು ತಮ್ಮ ಎರಡೂ ಪಂದ್ಯಗಳನ್ನು ಗೆದ್ದುಕೊಂಡರು.

ಬಾಲಕಿಯರ ವಿಭಾಗದ ಎರಡನೇ ಪಂದ್ಯದಲ್ಲಿ ಲಿಯಾ ಅವರು ನಿಯೊಲಾ ಪಿಂಟೊ ಅವರನ್ನು ಮಣಿಸಿದರು. ಬಿ.ಎ-.ಆಕಾಂಕ್ಷಾ, ರಾಜೇಶ್ವರಿ ಅಯ್ಯಪ್ಪನ್, ರಿಶ್ವಿತಾ ಮಹಾಜನ್ ಅವರು ಮೊದಲ ಎರಡೂ ಪಂದ್ಯಗಳನ್ನು ಗೆದ್ದುಕೊಂಡರು.


ನ್ಯಾನ್ಸಿ


ಹೃದಯ್ ಹಜಾರಿಕಾ

ವಿಶ್ವಕಪ್ ಶೂಟಿಂಗ್ ಟೂರ್ನಿ: ಹಜಾರಿಕಾ, ನ್ಯಾನ್ಸಿಗೆ ಬೆಳ್ಳಿ ಪದಕ

ಬಾಕು, ಅಜರ್‌ಬೈಜಾನ್ (ಪಿಟಿಐ): ಭಾರತದ ಹೃದಯ್ ಹಜಾರಿಕಾ ಮತ್ತು ನ್ಯಾನ್ಸಿ ಅವರು ಇಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ವಿಶ್ವಕಪ್ ಶೂಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಪುರುಷರ ಹಾಗೂ ಮಹಿಳೆಯರ 10 ಮೀ. ಏರ್ ರೈಫಲ್ ಸ್ಪರ್ಧೆಯಲ್ಲಿ ಬೆಳ್ಳಿ ಪದಕ ಗೆದ್ದುಕೊಂಡರು.

ಇಬ್ಬರಿಗೂ ಸೀನಿಯರ್ ವಿಭಾಗದಲ್ಲಿ ಲಭಿಸಿದ ಮೊದಲ ಪದಕ ಇದು. ಜೂನಿಯರ್ ವಿಭಾಗದಲ್ಲಿ ವಿಶ್ವ ಚಾಂಪಿಯನ್ ಆಗಿರುವ ಅಸ್ಸಾಂನ ಹೃದಯ್, ಪುರುಷರ ವಿಭಾಗದಲ್ಲಿ ಶುಕ್ರವಾರ ಚಿನ್ನದ ಪದಕಕ್ಕಾಗಿ ನಡೆದ ಪೈಪೋಟಿಯಲ್ಲಿ ಹಂಗರಿಯ ಝುಲಾನ್ ಪೆಕ್ಲರ್ ಎದುರು ಮಣಿದರು. ಝುಲಾನ್ ಅವರು 252.4 ಪಾಯಿಂಟ್ಸ್ ಕಲೆಹಾಕಿದರೆ, ಭಾರತದ ಶೂಟರ್ 251.9 ಪಾಯಿಂಟ್ಸ್ ಗಳಿಸಿದರು.

ಮಹಿಳೆಯರ ವಿಭಾಗದಲ್ಲಿ ಹರಿಯಾಣದ ನ್ಯಾನ್ಸಿ ಅವರು ಚೀನಾದ ಹಾನ್ ಜಿಯಾವು ಎದುರು ಅಲ್ಪ ಅಂತರದಲ್ಲಿ ಪರಾಭವಗೊಂಡರು. ಹಾನ್ 254.0 ಪಾಯಿಂಟ್ಸ್‌ಗಳೊಂದಿಗೆ ಚಿನ್ನ ಗೆದ್ದರೆ, ನ್ಯಾನ್ಸಿ 253.3 ಪಾಯಿಂಟ್ಸ್ ಕಲೆಹಾಕಿದರು. ಕೊನೆಯ ಎರಡು ಅವಕಾಶಗಳು ಬಾಕಿಯಿದ್ದಾಗ ನ್ಯಾನ್ಸಿ 0.1 ಪಾಯಿಂಟ್ಸ್‌ಗಳಿಂದ ಮುಂದಿದ್ದರು. ಆದರೆ ನಿರ್ಣಾಯಕ ಹಂತದಲ್ಲಿ ನಿಖರ ಗುರಿ ಹಿಡಿಯಲು ಸಾಧ್ಯವಾಗಲಿಲ್ಲ.

ನ್ಯಾನ್ಸಿ ಅವರು ಅರ್ಹತಾ ಸುತ್ತಿನಲ್ಲಿ 631.6 ಪಾಯಿಂಟ್ಸ್‌ಗಳನ್ನು ಪಡೆದು ಏಳನೆಯವರಾಗಿ ಅಂತಿಮ ಸುತ್ತಿಗೆ ಅರ್ಹತೆ ಪಡೆದುಕೊಂಡಿದ್ದರು. ಕಣದಲ್ಲಿದ್ದ ಭಾರತದ ಇತರ ಶೂಟರ್‌ಗಳಾದ ರಮಿತಾ (631.4) ಮತ್ತು ತಿಲೋತ್ತಮ ಸೇನ್ (629.7) ಅವರು ಕ್ರಮವಾಗಿ ಒಂಬತ್ತು ಮತ್ತು 15ನೇ ಸ್ಥಾನ ಪಡೆದರು.

ಪುರುಷರ ವಿಭಾಗದಲ್ಲಿ ಕಂಚಿನ ಪದಕ ಪಡೆದ ಚೀನಾದ ಶೆಂಗ್ ಲಿಹಾವೊ ಅವರು 637.9 ಪಾಯಿಂಟ್ಸ್‌ಗಳೊಂದಿಗೆ ಅರ್ಹತಾ ಸುತ್ತಿನಲ್ಲಿ ಅಗ್ರಸ್ಥಾನ ಪಡೆದರಲ್ಲದೆ, ತಮ್ಮದೇ ಹೆಸರಿನಲ್ಲಿದ್ದ ವಿಶ್ವದಾಖಲೆ ಉತ್ತಮಪಡಿಸಿಕೊಂಡರು. ಹೃದಯ್ (630.3) ಅವರು ಏಳನೆಯವರಾಗಿ ಅಂತಿಮ ಸುತ್ತು ಪ್ರವೇಶಿಸಿದ್ದರು.

ಇನ್ನೂ ಎರಡು ದಿನಗಳ ಸ್ಪರ್ಧೆಗಳು ಬಾಕಿಯಿದ್ದು 2 ಚಿನ್ನ, 1 ಬೆಳ್ಳಿ ಮತ್ತು 2 ಕಂಚಿನ ಪದಕಗಳೊಂದಿಗೆ ಚೀನಾ ಅಗ್ರಸ್ಥಾನದಲ್ಲಿದೆ. 1 ಚಿನ್ನ, 2 ಬೆಳ್ಳಿ ಹಾಗೂ 1 ಕಂಚು ಜಯಿಸಿರುವ ಭಾರತ ತಂಡ ಪದಕ ಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿದೆ.

ಸಂಕ್ಷಿಪ್ತ ಸುದ್ದಿ

ಫ್ರೆಂಚ್ ಓಪನ್ ವಿಜೇತರಿಗೆ ₹ 20.60 ಕೋಟಿ

ಪ್ಯಾರಿಸ್ (ರಾಯಿಟರ್ಸ್): ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯ ಬಹುಮಾನ ಮೊತ್ತವನ್ನು ಸಂಘಟಕರು ಹೆಚ್ಚಿಸಿದ್ದು, ಈ ಬಾರಿ ಪುರುಷರ ಮತ್ತು ಮಹಿಳೆಯರ ಸಿಂಗಲ್ಸ್ ವಿಭಾಗದ ಚಾಂಪಿಯನ್ನರು ತಲಾ ₹ 20.60 ಕೋಟಿ ಪಡೆಯಲಿದ್ದಾರೆ.

‘ಈ ಬಾರಿಯ ಟೂರ್ನಿಯು ಒಟ್ಟು ₹ 444 ಕೋಟಿ ಬಹುಮಾನ ಮೊತ್ತ ಒಳಗೊಂಡಿರಲಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ, ಬಹುಮಾನ ಮೊತ್ತವನ್ನು ಶೇ 12.3 ಹೆಚ್ಚಿಸಲಾಗಿದೆ’ ಎಂದು ಸಂಘಟಕರು ಶುಕ್ರವಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

2022ರ ಟೂರ್ನಿಯ ಸಿಂಗಲ್ಸ್ ವಿಭಾಗದ ಚಾಂಪಿಯನ್ನರು ₹ 19.69 ಕೋಟಿ ನಗದು ಬಹುಮಾನ ಪಡೆದುಕೊಂಡಿದ್ದರು.

‘ಸಿಂಗಲ್ಸ್ ವಿಭಾಗದ ಒಟ್ಟು ಬಹುಮಾನ ಮೊತ್ತವನ್ನು ಕಳೆದ ಬಾರಿಗಿಂತ ಶೇ 9.1 ಹೆಚ್ಚಿಸಲಾಗಿದೆ. ಮೊದಲ ಮೂರು ಸುತ್ತುಗಳಲ್ಲಿ ಸೋಲು ಅನುಭವಿಸುವ ಆಟಗಾರರು ಪಡೆಯುವ ಮೊತ್ತ ಈ ವರ್ಷ ಶೇ 11 ರಿಂದ 13 ಏರಿಕೆಯಾಗಿದೆ’ ಎಂದಿದ್ದಾರೆ.

ಕಳೆದ ವರ್ಷದ ಟೂರ್ನಿಯಲ್ಲಿ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನಲ್ಲಿ ಸೋತಿದ್ದ ಆಟಗಾರರು ₹ 55 ಲಕ್ಷ ನಗದು ಬಹುಮಾನ ಗಳಿಸಿದ್ದರು.

ಫ್ರೆಂಚ್ ಓಪನ್ ಟೂರ್ನಿ ಮೇ 28 ರಿಂದ ಜೂನ್ 11ರ ವರೆಗೆ ನಡೆಯಲಿದೆ.

ಗಾಲ್ಫ್: ಜಂಟಿ 12ನೇ ಸ್ಥಾನದಲ್ಲಿ ಅದಿತಿ

ಕ್ಲಿಫ್ಟನ್, ನ್ಯೂಜೆರ್ಸಿ (ಪಿಟಿಐ): ಬೆಂಗಳೂರಿನ ಅದಿತಿ ಅಶೋಕ್ ಅವರು ಎಲ್‌ಪಿಜಿಎ ಟೂರ್ ಫೌಂಡರ್ಸ್ ಕಪ್ ಗಾಲ್ಫ್ ಟೂರ್ನಿಯ ಮೊದಲ ಸುತ್ತಿನ ಬಳಿಕ ಜಂಟಿ 12ನೇ ಸ್ಥಾನದಲ್ಲಿದ್ದಾರೆ.


ಅದಿತಿ ಅಶೋಕ್

ಇಲ್ಲಿನ ಅಪ್ಪರ್ ಮಾಂಟ್‌ಕ್ಲೇರ್ ಕಂಟ್ರಿ ಕ್ಲಬ್ ಕೋರ್ಸ್‌ನಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಗುರುವಾರ ಮೊದಲ ಸುತ್ತಿನ ಸ್ಪರ್ಧೆ ಕೊನೆಗೊಳಿಸಲು ಅವರು 69 ಸ್ಟ್ರೋಕ್‌ಗಳನ್ನು ತೆಗೆದುಕೊಂಡರು. ಇತರ 12 ಸ್ಪರ್ಧಿಗಳೊಂದಿಗೆ ಅದಿತಿ, 12ನೇ ಸ್ಥಾನ ಹಂಚಿಕೊಂಡಿದ್ದಾರೆ.

ಕೊರಿಯಾದ ಸಿ ಯಾಂಗ್ ಕಿಮ್ (66) ಮತ್ತು ಹಾಯೆ ರಾನ್ ರಿಯು (67) ಅವರು ಕ್ರಮವಾಗಿ ಮೊದಲ ಎರಡು ಸ್ಥಾನಗಳಲ್ಲಿದ್ದಾರೆ.

‘ಭಾರತವು ಪಾಕ್‌ನಲ್ಲಿ ಆಡಿದರೆ, ವಿಶ್ವಕಪ್‌ನಲ್ಲಿ ಪಾಲ್ಗೊಳ್ಳುತ್ತೇವೆ’

ನವದೆಹಲಿ (ಪಿಟಿಐ): ಪಾಕಿಸ್ತಾನದ ಆತಿಥ್ಯದಲ್ಲಿ ನಡೆಯಲಿರುವ ಮುಂಬರುವ ಏಷ್ಯಾಕಪ್ ಮತ್ತು 2025ರ ಚಾಂಪಿಯನ್ಸ್ ಟ್ರೋಫಿ ಟೂರ್ನಿಯಲ್ಲಿ ಭಾರತ ತಂಡ ಪಾಲ್ಗೊಂಡರೆ ಮಾತ್ರ, ಪಾಕ್ ತಂಡವು ಭಾರತದಲ್ಲಿ ನಡೆಯುವ ಐಸಿಸಿ ಏಕದಿನ ವಿಶ್ವಕಪ್ ಟೂರ್ನಿಯಲ್ಲಿ ಭಾಗವಹಿಸಲಿದೆ ಎಂದು ಪಿಸಿಬಿ ಮುಖ್ಯಸ್ಥ ನಜಮ್ ಸೇಥಿ ಸ್ಪಷ್ಟಪಡಿಸಿದ್ದಾರೆ.

‘ಭಾರತ ತಂಡವು ಪಾಕ್‌ನಲ್ಲಿ ಆಡಿದರೆ, ಪಾಕ್ ತಂಡವು ಮುಂಬರುವ ಐಸಿಸಿ ವಿಶ್ವಕಪ್ ವೇಳೆ ಅಹಮದಾಬಾದ್ ಒಳಗೊಂಡಂತೆ ಭಾರತದ ಯಾವುದೇ ತಾಣದಲ್ಲಿ ಆಡಲು ಸಿದ್ಧವಿದೆ’ ಎಂದು ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ತಿಳಿಸಿದ್ದಾರೆ.

ಪಾಕಿಸ್ತಾನದಲ್ಲಿ ನಡೆಯಲಿರುವ ಏಷ್ಯಾಕಪ್ ಟೂರ್ನಿಗೆ ಭಾರತ ತಂಡವನ್ನು ಕಳುಹಿಸುವುದಿಲ್ಲ ಎಂದು ಬಿಸಿಸಿಐ ಹೇಳಿದೆ. ಇದಕ್ಕೆ ಪಾಕಿಸ್ತಾನವು ‘ಹೈಬ್ರಿಡ್ ಮಾದರಿ’ಯನ್ನು ಏಷ್ಯನ್ ಕ್ರಿಕೆಟ್ ಕೌನ್ಸಿಲ್‌ನ (ಎಸಿಸಿ) ಮುಂದಿಟ್ಟಿತ್ತು. ಆದರೆ ಎಸಿಸಿ ಸದಸ್ಯ ರಾಷ್ಟ್ರಗಳು ಅದನ್ನು ತಿರಸ್ಕರಿಸಿದ್ದವು.

ಶನಿವಾರ, 13 ಮೇ 2023
ಪ್ರಜಾವಾಣಿ
ಪ್ರಜಾ ಪ್ಲಸ್
ಮನರಂಜನೆ | ಜಾಹೀರಾತು ಪ್ರೋತ್ಸಾಹ | ಉದ್ಯಮ ಅಭಿವೃದ್ಧಿ



ಶುದ್ಧವಾಗಿರಲಿ ಮನೆಯೊಳಗಿನ ಗಾಳಿ

ಬೇಸಿಗೆಯ ಪಾನೀಯಗಳು

ದೇಹಕ್ಕೂ ತಂಪು, ಆರೋಗ್ಯಕ್ಕೂ ಪೂರಕ

ಒಂದೆರಡು ಹದ ಮಳೆಯಾದರೂ, ನಗರದ ವಾತಾವರಣವಿನ್ನೂ ಪೂರ್ಣ ತಂಪಾಗಿಲ್ಲ. ಬಿಸಿಲ ಬೇಗೆಯೂ ಕಡಿಮೆಯಾಗಿಲ್ಲ. ಮಧ್ಯಾಹ್ನದ ವೇಳೆಗೆ ಬಾಯಾರಿಕೆ ಹೆಚ್ಚಾಗಿ, ದೇಹ ಬಳಲುತ್ತದೆ. ಏನಾದರೂ ತಂಪಾದ ಪಾನೀಯ ಬೇಕೆನಿಸುತ್ತದೆ, ಅಲ್ಲವೇ ? ಅದಕ್ಕಾಗಿಯೇ ಮನೆಯಲ್ಲೇ ಸುಲಭವಾಗಿ ತಯಾರಿಸಬಹುದಾದ ಒಂದಿಷ್ಟು ಪಾನೀಯಗಳ ರೆಸಿಪಿಗಳನ್ನು ಪರಿಚಯಿಸಿದ್ದಾರೆ **ಆಯುರ್ವೇದ ವೈದ್ಯೆ ಡಾ. ವಸುಂಧರಾ ಭೂಪತಿ**ಯವರು.



ಖರ್ಜೂರಾದಿ ಮಂಥ

ಖರ್ಜೂರ, ದಾಳಿಂಬೆ, ಒಣದ್ರಾಕ್ಷಿ, ನೆಲ್ಲಿಕಾಯಿ ಪುಡಿ, ಹುಣಸೆಹಣ್ಣು ಎಲ್ಲವೂ ಸಮಪ್ರಮಾಣದಲ್ಲಿ ತೆಗೆದುಕೊಳ್ಳಿ. ಇವೆಲ್ಲವೂ ಒಂದು ಭಾಗವಾದರೆ, ಇದಕ್ಕೆ 4 ಭಾಗ ನೀರನ್ನು ಹಾಕಿ ನೆನಸಬೇಕು. ಚೆನ್ನಾಗಿ ನೆನದ ಮೇಲೆ ಎಲ್ಲವನ್ನೂ ರುಬ್ಬಿ(ಮಿಕ್ಸಿಯಲ್ಲಿ ಹಾಕಬಹುದು), ನಂತರ ಶೋಧಿಸಿದರೆ ಪಾನೀಯ ಸಿದ್ದ. ಈ ಪಾನೀಯ ದೇಹದ ದಣಿವನ್ನು ನಿವಾರಿಸುವ ಜೊತೆಗೆ, ಬಿಸಿಲಿನಿಂದ ಬರುವ ತಲೆಸುತ್ತು ನಿಯಂತ್ರಣಕ್ಕೂ ಸಹಕಾರಿ.

ಜೀರ್ಣಕರ ಪಾನೀಯ

ಒಂದು ಕಪ್ ಹೆಸರು ಬೇಳೆಯನ್ನು ಬೇಯಿಸಿ ಕಟ್ಟು (ಮೇಲಿನ ತಿಳಿ) ತೆಗೆದಿಟ್ಟುಕೊಳ್ಳಿ. ಎರಡು ಲೋಟ ಕಟ್ಟು ಬರುವಷ್ಟು ಬೇಳೆ ಬೇಯಿಸಿಕೊಳ್ಳಿ. ಎರಡು ಲೋಟ ಹೆಸರುಬೇಳೆ ಕಟ್ಟಿಗೆ ಎರಡು ಲೋಟ ಮಜ್ಜಿಗೆ ಬೆರೆಸಿ. ಈ ಮಿಶ್ರಣಕ್ಕೆ ಸ್ವಲ್ಪ ಕೊತ್ತಂಬರಿ, ಚೂರು ಶುಂಠಿ ಚಿಟಿಕೆ ಜೀರಿಗೆ ಪುಡಿ, ರುಚಿಗೆ ತಕ್ಕಷ್ಟು ಉಪ್ಪು ಬೆರೆಸಿ. ವಿಶೇಷ ಪಾನೀಯ ಸಿದ್ಧವಾಯಿತು. ಈ ಪಾನೀಯ, ದೇಹಕ್ಕೆ ಶಕ್ತಿ ನೀಡುವ ಜೊತೆಗೆ, ಆಹಾರವನ್ನು ಸುಲಭ ಜೀರ್ಣವಾಗಲು ಸಹಾಯ ಮಾಡುತ್ತದೆ. ಅದಕ್ಕೆ ಇದನ್ನು ಜೀರ್ಣಕರ ಪಾನೀಯ ಎನ್ನುತ್ತಾರೆ.

ಲಾವಂಚದ ಪಾನೀಯ

ಎಂಟರಿಂದ ಹತ್ತು ಲಾವಂಚದ ಬೇರುಗಳನ್ನು ಚೆನ್ನಾಗಿ ತೊಳೆದು ಅರ್ಧ ಲೀಟರ್ ನೀರಿನಲ್ಲಿ ಎರಡು ಗಂಟೆ ನೆನೆಸಬೇಕು. ಆ ನೀರನ್ನು ಶೋಧಿಸಿ. ಅದಕ್ಕೆ ಅರ್ಧಕಪ್ ಬೆಲ್ಲ, ನಿಂಬೆ ರಸ ಮತ್ತು ಏಲಕ್ಕಿ ಪುಡಿ ಹಾಕಬೇಕು. ಲಾವಂಚ ಪಾನೀಯ ಸಿದ್ದ. ಇದು ದೇಹಕ್ಕೆ ತಂಪು ನೀಡುವ ಜೊತೆಗೆ, ರಕ್ತಶುದ್ದಿ ಮಾಡುತ್ತದೆ.

ಪುದೀನ ಜ್ಯೂಸ್

ಐದಾರು ಪುದೀನ ಎಲೆಗಳನ್ನು ಸ್ವಚ್ಛವಾಗಿ ತೊಳೆದು, ಮಿಕ್ಸಿಯಲ್ಲಿ ರುಬ್ಬಿಕೊಳ್ಳಬೇಕು. ಅದಕ್ಕೆ ಸಾಕಷ್ಟು ನೀರು ಹಾಕಿ, ಬೆಲ್ಲ ಬೆರೆಸಬೇಕು. ಜೊತೆಗೆ ಚಿಟಿಕೆ ಏಲಕ್ಕಿ ಪುಡಿ ಬೆರೆಸಿದರೆ, ಇನ್ನೂ ಉತ್ತಮ. ಬೆಳಿಗ್ಗೆ ಖಾಲಿ ಹೊಟ್ಟೆಗೆ ಈ ಪಾನೀಯ ಸೇವಿಸಿದರೆ, ಅಜೀರ್ಣ, ಎದೆಯುರಿಯಂತಹವು ಬಾಧಿಸುವುದಿಲ್ಲ.

ದಾಸವಾಳ ಎಲೆಯ ಜ್ಯೂಸ್

ಐದಾರು ದಾಸವಾಳದ ಎಲೆಗಳನ್ನು ತೆಗೆದುಕೊಂಡು ಸ್ವಚ್ಛಗೊಳಿಸಿ. ನಂತರ ಅದನ್ನು ರುಬ್ಬಿಕೊಂಡು, ರಸ ತೆಗೆದುಕೊಳ್ಳಿ. ಆ ರಸಕ್ಕೆ ಬೆಲ್ಲ, ನೀರು ಬೆರೆಸಿ ಪಾನೀಯ ತಯಾರಿಸಿ .

ದಾಸವಾಳ ಹೂವಿನ ಶರಬತ್: ಐದು ಅಥವಾ ಆರು ದಾಸವಾಳದ ಹೂವುಗಳನ್ನು ರುಬ್ಬಿ ರಸ ತೆಗೆದು ಅದಕ್ಕೆ ನೀರು, ಬೆಲ್ಲ ಬೆರೆಸಿದರೆ ಶರಬತ್ತು ರೆಡಿ.

ಇನ್ನೂ ಒಂದು ವಿಧಾನದಲ್ಲಿ ಶರಬತ್ತು ಮಾಡಬಹುದು. ಅದು ಹೀಗಿದೆ; ಒಂದು ಲೋಟ ಸಕ್ಕರೆಗೆ ನೀರು ಬೆರೆಸಿ, ಸಕ್ಕರೆ ಪಾಕ ತಯಾರಿಸಿಟ್ಟುಕೊಳ್ಳಿ. ಅದಕ್ಕೆ ಒಂದು ಬಟ್ಟಲು ದಾಸವಾಳದ ಹೂವಿನ ರಸ ಬೆರೆಸಿ. ಅದನ್ನು ಒಲೆಯ ಮೇಲಿಟ್ಟು ನೀರಿನಂಶ ಹೋಗುವವರೆಗೂ ಕಾಯಿಸಿ. ನಂತರ ಇಳಿಸಿ, ಶೋಧಿಸಿ. ಬಾಟಲಿಯಲ್ಲಿ ತುಂಬಿಟ್ಟುಕೊಳ್ಳಿ. ನಿಮಗೆ ಬೇಕೆನಿಸಿದಾಗ ಎರಡು ಚಮಚ ರಸಕ್ಕೆ ಒಂದು ಲೋಟ ನೀರು ಬೆರೆಸಿ ಕುಡಿಯಬಹುದು. ಚೀನಾ ಮತ್ತು ಜಪಾನ್ ದೇಶಗಳಲ್ಲಿ ಅತಿಥಿಗಳ ಸತ್ಕಾರಕ್ಕೆ ಇದೇ ಪಾನೀಯ ಬಳಸುತ್ತಾರೆ.

'ಮಧುಮೇಹ'ವಿರುವವರಿಗೆ ಪಾನೀಯಗಳು

ಮಧುಮೇಹ ಅಥವಾ ಸಕ್ಕರೆಕಾಯಿಲೆಯಿಂದ ಬಳಲುವವರು ಸಕ್ಕರೆ ಸಹಿತ ಜ್ಯೂಸ್ ಕುಡಿಯುವಂತಿಲ್ಲ. ಆದರೆ, ಸಕ್ಕರೆ ರಹಿತ, ಸಿಟ್ರಿಕ್ ಅಂಶವಿರುವ ಹಾಗೂ ಪ್ರೊಟೀನ್, ವಿಟಮಿನ್ ಅಂಶಗಳಿರುವ ಜ್ಯೂಸ್‌ಗಳನ್ನು ತಯಾರಿಸಿ ಕುಡಿಯಬಹುದಲ್ಲವಾ ? ಹಾಗಾದರೆ, ಮಧುಮೇಹಿಗಳು ಯಾವ ತರಹದ ಪಾನೀಯ ಕುಡಿಯಬಹುದು? ಇಲ್ಲಿದೆ ಮಾಹಿತಿ.



1. ಕಿತ್ತಲೆ ಹಣ್ಣಿನ ರಸ ಮತ್ತು ಮೂಸಂಬಿ ರಸಕ್ಕೆ ಸ್ವಲ್ಪ ಉಪ್ಪು ಬೆರೆಸಿ ಕುಡಿಯಬಹುದು.
2. ಮಜ್ಜಿಗೆಗೆ ಮೂಸಂಬಿ ರಸ ಮತ್ತು ಸೌತೆಕಾಯಿ ರಸ ಬೆರೆಸಿ ಕುಡಿಯಬಹುದು.
3. ಹೆಸರುಬೇಳೆ ಬೇಯಿಸಿ ಕಟ್ಟು(ಮೇಲಿನ ತಿಳಿ) ತೆಗೆದು, ಅದಕ್ಕೆ ಮಜ್ಜಿಗೆ, ಸ್ವಲ್ಪ ಉಪ್ಪು ಬೆರೆಸಿ ಕುಡಿಯಬಹುದು.
4. ಅರ್ಧಲೋಟ ಸೌತೆಕಾಯಿ ರಸ, ಪುದೀನಾ ರಸ(ಎರಡು ಚಮಚ), ಒಂದು ಚಮಚ ನಿಂಬೆರಸ, ಚಿಟಿಕೆ ಜೀರಿಗೆ ಪುಡಿ, ಚಿಟಿಕೆ ಉಪ್ಪು ಬೆರೆಸಿ ಕುಡಿಯಬಹುದು.
5. ಕಿತ್ತಲೆಹಣ್ಣು ಅಥವಾ ಮೂಸಂಬಿ ರಸಕ್ಕೆ ತಲಾ ಒಂದು ಚಿಟಿಕೆ ಹುರಿದ ಜೀರಿಗೆ ಪುಡಿ, ಕಾಳುಮೆಣಸಿನ ಪುಡಿ, ಉಪ್ಪನ್ನು ಬೆರೆಸಿ ಕುಡಿಯಬಹುದು.
6. ಕಾಲು ಲೋಟ ಕರಬೂಜ ಹಣ್ಣಿನ ರಸಕ್ಕೆ, ಅರ್ಧ ಲೋಟ ಸೌತೆಕಾಯಿ ರಸವನ್ನು ಬೆರೆಸಿ ಕುಡಿಯಬಹುದು.
7. ಮಾವಿನ ಕಾಯಿಯನ್ನು ಕುಕ್ಕರ್‌ನಲ್ಲಿ ಬೇಯಿಸಿ, ಮಿಕ್ಸಿಗೆ ಹಾಕಿ ರುಬ್ಬಿ. ಅದಕ್ಕೆ ನೀರು ಬೆರೆಸಿ, ಉಪ್ಪು, ಏಲಕ್ಕಿ, ಶುಂಠಿ ಹಾಕಿ ಕುಡಿಯಬಹುದು.
8. ಮಾವಿನ ಕಾಯಿ ತುರಿದು ಮಿಕ್ಸಿಗೆ ಹಾಕಿ ರುಬ್ಬಿ ತೆಗೆಯಬೇಕು. ಆ ರಸಕ್ಕೆ ಮೂಸಂಬಿ ರಸ, ಚಿಟಿಕೆ ಶುಂಠಿ ಬೆರೆಸಿ ಕುಡಿಯಬಹುದು.
9. ನಿಂಬೆಹಣ್ಣಿನ ರಸಕ್ಕೆ ನೀರು ಹಾಕಿ ಶುಂಠಿ, ಮೆಣಸು, ಚಿಟಿಕೆ ಜೀರಿಗೆ ಪುಡಿ, ಚಿಟಿಕೆ ಉಪ್ಪು ಬೆರೆಸಿ ಕುಡಿಯಬಹುದು.
10. ಅರ್ಧ ಬಟ್ಟಲು ಹೆಸರು ಕಾಳನ್ನು ಮೂರ್ನಾಲ್ಕು ಗಂಟೆಗಳ ಕಾಲ ನೆನೆಸಿಡಿ. ನಂತರ ಮಿಕ್ಸಿಗೆ ಹಾಕಿ ರುಬ್ಬಿಕೊಳ್ಳಿ. ಅದಕ್ಕೆ ನೀರು, ಉಪ್ಪು, ಶುಂಠಿ, ಜೀರಿಗೆ ಪುಡಿ ಬೆರೆಸಿ ಕುಡಿಯಬೇಕು. ಇದಕ್ಕೆ ಮಜ್ಜಿಗೆಯನ್ನು ಬೆರೆಸಿಕೊಳ್ಳಬಹುದು.

'ಲಾಲ್ ಸಲಾಂ' ಪೋಸ್ಟರ್ ರಿಲೀಸ್



ಸೂಪರ್ ಸ್ಟಾರ್ ರಜನಿಕಾಂತ್ ಪುತ್ರಿ ಐಶ್ವರ್ಯ ರಜನಿಕಾಂತ್ ನಿರ್ದೇಶನದಲ್ಲಿ ಮೂಡಿಬರುತ್ತಿರುವ ಬಹುನಿರೀಕ್ಷಿತ ಸಿನಿಮಾ ಲಾಲ್ ಸಲಾಂ. ಈ ಚಿತ್ರದಲ್ಲಿ ರಜನಿಕಾಂತ್ ಅವರು ಪ್ರಮುಖ ಪಾತ್ರವೊಂದರಲ್ಲಿ ನಟಿಸುತ್ತಿದ್ದಾರೆ. ಅವರ ಫಸ್ಟ್ ಲುಕ್ ಪೋಸ್ಟರ್ ರಿಲೀಸ್ ಆಗಿದೆ.

ಚಿತ್ರದಲ್ಲಿ ರಜನಿಕಾಂತ್ ಮೊಹಿದ್ದೀನ್ ಭಾಯ್ ಎಂಬ ಪಾತ್ರದಲ್ಲಿ ಅಭಿನಯಿಸುತ್ತಿದ್ದಾರೆ. ಶೇರ್ವಾನಿ ಉಡುಪು ಧರಿಸಿ ಸನ್‌ಗ್ಲಾಸ್ ತೊಟ್ಟು ತಲೆಗೆ ಟೋಪಿ ಹಾಕಿ ಎಂಟ್ರಿಕೊಟ್ಟಿರುವ ಸೂಪರ್ ಸ್ಟಾರ್ ಗೆಟಪ್ ನೋಡುಗರ ಗಮನಸೆಳೆಯುತ್ತಿದೆ.

ವಿಷ್ಣು ವಿಶಾಲ್ ಮತ್ತು ವಿಕ್ರಾಂತ್ ಮುಖ್ಯಭೂಮಿಕೆಯಲ್ಲಿ ನಟಿಸುತ್ತಿದ್ದು, ಜೀವಿತಾ ರಾಜಶೇಖರ್ ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ. ಆಸ್ಕರ್ ವಿಜೇತ ಸಂಗೀತ ನಿರ್ದೇಶಕ ಎ ಆರ್ ರೆಹಮಾನ್ ಸಂಗೀತ ಸಂಯೋಜನೆ, ವಿಷ್ಣು ರಂಗಸ್ವಾಮಿ ಛಾಯಾಗ್ರಹಣ ಚಿತ್ರಕ್ಕಿದೆ. 'ಲಾಲ್ ಸಲಾಂ' ಸ್ಪೋರ್ಟ್ಸ್ ಡ್ರಾಮಾ ಸಿನಿಮಾ ಆಗಿದ್ದು ಕ್ರಿಕೆಟ್ ಹಿನ್ನೆಲೆಯಲ್ಲಿ ಕಥೆ ಸಾಗಲಿದೆ.

ಇಂಡಿಯನ್, ಕೈದಿ ನಂಬರ್-150, 2.0, ದರ್ಬಾರ್, ಪೊನ್ನಿಯಿನ್ ಸೆಲ್ವನ್ ಸರಣಿ ಸಿನಿಮಾ ನಿರ್ಮಿಸಿರುವ ಖ್ಯಾತ ನಿರ್ಮಾಣ ಸಂಸ್ಥೆ ಲೈಕಾ ಪ್ರೊಡಕ್ಷನ್ ಹೌಸ್ ಲಾಲ್ ಸಲಾಂ ಚಿತ್ರ ನಿರ್ಮಾಣ ಮಾಡುತ್ತಿದೆ. ಸದ್ಯ ಮುಂಬೈನಲ್ಲಿ ಶೂಟಿಂಗ್ ಭರದಿಂದ ಸಾಗುತ್ತಿದೆ.

ಸಿನಿಬಿಟ್ಸ್

ಹಿರಿಯ ನಟ ಶ್ರೀನಿವಾಸಮೂರ್ತಿ @75



ಅಮೋಘ ಅಭಿನಯದ ಮೂಲಕ ಜನಮನಸೂರೆಗೊಂಡಿರುವ ಹಿರಿಯ ನಟ ಶ್ರೀನಿವಾಸ ಮೂರ್ತಿ ಅವರಿಗೆ 75 ವರ್ಷ. ಅವರ ಬಣ್ಣದ ಬದುಕಿಗೆ 50 ವರ್ಷ.

ಈ ಎರಡು ಸಂಭ್ರಮಗಳನ್ನು ಸಂಭ್ರಮಿಸಲು ಇದೇ ಮೇ 15 ಹಾಗೂ 16 ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ 'ತರಕಾರಿ ಚೆನ್ನಿ' ಹಾಗೂ 'ಸದಾರಮೆ ಕಳ್ಳ' ಎಂಬ ಎರಡು ನಾಟಕಗಳನ್ನು ಪ್ರದರ್ಶಿಸಲಾಗುತ್ತಿದೆ.

ಈ ಕುರಿತು ಇತ್ತೀಚೆಗೆ ಪತ್ರಿಕಾಗೋಷ್ಠಿಯಲ್ಲಿ ಶ್ರೀನಿವಾಸಮೂರ್ತಿ ಅವರು ಈ ಮಾಹಿತಿ ನೀಡಿದರು. 'ದೊಡ್ಡಬಳ್ಳಾಪುರದಿಂದ ಬೆಂಗಳೂರಿಗೆ ಬಂದು ಸರ್ವೆ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದೆ. ಆ ವೇಳೆ ನಾಟಕದಲ್ಲಿ ಅಭಿನಯಿಸಲು ಪ್ರಾರಂಭ ಮಾಡಿದೆ. ಒಂದು ಸಲ ನನ್ನ ನಾಟಕವನ್ನು ನೋಡಿದ ಬಂಗಾರಪ್ಪನವರು ನನ್ನನ್ನು ಅಭಿನಂದಿಸಿದರು. ಅಲ್ಲಿಂದ ನನ್ನ ನಟನೆ ಮತ್ತಷ್ಟು ಹೆಚ್ಚಾಯಿತು' ಎನ್ನುತ್ತಾ ತಮ್ಮ ಬಣ್ಣದ ಬದುಕಿನ ಆರಂಭದ ದಿನಗಳನ್ನು ನೆನಪಿಸಿಕೊಂಡರು.

ತಮಿಳಿನ ಒಂದು ಚಿತ್ರದಲ್ಲಿ ನಾಯಕನಾಗಿ ನಟಿಸಿದ್ದೆ. ಆ ಚಿತ್ರ ಬಿಡುಗಡೆ ಸಂದರ್ಭದಲ್ಲಿ ನಿರ್ಮಾಪಕರಿಗೆ ತೊಂದರೆಯಾಯಿತು. 'ಅಪ್ಪು' ಚಿತ್ರದ ನಂತರ ನಿರ್ದೇಶಕ ಪುರಿ ಜಗನ್ನಾಥ್ ಅವರು ತೆಲುಗು ಚಿತ್ರರಂಗಕ್ಕೆ ನನ್ನ ಕರೆದರು. ಆಗ ಇಲ್ಲಿಯೇ ನಾನು ಸಾಕಷ್ಟು ಚಿತ್ರಗಳಲ್ಲಿ ಅಭಿನಯಿಸುತ್ತಿದ್ದೆ . ಹಾಗಾಗಿ ಅಲ್ಲಿಗೆ ಹೋಗಲಿಲ್ಲ. ರಜನಿಕಾಂತ್ ಅವರು ಸಹ ನೀವು ಯಾಕೆ ತಮಿಳಿನಲ್ಲಿ ನಟಿಸಬಾರದು? ಎಂದು ಕೇಳುತ್ತಿರುತ್ತಾರೆ' ಎಂದು ಶ್ರೀನಿವಾಸಮೂರ್ತಿ ಅವರು ಬೇರೆ ಭಾಷೆಗಳಿಂದ ತಮಗೆ ಬಂದಿದ್ದ ಅವಕಾಶಗಳ ಕುರಿತು ಮಾತನಾಡಿದರು.

ಒನ್‌ಪ್ಲಸ್ ನಾರ್ಡ್ ಸಿಇ 3 ಲೈಟ್

ಪ್ಲಸ್, ಮೈನಸ್‌ನ ಮಿಶ್ರಣ

ಒನ್‌ಪ್ಲಸ್ ನಾರ್ಡ್ ಸಿಇ 3 ಲೈಟ್ 5ಜಿ ಸ್ಮಾರ್ಟ್‌ಫೋನ್ ಹಲವು ಪ್ಲಸ್ ಮತ್ತು ಮೈನಸ್ ಅಂಶಗಳ ಮಿಶ್ರಣವಾಗಿದೆ.

ವಿಶ್ವನಾಥ ಎಸ್.

ಗ್ಯಾಜೆಟ್



ಒನ್‌ಪ್ಲಸ್ ಕಂಪನಿಯು ಸ್ಮಾರ್ಟ್‌ಫೋನ್ ಮಾರುಕಟ್ಟೆಯಲ್ಲಿ ಮಧ್ಯಮ ಬೆಲೆಯ ವಿಭಾಗದಲ್ಲಿ ಈಗಾಗಲೇ ಕೆಲವು ಉತ್ತಮ ಸ್ಮಾರ್ಟ್‌ಫೋನ್‌ಗಳನ್ನು ನೀಡಿದೆ. ಆದರೆ, ಈಚೆಗೆ ಬಿಡುಗಡೆ ಮಾಡಿರುವ 'ಒನ್‌ಪ್ಲಸ್ ನಾರ್ಡ್ ಸಿಇ 3 ಲೈಟ್ 5ಜಿ' (OnePlus Nord Ce 3 lite 5G) ಸ್ಮಾರ್ಟ್‌ಫೋನ್ ಹಲವು ಪ್ಲಸ್ ಮತ್ತು ಮೈನಸ್ ಅಂಶಗಳ ಮಿಶ್ರಣವಾಗಿದೆ.

ವಿನ್ಯಾಸದಲ್ಲಿ ನೋಡಲು ಆಕರ್ಷಕವಾಗಿದೆ. 6.72 ಇಂಚು ಎಲ್‌ಸಿಡಿ ಸ್ಕ್ರೀನ್ 120 ಹರ್ಟ್ಸ್ ರಿಫ್ರೆಷ್ ರೇಟ್ ಹೊಂದಿದೆ. ಮನೆಯೊಳಗೆ ಮತ್ತು ಮನೆಯಾಚೆ ಬಿಸಿಲಿನಲ್ಲಿ ಇದ್ದಾಗಲೂ ಮೊಬೈಲ್ ಪರದೆಯನ್ನು ನೋಡಲು ಸಮಸ್ಯೆ ಆಗುವುದಿಲ್ಲ. ಟಚ್ ರೆಸ್ಪಾನ್ಸ್ ರೇಟ್ 240 ಹರ್ಟ್ಸ್ ಇದೆ. 195ಗ್ರಾಂ ತೂಕ ಇದೆ. ಸ್ಕ್ರೀನ್‌ನ ಮಧ್ಯಭಾಗದಲ್ಲಿ ಸೆಲ್ಫಿ ಕ್ಯಾಮೆರಾ ಅಳವಡಿಸಲಾಗಿದೆ. ಹಿಂಭಾಗದಲ್ಲಿ ವೃತ್ತಾಕಾರದಲ್ಲಿ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಪರದೆಯಲ್ಲಿಯೇ ಫಿಂಗರ್‌ಪ್ರಿಂಟ್ ಸೆನ್ಸರ್ ಅಳವಡಿಸುವ ಬದಲಾಗಿ ಪವರ್ ಬಟನ್ ಜಾಗದಲ್ಲಿ ಇಡಲಾಗಿದೆ; ಇದು ಕಿರಿಕಿರಿ ಉಂಟುಮಾಡುತ್ತದೆ. ಸುಮ್ಮನೆ ಮೊಬೈಲ್ ಅನ್ನು ಕೈಯಲ್ಲಿ ಹಿಡಿದುಕೊಂಡರೂ ಮೊಬೈಲ್ ಅನ್‌ಲಾಕ್ ಆಗುತ್ತದೆ.

ಮೊಬೈಲ್‌ನ ವಾಲ್ಯುಂ ಬಟನ್ ನಂತರ ಸಿಮ್ ಸ್ಲಾಟ್ ನೀಡಲಾಗಿದೆ. ಒನ್‌ಪ್ಲಸ್‌ನ ಹೆಗ್ಗುರುತು ಎನ್ನಿಸಿಕೊಂಡಿರುವ 'ಅಲರ್ಟ್ ಸ್ಲೈಡರ್' ಬಟನ್ ಕೊರತೆ ಕಾಡದೇ ಇರದು. ಅನ್‌ಲಾಕ್ ಮಾಡದೇ ಮೊಬೈಲ್ ಅನ್ನು ರಿಂಗ್, ವೈಬ್ರೆಟ್, ಸೈಲೆಂಟ್ ಮೋಡ್‌ಗೆ ಇಡಲು ಈ ಬಟನ್ ಅನುಕೂಲವಾಗಿದೆ. 3.5 ಎಂಎಂ ಹೆಡ್‌ಫೋನ್ ಜಾಕ್ ನೀಡಿರುವುದು ಇದರ ಪ್ಲಸ್ ಪಾಯಿಂಟ್. ಸ್ಮಾರ್ಟ್ ಎಂದಾಕ್ಷಣ ಎಲ್ಲರ ಬಳಿಯೂ ಬ್ಲುಟೂತ್ ಹೆಡ್‌ಫೋನ್ ಇರಲೇಬೇಕು ಎಂದಲ್ಲ. ಈಗಲೂ ಹಲವರು ಇಯರ್‌ಫೋನ್ ಬಳಸುತ್ತಾರೆ. ಹೀಗಾಗಿ ಹೆಡ್‌ಫೋನ್ ಜಾಕ್ ಪ್ರಯೋಜನಕ್ಕೆ ಬರುತ್ತದೆ. ಡ್ಯುಯಲ್ ಸ್ಪೀಕರ್ ಹೊಂದಿದೆ.

ಆಂಡ್ರಾಯ್ಡ್ 13 ಆಧಾರಿತ ಆಕ್ಸಿಜನ್ ಕಾರ್ಯಾಚರಣಾ ವ್ಯವಸ್ಥೆ (ಒಎಸ್), ಕ್ವಾಲ್ಕಂ ಸ್ನಾಪ್‌ಡ್ರ್ಯಾಗನ್ 695 5ಜಿ ಪ್ರೊಸೆಸರ್ ಒಳಗೊಂಡಿದೆ. ಹೆಚ್ಚಿನ ಗ್ರಾಫಿಕ್ಸ್ ಇರುವ ಗೇಮ್ ಆಡಲು ಮತ್ತು ಹೆಚ್ಚಿನ ರೆಸಲ್ಯೂಷನ್ ಹೊಂದಿರುವ ವಿಡಿಯೊ ನೋಡುವಾಗ ಯಾವುದೇ ಸಮಸ್ಯೆ ಆಗುವುದಿಲ್ಲ. 8 ಜಿಬಿವರೆಗೆ ರ್‍ಯಾಮ್ ವಿಸ್ತರಣೆ ಸೌಲಭ್ಯ ಇದೆಯಾದರೂ ಫೋನ್ ಪ್ರತಿ ಬಾರಿಯೂ ರಿಸ್ಟಾರ್ಟ್ ಆಗಬೇಕು. ಈ ಸೌಲಭ್ಯ ಉಪಯುಕ್ತವಾಗಿದ್ದರೂ ಪದೇ ಪದೇ ರಿಸ್ಟಾರ್ಟ್ ಆಗುವುದು ಕಿರಿಕಿರಿ ಎನ್ನಿಸುತ್ತದೆ. ಹೆಚ್ಚಿನ ರೆಸಲ್ಯೂಷನ್ ಇರುವ ಗೇಮ್ ಆಡಲು ಮತ್ತು ವಿಡಿಯೊ ನೋಡುವಾಗ ಯಾವುದೇ ಸಮಸ್ಯೆ ಆಗಿಲ್ಲ. ಹೈಬ್ರಿಡ್ ಸಿಮ್ ಸ್ಲಾಟ್ ಇದೆ. ಎರಡನೇ ಸಿಮ್ ಜಾಗದಲ್ಲಿ ಮೈಕ್ರೊ ಎಸ್‌ಡಿ ಕಾರ್ಡ್ ಸ್ಲಾಟ್ ನೀಡಿದ್ದು, 1ಟಿಬಿ ವರೆಗೂ ಫೋಟೊ, ಡಾಕ್ಯುಮೆಂಟ್‌ಗಳನ್ನು ಸಂಗ್ರಹಿಸಿ ಇಡಬಹುದು.


ಕ್ಯಾಮೆರಾ: 108 + 2 + 2 ಎಂಪಿ... ಹೀಗೆ ಮೂರು ರಿಯರ್ ಕ್ಯಾಮೆರಾ ಒಳಗೊಂಡಿದೆ. ಪ್ರಧಾನ ಕ್ಯಾಮೆರಾ 108 ಎಂಪಿ ಇದೆ ಎನ್ನುವುದೇ ಈ ಸ್ಮಾರ್ಟ್‌ಫೋನ್‌ನ ಹೈಲೈಟ್ ಎಂದು ಕಂಪನಿ ಹೇಳಿಕೊಂಡಿದೆ. ಆದರೆ, ಬಹಳಷ್ಟು ಕಡೆ ಅದಕ್ಕೆ ತಕ್ಕಂತೆ ಕೆಲಸ ಮಾಡುವುದಿಲ್ಲ. ಔಟ್‌ಡೋರ್‌ನಲ್ಲಿ ಪ್ರಕೃತಿಯ ಚಿತ್ರಗಳನ್ನು ತೆಗೆಯಲು ಉತ್ತಮ ಮೊಬೈಲ್ ಇದಾಗಿದೆ. ಬೇರೆ ಕಂಪನಿಯ ಇದಕ್ಕಿಂತ ಹೆಚ್ಚಿನ ಬೆಲೆಯ ಫೋನ್‌ಗಿಂತಲೂ ಚಿತ್ರದ ಗುಣಮಟ್ಟ, ನೆರಳು ಬೆಳಕಿನ ಸಂಯೋಜನೆ ಮತ್ತು ವಿವರಗಳು ಇದರಲ್ಲಿ ಚೆನ್ನಾಗಿ ದಾಖಲಾಗುತ್ತವೆ. ಆದರೆ ಮನೆಯೊಳಗೆ ಅಥವಾ ಇನ್‌ಡೋರ್‌ನಲ್ಲಿ ಚಿತ್ರದ ಗುಣಮಟ್ಟ, ನೆರಳು ಬೆಳಕಿನ ಸಂಯೋಜನೆ ಯಾವುದೂ ಚೆನ್ನಾಗಿಲ್ಲ. ಸೆಲ್ಫಿಯೂ ಅಷ್ಟೆ, ಮನೆಯೊಳಗೆ ತೆಗೆದ ಸೆಲ್ಫಿ ಚಿತ್ರದ ಗುಣಮಟ್ಟವು ಮಧ್ಯಮ ಬೆಲೆಯ ಸ್ಮಾರ್ಟ್‌ಫೋನ್‌ಗಿಂತಲೂ ಕಡಿಮೆ ಇದೆ. ಆದರೆ, ಮನೆಯಾಚೆ ತೆಗೆದ ಸೆಲ್ಫಿ ಒಂದು ಹಂತದ ಮಟ್ಟಿಗೆ ಚೆನ್ನಾಗಿದೆ. 3ಎಕ್ಸ್ ಜೂಮ್ ಆಯ್ಕೆಯಲ್ಲಿಯೂ ಇದೇ ಸಮಸ್ಯೆ, ಔಟ್‌ಡೋರ್‌ನಲ್ಲಿ ಜೂಮ್ ಆಯ್ಕೆ ಚೆನ್ನಾಗಿ ಕೆಲಸ ಮಾಡುತ್ತದೆ. ಮನೆಯೊಳಗೆ ಗುಣಮಟ್ಟದ ಕೊರತೆ ಎದ್ದುಕಾಣುತ್ತದೆ. ಮ್ಯಾಕ್ರೊ ಲೆನ್ಸ್ 2ಎಂಪಿ ಇದ್ದು, ಈ ಆಯ್ಕೆಯಲ್ಲಿ ತೆಗೆದ ಚಿತ್ರದಲ್ಲಿ ಗುಣಮಟ್ಟದ ಕೊರತೆ ಇದೆ.

ಬ್ಯಾಟರಿ: 5 ಸಾವಿರ ಎಂಎಎಚ್ ಬ್ಯಾಟರಿ ಇದ್ದು, 80 ವಾಟ್ ಸೂಪರ್ ವಿಒಒಸಿ ಅಲ್ಟ್ರಾ ಫಾಸ್ಟ್ ಚಾರ್ಜರ್ ನೀಡಲಾಗಿದೆ. ಆದರೆ, ಬೆಂಬಲಿಸುವುದು 67 ವಾಟ್‌ವರೆಗೆ ಮಾತ್ರ. ಹೀಗಿದ್ದರೂ ಶೇ 100ರಷ್ಟು ಚಾರ್ಜ್ ಆಗಲು 50 ನಿಮಿಷ ಬೇಕು. 30 ನಿಮಿಷ ಚಾರ್ಜ್ ಮಾಡಿದರೆ ಒಂದು ದಿನ ಬಳಸಬಹುದು ಎನ್ನುವ ಕಂಪನಿಯ ವಾದವನ್ನು ಒಪ್ಪಲು ಆಗುವುದಿಲ್ಲ. ಏಕೆಂದರೆ ಇದು ಕೂಡಾ ವೇಗದ ಚಾರ್ಜಿಂಗ್‌ಗೆ ಸಮ ಅಲ್ಲ, ಬೆಳಿಗ್ಗೆ 9.45ಕ್ಕೆ ಶೇ 100ರಷ್ಟು ಚಾರ್ಜ್ ಮಾಡಲಾಗಿತ್ತು. ಮಾರನೇ ದಿನ ಬೆಳಿಗ್ಗೆ 9.25ರ ವೇಳೆಗೆ ಶೇ 25ರಷ್ಟು ಚಾರ್ಜ್ ಇನ್ನೂ ಉಳಿದಿತ್ತು. ಇದು ಸ್ವಲ್ಪ ಸಮಾಧಾನದ ಸಂಗತಿ ಆದರೂ ಮಾರುಕಟ್ಟೆಯ ಈಚಿನ ಮಾಹಿತಿಯ ಪ್ರಕಾರ, ವ್ಯಕ್ತಿಯೊಬ್ಬ ದಿನಕ್ಕೆ ಸರಾಸರಿ 6 ಗಂಟೆ ಮೊಬೈಲ್ ಬಳಸುತ್ತಾನೆ. ಈ ಅವಧಿಯಲ್ಲಿ ಒಂದು ಮೂವಿ ನೋಡಿದರೆ ಅಥವಾ ವಿಡಿಯೊಗಳನ್ನು ನೋಡಿದರೆ, ಗೇಮ್ ಆಡಿದರೆ ಆಗ 30 ನಿಮಿಷಕ್ಕೆ ಮಾಡಿರುವ ಚಾರ್ಜ್ ಸಾಲುವುದಿಲ್ಲ. ಬೆಲೆ: 8 + 126ಜಿಬಿಗೆ ₹19,999 ಮತ್ತು 8 + 256ಜಿಬಿಗೆ ₹21,999 ಇದೆ.

ಒನ್‌ಪ್ಲಸ್ ನಾರ್ಡ್ ಸರಣಿಯಲ್ಲಿ ಈಗಾಗಲೇ ಹೇಳಿರುವಂತೆ ಹಲವು ಪ್ಲಸ್ ಮತ್ತು ಮೈನಸ್ ಅಂಶಗಳನ್ನು ಒಳಗೊಂಡಿರುವ ಸ್ಮಾರ್ಟ್‌ಫೋನ್ ಇದಾಗಿದೆ. ವೇಗದ ಕಾರ್ಯಾಚರಣೆ, ಔಟ್‌ಡೋರ್ ಫೋಟೊ, ವಿಡಿಯೊ ತೆಗೆಯಲು ಇದನ್ನು ಒಂದು ಆಯ್ಕೆಯಾಗಿ ಪರಿಗಣಿಸಬಹುದು. ❖

ಶ್ವಾಸಕೋಶ ರಕ್ಷಣೆಗೆ ಇಲ್ಲಿವೆ ಸಲಹೆಗಳು

ಆಸ್ತಮಾ ಸಮಸ್ಯೆಯಿಂದ ಸಾಕಷ್ಟು ಜನ ಬಳಲುತ್ತಿದ್ದಾರೆ. ಈ ರೋಗಕ್ಕೆ ಸೂಕ್ತ ಚಿಕಿತ್ಸೆ ಇಲ್ಲದಿದ್ದರೂ ಸಹ, ಶಿಸ್ತುಬದ್ಧ ನಿರ್ವಹಣೆಯಿಂದ, ತಕ್ಕಮಟ್ಟಿಗೆ ತಡೆಗಟ್ಟಲು ಸಾಧ್ಯವಿದೆ. ಒಂದೊಮ್ಮೆ ನಿರ್ಲಕ್ಷಿಸಿದರೆ ಆರೋಗ್ಯದ ಪರಿಸ್ಥಿತಿ ಇನ್ನಷ್ಟು ಹದಗಡೆಲಿದೆ. ಹೀಗಾಗಿ ಆಸ್ತಮಾ ಇರುವವರು ಯಾವ ರೀತಿ ತಮ್ಮ ಜೀವನ ಶೈಲಿ ಹೊಂದಿರಬೇಕು ಹಾಗೂ ಚಿಕಿತ್ಸೆಗಳ ವಿಧಾನ ಕುರಿತು ಫೋರ್ಟಿಸ್ ಆಸ್ಪತ್ರೆಯ ಶ್ವಾಸಕೋಶಶಾಸ್ತ್ರ ವಿಭಾಗದ ನಿರ್ದೇಶಕ ಡಾ ವಿವೇಕ್ ಆನಂದ್ ಪಡೆಗಲ್ ಒಂದಷ್ಟು ಸಲಹೆಗಳನ್ನು ನೀಡಿದ್ದಾರೆ.



ಆಸ್ತಮಾ ಲಕ್ಷಣಗಳು

ಅಸ್ತಮಾ ಹೊಂದಿರುವವರು ವಿಪರೀತ ಕೆಮ್ಮುತ್ತಿರುತ್ತಾರೆ. ಅದರಲ್ಲೂ ರಾತ್ರಿ ಹೊತ್ತು ಈ ಕೆಮ್ಮು ಹೆಚ್ಚಾಗುತ್ತದೆ. ಉಸಿರಾಟದ ಸಮಸ್ಯೆ, ಉಬ್ಬಸ, ಎದೆ ಬಿಗಿತ, ಹೆಚ್ಚು ಆಯಾಸ, ದೇಹದಲ್ಲಿ ದೌರ್ಬಲ್ಯ ಮೂಡುವುದು, ವ್ಯಾಯಾಮ ಮಾಡುವಾಗ ಉಸಿರು ಕಟ್ಟಿದಂತಾಗುವುದು ಇವೆಲ್ಲ ಆಸ್ತಮಾದ ಲಕ್ಷಣಗಳು. ಇದರ ಜೊತೆಗೆ, ಶ್ವಾಸಕೋಶ ಸರಿಯಾಗಿ ಕಾರ್ಯನಿರ್ವಹಿಸದಿರುವುದು, ಶ್ವಾಸಕೋಶದಲ್ಲಿ ಅಲರ್ಜಿ, ಶೀತದ ಲಕ್ಷಣಗಳು ಕಂಡುಬಂದಾಗ, ಗಂಟಲು ಕಟ್ಟುವುದು, ಕಫ, ನಿದ್ರಿಸುವಾಗ ಗೊರಕೆ, ತಲೆ ನೋವು, ವೀಸಿಂಗ್.. ಇಂಥವೂ ಆಸ್ತಮಾದ ಲಕ್ಷಣಗಳಾಗಿವೆ.

ಯೋಗವೇ ಪರಿಹಾರ

ಉಸಿರಾಡುವ ವೇಳೆ ಶ್ವಾಸಕೋಶದಲ್ಲಿ ಆಗುವ ಅಡೆತಡೆಯಿಂದಲೇ ಕೆಮ್ಮು ಹೆಚ್ಚುತ್ತದೆ. ಯಾವಾಗ ಸರಾಗ ಉಸಿರಾಟ ಮಾಡಲು ಸಾಧ್ಯವಾಗುವುದೋ ಆಗ ಆಸ್ತಮಾ ಇರುವವರಿಗೆ ಕ್ರಮೇಣ ಈ ಸಮಸ್ಯೆ ಕಡಿಮೆಯಾಗುತ್ತಾ ಬರಲಿದೆ. ಹೀಗಾಗಿ, ಪ್ರತಿದಿನ ಬೆಳಿಗ್ಗೆ ಅಥವಾ ಸಂಜೆ 20 ನಿಮಿಷಗಳ ಕಾಲ ಯೋಗ, ಅದರಲ್ಲೂ ಪ್ರಾಣಾಯಾಮ ಮಾಡುವುದು ಅತ್ಯಂತ ಅವಶ್ಯಕ. ಪ್ರಾಣಾಯಾಮವು ನಿಮ್ಮ ಉಸಿರಾಟವನ್ನು ಸರಾಗಗೊಳಿಸುತ್ತದೆ ಹಾಗೂ ಶ್ವಾಸಕೋಶದ ಕಾರ್ಯವನ್ನು ಸುಲಭಗೊಳಿಸಲಿದೆ. ಜೊತೆಗೆ, ಒಂದಷ್ಟು ಯೋಗಾಭ್ಯಾಸ ಕೂಡ ನಿಮ್ಮ ದೇಹವನ್ನು ಪ್ರಶಾಂತವಾಗಿಡಲಿದೆ.

ವ್ಯಾಯಾಮವಿರಲಿ

ಕೆಲವರಿಗೆ ಯೋಗ ಮಾಡುವ ತಾಳ್ಮೆ ಇರುವುದಿಲ್ಲ. ಅಂಥವರು ತಮಗೆ ಮೆಚ್ಚುಗೆ ಎನಿಸುವ ದೈಹಿಕ ಚಟುವಟಿಕೆ ನಿಭಾಯಿಸಬಹುದು. ಈಜು, ವಾಕಿಂಗ್, ಸೈಕ್ಲಿಂಗ್, ಜಾಕಿಂಗ್, ಬ್ಯಾಡ್‌ಮಿಂಟನ್, ಜಿಮ್ ಹೀಗೆ ಯಾವುದಾದರೊಂದು ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳಿ.

ಆರೋಗ್ಯ

ಅಲರ್ಜಿ ನಿರ್ಲಕ್ಷಿಸಬೇಡಿ

ಆಸ್ತಮಾ ರೋಗಿಗಳನ್ನು ಕಾಡುವ ಅತಿದೊಡ್ಡ ಸಮಸ್ಯೆ ಎಂದರೆ, ಅದು ಅಲರ್ಜಿ. ಹೆಚ್ಚು ದೂಳು, ಮಾಲಿನ್ಯ (ಪ್ರದೂಷಣೆ) ಇರುವ ಜಾಗದಲ್ಲಿ ಉಸಿರಾಟ ಮಾಡಿದಾಗ, ಆ ದೂಳಿನ ಕಣಗಳು ಶ್ವಾಸಕೋಶ ಸೇರಿ, ಅಲರ್ಜಿ ಉಂಟು ಮಾಡುತ್ತದೆ. ಇದು ಹೆಚ್ಚು ಕೆಮ್ಮು ಆಗುವುದಕ್ಕೆ ದಾರಿ ಮಾಡಿದಂತೆ. ಹೀಗಾಗಿ ಸಾಧ್ಯವಾದಷ್ಟು ದೂಳು ಇರುವ ಕಡೆ ಓಡಾಟ ಕಡಿಮೆ ಮಾಡಿ ಅಥವಾ ಅನಿವಾರ್ಯವೆನಿಸಿದರೆ ಮಾಸ್ಕ್ ಧರಿಸುವುದನ್ನು ಮರೆಯದಿರಿ.

ಇನ್ನೂ ಕೆಲವರು, ಸಾಕುಪ್ರಾಣಿಗಳನ್ನು ಹೆಚ್ಚಾಗಿ ಮುದ್ದಿಸುತ್ತಾರೆ. ಪ್ರಾಣಿಗಳು ಕೂದಲು ಸಹ ಅಲರ್ಜಿ ಉಂಟು ಮಾಡುವ ಸಾಧ್ಯತೆ ಇದೆ. ಹೀಗಾಗಿ ಮಲಗುವ ಹೊದಿಕೆ ಇದರಲ್ಲಿ ಸಾಲಿಪ್ರಾಣಿಗಳ ಕೂದಲು ಉದರಿಲ್ಲದಿರುವುದನ್ನು ಖಚಿತಪಡಿಸಿಕೊಳ್ಳಿ ಅಥವಾ ಜಾಗವನ್ನು ಸ್ವಚ್ಛಗೊಳಿಸಿ.

ಧೂಮಪಾನ ತ್ಯಜಿಸಿ

ಅಸ್ತಮಾ ಬರಲು ಧೂಮಪಾನವೂ ಒಂದು ಕಾರಣ. ಧೂಮಪಾನದಲ್ಲಿರುವ ನಿಕೋಟಿನ್‌ನಿಂದ ಶ್ವಾಸಕೋಶ ತನ್ನ ಆರೋಗ್ಯ ಕಳೆದುಕೊಳ್ಳಲಿದೆ. ಇದರಿಂದ ಶ್ವಾಸಕೋಶದ ಅಲರ್ಜಿ, ಕೆಮ್ಮು ಸೇರಿದಂತೆ ಹಲವು ರೀತಿಯ ಆರೋಗ್ಯ ಸಮಸ್ಯೆಗಳಿಗೆ ಕಾರಣವಾಗಲಿದೆ. ಹೀಗಾಗಿ ಧೂಮಪಾನ ನಿಲ್ಲಿಸಿ ಹಾಗೂ ಧೂಮಪಾನ ಮಾಡುವವರ ಬಳಿ ನಿಲ್ಲುವುದನ್ನು ಕಡಿಮೆ ಮಾಡಿ.

ಔಷಧಿ ತೆಗೆದುಕೊಳ್ಳಿ

ಕೆಲವರಿಗೆ ಆಸ್ತಮಾ ಹೆಚ್ಚಿನ ಪ್ರಮಾಣದಲ್ಲಿ ಸಮಸ್ಯೆ ಉಂಟು ಮಾಡುತ್ತಿದ್ದರೆ, ವೈದ್ಯರು ಸೂಚಿಸಿದ ಔಷಧಿಗಳನ್ನು ನಿರ್ಲಕ್ಷಿಸಬೇಡಿ. ಕೆಲವೊಮ್ಮೆ ವಾತಾವರಣದಿಂದಲೂ ನಿಮ್ಮ ಉಸಿರಾಟದ ಮೇಲೆ ಸಮಸ್ಯೆ ಆಗಬಹುದು, ಹೀಗಾಗಿ ಸದಾ ಇನ್‌ಹೇಲರ್ ಅನ್ನು ಜೊತೆಯಲ್ಲಿಯೇ ಇಟ್ಟುಕೊಳ್ಳಿ.

ಮನೆಯ ವಾತಾವರಣ ಚೆನ್ನಾಗಿರಲಿ

ಇನ್ನು, ಮನೆಯಲ್ಲಿನ ಸಣ್ಣ ಕಣಗಳಿಂದಲೂ ಉಸಿರಾಟದ ಮೇಲೆ ಪರಿಣಾಮ ಬೀರಲಿದೆ. ಹೀಗಾಗಿ ಏರ್‌ಫಿಲ್ಟರ್ ಬಳಸುವುದು ಕಡಿಮೆ ಮಾಡಿ, ಮನೆಯನ್ನು ಸ್ವಚ್ಛವಾಗಿಡಿ, ಗಾಢ ಸುವಾಸನೆ ಇರುವ ರಾಸಾಯನಿಗಳನ್ನು ಬಳಸದಿರಿ. ಇವೆಲ್ಲ ನಿಮ್ಮ ಉಸಿರಾಟವನ್ನು ಶುಚಿಯಾಗಿಡುತ್ತದೆ.

ಆರೋಗ್ಯಕರ ಆಹಾರವನ್ನು ಸೇವಿಸಿ

ಸಂಸ್ಕರಿಸಿದ ಆಹಾರಗಳು ಮತ್ತು ಸಕ್ಕರೆ ಪಾನೀಯಗಳನ್ನು ಸೀಮಿತಗೊಳಿಸುವುದು ಆರೋಗ್ಯಕರ ತೂಕವನ್ನು ಕಾಪಾಡಿಕೊಳ್ಳಲು ಉತ್ತಮ. ಇದು ಆಸ್ತಮಾದ ತೀವ್ರತೆಯನ್ನು ಕಡಿಮೆ ಮಾಡುತ್ತದೆ. ❖

ಕುದುರೆ ಮಾಡೆಲಿಂಗ್ ಪ್ರಸಂಗ...

ಕಲೆ

ಜಗನ್ನಾಥ ಪ್ರಕಾಶ

ಮೊನ್ನೆ ಮೊನ್ನೆ ಬಿಳಿ ಬಣ್ಣದ ಕುದುರೆಯೊಂದು ರಾಜಗಾಂಭೀರ್ಯದಿಂದ ಕರ್ನಾಟಕ ಚಿತ್ರಕಲಾ ಪರಿಷತ್ತಿನ ಆವರಣದಲ್ಲಿ ನಡೆದಾಡುತ್ತಿತ್ತು. ಈಚೆಗೆ ರಾಜಕೀಯ ಪಕ್ಷಗಳ ನಾಯಕರುಗಳು 'ಅಶ್ವಮೇಧಯಾಗ'ದ ಕುದುರೆ ಬಿಟ್ಟಿರುವ ಮಾತುಗಳನ್ನಾಡಿದ್ದರಲ್ಲವಾ. ಆ ಕುದುರೆಯೇನಾದರೂ ಈ ಕಡೆಗೆ ಬಂದಿರಬಹುದೇ ಎಂದು ಊಹಿಸಿದೆ..

ಆದರೆ ನನ್ನ ಊಹೆ ತಪ್ಪಾಗಿತ್ತು. ಅದು ಚಿತ್ರಕಲಾ ವಿದ್ಯಾರ್ಥಿಗಳಿಗೆ ಸ್ಕೆಚ್ ಮಾಡಿ ಮಾಡಿಸಲು ಕರೆಸಲಾಗಿದ್ದ ನೈಜ ಕುದುರೆಯಾಗಿತ್ತು. ಪರಿಷತ್ತಿನ ಆವರಣದ ಪುಟ್ಟ ಮೈದಾನದಲ್ಲಿ ನಾಲ್ಕೈದು ಗಂಟೆ ರೂಪದರ್ಶಿಯಾಗಿ ನಿಂತಿದ್ದ ಈ ಹಯವದನ ವಿದ್ಯಾರ್ಥಿಗಳ ಕ್ಯಾನ್‌ವಾಸ್‌ಗಳಲ್ಲಿ ಅರಳಿನಿಂತ. ಸುತ್ತಲೂ ಹತ್ತಾರು ಕಿರಿಯ ಹಿರಿಯ ಕಲಾ ವಿದ್ಯಾರ್ಥಿಗಳು ಸಮೀಪದಲ್ಲೇ ನಿಂತು ತದೇಕ ಚಿತ್ತದಿಂದ ನೋಡಿದಾಗಲೂ ಕುದುರೆ ಹೆದರಲಿಲ್ಲ, ಬೆದರಲಿಲ್ಲ.

ಚಿತ್ರಕಲಾಕೃತಿಗಳು ನೈಜವಾಗಿ, ಸೃಜನಾತ್ಮಕವಾಗಿ ಮೂಡಿ ಬರಲು ರೂಪದರ್ಶಿಗಳನ್ನು ಕಲಾವಿದರು ಉಪಯೋಗಿಸುವುದು ಸಾಮಾನ್ಯ. ಆದರೂ ಪ್ರಾಣಿ ಪಕ್ಷಿಗಳನ್ನು ನೈಜವಾಗಿ ನಿಲ್ಲಿಸಿಕೊಳ್ಳುವುದು ಅಪರೂಪ.

ನಗರದಲ್ಲಿ ಜಟಕಾ ಗಾಡಿಗಳು ಕಣ್ಮರೆಯಾಗಿದ್ದು, ಆ ಗಾಡಿಗಳಿಗೆ ಹೂಡುವ ಕುದುರೆಗಳೂ ಈಗ ಕಾಣುವುದು ಬಹಳ ವಿರಳ. ಜೂಜಿಗೆ ಉಪಯೋಗಿಸುವ ದುಬಾರಿ ಕುದುರೆಗಳು ರೂಪದರ್ಶಿಗಳಾಗಿ ಬಂದು ನಿಲ್ಲಲು ಆಗದು.





ಚಿತ್ರಕಲಾಪರಿಷತ್ ಆವರಣದಲ್ಲಿ ರೂಪದರ್ಶಿಯಾಗಿರುವ ಕುದುರೆಯ ಚಿತ್ರ ಬಿಡಿಸುತ್ತಿರುವ ಚಿತ್ರಕಲಾ ವಿದ್ಯಾರ್ಥಿಗಳು. ಕುದುರೆ ಚಿತ್ರ ಬಿಡಿಸುತ್ತಿರುವ ಚಿತ್ರಕಲಾ ವಿದ್ಯಾರ್ಥಿನಿ

ಪ್ರಾಣಿ ಪಕ್ಷಿಗಳನ್ನು ರಚಿಸುವಾಗ ಅವುಗಳ ಅಂಗಾಂಗ, ಎತ್ತರ ಬಿತ್ತರಗಳು ಸಮಪ್ರಮಾಣದಲ್ಲಿದ್ದರೆ ಮಾತ್ರ ನೋಡಲು ಚಂದ. ಆದ್ದರಿಂದಲೇ ಚಿತ್ರಕಲೆಗೆ ಬುನಾದಿ ಒದಗಿಸುವ ನೈಜ ಪ್ರಾಣಿಗಳ ಮಾಡೆಲಿಂಗ್ ಈಗಲೂ ಇದೆ.

ಚಿತ್ರಕಲಾ ಪರಿಷತ್ತಿನಲ್ಲಿ ಆಗಾಗ ನಡೆಯುವ ಕುದುರೆ ಮಾಡೆಲಿಂಗ್‌ಗಾಗಿ ಜಟಕಾದ ಮಾಲೀಕ ಬಾಷಾ ಈ ಕುದುರೆಯನ್ನು ಬಾಡಿಗೆ ಮೇಲೆ ಕೊಡುತ್ತಾರೆ. ಜೀವನೋಪಾಯವೂ ಆಯಿತು. ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ವ್ಯಾಸಂಗವೂ ಆಯಿತು.

ಪರಿಸರ

ಶುದ್ಧವಾಗಿರಲಿ ಮನೆಯೊಳಗಿನ ಗಾಳಿ

ಹೊರಗಿನ ಮಾಲಿನ್ಯದ ಬಗ್ಗೆ ಸದಾ ಚಿಂತಿಸುವ ನಾವು ಮನೆಯೊಳಗಿನ ಮಾಲಿನ್ಯವನ್ನು ಮರೆತು ಬಿಡುವುದೇ ಹೆಚ್ಚು. ಆದರೆ ನಮ್ಮ ಆರೋಗ್ಯದ ಮೂಲ ಅಡಗಿರುವುದು ಈ ನಾಲ್ಕು ಗೋಡೆಗಳ ನಡುವಿನ ಗಾಳಿಯ ಗುಣದಲ್ಲಿ. ಮನೆಯೊಳಗಿನ ಗಾಳಿಯನ್ನು ಶುದ್ಧವಾಗಿಡುವುದು ಹೇಗೆ? ಇಲ್ಲಿದೆ ಮಾಹಿತಿ...



ಸುಶೀಲಾ ಡೋಣೂರ

ಮನೆಯ ವಾತಾವರಣ ಆರಾಮದಾಯಕವಾಗಿರಬೇಕು, ಸ್ವಚ್ಛವಾಗಿರಬೇಕು, ಆಹ್ಲಾದಕರವಾಗಿರಬೇಕು ಎನ್ನುವುದು ಪ್ರತಿಯೊಬ್ಬರ ಇಂಗಿತ. ಆದರೆ ಈ ಕುಳಿರ್ಗಾಳಿಗೆ ಅಳುಕಿ ಕಿಟಕಿ-ಬಾಗಿಲುಗಳನ್ನು ಭದ್ರಪಡಿಸುವ ಕಾರಣ ಮಳೆ, ಚಳಿಗಾಲಗಳಲ್ಲಿ ಶುದ್ಧ ಗಾಳಿಗೆ ಮಿತಿಯೊಡ್ಡುವುದೇ ಹೆಚ್ಚು. ಇದರಿಂದ ಮನೆಗೂ-ಮನಸಿಗೂ-ಆರೋಗ್ಯಕ್ಕೂ ಗಂಡಾಂತರ ಎದುರಾಗಬಹುದು.

ಒಳಾಂಗಣ ಗಾಳಿಯಲ್ಲಿ ಕಂಡುಬರುವ ಭೌತಿಕ, ರಾಸಾಯನಿಕ ಮತ್ತು ಜೈವಿಕ ಮಾಲಿನ್ಯಕಾರಕಗಳು ಹೊರಾಂಗಣಕ್ಕಿಂತ ಹೆಚ್ಚು ಅಪಾಯಕಾರಿ ಎನ್ನುತ್ತವೆ ಅಧ್ಯಯನಗಳು. ಮುಚ್ಚಿದ ಕೊಠಡಿಯಲ್ಲಿ ಈ ಮಾಲಿನ್ಯಗಳು ಹಲವು ರೀತಿಯ ಅನಾರೋಗ್ಯಕ್ಕೆ ಕಾರಣವಾಗುತ್ತವೆ.

ಮನೆಯಲ್ಲಿನ ಗಾಳಿ ಅಶುದ್ಧವಾಗುವುದರಿಂದ ಎದುರಾಗುವ ಸಮಸ್ಯೆಗಳು ಒಂದೆರಡಲ್ಲ. ಮನೆಯ ಗೋಡೆ-ಕಿಟಕಿ-ಬಾಗಿಲು ಬೂಸ್ಟು ಹಿಡಿಯುವುದರಿಂದ ಹಿಡಿದು, ಶೇಖರಿಸಿಟ್ಟ ದಿನಸಿಗಳು ಕೆಡುವುದು, ಮಾನಸಿಕ ಕಿರಿಕಿರಿ, ಆಯಾಸ, ಬಳಲಿಕೆ ಹಾಗೂ ಕೆಮ್ಮು, ತಲೆನೋವು, ಕಣ್ಣು-ಮೂಗಿನ ಉರಿತ, ಕೆರೆತ, ಗಂಟಲು ನೋವು, ಉಸಿರಾಟದಲ್ಲಿ ತೊಂದರೆಯಂತಹ ಆರೋಗ್ಯ ವ್ಯತ್ಯಾಸಗಳೂ ಎದುರಾಗಬಹುದು. ಅದರಲ್ಲೂ ಅಸ್ತಮಾ ರೋಗಿಗಳ ಮೇಲೆ ಮನೆಯೊಳಗಿನ ವಾತಾವರಣ ಹೆಚ್ಚಿನ ಪ್ರಭಾವ ಬೀರುತ್ತದೆ.

ಅಡುಗೆ ಮಾಡುವ, ಶುಚಿಗೊಳಿಸುವ ಸಾಮಗ್ರಿಗಳು ಮತ್ತು ಇತರ ದಿನನಿತ್ಯದ ಚಟುವಟಿಕೆಗಳು ಮನೆಯೊಳಗೆ ರಾಸಾಯನಿಕಗಳನ್ನು ಉತ್ಪತ್ತಿ ಮಾಡುತ್ತವೆ. ಅದರಲ್ಲೂ ಮುಖ್ಯರಸ್ತೆಗೆ ಹೊಂದಿಕೊಂಡಂತಿರುವ ಮನೆಗಳಲ್ಲಿ ವಾಹನಗಳ ಮಾಲಿನ್ಯವೂ ಜಮೆಯಾಗುವುದರಿಂದ ಆತಂಕ ಹೆಚ್ಚು.

ಅದೃಷ್ಟವಶಾತ್, ಮನೆಯಲ್ಲಿನ ಗಾಳಿಯ ಗುಣಮಟ್ಟವನ್ನು ಸುಧಾರಿಸುವ ಮಾರ್ಗಗಳಿವೆ ಎನ್ನುವುದು ಸಮಾಧಾನದ ಸಂಗತಿ. ಉದಾಹರಣೆಗೆ ಗಾಳಿಯ ನಾಳಗಳು, ಕುಲುಮೆಗಳು (ಅಗ್ಗಿಷ್ಟಿಕೆ), ಏರ್ ಪ್ಯೂರಿಫೈಯರ್‌ಗಳು, ಹ್ಯೂಮಿಡಿಫೈಯರ್‌ಗಳನ್ನು ಬಳಸುವ ಮೂಲಕ ತಕ್ಕ ಮಟ್ಟಿಗೆ ಮನೆಯ ವಾತಾವರಣವನ್ನು ಸಹ್ಯಗೊಳಿಸಬಹುದು.



ಮನೆಯಲ್ಲಿ ಗಾಳಿಯ ಗುಣಮಟ್ಟವನ್ನು ಕಾಪಾಡಲು ಕೆಲವು ಸೂತ್ರಗಳು ಇಲ್ಲಿವೆ:

ಸ್ವಚ್ಛಗೊಳಿಸಿ...

ಮೊದಲ ಹೆಜ್ಜೆ ಮನೆಯನ್ನು ಆಗಾಗ್ಗೆ ಸ್ವಚ್ಛಗೊಳಿಸುವುದು. ಬೆಡ್‌ಶೀಟ್, ಮ್ಯಾಟ್, ಟವೆಲ್‌ಗಳನ್ನು ನಿಯಮಿತವಾಗಿ ಬದಲಾಯಿಸುವುದು ಮನೆಯ ವಾತಾವರಣವನ್ನು ಶುದ್ಧವಾಗಿಡುವಲ್ಲಿ ನೆರವಾಗುತ್ತದೆ.

ಆರ್ದ್ರತೆಯ ಮಟ್ಟವನ್ನು ಪರಿಶೀಲಿಸಿ

ಮನೆಯೊಳಗಿನ ಆರ್ದ್ರತೆಯ ಮಟ್ಟವನ್ನು ಕಾಪಾಡುವುದು ಬಹಳ ಮುಖ್ಯ. ಅದಕ್ಕಾಗಿ ಡಿಹ್ಯೂಮಿಡಿಫೈಯರ್ ಗಳು ಮತ್ತು ಆರ್ದ್ರಕಗಳು ಸಹಾಯಕವಾಗುತ್ತವೆ. ಸಾಮಾನ್ಯವಾಗಿ ಆರ್ದ್ರತೆಯ ಮಟ್ಟವು ಶೇ 40 ರಿಂದ 60ರಷ್ಟು ಇರಬೇಕು. ಮನೆಯ ಆರ್ದ್ರತೆಯ ಮಟ್ಟವನ್ನು ಹೈಗ್ರೋಮೀಟರ್ ಬಳಸಿ ಪರಿಶೀಲಿಸಬಹುದು. ನೋಡಲು ಥರ್ಮಾಮೀಟರ್‌ನಂತೆ ಕಾಣುವ ಹೈಗ್ರೋಮೀಟರ್ ಯಾವುದೇ ಹಾರ್ಡ್‌ವೇರ್ ಅಂಗಡಿಗಳಲ್ಲಿ, ಸೂಪರ್ ಮಾರ್ಕೆಟ್‌ಗಳಲ್ಲಿ ಸಿಗುತ್ತದೆ.

ಹ್ಯೂಮಿಡಿಫೈಯರ್

ಕೊಠಡಿಯ ಆರ್ದ್ರತೆಯನ್ನು ಹೆಚ್ಚಿಸಿ ಮನೆಯ ವಾತಾವರಣವನ್ನು ಸಹ್ಯವಾಗಿಸಲು ಹ್ಯೂಮಿಡಿಫೈಯರ್‌ಗಳನ್ನು ಬಳಸಬಹುದು. ಇದು ನೀರನ್ನು ಹೀರಿಕೊಳ್ಳುವ ಫಿಲ್ಟರ್ ಮತ್ತು ಫಿಲ್ಟರ್‌ನಿಂದ ತೇವಾಂಶವನ್ನು ಗಾಳಿಯಲ್ಲಿ ಬಿಡುವ ಫ್ಯಾನ್‌ಗಳನ್ನು ಹೊಂದಿರುತ್ತದೆ.
ವಿವಿಧ ಪ್ರಕಾರಗಳು ಮತ್ತು ಗಾತ್ರಗಳಲ್ಲಿ ಲಭ್ಯವಿರುವ ಹ್ಯೂಮಿಡಿಫೈಯರ್‌ಗಳಲ್ಲಿ ನಿಮ್ಮ ಆದ್ಯತೆಗೆ ಅನುಗುಣವಾಗಿ ಆಯ್ಕೆ ಮಾಡಿಕೊಳ್ಳಬಹುದು. ಆದರೆ ಇದನ್ನು ಆಗಾಗ್ಗೆ ಸ್ವಚ್ಛಗೊಳಿಸುವುದು ಮತ್ತು ಅದರ ಫಿಲ್ಟರ್‌ಗಳನ್ನು ನಿಯಮಿತವಾಗಿ ಬದಲಿಸುವುದು ಮುಖ್ಯ.

ಡಿಹ್ಯೂಮಿಡಿಫೈಯರ್

ಹಾಗೆಯೇ ಗಾಳಿಯಲ್ಲಿರುವ ಹೆಚ್ಚುವರಿ ತೇವಾಂಶವನ್ನು ತೆಗೆದುಹಾಕಲು ಡಿಹ್ಯೂಮಿಡಿಫೈಯರ್ ಸಹಾಯ ಮಾಡುತ್ತದೆ. ಮನೆಯ ಗೋಡೆ, ಕಿಟಕಿ, ಸೀಲಿಂಗ್ ಮೇಲೆ ಒದ್ದೆಯಾದ ಕಲೆಗಳು ಕಂಡುಬಂದಲ್ಲಿ ಡಿಹ್ಯೂಮಿಡಿಫೈಯರ್‌ನ ಅಗತ್ಯವನ್ನು ಮನಗಾಣಬೇಕು. ಮನೆಯ ನೆಲಮಾಳಿಗೆ(ಬೇಸ್‌ಮೆಂಟ್), ಬಾಲ್ಕನಿ, ಸ್ನಾನಗೃಹ ಮತ್ತು ಲಾಂಡ್ರಿ ಪ್ರದೇಶಗಳಲ್ಲಿ ಡಿಹ್ಯೂಮಿಡಿಫೈಯರ್ ಅನ್ನು ಹೊಂದಿಸಬಹುದು.

ನೈಸರ್ಗಿಕ ಉತ್ಪನ್ನಗಳ ಬಳಕೆ

ಸ್ವಚ್ಛವಾದ, ಆಹ್ಲಾಕರ ವಾತಾವರಣಕ್ಕಾಗಿ ಮನೆಯನ್ನು ಸ್ವಚ್ಛಗೊಳಿಸಲು ರಾಸಾಯನಿಕಮುಕ್ತವಾದ ನೈಸರ್ಗಿಕ ಉತ್ಪನ್ನಗಳನ್ನು ಬಳಸಿ. ಇದರಿಂದ ಗಾಳಿಯಲ್ಲಿ ಬಿಡುಗಡೆಯಾಗುವ ಮಾಲಿನ್ಯಕಾರಕಗಳ ಪ್ರಮಾಣ ತಗ್ಗುತ್ತದೆ.

ಗಾಳಿಯನ್ನು ಶುದ್ಧೀಕರಿಸಿ

ದೂಳಿನ ಅಲರ್ಜಿ ಹೊಂದಿರುವವರು ಮನೆಯಲ್ಲಿ ಶುದ್ಧವಾದ ವಾತಾವರಣವನ್ನು ಕಾಪಾಡಲು ಏರ್ ಪ್ಯೂರಿಫೈಯರ್‌ಗಳನ್ನು ಬಳಸುವುದು ಸೂಕ್ತ. ಇವು ಫಿಲ್ಟರ್ (ಅಥವಾ ಬಹು ಫಿಲ್ಟರ್‌ಗಳು) ಮತ್ತು ಫ್ಯಾನ್ ಅನ್ನು ಹೊಂದಿದ್ದು, ಗಾಳಿಯಲ್ಲಿನ ಮಾಲಿನ್ಯಕಾರಕಗಳನ್ನು ಮತ್ತು ಇತರ ಕಣಗಳನ್ನು ಹಿಡಿದು, ನಂತರ ಫಿಲ್ಟರ್ ಮಾಡಿದ ಗಾಳಿಯನ್ನು ಮನೆಯಲ್ಲಿ ಬಿಡುಗಡೆ ಮಾಡುತ್ತವೆ.

ಒಮ್ಮೊಮ್ಮೆ ಶುದ್ಧಗಾಳಿ ಮನೆಯೊಳಗೆ ಬರದಿದ್ದಾಗ ಏರ್ ಪ್ಯೂರಿಫೈಯರ್‌ಗಳು ಅನಿವಾರ್ಯ. ಆದರೆ ಮನೆಯಲ್ಲಿ ನೈಸರ್ಗಿಕವಾಗಿ ಹರಿದಾಡುವ ತಾಜಾ ಗಾಳಿಗೆ ಸಮನಾದುದು ಯಾವುದೂ ಇಲ್ಲ. ಹೆಚ್ಚು ವಾಹನದಟ್ಟಣೆಯಿಲ್ಲದ ಪ್ರದೇಶದಲ್ಲಿರುವವರು ಚಳಿಗಾಲದಲ್ಲಿಯೂ ಮಧ್ಯಾಹ್ನದ ಹೊತ್ತು ಕಿಟಕಿಗಳನ್ನು ತೆರೆಯಲು ಮರೆಯಬಾರದು. ಇನ್ನೊಂದು ಮಹತ್ವದ ಸಂಗತಿ ಎಂದರೆ ಮನೆಯ ಒಳಹೊರಗೂ ಹಸಿರು ಬೆಳೆಸುವುದರಿಂದ ಗಾಳಿಯ ಗುಣಮಟ್ಟವನ್ನು ಹೆಚ್ಚಿಸಬಹುದು.

ನೃತ್ಯ



ಲೇಖನಾ, ಪುಣ್ಯಶ್ರೀ ಭರತನಾಟ್ಯ ನಾಳೆ

ಸಾಧನ ಸಂಗಮ ನೃತ್ಯ ಕೇಂದ್ರದ ಸಂಸ್ಥಾಪಕರಾದ ಜ್ಯೋತಿ ಪಟ್ಟಾಭಿರಾಮ್ ಮತ್ತು ಡಾ. ಸಾಧನಾಶ್ರೀ ಪಿ. ಅವರ ಶಿಷ್ಯೆಯರಾದ ಲೇಖನಾ ಎಂ. ಹಾಗೂ ಪುಣ್ಯಶ್ರೀ ಎ.ಎಸ್ ಅವರು, ಇದೇ ಭಾನುವಾರ(ಮೇ.14)ರಂದು 'ಗೆಜ್ಜೆ ಪೂಜೆ' ನೆರವೇರಿಸಿ, ಭರತನಾಟ್ಯ ಪ್ರದರ್ಶನ ನೀಡುತ್ತಿದ್ದಾರೆ.

ಅಂದು ಸಂಜೆ 5.30ಕ್ಕೆ ಬಸವೇಶ್ವರ ನಗರದ ಸಾಧನಾ ಸಂಗಮದ ರಂಗೋಪನಿಷತ್ ಸಭಾಂಗಣದಲ್ಲಿ 'ಗೆಜ್ಜೆ ಪೂಜೆ' ನೃತ್ಯ ಕಾರ್ಯಕ್ರಮ ನಡೆಯಲಿದೆ.

ಗೆಜ್ಜೆಪೂಜೆ ನಟುವಾಂಗದಲ್ಲಿ ಡಾ. ಸಾಧನಾಶ್ರೀ ಪಿ ಮತ್ತು ವಿದುಷಿ ರಂಜನಾ ನಾಗರಾಜ್, ಗಾಯನದಲ್ಲಿ ಡಾ. ರಮ್ಯಾ ಸೂರಜ್, ಮೃದಂಗದಲ್ಲಿ ವಿದ್ವಾನ್ ವಿನಯ್ ನಾಗರಾಜನ್, ಕೊಳಲು ವಾದನದಲ್ಲಿ ವಿದ್ವಾನ್ ಶಶಾಂಕ್ ಜೋಡಿದಾರ್, ಪಿಟೀಲು ವಾದನದಲ್ಲಿ ವಿದ್ವಾನ್ ಕೃಷ್ಣ ಕಶ್ಯಪ್ ಪಾಲ್ಗೊಳ್ಳಲಿದ್ದಾರೆ.

ನೃತ್ಯಗಾರ್ತಿಯರ ಪರಿಚಯ: ಲೇಖನಾ ಎಂ. ಅವರು ಕಡಂಬಿ ವಿದ್ಯಾ ಕೇಂದ್ರದ 10ನೇ ತರಗತಿ ವಿದ್ಯಾರ್ಥಿನಿ. ಪುಣ್ಯಶ್ರೀ ಎ.ಎಸ್. ಅವರು ಮೌರ್ಯ ಪಬ್ಲಿಕ್ ಸ್ಕೂಲ್‌ನ 10ನೇ ತರಗತಿ ವಿದ್ಯಾರ್ಥಿನಿ. ಇವರಿಬ್ಬರೂ ಅಖಿಲ ಭಾರತ ಗಂಧರ್ವ ಮಹಾವಿದ್ಯಾಲಯ ನಡೆಸುವ 5ನೇ ಹಂತದ ಪರೀಕ್ಷೆಯನ್ನು ಹಾಗೂ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ಜೂನಿಯರ್ ಪರೀಕ್ಷೆಯಲ್ಲಿ ಶೇ 90 ಅಂಕದೊಂದಿಗೆ ಉತ್ತೀರ್ಣರಾಗಿದ್ದಾರೆ. ಸಾಧನಾ ಸಂಗಮದ ಬಹುತೇಕ ಕಾರ್ಯಕ್ರಮಗಳಲ್ಲಿ ಪ್ರದರ್ಶನ ನೀಡಿರುವ ಇವರು ಓದಿನಲ್ಲೂ ಉತ್ತಮ ವಿದ್ಯಾರ್ಥಿನಿಯರು ಅನಿಸಿಕೊಂಡಿದ್ದಾರೆ.

ಲೇಖನಾ ನೃತ್ಯದಲ್ಲಷ್ಟೇ ಅಲ್ಲದೇ ಅಬಾಕಸ್ ರಾಜ್ಯ ಮಟ್ಟದ ಸ್ಪರ್ಧೆಗಳಲ್ಲಿ ಪಾಲ್ಗೊಂಡು ಮೆಚ್ಚುಗೆ ಗಳಿಸಿಕೊಂಡಿದ್ದಾರೆ. ಅಲ್ಲದೆ, ಸದ್ಗುರು ಸಂಗೀತ ಶಾಲೆಯ ಗುರು ವಿದುಷಿ ವಿಜಯಲಕ್ಷ್ಮಿ ರಾಜೀವ್ ಅವರಲ್ಲಿ ಕರ್ನಾಟಕ ಶಾಸ್ತ್ರೀಯ ಸಂಗೀತ ಅಭ್ಯಾಸ ಮಾಡುತ್ತಿದ್ದಾರೆ. ಹಾಗೆಯೇ ಪುಣ್ಯಶ್ರೀ ಅವರು ಕ್ರೀಡೆ, ರಂಗಭೂಮಿ ಕ್ಷೇತ್ರದಲ್ಲೂ ತೊಡಗಿಸಿಕೊಂಡಿದ್ದು, ಮೃದಂಗ ಅಭ್ಯಾಸ ಮುಂದುವರಿಸಿದ್ದಾರೆ.

ಗೆಜ್ಜೆಪೂಜೆ: ನಾಟ್ಯ ಕಲಾವಿದ್ಯಾರ್ಥಿಗಳಿಗೆ ಕಲಿಕೆಯ ನಡುವೆ 'ಗೆಜ್ಜೆಪೂಜೆ' ಪರೀಕ್ಷಾರ್ಥ ಪ್ರದರ್ಶನ ಇದ್ದಂತೆ. ಈ ಸವಾಲು ಸ್ವೀಕರಿಸಿ, ಜೊತೆಯಾಗಿ ಹೆಜ್ಜೆ ಹಾಕಲು ಸಿದ್ಧರಾಗಿದ್ದಾರೆ ಲೇಖನಾ ಮತ್ತು ಪುಣ್ಯಶ್ರೀ.

ನೃತ್ಯ ಗುರುಗಳಾದ ಜ್ಯೋತಿ ಪಟ್ಟಾಭಿರಾಮ್ ಮತ್ತು ಡಾ. ಸಾಧನಾಶ್ರೀ ಪಿ. ಅವರ ಮಾರ್ಗದರ್ಶನ ಹಾಗೂ ಪೋಷಕರ ಪ್ರೋತ್ಸಾಹ ಇವರ ವಿಶ್ವಾಸವನ್ನು ಇಮ್ಮಡಿಗೊಳಿಸಿದೆ.

ವಿಜಯ್ ಹುಟ್ಟುಹಬ್ಬಕ್ಕೆ 'ಖುಷಿ' ಗಿಫ್ಟ್



'ಖುಷಿ' ಸಿನಿಮಾದ ದೃಶ್ಯ

ಟಾಲಿವುಡ್ ಚಿತ್ರರಂಗದ ಖ್ಯಾತ ನಟ ವಿಜಯ್ ದೇವರಕೊಂಡ ಹುಟ್ಟುಹಬ್ಬದ ಸಂಭ್ರಮದಲ್ಲಿದ್ದಾರೆ. ವಿಜಯ್ ಜನುಮದಿನದ ವಿಶೇಷಕ್ಕಾಗಿ ಖುಷಿ ಸಿನಿಮಾದ ಮೊದಲ ಹಾಡು ರಿಲೀಸ್ ಮಾಡಲಾಗಿದೆ. 'ನನ್ನ ರೋಜಾ ನೀನೇ' ಎಂಬ ಮೆಲೋಡಿ ಟ್ರ್ಯಾಕ್ ಬಿಡುಗಡೆಯಾಗಿದೆ.

ವಿ.ನಾಗೇಂದ್ರ ಪ್ರಸಾದ್ ಸಾಹಿತ್ಯ ಬರೆದಿರುವ ಈ ಹಾಡಿಗೆ ಹೇಶಾಮ್ ಅಬ್ದುಲ್ ವಹಾಬ್ ಧ್ವನಿಯಾಗುವುದರ ಜೊತೆಗೆ ಟ್ಯೂನ್ ಹಾಕಿದ್ದಾರೆ. ಲವರ್ ಬಾಯ್ ಆಗಿ ವಿಜಯ್ ದೇವರಕೊಂಡ ಕಾಣಿಸಿಕೊಂಡಿದ್ದು, ಸಮಂತಾ ನಾಯಕಿಯಾಗಿ ಅಭಿನಯಿಸಿದ್ದಾರೆ. ಕಾಶ್ಮೀರ ಭಾಗದಲ್ಲಿ ಇಡೀ ಹಾಡನ್ನು ಚಿತ್ರೀಕರಿಸಲಾಗಿದೆ.

ಪ್ಯಾನ್ ಇಂಡಿಯಾ ಮಟ್ಟದಲ್ಲಿ ತಯಾರಾಗಿರುವ ಖುಷಿ ಸಿನಿಮಾ ತೆಲುಗು, ಕನ್ನಡ, ಹಿಂದಿ, ಮಲಯಾಳಂ ಹಾಗೂ ತಮಿಳು ಭಾಷೆಯಲ್ಲಿಯೂ ತೆರೆಗೆ ಬರಲಿದೆ. ಮೈತ್ರಿ ಮೂವಿ ಬ್ಯಾನರ್ ಅಡಿಯಲ್ಲಿ ಅದ್ಧೂರಿಯಾಗಿ ನಿರ್ಮಿಸಿರುವ ಈ ಚಿತ್ರಕ್ಕೆ ಮಜಿಲಿ ಹಿಟ್ ನಿರ್ದೇಶಕ ಶಿವ ನರ್ವಣ ನಿರ್ದೇಶಿಸುತ್ತಿದ್ದಾರೆ. ನವೀನ್ ಯೆರ್ನೇನಿ ಮತ್ತು ಯಲಮಂಚಿಲಿ ಜಂಟಿಯಾಗಿ ನಿರ್ಮಿಸುತ್ತಿದ್ದಾರೆ.

ರೊಮ್ಯಾಂಟಿಕ್ ಲವ್ ಎಂಟರ್‌ಟೈನರ್ ಕಥಾಹಂದರ ಹೊಂದಿರುವ ಖುಷಿ ಸಿನಿಮಾ ಇದೇ ವರ್ಷ ಸೆಪ್ಟೆಂಬರ್ 1 ರಂದು ವಿಶ್ವಾದ್ಯಂತ ರಿಲೀಸ್ ಆಗಲಿದೆ. ಜಯರಾಮ್, ಮುರಳಿ ಶರ್ಮಾ, ಲಕ್ಷ್ಮೀ, ಅಲಿ, ವಿನ್ನಿಲ್ಲಾ ಕಿಶೋರ್, ರೋಹಿನಿ ಸೇರಿದಂತೆ ಹಲವರು ಚಿತ್ರದ ಭಾಗವಾಗಿದ್ದಾರೆ. ಹೇಷಂ ವಾಹಬ್ ಸಂಗೀತ, ಜಿ ಮುರಳಿ ಛಾಯಾಗ್ರಹಣ, ಪ್ರವೀಣ್ ಪುಡಿ ಸಂಕಲನ ಚಿತ್ರಕ್ಕಿದೆ.



ಅಮ್ಮ ನಿನ್ನ ಎದೆಯಾಳದಲ್ಲಿ

ಮೇ 14. ವಿಶ್ವ ತಾಯಂದಿರ ದಿನ. ವಾತ್ಸಲ್ಯ, ಮಮತೆ ಇವುಗಳ ರೂಪಕವೇ ಆಗಿರುವ ಅಮ್ಮನ ಕಾಳಜಿಯೊಂದು ಇದ್ದರೆ ಎಂಥ ಸೋಲನ್ನು ಸೋಲಿಸಬಹುದು. ದಣಿವರಿಯದೇ ದುಡಿಯುವ ಅಮ್ಮಂದಿರಿಗೂ ಆರೈಕೆಯ ಅಗತ್ಯವಿದೆ. ಇಡೀ ಕುಟುಂಬ ವ್ಯವಸ್ಥೆಯ ಬೇರುಗಳಂತಿರುವ ಅಮ್ಮಂದಿರ ಎದೆಯ ದನಿಗೆ ಕಿವಿಯಾಗೋಣ.

ಡಾ. ಶುಭಾ ಮಧುಸೂದನ್

ಇಪ್ಪತ್ತೇಳು ವರ್ಷದ ಸಮನ್ವಿತಾ ಸ್ನಾತಕೋತ್ತರ ಪದವೀಧರೆ. ಒಂದೂವರೆ ವರ್ಷದ ಮಗು ಇರುವ ಆಕೆಗೆ ಕೆಲಸಕ್ಕೂ ಹೋಗಬೇಕೆಂಬ ಆಸೆ. ಆದರೆ ಗಂಡ ಮತ್ತು ಅತ್ತೆಯಿಂದ ಅಸಹಕಾರ. ಕಲಿತ ವಿದ್ಯೆಗೆ ಬೆಲೆ ಇಲ್ಲವಲ್ಲ ಎಂದು ಒಮ್ಮೆಲೆ ಬೇಸರ ಬಂದರೆ, ಮಗು ಬಿದ್ದು ಪೆಟ್ಟುಮಾಡಿಕೊಂಡಾಗ, 'ಅಬ್ಬಾ! ಕೆಲಸಕ್ಕೆ ಹೋಗಿದ್ದರೆ ಮಗುವನ್ನು ನೋಡಿಕೊಳ್ಳಲು ಆಗುತ್ತಿರಲಿಲ್ಲ. ಮಗುವನ್ನು ನೋಡಿಕೊಳ್ಳದೇ ಹೋದರೆ ನಾನೊಬ್ಬ ತಾಯಿಯಾ' ಎಂಬ ಪ್ರಶ್ನೆ ಕಾಡುತ್ತದೆ. ಎರಡೂ ಸಂದರ್ಭಗಳಲ್ಲಿ ಅವಳ ಅಂತರಾತ್ಮ ಅವಳನ್ನು ಬಿಟ್ಟು ಬಿಡದೇ ಚುಚ್ಚುತ್ತದೆ.

ತಾಯಿಯ ಅನುಪಸ್ಥಿತಿಯಲ್ಲಿ ಮಗು ಭಾವಶೂನ್ಯವಾಗಿ ಬೆಳೆಯುವುದೇ ಎಂಬ ಅನುಮಾನದ ಜತೆಗೆ, ಅನುಭವವಿಲ್ಲದೆ ನಂತರ ಯಾರು ಕೆಲಸ ಕೊಡುತ್ತಾರೆ ಎಂಬ ಪ್ರಶ್ನೆಯೂ ಏಳುತ್ತದೆ. ತಾಯ್ತನ, ಮಗು ಹಾಗೂ ಮನೆಯ ದೇಖರೇಖಿ ನೋಡಿಕೊಳ್ಳಲಷ್ಟೇ ಬದುಕು ಸೀಮಿತವಾಯಿತೇನೋ ಎಂಬ ನೋವು ಇದ್ದೇ ಇರುತ್ತದೆ.

ಇದು ಒಂದು ಬಗೆಯ ಅಮ್ಮಂದಿರ ತೊಳಲಾಟವಾದರೆ. ಹಾಗೆಯೇ ಮನೆಯ ಅಷ್ಟೂ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸಿ ಮತ್ತೊಂದು ಕಡೆ ಉದ್ಯೋಗವನ್ನು ಅಷ್ಟೇ ಪರಿಣಾಮಕಾರಿಯಾಗಿ ನಿರ್ವಹಿಸುವ ಅಮ್ಮಂದಿರ ದೊಡ್ಡ ಪಡೆಯೇ ಇದೆ. ಅವರಲ್ಲಿಯೂ ಇರುವುದು ಮಗುವಿಗೆ ಸರಿಯಾಗಿ ಸಮಯ ನೀಡಲು ಸಾಧ್ಯವಾಗುತ್ತಿಲ್ಲವಲ್ಲ ಎಂಬ ಬೇಸರ. ಮನೆಯನ್ನು ಒಪ್ಪವಾಗಿ ನೋಡಿಕೊಳ್ಳಲು ಆಗುತ್ತಿಲ್ಲವಲ್ಲ ಎಂಬ ಹಳಹಳಿಕೆಯೇ.

ಮನೆ, ಗಂಡ, ಮಕ್ಕಳು, ಮೊಮ್ಮಕ್ಕಳು ಹೀಗೆ ಎಲ್ಲರನ್ನೂ ನೋಡಿಕೊಳ್ಳುವ ಅಮ್ಮಂದಿರ ಎದೆಯಲ್ಲಿ ಆಯಾ ಕಾಲಕ್ಕೆ ಹೊಸ ತಲ್ಲಣದ ನದಿಯೊಂದು ಗುಪ್ತವಾಗಿ ಹರಿಯುತ್ತಲೇ ಇರುತ್ತದೆ. ಅದರ ಹರಿಯುವಿಕೆಯ ದನಿಗೆ ಒಮೊಮ್ಮೆ ಓಗೊಟ್ಟು ಓಗೊಡದಂತಿರುವುದು ಅವಳಿಗೆ ಮಾತ್ರ ಸಾಧ್ಯ.

ಭವದ್ದು, ಭಾವದ್ದು ಎಂಥದ್ದೆ ಸಮಸ್ಯೆ ಬಂದರೂ ಮೊದಲು ತಟ್ಟುವುದು ಮಾತ್ರ ಹೃದಯಕ್ಕೆ. ಬದುಕಿನ ನಾನಾ ಹಂತಗಳುದ್ದಕ್ಕೂ ಇರುವ ಧರ್ಮಸಂಕಟಗಳ ನಡುವೆ ತನ್ನ ಬದುಕನ್ನು ನಗುತ್ತಲೇ ಕಳೆಯುವ ಕಲೆಯೊಂದು ಅವಳಿಗೆ ಯಾರು ಹೇಳಿಕೊಡದೆಯೇ ಸಿದ್ಧಿಸಿದೆ.

ಮಗು ಇಬ್ಬರದ್ದೂ ಆದ ಮೇಲೆ ಅದರ ಪೋಷಣೆಯಲ್ಲಿಯೂ ಇಬ್ಬರೂ ಜವಾಬ್ದಾರಿ ತೆಗೆದುಕೊಳ್ಳಬೇಕು ಎಂಬ ಉತ್ತೇಜನದಾಯಕ ತತ್ವವನ್ನು ಸಂಗಾತಿಯಾದವರು ಅಳವಡಿಸಿಕೊಂಡರೆ ಈ ಸಮಸ್ಯೆಗೆ ಪರಿಹಾರ ಸಿಕ್ಕಂತೆಯೇ. ಮಾತ್ರ ಹೃದಯ ಬಯಸುವುದು ಇಂಥ ಚಿಕ್ಕ ಪುಟ್ಟ ಸಾಂತ್ವನಭರಿತ ನಡೆಯನ್ನೇ. ಕುಟುಂಬದ ಸದಸ್ಯರು ನೀಡಬೇಕಾಗಿದ್ದು ಇಂಥ ಬೆಂಬಲವನ್ನೇ.

ಬೆಂಬಲವೇ ಬಲ

ಪ್ರೀತಿ, ವಾತ್ಸಲ್ಯ, ತ್ಯಾಗ, ಸಹನೆ ಇವೆಲ್ಲವೂ ಅಮ್ಮನೆಂಬ ಮೋಹಕರಾಗದ ರೂಪಕಗಳೇ ಆಗಿದ್ದರೂ, ಅವುಗಳನ್ನು ಹೊರತುಪಡಿಸಿಯೂ ಅಮ್ಮನೆದೆಯಲ್ಲಿ ಆ ಕ್ಷಣಕ್ಕೆ ಆಲಸಿತನವೋ, ಅಸಹನೆಯೂ ಒಡಮೂಡಿದರೆ ಅವಳನ್ನು ಜರೆದು, ಮನಸ್ಸಿಗೆ ಗಾಸಿ ಮಾಡುವ ಅಗತ್ಯವೇನೂ ಇರುವುದಿಲ್ಲ. ತಾಯಿಯಾದ ಮಾತ್ರಕ್ಕೆ ಪರಿಪೂರ್ಣತೆ ಇರಬೇಕು ಎಂದು ನಿರೀಕ್ಷೆ ಮಾಡುವುದೇ ತಪ್ಪು. ಬಂಧವಷ್ಟೆ ಅಲ್ಲ ಅದೊಂದು ದೊಡ್ಡ ಜವಾಬ್ದಾರಿಯೂ ಹೌದು. ಬದುಕಿನದ್ದಕ್ಕೂ ಪಾಲಿಸಬೇಕಾದ ಜವಾಬ್ದಾರಿ. ಸಣ್ಣ ಪುಟ್ಟ ತಪ್ಪುಗಳಾದಾಗ 'ನೀನೆಂಥ ತಾಯಿ' ಎನ್ನುವ ಆತ್ಮಘಾತುಕ ಮಾತುಗಳನ್ನು ಅವಳ ಮುಂದೆ ಆಡದೇ, ತಪ್ಪನ್ನು ನಾಜೂಕಾಗಿ ತೋರಿಸುವ ಪ್ರಯತ್ನ ಮಾಡೋಣ.

ದೇಹದಲ್ಲಿ ರೋಗನಿರೋಧಕ ಶಕ್ತಿಯೊಂದು ಊರ್ಜಿತಗೊಳ್ಳುವುದಕ್ಕೆ ಮೂಲಪ್ರೇರಣೆಯೇ ತಾಯಿಯ ಎದೆಹಾಲು. ತಾಯಿಯನ್ನು ಕೃತಜ್ಞತಾ ಭಾವದಲ್ಲಿ ನೋಡಬೇಕಾಗಿರುವುದು ಈ ಕಾರಣಕ್ಕಾಗಿಯೇ. ಮಗುವಿನ ಸಮಗ್ರ ಆರೋಗ್ಯದ ಮೂಲಾಧಾರವು ತಾಯಿಯ ಎದೆಹಾಲಿನಲ್ಲಿ ಅಡಗಿದೆ. ಅದಕ್ಕೆ ಆ ಹಾಲನ್ನು ಅಮೃತಸಮಾನವೆನ್ನುವುದು. ಹಾಗೊಮ್ಮೆ ಅವಳಲ್ಲಿ ಹಲ ಬಗೆಯ ಒತ್ತಡಕ್ಕೆ ಹಾಲು ವರ್ಧಿಸದೇ ಬತ್ತಿ ಹೋದರೆ, ಕೀಳರಿಮೆ ತುಂಬಬೇಕಾಗಿಲ್ಲ. ಅವಳನ್ನು ನಿಶ್ಚಿಂತೆಯಿಂದ ಇರಲು ಬಿಟ್ಟರೆ ಎದೆಹಾಲು ತಾನಾಗಿಯೇ ವೃದ್ಧಿಗೊಳ್ಳುತ್ತದೆ. ಇಡೀ ಕುಟುಂಬದ ನಿರ್ವಹಣೆಯನ್ನು ಮಾಡುವ ಅವಳ ಪ್ರತಿ ಹೆಜ್ಜೆಗೂ ಸಹಕಾರ, ಸಾಮರಸ್ಯ ತುಂಬಿದ ಪ್ರೀತಿ ತೋರಿಸಿದರೆ ಅವಳಾತ್ಮಕ್ಕೆ ಇನ್ನಷ್ಟು ಬಲ ತುಂಬಿದಂತೆ ಆಗುತ್ತದೆ.

ಹೆತ್ತರಷ್ಟೆ ತಾಯಿಯಲ್ಲ!

ಸೌದಾಮಿನಿ ಸಹಜವಾಗಿ ತಾಯಿ ಆಗಲು ಸಾಧ್ಯವಿರಲಿಲ್ಲ. ಹೀಗಾಗಿ ಮಗುವೊಂದನ್ನು ದತ್ತು ತೆಗೆದುಕೊಂಡು ಬೆಳೆಸಿದ್ದರು. ಮಗು ಶಿಸ್ತು ಕಲಿಯಲಿ ಎಂದು ಮನೆಗೆಲಸವನ್ನು ಮಾಡಿಸುತ್ತಿದ್ದರು. ಯಾರದ್ದೋ ಮಾತು ಕೇಳಿದ ಮಗು, 'ದತ್ತು ತೆಗೆದುಕೊಂಡಿದ್ದೆ ಮನೆಗೆಲಸ ಮಾಡಿಸಲಿಕ್ಕೆ' ಎಂದು ವಾದ ಮಾಡಲು ಶುರು ಮಾಡಿತು. ಮಾತೃ ಹೃದಯಕ್ಕೆ ದೊಡ್ಡ ಆಘಾತವೇ ಆಯಿತು. ಮಗುವಿನಲ್ಲಿ ಆದ ವ್ಯಕ್ತಿತ್ವ ದೋಷಕ್ಕೆ ಯಾರನ್ನು ಹೊಣೆ ಮಾಡುತ್ತೀರಿ?. ಹೆತ್ತವಳು ಮಾತ್ರ ತಾಯಿಯಾಗುವುದಲ್ಲ. ಪ್ರೀತಿ, ಕರುಣೆ, ಅಂತಃಕರಣ, ವಾತ್ಸಲ್ಯ ತೋರುವ ಮಮತಾಮಯಿಗಳೆಲ್ಲರೂ ತಾಯಿಯೇ. ಇದೊಂದು ವಿಚಾರವನ್ನು ಅರ್ಥ ಮಾಡಿಕೊಂಡರೆ ಸಾಕು. ವಾತ್ಸಲ್ಯದ ಮೂರ್ತಿಯಂತಿರುವ ಹೆಣ್ಣುಮಕ್ಕಳೆಲ್ಲರೂ ನಿಜದ ತಾಯಂದಿರೇ. ದುಡಿಯುವ ಕೈಗಳು ಸೋಲುತ್ತವೆ. ಅಮ್ಮಂದಿರಿಗೂ ದಣಿವಾಗುತ್ತದೆ. ಎಲ್ಲರ ಕಾಳಜಿ ಮಾಡುವ ಅವಳಿಗೆ ಆರೈಕೆ ಮಾಡುವ ಕೈಗಳು ಬೇಕಾಗುತ್ತವೆ.

ನಾಳೆ ಅಮ್ಮಂದಿರ ದಿನ. ಅಮ್ಮ ಎಂಬ ಜೀವ ಆಲದವೃಕ್ಷವಿದ್ದ ಹಾಗೆ. ತಂಪನ್ನೀಯುತ್ತಲೇ ಇಡೀ ಕುಟುಂಬವನ್ನು ಪೋಷಿಸುವ ಅವಳಿಗೆ ಪ್ರೀತಿಯ ಅಪ್ಪುಗೆ ನೀಡಿ. ದೂರವಿದ್ದರೆ ಕರೆ ಮಾಡಿ, ಮಾತನಾಡಿ. 'ಪ್ರತಿ ದಿನವೂ ನಿನ್ನದೇ ಆಗಿದ್ದರೂ, ಇದೊಂದು ದಿನವು ವಿಶೇಷವೇ ಅಮ್ಮ' ಎಂದು ಹೇಳಿ. ಅವಳು ಒಳಗೊಳಗೆ ಸಂಭ್ರಮಿಸುವುದನ್ನು ನೋಡಿ. ಇದರ ನಡುವೆಯೂ ಎಂದಿನಂತೆ ನಿಮಗೆ ಬುದ್ಧಿವಾದವನ್ನೂ ಹೇಳಬಹುದು!

ಲೇಖಕಿ ಮನೋಚಿಕಿತ್ಸಕರು

ಅಮ್ಮಂದಿರಿಗೆ ಕಿವಿಮಾತು

- ಅತಿಯಾದ ಜವಾಬ್ದಾರಿ ತೆಗೆದುಕೊಳ್ಳುವ ಅಗತ್ಯವಿಲ್ಲ.
- ಪರಿಪೂರ್ಣತೆಯ ಗೀಳು ಬೇಡ.
- ಪ್ರೀತಿ ಎಷ್ಟು ಕೊಟ್ಟರೂ ಸಾಲದು. ಯಾರಿಗೆ ಎಷ್ಟು ಕಾಳಜಿ, ಪ್ರೀತಿ ತೋರಿಸಬೇಕು ಅಷ್ಟನ್ನೇ ತೋರಿಸಿ.ಅತಿಯಾದ ಪ್ರೀತಿ, ಕಾಳಜಿ, ಭಾವಾನಾತ್ಮಕವಾಗಿ ಹಚ್ಚಿಕೊಳ್ಳುವುದನ್ನು ಮಾಡಬೇಡಿ.
- ತನಗೋಸ್ಕರ , ತನಗಾಗಿ ಸಮಯ ಮೀಸಲಿಡುವುದನ್ನು ಪ್ರತಿಯೊಬ್ಬ ತಾಯಿಯು ಕಲಿಯಬೇಕು. ತನಗಿಷ್ಟವಾದ ಹವ್ಯಾಸವನ್ನು ಮಾಡುವಷ್ಟು ಸಮಯವನ್ನು ಹೊಂದಿಸಿಕೊಳ್ಳುವುದನ್ನು ಕಲಿಯಬೇಕು.
- ಮನೆಯಲ್ಲಿರುವ ಗೃಹಿಣಿಯರು ಪ್ರಚಲಿತ ವಿದ್ಯಮಾನಗಳ ಕಡೆಗೆ ಕುತೂಹಲ ಕಣ್ಣುಗಳಾಗಿ. ಇದರಿಂದ ಸದಾ ಪ್ರಪಂಚದೊಟ್ಟಿಗೆ ಒಂದು ಸಂಪರ್ಕ ಇದ್ದ ಹಾಗೇ ಅನಿಸುತ್ತದೆ.
- ಮಕ್ಕಳಾದ ಮೇಲೆ ದೇಹ ದಢೂತಿಯಾಗಬಹುದು. ನಿತ್ಯ ಯೋಗಾಭ್ಯಾಸದಿಂದ ದೇಹದ ತೂಕವನ್ನು ಕಡಿಮೆ ಮಾಡಬಹುದು. ಧ್ಯಾನವನ್ನು ಕಲಿಯುವುದರಿಂದ ಮನಸ್ಸನ್ನು ಹತೋಟಿಗೆ ತರಬಹುದು. ಸ್ವಕಾಳಜಿಯನ್ನು ಇಟ್ಟುಕೊಳ್ಳಿ. ಸದಾ ಆತ್ಮವಿಶ್ವಾಸದಿಂದ ಇರಲು ಬೇಕಾದ ಶಿಸ್ತನ್ನು ರೂಢಿಸಿಕೊಳ್ಳಿ.

ಅಮ್ಮಾ... ಆರೋಗ್ಯ ಜೋಪಾನ

ಡಾ. ಉಷಾ ರವೀಂದ್ರ

ಕುಟುಂಬ ಸದಸ್ಯರ ಹೊಟ್ಟೆ ತಣ್ಣಗಿರಲಿ ಎಂದು ಸದಾ ಯೋಚಿಸುವ ಅಮ್ಮಂದಿರೆಲ್ಲ ತಮ್ಮ ದೈಹಿಕ ಹಾಗೂ ಮಾನಸಿಕ ಆರೋಗ್ಯದ ಬಗ್ಗೆ ಕಾಳಜಿ ಮಾಡುವುದು ಅಷ್ಟಕಷ್ಟೆ. ಬಹುತೇಕ ಅಮ್ಮಂದಿರ ಬದುಕು ಒತ್ತಡದಲ್ಲಿಯೇ ಕಳೆದು ಹೋಗುತ್ತದೆ. ದೈಹಿಕ, ಮಾನಸಿಕ, ವೃತ್ತಿ ಬದುಕು ಜತೆಗೆ ಸಾಮಾಜಿಕ ಒತ್ತಡಗಳು ಅವರನ್ನು ಇನ್ನಿಲ್ಲದಂತೆ ಹೈರಣಾಗಿಸುತ್ತವೆ. ಬಹುತೇಕ ಅಮ್ಮಂದಿರು ಎದುರಿಸುತ್ತಿರುವಂಥ ಕೆಲವು ಆರೋಗ್ಯ ಸಮಸ್ಯೆಗಳು ಹೀಗಿವೆ.

ಒತ್ತಡ: ತಾಯಿಯಾದ ಕ್ಷಣವೇ ಒತ್ತಡ ಆರಂಭವಾಗುತ್ತದೆ. ಜತೆಗೆ ಸಾಮಾಜಿಕ ನಿರ್ಬಂಧಗಳು ಅವಳೊಳಗೆ ಗೊಂದಲವನ್ನು ಸೃಷ್ಟಿಮಾಡುತ್ತದೆ. 'ಮಗು ಸರಿಯಾಗಿ ಊಟ ಮಾಡುತ್ತಿಲ್ಲ, ಕೂಸಿಗೆ ಬೇಕಾದಷ್ಟು ಎದೆಹಾಲು ಸಿಗುತ್ತಿಲ್ಲ', ಎ ಷ್ಟೇ ಕಾಳಜಿ ಮಾಡಿದರೂ ಮಗು ಹೇಳಿದ ಮಾತು ಕೇಳುತ್ತಿಲ್ಲ ಹೀಗೆ ಈ 'ಇಲ್ಲ'ಗಳು ಅವಳನ್ನು ಮತ್ತಷ್ಟು ಒತ್ತಡಕ್ಕೆ ದೂಡುತ್ತವೆ ಎನ್ನುವುದಂತೂ ನಿಜ. ಹಣಕಾಸಿನ ಕೊರತೆ ಇದ್ದುಬಿಟ್ಟರಂತೂ ಅವಳ ಒತ್ತಡದ ಪಾಡು ಹೇಳುವುದು ಕಷ್ಟ. ಜತೆಗೆ ಅಭದ್ರತೆಯೂ ಸೇರಿಕೊಂಡು ಬಿಟ್ಟರೆ ಆತಂಕ ಹಾಗೂ ಖಿನ್ನತೆ ಅವಳನ್ನು ಆವರಿಸಿಕೊಂಡು ಬಿಡುತ್ತದೆ.

ಮಲಬದ್ಧತೆ: ಹಲವು ತರಹದ ಒತ್ತಡವನ್ನು ನಿರಂತರವಾಗಿ ಅನುಭವಿಸುವುದರಿಂದ ಹೆಚ್ಚಿನ ತಾಯಂದಿರು ಮಲಬದ್ಧತೆಯಂಥ ಸಮಸ್ಯೆಯಿಂದ ನರಳುತ್ತಿರುತ್ತಾರೆ. ಆದರೆ ಹೇಳಿಕೊಳ್ಳುವುದಕ್ಕೂ ಮುಜುಗರ ಪಟ್ಟುಕೊಳ್ಳುತ್ತಾರೆ.

ಬಿ12 ಜೀವಸತ್ವದ ಕೊರತೆ: ಈಚೆಗೆ ಹಲವು ತಾಯಂದಿರಲ್ಲಿ ರಕ್ತಹೀನತೆಯ ಜತೆಗೆ ಬಿ12 ಜೀವಸತ್ವದಂಥ ಕೊರತೆಯೂ ಕಂಡುಬರುತ್ತಿದೆ. ಚಟುವಟಿಕೆ ಸಾಮಾನ್ಯವಾಗಿದ್ದರೂ ತೀವ್ರ ಸುಸ್ತು, ಮೆಟ್ಟಿಲು ಹತ್ತಲು ಆಗದಂಥ ಪರಿಸ್ಥಿತಿ ಇರುತ್ತದೆ. ಬಿ 12 ಜೀವಸತ್ವ ಕೊರತೆ ಇದ್ದವರಲ್ಲಿ ಊಟದ ವಾಸನೆ ಕಂಡರೂ ಆಗದಂಥ ಪರಿಸ್ಥಿತಿ ಇರುತ್ತದೆ. ಬಿ 12 ಜೀವಸತ್ವ ಮೊಟ್ಟೆ, ಹಾಲು, ಮೊಸರಿನಲ್ಲಿ ಹೇರಳವಾಗಿರುತ್ತದೆ.

ಹಾರ್ಮೋನ್ ವ್ಯತ್ಯಯ: ಆಹಾರ ಪದ್ಧತಿ, ಜೀವನಶೈಲಿಯಿಂದಾಗಿ ಹಾರ್ಮೋನ್‌ನಲ್ಲಿ ವ್ಯತ್ಯಾಸ ಉಂಟಾಗುತ್ತದೆ. ತಾಯಿಯಾದ ಕೂಡಲೇ ದೈಹಿಕವಾಗಿ ಹಲವು ಬದಲಾವಣೆಯಾಗುತ್ತವೆ. ಇದರಿಂದ ಶರೀರದ ತೂಕ ಹೆಚ್ಚುತ್ತದೆ. ಹಾರ್ಮೋನ್ ವ್ಯತ್ಯಾಸದಿಂದಾಗಿ ಋತುಚಕ್ರದಲ್ಲಿಯೂ ಏರುಪೇರು ಕಂಡುಬರಬಹದುದು.

ಮೂಳೆ ಸವೆತ: ಹಿಂದಿನ ಕಾಲದಲ್ಲಿ ಕುಳಿತು ಅಡುಗೆ ಮಾಡುವ ಪದ್ಧತಿ ಇತ್ತು. ಈಗ ಒಂದೇ ಸಮನೆ ನಿಂತು ಅಡುಗೆ ಮಾಡುವುದರಿಂದ ಮೂಳೆಗಳ ಸವೆತ, ಗಂಟುನೋವು ಕಾಣಬಹುದು. ಜತೆಗೆ ಕ್ಯಾಲ್ಸಿಯಂನ ಕೊರತೆಯೂ ಇದಕ್ಕೆ ಕಾರಣವಾಗಿರುತ್ತದೆ. ಮನೆಯವರಿಗೆಲ್ಲ ಊಟ ಬಡಿಸಿದ ಮೇಲೆಯೇ ಅವರು ಊಟ ಮಾಡುತ್ತಾರೆ. ಬದಲಾವಣೆ ಆಗಬೇಕಿರುವುದು ಇಲ್ಲಿ. ಬೆಳಿಗ್ಗೆದ್ದು ಗಡಿಬಿಡಿಯಲ್ಲಿ ಕಾಫಿ, ಟೀ ಕುಡಿದು ಹಸಿವು ನೀಗಿಸಿಕೊಳ್ಳುತ್ತಾರೆ. ಇದು ಸರಿಯಾದ ಕ್ರಮವಲ್ಲ. ಇದರಿಂದ ಹೊಟ್ಟೆಯುರಿ, ಉಬ್ಬರ, ಆ್ಯಸಿಡಿಟಿ ಆಗುತ್ತದೆ. ಇಡೀ ಕುಟುಂಬದ ಶ್ರೇಯೋಭಿವೃದ್ಧಿಗಾಗಿ ಪೂಜೆ, ವ್ರತ ಮಾಡುವ ಅಮ್ಮಂದಿರು ಅಗತ್ಯವಾಗಿ ಯೋಚನೆ ಮಾಡಬೇಕಿರುವುದು ಇಷ್ಟು. ಹಲವು ಗಂಟೆಗಳ ಕಾಲ ಆಹಾರ ಸೇವನೆ ಮಾಡದೇ ಇದ್ದರೆ ಆ್ಯಸಿಡಿಟಿಯ ಜತೆಗೆ ರಕ್ತದಲ್ಲಿ ಸಕ್ಕರೆಯ ಪ್ರಮಾಣ ಕಡಿಮೆಯಾಗುತ್ತದೆ. ಶೂನ್ಯ ಕ್ಯಾಲರಿಸ್ (ಎಂಟಿ ಕ್ಯಾಲರಿಸ್) ಸ್ಥಿತಿ ತಲುಪುತ್ತದೆ. ಇದು ಅನಾರೋಗ್ಯ ಸಮಸ್ಯೆಗಳನ್ನು ತಂದೊಡ್ಡಬಹುದು.

ಅಮ್ಮಂದಿರು ಗಟ್ಟಿಯಾಗಿದ್ದರೆ, ಎಲ್ಲರನ್ನು ಚೆನ್ನಾಗಿಯೇ ನೋಡಿಕೊಳ್ಳಬಹುದು. ಸ್ಪರ್ಧಾತ್ಮಕ ಜಗತ್ತಿನಲ್ಲಿ ಒತ್ತಡಗಳಿರುವುದು ಸಹಜ. ಇದಕ್ಕೆ ತಾಯಿಯೂ ಹೊರತಲ್ಲ. ಹಾಗೆಂದು ತನಗೋಸ್ಕರ ಹತ್ತು ನಿಮಿಷ ಮೀಸಲಿರಿಸಿಕೊಂಡು ಮನೆಯ ಇಷ್ಟದ ಜಾಗದಲ್ಲಿ ಧ್ಯಾನ ಮಾಡುವ ಅಭ್ಯಾಸ ಮಾಡಿಕೊಳ್ಳಬಹುದು. ಮನೆಗೆಲಸವನ್ನು ತಪ್ಪದೇ ಮಕ್ಕಳಿಗೆ ಹೇಳಿ ಕೊಡಿ. ಅಡುಗೆ, ಮನೆಯನ್ನು ಚೊಕ್ಕಟವಾಗಿಡುವುದು ಎಲ್ಲವೂ ಜೀವನ ಕೌಶಲ; ಇದನ್ನು ತಪ್ಪದೇ ಮಕ್ಕಳಿಗೆ ಕಲಿಸಿ. ಇದರಿಂದ ನಿಮಗೂ ಹೊರೆ ಕಡಿಮೆಯಾಗುತ್ತದೆ. ಮಕ್ಕಳಿಗೂ ಕೌಶಲ ಕಲಿಸಿದಂತಾಗುತ್ತದೆ.

ಮನೆಯ ಸದಸ್ಯರೆಲ್ಲರೂ ಒಟ್ಟಿಗೆ ಕುಳಿತುಕೊಂಡು ಊಟ ಮಾಡಿ. ನಿಮ್ಮ ಊಟದ ಟೇಬಲ್‌ನಲ್ಲಿ ಅಮ್ಮನಿಗೂ ತಟ್ಟೆ ಇರಲಿ. ಬಗೆ ಬಗೆಯ ಭಕ್ಷ್ಯಗಳನ್ನು ಬಡಿಸುವುದು ಅಮ್ಮನ ತಟ್ಟೆಯಿಂದಲೇ ಮೊದಲುಗೊಳ್ಳಲಿ. ಕಾಲ– ಕಾಲಕ್ಕೆ ಅಮ್ಮನ ಊಟದ ಮೆನುವಿನಲ್ಲಿ ಎಲ್ಲ ಸತ್ವಯುತ ಆಹಾರ ಪದಾರ್ಥಗಳಿವೆಯೇ ಎಂಬುದನ್ನು ಮನೆಯ ಇತರ ಸದಸ್ಯರು ನೋಡಿಕೊಳ್ಳುವಷ್ಟು ಕಾಳಜಿ ಬೆಳೆಯಲಿ. ಎಲ್ಲರನ್ನು ಪ್ರೀತಿಸಿ, ಕಾಳಜಿ ಮಾಡುವ ಅಮ್ಮನೆಂಬ ವೃಕ್ಷದ ಸುತ್ತ ಬೆಚ್ಚಗಿನ ಆಸರೆಯ ಬಳ್ಳಿಗಳು ತಬ್ಬಲಿ.

(ಲೇಖಕರು, ಪ್ರಾಧ್ಯಾಪಕರು, ಆಹಾರ ವಿಜ್ಞಾನ ಮತ್ತು ಪೋಷಣೆ ವಿಭಾಗ, ಜಿಕೆವಿಕೆ, ಬೆಂಗಳೂರು)

ಅಮ್ಮ ನಿನಗಾಗಿ

ಸತ್ವಭರಿತ ಖಾದ್ಯ

ಮನೆಯ ಇತರ ಸದಸ್ಯರು ಊಟ ಮಾಡಿದ ಮೇಲೆಯೇ ಊಟ ಮಾಡುವ ಅಮ್ಮಂದಿರು ಆಹಾರದಲ್ಲಿಯೇ ಆರೋಗ್ಯ ಅಡಗಿರುವುದನ್ನು ನೆನಪಿಟ್ಟುಕೊಳ್ಳಬೇಕು. ಅಮ್ಮಂದಿರ ಊಟದ ಮೆನುವಿನಲ್ಲಿ ಪೋಷಕಾಂಶಯುಕ್ತ ಆಹಾರಕ್ಕೆ ಆದ್ಯತೆ ಸಿಗಬೇಕು. ಆ ಮೆನುವಿನಲ್ಲಿ ಇರಲೇಬೇಕಾದ ಕೆಲವು ಖಾದ್ಯಗಳ ಸರಳ ರೆಸಿಪಿಗಳು ಇಲ್ಲಿವೆ...



ನಳಪಾಕ



ಮಾಲ್ಟ್

ಬೆಳಿಗ್ಗೆ ಟೀ ಅಥವಾ ಕಾಫಿ ಕುಡಿಯುವುದನ್ನು ವರ್ಜಿಸಿ. ಅದರ ಬದಲು ಮೊಳಕೆ ಬರಿಸಿದ ರಾಗಿ, ಗೋಧಿ, ಹೆಸರುಕಾಳುಗಳನ್ನು ಪುಡಿ ಮಾಡಿಟ್ಟುಕೊಳ್ಳಿ. ಇದನ್ನು ನೀರಿಗೆ ಹಾಕಿ ಚೆನ್ನಾಗಿ ಕುದಿಸಿ, ನಂತರ ಮಜ್ಜಿಗೆ, ಉಪ್ಪು ಅಥವಾ ಬೆಲ್ಲ ಸೇರಿಸಿ ಕುಡಿಯಬಹುದು. ಇದರಲ್ಲಿ ಹೇರಳವಾಗಿ ಕ್ಯಾಲ್ಶಿಯಂ(ಸುಣ್ಣದಂಶ), ಪ್ರೋಟಿನ್ ಹಾಗೂ ನಾರಿನಂಶ ಇದೆ. ಹೊಟ್ಟೆಯ ಆರೋಗ್ಯವನ್ನು ಕಾಪಾಡುವಂಥ ಪ್ರೊಬಯೋಟಿಕ್ ಅಂಶವೂ ಈ ಮಾಲ್ಟ್‌ನಲ್ಲಿ ಇದೆ.



ಪಾಲಕ್ ಚಟ್ನಿ

ಕಬ್ಬಿಣಾಂಶ, ಕೆರೋಟಿನ್, ರೋಗ ನಿರೋಧಕ ಶಕ್ತಿಯ ವೃದ್ಧಿಗೆ ಪಾಲಕ್ ಚಟ್ನಿ ಪೂರಕ. ಕಾಯಿ ಚಟ್ನಿ ಮಾಡುವ ಹಾಗೆ ಮಾಡಿ. ಅದಕ್ಕೆ ಪಾಲಕ್ ಅನ್ನು ತೊಳೆದು ಹುರಿದು ಸೇರಿಸಬಹುದು. ಒಂದು ಚಪಾತಿ ಜತೆಗೆ ಅರ್ಧ ಬಟ್ಟಲು ಈ ಚಟ್ನಿಯನ್ನು ತಿನ್ನಿ. ಮಲಬದ್ಧತೆ, ಎ ಅನ್ನಾಂಗದ ಕೊರತೆ, ಕಬ್ಬಿಣಾಂಶದ ಕೊರತೆಯನ್ನು ಇದು ನೀಗಿಸುತ್ತದೆ.



ನುಗ್ಗೆ ಸೊಪ್ಪಿನ ಪುಡಿ

ನುಗ್ಗೆ ಸೊಪ್ಪನ್ನು ತೊಳೆದು, ಹೆಂಚಿನ ಮೇಲೆ ಹಾಕಿ ಬಿಸಿ ಮಾಡಿ. ಜೀರಿಗೆ, ಉಪ್ಪು, ಬೆಳ್ಳುಳ್ಳಿ, ಕರಿಬೇವು, ಕೊತ್ತಂಬರಿ ಸೊಪ್ಪು ಹಾಕಿ ಪುಡಿ ಮಾಡಿಕೊಳ್ಳಿ. ಅನ್ನದ ಜತೆ, ಬೆಳಗಿನ ಉಪಾಹಾರದ ಜತೆ ಅರ್ಧ ಚಮಚ ಈ ಪುಡಿಯನ್ನು ಬಳಸಬಹುದು. ಇದು ಹಾರ್ಮೋನ್ ಮಟ್ಟವನ್ನು ಸುಧಾರಿಸುತ್ತದೆ. ಸಿರಿಧಾನ್ಯಗಳಾದ ಊದಲು, ಬರಗನ್ನು ಹುರಿದು, ಕಡಲೆ ಕಾಯಿ ಬೀಜ(ಶೇಂಗಾ)ದೊಟ್ಟಿಗೆ ಪುಡಿ ಮಾಡಿ. ಈ ಪುಡಿಯನ್ನು ಹಾಲಿಗೆ ಹಾಕಿಕೊಂಡು ಕುಡಿಯಬಹುದು. ಇದು ಒತ್ತಡವನ್ನು ಕಡಿಮೆ ಮಾಡುತ್ತದೆ. ಚಿಯಾ ಮತ್ತು ಕಿನೋವಾದಲ್ಲಿ(ಇವೂ ಸಿರಿಧಾನ್ಯಗಳು) ಗುಣಮಟ್ಟದ ಪ್ರೊಟೀನ್‌ಯುಕ್ತ ಆಹಾರ ತಯಾರಿಸಬಹುದು. ಇವುಗಳನ್ನು ಉಪ್ಪು ನೀರಿನಲ್ಲಿ ನೆನಸಿ, ಒಣಗಿಸಿ, ಹುರಿದು ಪುಡಿ ಮಾಡಿ ಹಾಲಿಗೆಬೆರೆಸಿಕೊಂಡು ಕುಡಿಯಬಹುದು. ಈ ಕಿನೋವಾ, ದೇಹದಲ್ಲಿನ ಹಾರ್ಮೋನ್ ಮಟ್ಟವನ್ನು ತಹಬಂದಿಗೆ ತರುತ್ತದೆ.



ಅಸಹಾಯಕತೆಗೆ ಸ್ವಸಹಾಯವೇ ಮದ್ದು

ಏನಾದ್ರೂ ಕೇಳ್ಬೋದು



ನಡಹಳ್ಳಿ ವಸಂತ್

- **ನನಗೆ ತಾಯಿಯಿಲ್ಲ, ಬಾಣಂತನಕ್ಕೆ ತವರಿಗೆ ಬಂದಿದ್ದೇನೆ. ನಮ್ಮ ಮಲತಾಯಿ ಹಾಗೂ ಅವರ ಮಗಳು ವಿಪರೀತ ತೊಂದರೆ ಕೊಡುತ್ತಿದ್ದಾರೆ. ನಮ್ಮ ಅಕ್ಕ ತಂಗಿಯರು ಅಸಹಾಯಕರು. ಉಳಿದುಕೊಳ್ಳಲು ನನಗೆ ಬೇರೆ ನೆಲೆಯಿಲ್ಲ. ಈ ಸಂದರ್ಭದಲ್ಲಿ ಮಗುವನ್ನು ನೋಡಿಕೊಂಡು ಮನಸ್ಥಿತಿ ಹೇಗೆ ಗಟ್ಟಿಮಾಡಿಕೊಳ್ಳಬೇಕು? ನನ್ನದು ಅಸಹಾಯಕತೆಯಿಂದ ಕೂಡಿದ ಬದುಕಾಗಿದೆ. ಯಾರ ಹತ್ತಿರ ಹೇಳುವಂತೆಯೂ ಇಲ್ಲ ಬಿಡುವಂತೆಯೂ ಇಲ್ಲ. ದಯವಿಟ್ಟು ಪರಿಹಾರ ಇದ್ದರೆ ಸೂಚಿಸಿ.**

ಹೆಸರು ಊರು ತಿಳಿಸಿಲ್ಲ.

ಪತ್ರದಲ್ಲಿ ಬಹಳ ನೋವಿನ ಧ್ವನಿಯಿದೆ. ನಿಮ್ಮ ಸದ್ಯದ ಪರಿಸ್ಥಿತಿ ನಿಜವಾಗಿಯೂ ಕಷ್ಟಕರವಾಗಿದೆ. ತಕ್ಷಣದ ಪರಿಹಾರಗಳು ಸಿಗಲಾರದು. ಎಲ್ಲಾ ರೀತಿಯ ಹಿಂಸೆಗಳನ್ನು ತಡೆದುಕೊಳ್ಳುವ ನಿಮ್ಮ ಪ್ರವೃತ್ತಿಯೇ ನಿಮ್ಮ ಮಲತಾಯಿಗೆ ಹೆಚ್ಚಿನ ಹಿಂಸೆಗೆ ಉತ್ತೇಜನ ಕೊಡುತ್ತದೆ. ಹಾಗಾಗಿ ನಿಧಾನವಾಗಿ ಪ್ರತಿಭಟಿಸುವುದನ್ನು ಮತ್ತು ನಿಮ್ಮನ್ನು ರಕ್ಷಣೆ ಮಾಡಿಕೊಳ್ಳುವುದನ್ನು ಕಲಿಯಲೇಬೇಕು. ತಕ್ಷಣಕ್ಕೆ ಅದು ಸಾಧ್ಯವಿಲ್ಲ ಎನ್ನಿಸಿದರೆ ಪತಿಯ ಹತ್ತಿರ ನಿಮ್ಮ ಕಷ್ಟಗಳ ಕುರಿತು ಮಾತನಾಡಿ ಸಾಧ್ಯವಾದಷ್ಟು ಬೇಗ ನಿಮ್ಮ ಮನೆಗೆ ಹೋಗುವ ವ್ಯವಸ್ಥೆ ಮಾಡಿಕೊಳ್ಳಿ. ಇಂತಹ ಅಹಿತಕರ ವಾತಾವರಣ ನಿಮ್ಮ ಮತ್ತು ಮಗುವಿನ ದೈಹಿಕ ಮಾನಸಿಕ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರಬಹುದು.

ನನ್ನ ಬದುಕು ಅಸಹಾಯಕತೆಯಿಂದ ಕೂಡಿದೆ ಎಂದು ಹೇಳಿದ್ದೀರಿ. ಇಂತಹ ಅಸಹಾಯಕತೆ ಇಷ್ಟು ಆಳವಾಗಿ ನಿಮ್ಮೊಳಗೆ ಬೇರುಬಿಟ್ಟಿದ್ದು ಹೇಗೆಂದು ಯೋಚಿಸಿದ್ದೀರಾ? ತಾಯಿಯಿಲ್ಲದ ಕಾರಣ ನಿಮ್ಮೊಳಗೆ ಅನಾಥ ಭಾವನೆ ಕಾಡುತ್ತಿದೆ. ಹಾಗಾಗಿ ಎಲ್ಲರಿಂದ ಹಿಂಸೆಯನ್ನು ತಡೆದುಕೊಂಡು ಬದುಕುವುದು ನಿಮ್ಮ ಬಾಲ್ಯದ ಅನಿವಾರ್ಯತೆಯಾಗಿತ್ತಲ್ಲವೇ? ಪ್ರತಿಭಟಿಸಿದರೆ ಪರಿಸ್ಥಿತಿ ಹೆಚ್ಚಾಗಿ ಹದಗೆಡಬಹುದೆಂದು ಎಲ್ಲವನ್ನೂ ಸಹಿಸಿಕೊಳ್ಳುವ ಮನಸ್ಥಿತಿಯನ್ನು ಬಾಲ್ಯದಿಂದಲೇ ಬೆಳೆಸಿಕೊಂಡಿದ್ದೀರಿ. ಈಗ ಬೆಳೆದು ವಯಸ್ಕಳಾದ ಮೇಲೂ ಅದೇ ಮನಸ್ಥಿತಿಯಲ್ಲಿದ್ದೀರಲ್ಲವೇ? ಇತರರಿಂದ ಸಹಾಯ ಸಿಗದಿದ್ದಾಗ ನಮಗೆ ಅಸಹಾಯಕತೆ ಕಾಡುವುದು ಸಹಜ. ಆದರೆ ಬೆಳೆದು ದೊಡ್ಡವರಾದ ಮೇಲೆ ನಮಗೆ ನಾವೇ ಸಹಾಯ ಮಾಡಿಕೊಳ್ಳಲು ಸಾಧ್ಯವಿದೆಯಲ್ಲವೇ? ನಿಮಗೆ ನೀವೇ ಸಹಾಯ ಮಾಡಿಕೊಳ್ಳಲು ನಿಮ್ಮೊಳಗಿರುವ ಅಗಾಧ ಶಕ್ತಿಯನ್ನು ಗುರುತಿಸಿ ಬಳಸಬೇಕಲ್ಲವೇ? ತಾಯಿಯಿಲ್ಲದೆ ಅನಾಥರಾಗಿ ಬೆಳೆದಿದ್ದೀರಿ, ಹೆಚ್ಚಿನ ವಿದ್ಯಾಭ್ಯಾಸವಿಲ್ಲ, ಸ್ವಂತ ದುಡಿಮೆಯಿಲ್ಲ, ಮುಂತಾದ ಯಾವುದೇ ಕಾರಣಗಳಿಗಾಗಿ ಪ್ರಕೃತಿದತ್ತವಾಗಿ ಬಂದಿರುವ ನಿಮ್ಮೊಳಗಿನ ಯಾವ ಶಕ್ತಿಯೂ ಕುಂದಿರುವುದಿಲ್ಲ. ಅವುಗಳನ್ನು ಹುಡುಕಿ ಬಳಸುವುದನ್ನು ಕಲಿಯಬೇಕು.

ನಿಮ್ಮ ಮನೆಗೆ ಹಿಂದಿರುಗಿದ ಮೇಲೆ ಮತ್ತೆ ಇಂತಹ ಅಸಹಾಯಕತೆಗೆ ಸಿಕ್ಕಿಕೊಳ್ಳದಿರುವುದು ಹೇಗೆ ಎಂದು ಯೋಚಿಸಿ. ನಿಮಗೆ ನೋವಾದಾಗ ಬೇಸರವಾದಾಗ ಪ್ರತಿಭಟಿಸುವುದನ್ನು ನಿಧಾನವಾಗಿ ಕಲಿಯಿರಿ. ಯಾವುದಾದರೂ ಉದ್ಯೋಗವನ್ನು ಮಾಡುತ್ತ ಸ್ವಲ್ಪ ಮಟ್ಟಿಗಾದರೂ ಆರ್ಥಿಕವಾಗಿ ಸ್ವತಂತ್ರರಾಗುವುದಕ್ಕೆ ದಾರಿಗಳನ್ನು ಹುಡುಕಿ. ನಿಮ್ಮ ದುಡಿಮೆಯಲ್ಲಿ ಒಂದು ಭಾಗವನ್ನು ಯಾರಿಗೂ ಕೊಡದೆ ನಿಮಗಾಗಿ ಮತ್ತು ಮಗುವಿಗಾಗಿ ಉಳಿತಾಯ ಮಾಡುತ್ತಾ ಹೋಗಿ. ಇನ್ನು 4-5 ವರ್ಷ ಎರಡನೇ ಮಗುವಿಗೆ ಅವಕಾಶ ಕೊಡಬೇಡಿ. ಸುತ್ತಮುತ್ತಲಿನ ಮಹಿಳೆಯರೊಡನೆ ಸಂಪರ್ಕ ಬೆಳೆಸಿ. ಒಂದು ಸ್ನೇಹಿತೆಯರ ಗುಂಪನ್ನು ಕಟ್ಟಿ ಕಷ್ಟದ ಪರಿಸ್ಥಿತಿಗಳಲ್ಲಿ ಒಬ್ಬರಿಗೊಬ್ಬರು ನೆರವಾಗುವ ವ್ಯವಸ್ಥೆಯನ್ನು ರೂಪಿಸಿಕೊಳ್ಳಿ. ಸುತ್ತಲೂ ಇರುವ ಇಂತಹ ಸಂಘಟನೆಗಳಲ್ಲಿ ಸೇರಿಕೊಳ್ಳಿ. ನಿಮ್ಮ ಸ್ವಂತಿಕೆಯನ್ನು ಕಳೆದುಕೊಳ್ಳದೆ ಎಲ್ಲರ ಜೊತೆ ಬೆರೆಯುತ್ತಾ ಹೋಗಿ. ಹಿಂಜರಿಕೆ ಕೀಳರಿಮೆಗಳನ್ನು ಪಕ್ಕಕ್ಕೆ ಸರಿಸಿದರೆ ನಿಮಗೆ ನೀವು ಸಹಾಯ ಮಾಡಿಕೊಳ್ಳಲು ಇಂತಹ ಹಲವಾರು ದಾರಿಗಳು ಸಿಗುತ್ತವೆ.

ಇವೆಲ್ಲವನ್ನೂ ಮಾಡಲು ಸಮಯ ಸಹನೆಯ ಅಗತ್ಯವಿದೆ. ಜೊತೆಗೆ ಗಂಡನ ಮನೆಯಲ್ಲಿಯೂ ಇವುಗಳಿಗೆ ವಿರೋಧ ವ್ಯಕ್ತವಾಗಬಹುದು. ಆಗ ಮತ್ತೆ ಅಸಹಾಯಕತೆಯಿಂದ ನೋವುಣ್ಣುತ್ತಾ ನಿಷ್ಕ್ರಿಯರಾಗಿ ಕುಳಿತರೆ ಬದಲಾವಣೆಗಳು ಕಷ್ಟವಾಗುತ್ತದೆ ಎಂದು ಮರೆಯಬೇಡಿ.

ನಿಮ್ಮ ನೋವು ಅಸಹಾಯಕತೆಗಳು ಯಾವಾಗಲೂ ನಿಮ್ಮನ್ನು ಹಿಂದೆ ಸೆಳೆಯಬಹುದು. ಆದರೆ ನಿಮ್ಮೊಳಗಿನ ಶಕ್ತಿಯನ್ನು ನೀವೇ ಗುರುತಿಸದಿದ್ದರೆ ಬೇರೆಯವರಿಂದ ಏನನ್ನು ನಿರೀಕ್ಷಿಸಬಹುದು? ನಿಮಗೆ ನೀವೇ ಸಹಾಯ ಮಾಡಿಕೊಳ್ಳದಿದ್ದರೆ ಬೇರೆಯವರಿಂದ ಸಹಾಯ ಸಿಗುವ ಸಾಧ್ಯತೆಗಳು ಕಡಿಮೆ. ನಮ್ಮನ್ನು ನಾವು ಹುಡುಕಿಕೊಳ್ಳುವುದು ಸುಲಭವಲ್ಲ. ಆದರೆ ಬೇರೆಯವರ ಮೇಲಿನ ಅವಲಂಬನೆಯ ಹಿಂಸೆಗಿಂತ ನಮ್ಮ ಹುಡುಕಾಟದ ನೋವು ಸಹನೀಯವಾಗಿರುತ್ತದೆ ಮತ್ತು ತೃಪ್ತಿಯನ್ನು ಕೊಡುತ್ತದೆ.



ಏನಾದ್ರೂ ಕೇಳ್ಬೋದು

ಹದಿಹರೆಯದ ಮತ್ತು ದಾಂಪತ್ಯದ ಲೈಂಗಿಕ ಸಮಸ್ಯೆ, ಮಾನಸಿಕ ಸಮಸ್ಯೆ ಕುರಿತು ಪ್ರಶ್ನೆಗಳನ್ನು ನಮಗೆ ಕಳುಹಿಸಿ. ನಿಮ್ಮ ಪ್ರಶ್ನೆಗಳಿಗೆ ಮನೋಚಿಕಿತ್ಸಕ ನಡಹಳ್ಳಿ ವಸಂತ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

ಪ್ರಜಾವಾಣಿ
ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

PROPERTY CORNER ಕ್ಲಾಸಿಫೈಡ್ಸ್

PROPERTY FOR SALE

Available for immediate Sale Land **(90 feet X 45 feet)** and Bungalow on 6th Main Road, 4th Block Jayanagar. Vantage Location - very close to Jayanagar Metro Station, Shopping area, Temples, Colleges, Hospitals, and Police Station.

Full payment through Banking Channels.

Title deed clear. Serious parties my

Contact : 9980014868

REAL ESTATE SELLING

TWO 40 X 60 EAST FACING ADJOINING 60' ROAD, FOUR 40 X 60 NORTH SOUTH FACING TOTAL 9900 SFT 80 + 30' ROADS Rs. 7800/- NEGOTIABLE. Contact: 9743865623 - C S MALLESH.

Sites

Anjanapura

ANJANAPURA 10TH Block 20×60 East Facing BDA Site For Sale Near Dayanada Sagar School. Contact: 9845298419

Banashankari

"AVAILABLE BDA Sites Banasankari 6th Stage 20x30, 30x40, 40x60, 50x80 Genuine buyers Contact: 9845146725/ 9741466369"

"BANASANKARI 6TH-STAGE 4th Black BDA site Sale 50x80 north facing near RV Collage. Contact: 7975947437"

Dollars Colony

SALE 50X80 West`Facing No 218 5th Cross diagonally Opposite cafe-coffee day Dollars Colony RMV 2nd Stage Bangalore Call:9980066939

Kanakapura Road

KANAKAPURA ROAD "Gokul Gardens" BMRDA Approved 30x57,North 60x90, East, 2600/- Negotioble: 9740150364, 9986146147

KANAKAPURA ROAD Gubbalala 1km- Doddakallasandra Metro Station 40x60 N/F, Road Face 60 Feet. 9945724472.

Mysore

HUNSUR ROAD Kuberananda Sagara Layout, Sale 50X80 Site #691, 1 K.M. From Main Road. 9945724472.

Vishweshwariah Layout

SMV LAYOUT, 6th Block, Site No-1452, 30x40, E&W/F Semi Commercial. Rs 12000/- Sft. 8123910222

SMV LAYOUT, 7th Block, Site No-63, 20x30, WF, 58 Lakhs /-, Good Location. Contact: 9844966208

Agricultural Land

Ramanagar

AGRICULTURAL FARM Land Sale Near Ramanagar3.5-km from Highway (0.5Km MudRoad) 3Acres 55 Lakhs PerAcre Clear Title-9900115519

Commerical

Dobaspet

SALE/ LEASE 45000sft Built-area Dabaspet Sompura Industrial Area KIADB Bangalore. Suitable for Pharmaceutical Contact: 9845621143

M G Road And Around



FOR SALE COMMERCIAL Property on Magrath Road Near Garuda Mall 3600 Sq. ft Fully Furnished. Independent Unit on 1st Floor. Rental Income Call- 9242286495

Flat

Jayanagar

FLATS FOR SALE 3 and 4 BHK at Jayanagar, Basavanagudi, Banashankari Bannerghatta Road. Contact: 9845075792

J P Nagar

SALE OVER 10 Year, Semi-Furnished 2 BHK Flat 1080 Sq.ft. with Roofed Car-parking. J.P.Nagar 5th Phase 9986763007.

Farm House/ Land/ Resorts

Multiple Locations

NANDI HILLS rd ready2occupy 1/2 acre 20k builtup furnished 15 AC rooms resto cafe 9Cr Ph 7019346409

House

Gnanabharathi

BDA, 20X30 Newly Constructed Luxurious 3 BHK Triplex house for Sale near Shrike Apartments. 7378603560, 9343001972.

Vishweshwariah Layout

"VISHVESHWARAIAH 6TH-BLOCK, Ullal 30x40 4BHK Duplex, House under construction, for Sale 1.75 Crore. 9611727949"

REAL ESTATE BUYING

"VISHVESHWARAIAH LAYOUT wanted 20x30, 30x40,40x60, 50x80, sites for immediate settlement, Genuine transaction. 'Anugraha'- 9886294610"

Sites

Vishweshwariah Layout

WANTED 30X40 Site at Vishweswaraiah Layout 5th & 8th Block. only Direct Owner Contact: 7483814977.

Multiple Locations

ANJANAPURA- ARKAVATHI, Banashankari 6th Stage, Vishweswaraiah Layout, Kempegowda Layout. Any BDA`Sites Wanted. Contact: SAPTHAGIRI. 9900268073, 9448068073.

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ
ಕ್ಲಾಸಿಫೈಡ್ಸ್

RENTAL PROPERTIES

Accommodation Available

Industrial And Factory

TO-LET FOR any Office and Warehouse, 1st Floor-5000 sqft, 2nd Floor-5000 sqft, at Peenya Industrial Area, Bangalore -560058, Land Mark 14th Cross Behind Bhatter Hotel Road, Contact No: 7676409377/ 7799116630.

BUILDERS ESSENTIAL

Water Proofing

'WE FIX' LEAKING ROOF,TANK, SUMP,BATHROOM, SKYLIGHT,HOUSE PAINTING, TILING,CARPENTRY, EPOXY,CIVIL WORKS. Call: 9448572697

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

AUTOMOTIVE

Four Wheelers Selling

General Motors/ Chevrolet

QUOTATIONS REQUIRED for with & without RC/GJ02 BH0139/ 2012/ Beat 1.0 LS TCDI Flood vehicle, Contact: 9313673066

2 / 3 Wheelers Selling

Autorickshaws

2022 MAHINDRA Treo electric autorickshaw for sale. Less than 3500 kilometers, excellent condition, contact 918861150820.

ಪ್ರಜಾವಾಣಿ
ರಿಯಲ್ ಎಸ್ಟೇಟ್
BOOK YOUR PROPERTY AD IN PRAJAVANI ALL KARNATAKA
ON FRIDAY + SATURDAY + SUNDAY
@ 960/-* Per Sqcm Single Column
@ 1000/-* Per Sqcm Multi Column
conditions apply*
ಜಾಹೀರಾತು ನೀಡಿಕೆಗಾಗಿ ಸಂಪರ್ಕಿಸಿ:
9845114560 | 9731810277
9901641752 | 9886213331
080- 45557163 | 45557164

BUSINESS

Business Offers

Finance

NRI'S INVESTMENT And Finance Available On Low Interest Against Properties,Land& Building,Sites,Flats, Converted& Agriculture Lands Call:7204995189

PERSONAL

Change of Name

CHANGE OF NAME
I, **SONYA SUDIP CHITALE,** residing at 20/2, 2nd floor, Railway Parallel Road, Kumara Park East, Bengaluru- 560001, have changed my name to **AANYA SANAT CHUGH,** vide affidavit dated 12.05.2023 before Notary K.G. Rajpal, Bangalore. Henceforth I shall be known as **AANYA SANAT CHUGH** only.

CHANGE OF NAME
I, **No. 1381499A, Rank: T.S. NK, M.K. THIRUVANKARASU,** Residing at No. 93, 2nd Cross, 14th Main, Giddamma Layout, Akash Nagar, Doorvani Nagar Extension, A-Narayanpura, Bangalore- 560016, have changed my name to **M.K.T. ARASU,** vide affidavit dated 12.05.2023, before notary N. Narayanaswamy, Bangalore.

VIJAYALAXMI, WIFE/O 14819437A HAV, ISHWARAPPA KARISAKRANNAVAR, Vill-Kadadi, Gadag, Karnataka changed name VIJAYALAXMI to VIJAYALAXMI ISHWARAPPA KARISAKRANNAVAR, 12/05/2023, Notary K.V. Mani, Bangalore

ISHWARAPPA KARISAKRANNAVAR, 14819437A, HAV, Vill - Kadadi, Gadag, Karnataka changed Son's name AVINASH to AVINASH ISHWARAPPA KARISAKRANNAVAR, 12/05/2023, Notary K.V. Mani, Bangalore

ISHWARAPPA KARISAKRANNAVAR, 14819437A, HAV, Vill - Kadadi, Gadag, Karnataka changed Son's name ABHISHEK to ABHISHEK ISHWARAPPA KARISAKRANNAVAR, 12/05/2023, Notary K.V. Mani, Bangalore

I, ULLESHKUMAR GADGE @ ULLESHKUMAR S/o Vaijinath Gadge R/a #19-1-440 5th`cross channabasava shivnagar south, Bidar declare that ULLESHKUMAR GADGE and ULLESHKUMAR are one and the same person i.e. Myself only Henceforth, known`as ULLESHKUMAR GADGE vide`Affidavit Dated 29-12-2021 before Notary Baswaraj, Bidar

I SHASHI KUMAR S/o Narayanaswamy #104 1st`Main 2nd`cross Malleshpalya new thippasandra Bengaluru- 560075 Have changed my name from SHASHIKUMAR GUNTHAPPANAHALLI NARAYANASWAMY to SHASHI KUMAR vide affidavit dated 12-05-2023 before notary sreedharan Nair.P.N Bangalore

SADHANA DEVI, Wife/o 6500207N, NK, NARENDRA SINGH YADAV, Vill- Morar, Gwalior Buxar, Madhya Pradesh changed name SADHANA DEVI to SADHANA YADAV, 12/05/2023, Notary K.V. Mani, Bangalore

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

PUBLIC NOTICE

PUBLIC NOTICE

My clients propose to purchase the shares of M/s. THE RAMANAGARAM KHANDASARISUGAR AND ALLIED PRODUCTS LTD., a Company incorporated under the Indian Companies Act, 1956, having its registered office at RKS Estate, Chikkakuntanahalli Village, Bidadi Hobli, Ramanagara Taluk, Bangalore -560 109, represented by its director/ authorized representative Mr. NARENDRA GOEL, which company is the absolute owner in possession of the schedule property described herein below

SCHEDULE OF PROPERTY

All that piece and parcel of the Immovable property being the below mentioned agricultural dry land situated at Chikkakuntanahalli Village, Bidadi Hobli, Ramanagara Taluk and including all rights, privileges and appurtenances there to:

S. Nos.	SURVEY NUMBERS	EXTENT	
		ACRE	GUNTAS
1	17	06	10
2	18	07	18
3	19	08	14
4	20	03	25
5	21	04	19
6	22	06	24
7	23	06	06
8	24	06	28
9	25	04	34
10	26	03	35
11	74	04	37

and the entire land bounded as follows:

EAST BY: Mr.Kanthappa land and Gomala -WEST BY: ChikkaHalla-NORTH BY: Gomala-SOUTH BY : Road

If anybody is having any objection, claim. interest, dispute for the above intended sale transaction, he /she/ they may are free to contact the undersigned with the documentary proof substantiating his/her/their objections/claims/details of dispute/s within Fifteen (15) days from the date of this publication, failing which, my client will proceed to complete the sale transaction with the above owner as if there are no third party claims/objections/ disputes in respect of the Schedule Property and thereafter no claims/ objections/ disputes will be entertained.

Advocate : Aditi MV, No.2/2,9F Mauriya Mansion behind, Hatric Sports, Gandhinagar, Bangalore-560009 Mobile- **9620886222**

For Advt. Booking Contact : 9845114560

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331